ಸೋಮವಾರ, ಮಾರ್ಚ್ 14, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಚಾರ

ಮುಂಬೈನಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ಬಚ್ಚನ್ ಪಾಂಡೆ' ಚಿತ್ರದ ಪ್ರಚಾರ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಬಾಲಿವುಡ್ ನಟ ಅಕ್ಷಯ್ ಕುಮಾರ್ ಮತ್ತು ನಟಿ ಕೃತಿ ಸೆನನ್

YouTube

#CreatingForIndia

YouTube ನಲ್ಲಿನ ಸೃಜನಶೀಲ ಉದ್ಯಮಿಗಳು ಭಾರತದಲ್ಲಿ 6,83,900 ಫುಲ್-ಟೈಮ್‌ಗೆ ಸಮಾನವಾದ ಉದ್ಯೋಗಗಳನ್ನು ಸೃಷ್ಟಿಸಲು ಸಹಾಯ ಮಾಡಿದ್ದಾರೆ.

/ Kalamadhyama ಕಲಾಮಾಧ್ಯಮ

ಪ್ರತಿದಿನ, ಲಕ್ಷಾಂತರ ಭಾರತೀಯರು ಹೊಸ ಕೌಶಲ್ಯಗಳನ್ನು ಕಲಿಯಲು, ತಮ್ಮ ವ್ಯವಹಾರವನ್ನು ಅಭಿವೃದ್ಧಿ ಮಾಡಿಕೊಳ್ಳಲು ಮತ್ತು ತಮ್ಮ ಜೀವನವನ್ನು ಮತ್ತಷ್ಟು ಸುಧಾರಿಸಿಕೊಳ್ಳುವ ಸಲುವಾಗಿ YouTube ಗೆ ಭೇಟಿ ನೀಡುತ್ತಾರೆ. ಭಾರತೀಯರ ಕನಸುಗಳನ್ನು ನನಸು ಮಾಡಲು ಸಹಾಯ ಮಾಡುವ ಭಾಗ್ಯ YouTube ಗೆ ದೊರಕಿದೆ. ಪರಮೇಶ್ವರ್ ಅವರ ಉದಾಹರಣೆಯನ್ನು ತೆಗೆದುಕೊಳ್ಳಿ: YouTube ನಲ್ಲಿನ ಡಾಕ್ಯುಮೆಂಟರಿಗಳಿಂದ ಸ್ಫೂರ್ತಿಯನ್ನು ಪಡೆದು, ಇವರು ಕನ್ನಡ ಚಲನಚಿತ್ರರಂಗದಲ್ಲಿರುವ ನಟರು, ನಿರ್ದೇಶಕರು ಮತ್ತು ತಂತ್ರಜ್ಞರ ಕಥೆಗಳನ್ನು ಹೇಳುವ ವೀಡಿಯೋಗಳನ್ನು ಮಾಡಲು ಆರಂಭಿಸಿದರು. ಪರಮೇಶ್ವರ್ ಅವರು ತಮ್ಮ ಕಲಾಮಾಧ್ಯಮ ಎಂಬ YouTube ಚಾನಲ್ ಮೂಲಕ, ಸಿನಿಮಾ ಕಲೆಯ ಕುರಿತು ಮತ್ತು ಅಸಂಖ್ಯಾತ ಸಿನಿಮಾ ಕಲಾವಿದರ ವೃತ್ತಿ ಜೀವನದ ಕುರಿತು ಬೆಳಕು ಚೆಲ್ಲಿದ್ದಾರೆ. 6 ಲಕ್ಷಕ್ಕೂ ಅಧಿಕ ಸಬ್‌ಸ್ಕ್ರೈಬರ್‌ಗಳನ್ನು ಹೊಂದಿರುವ ಕಲಾಮಾಧ್ಯಮ ಚಾನಲ್ ಪರಮೇಶ್ವರ್ ಅವರಿಗೆ ಜೀವನೋಪಾಯಕ್ಕೆ ಬೇಕಾದ ಆದಾಯವನ್ನಷ್ಟೇ ಅಲ್ಲದೆ ಕರ್ನಾಟಕದ ಕಲಾ ಪರಂಪರೆಗೆ ಗೌರವವನ್ನು ಸಹ ಸಲ್ಲಿಸುತ್ತಿದೆ.

YouTube ನ ಸಕಾರಾತ್ಮಕ ಪರಿಣಾಮದ ಕುರಿತು ಓದಲು QR ಕೋಡ್ ಅನ್ನು ಸ್ಕ್ಯಾನ್ ಮಾಡಿ

ಆಕ್ಸ್‌ಫರ್ಡ್ ಎಕನಾಮಿಕ್ಸ್ ಪ್ರಕಾರ, YouTube ನ ಸೃಜನಾತ್ಮಕ ಇಕೋಸಿಸ್ಟಮ್ ಭಾರತದಲ್ಲಿ 2020 ರಲ್ಲಿ 6,83,900 ಫುಲ್-ಟೈಮ್‌ಗೆ ಸಮಾನವಾದ [FTE] ಉದ್ಯೋಗಗಳನ್ನು ಬೆಂಬಲಿಸಿದೆ.

ಉಕ್ರೇನ್ ಪಶ್ಚಿಮದಿಂದಲೂ ರಷ್ಯಾ ವೈಮಾನಿಕ ದಾಳಿ • 51ಕ್ಕೂ ಹೆಚ್ಚು ಮಂದಿ ಸಾವು, 134 ಜನರಿಗೆ ಗಾಯ

ಪೋಲೆಂಡ್ ಗಡಿಯಲ್ಲಿ ಸೇನಾ ನೆಲೆ ಧ್ವಂಸ

ಲುವಿವ್ (ಎಪಿ/ಎಎಫ್‌ಪಿ): ಉಕ್ರೇನ್‌ನ ಪೂರ್ವ ಮತ್ತು ಕೇಂದ್ರ ಭಾಗವನ್ನು ಗುರಿಯಾಗಿಸಿ ದಾಳಿ ನಡೆಸುತ್ತಿದ್ದ ರಷ್ಯಾ ಪಡೆಗಳು ಭಾನುವಾರ ಪಶ್ಚಿಮ ಭಾಗದಿಂದಲೂ ದಾಳಿ ಆರಂಭಿಸಿವೆ. ಪೋಲೆಂಡ್ ಗಡಿ ಹತ್ತಿರದಲ್ಲಿರುವ ಉಕ್ರೇನ್‌ನ ಸೇನಾ ನೆಲೆ ಮತ್ತು ಜನವಸತಿ ಪ್ರದೇಶಗಳ ಮೇಲೆ ರಷ್ಯಾ ಯುದ್ಧ ವಿಮಾನಗಳು ಬಾಂಬ್ ಮತ್ತು ಕ್ಷಿಪಣಿಗಳ ಸುರಿಮಳೆಗರೆದಿವೆ. ಇದರಿಂದ 51ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ.

ಪೋಲೆಂಡ್ ಗಡಿಗೆ 25 ಕಿ.ಮೀ. ಅಂತರದಲ್ಲಿರುವ ಯವೊರಿವ್ ಸೇನಾ ನೆಲೆ ಮೇಲೆ ರಷ್ಯಾ ವಿಮಾನಗಳು ಸುಮಾರು 30 ರಾಕೆಟ್‌ಗಳನ್ನು ಉಡಾಯಿಸಿವೆ. ಕನಿಷ್ಠ 35 ಮಂದಿ ಮೃತಪಟ್ಟಿದ್ದು, 134 ಜನರು ಗಾಯಗೊಂಡಿದ್ದಾರೆ. ಇಡೀ ಪ್ರದೇಶದಲ್ಲಿ ದಟ್ಟ ಹೊಗೆ, ಬೆಂಕಿ ಆವರಿಸಿದೆ. ಆಂಬುಲೆನ್ಸ್‌ಗಳು ಸ್ಥಳಕ್ಕೆ ಧಾವಿಸಿವೆ ಎಂದು ಸ್ಥಳೀಯ ಗವರ್ನರ್ ಮಾಕ್ಸಿಮ್ ನೀಡಿರುವ ಮಾಹಿತಿ ಆಧರಿಸಿ ರಾಯಿಟರ್ಸ್ ಸುದ್ದಿಸಂಸ್ಥೆ ವರದಿ ಮಾಡಿದೆ.

ಇಲ್ಲಿನ ಸೇನಾ ತರಬೇತಿ ಕೇಂದ್ರದಲ್ಲಿ ನ್ಯಾಟೊ ಪಡೆಗಳೊಂದಿಗೆ ಜಂಟಿ ಸಮರಾಭ್ಯಾಸ ಚಟುವಟಿಕೆಗಳನ್ನು ಉಕ್ರೇನ್ ನಡೆಸುತ್ತಿತ್ತು. ಯವೊರಿವ್‌ನ ಅಂತರರಾಷ್ಟ್ರೀಯ ಶಾಂತಿಪಾಲನ ಮತ್ತು ಭದ್ರತಾ ಕೇಂದ್ರದಲ್ಲಿ ವಿದೇಶಿ ಮಿಲಿಟರಿ ತರಬೇತುದಾರರು ಈ ಹಿಂದೆ ಕಾರ್ಯನಿರ್ವಹಿಸಿದ್ದರು. ವಾಯು ದಾಳಿ ನಡೆದಾಗ ಈ ಕೇಂದ್ರದಲ್ಲಿ ಅವರ ಇರುವಿಕೆಯ ಬಗ್ಗೆ ತಿಳಿದು ಬಂದಿಲ್ಲ.

ಸೇನಾ ಕಾರ್ಯಾಚರಣೆ 18ನೇ ದಿನಕ್ಕೆ ಕಾಲಿಟ್ಟಿರುವಾಗ ಉಕ್ರೇನ್‌ನ ಪಶ್ಚಿಮ ಭಾಗದಲ್ಲಿ ರಷ್ಯಾ ನಡೆಸಿದ ಅತಿ ದೊಡ್ಡ ದಾಳಿ ಇದು. ಇದನ್ನು ಪೋಲೆಂಡ್ ಖಂಡಿಸಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರರು ತಿಳಿಸಿದರು.

9 ಮಂದಿ ಸಾವು: ದಕ್ಷಿಣದ ಒಡೆಸ್ಸಾ ಬಂದರು ಸಮೀಪದ ಮೈಕೊಲೈವ್ ನಗರದ ಮೇಲೂ ರಷ್ಯಾ ನಡೆಸಿದ ವಾಯು ದಾಳಿಗೆ 9 ಮಂದಿ ಮೃತಪಟ್ಟರು ಎಂದು ಪ್ರಾದೇಶಿಕ ಗವರ್ನರ್ ವಿಟಾಲಿಯ ಕಿಮ್ ತಿಳಿಸಿದರು.

ರಷ್ಯಾ ಪಡೆಗಳು ಕೀವ್ ವಶಕ್ಕೆ ಮುನ್ನುಗ್ಗಿ ಬರುತ್ತಿದ್ದು, ನಗರ ಸಮೀಪಿಸುತ್ತಿವೆ. ಸದ್ಯದಲ್ಲೇ ಇಡೀ ನಗರವನ್ನು ರಷ್ಯಾ ಸೇನೆ ಸುತ್ತುವರಿಯುವ ಸಾಧ್ಯತೆ ಇದೆ ಎಂದು ಅವರು ಹೇಳಿದ್ದಾರೆ.

7 ನಿರಾಶ್ರಿತರು ಸಾವು: ಕೀವ್ ಸಮೀಪದ ಪೆರೆಮೊಹಾ ಹಳ್ಳಿಯ ಬಳಿ ನಿರಾಶ್ರಿತರನ್ನು ಸ್ಥಳಾಂತರಿಸುತ್ತಿದ್ದ ಮಾನವೀಯ ಬೆಂಗಾವಲು ಪಡೆಯ ಮೇಲೆ ರಷ್ಯಾ ಪಡೆಗಳು ಭಾನುವಾರ ನಡೆಸಿದ ಶೆಲ್ ದಾಳಿಗೆ ಒಂದು ಮಗು ಸೇರಿ ಉಕ್ರೇನಿನ ಏಳು ನಾಗರಿಕರು ಮೃತಪಟ್ಟಿದ್ದಾರೆ.

ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸುತ್ತಿದ್ದ ನಿರಾಶ್ರಿತರ ಮೇಲೆ ರಷ್ಯಾ ಶೆಲ್ ದಾಳಿ ನಡೆಸುವ ಮೂಲಕ ಅವರು ಹಿಂದಿರುಗುವಂತೆ ಮಾಡಿದೆ. ಈ ಘಟನೆಯಲ್ಲಿ ಹಲವು ಮಂದಿ ಗಾಯಗೊಂಡಿದ್ದಾರೆ ಎಂದು ಉಕ್ರೇನ್ ರಕ್ಷಣಾ ಸಚಿವಾಲಯ ತಿಳಿಸಿದೆ.

ಮಾನವೀಯ ಕಾರಿಡಾರ್‌ಗಳನ್ನು ಸಂಘರ್ಷಪೀಡಿತ ವಲಯಗಳಾಚೆಗೆ ತೆರೆಯುವುದಾಗಿ ರಷ್ಯಾ ಹೇಳಿದೆ. ಆದರೆ, ಉಕ್ರೇನ್ ಅಧಿಕಾರಿಗಳು, ರಷ್ಯಾ ಪಡೆಗಳು ಮಾನವೀಯ ಕಾರಿಡಾರ್‌ಗಳಿಗೆ ಅಡ್ಡಿಪಡಿಸುತ್ತಿದ್ದು, ನಾಗರಿಕರ ಮೇಲೆ ಗುಂಡು ಹಾರಿಸಿದ್ದಾರೆ ಎಂದು ಆರೋಪಿಸಿದ್ದಾರೆ.

ಮತ್ತೊಬ್ಬ ಮೇಯರ್ ಅಪಹರಣ: ಶನಿವಾರವಷ್ಟೇ ಮೆಲಿಟೊಪೊಲ್ ನಗರದ ಮೇಯರ್ ಇವಾನ್ ಪೆಡೊರೊವ್ ಅವರನ್ನು ಅಪಹರಿಸಿದ್ದ ರಷ್ಯಾ ಪಡೆಗಳು, ಭಾನುವಾರ ನಿಪ್ರೊರುದ್ನೆ ನಗರದ ಮೇಯರ್ ಯುಗ್ಗಿನ್ ಮತ್‌ವೀವ್ ಎಂಬುವವರನ್ನು ಝುಪೊರಿಝಿಯಾದಿಂದ ಅಪಹರಿಸಿದ್ದಾರೆ ಎಂದು ಉಕ್ರೇನ್ ವಿದೇಶಾಂಗ ವ್ಯವಹಾರಗಳ ಸಚಿವ ಡಿಮಿಟ್ರೊ ಕುಲೆಬಾ ಭಾನುವಾರ ಟ್ವೀಟ್ ಮಾಡಿದ್ದಾರೆ.

'ಸ್ಥಳೀಯ ನಾಗರಿಕರು ತಿರುಗಿ ಬಿದ್ದಿರುವುದಕ್ಕೆ ರಷ್ಯಾ ಸೈನಿಕರು ಇಂತಹ ಭಯೋತ್ಪಾದನೆಯ ಹಾದಿ ಹಿಡಿದಿದ್ದಾರೆ. ಉಕ್ರೇನ್ ಮತ್ತು ಪ್ರಜಾಪ್ರಭುತ್ವದ ವಿರುದ್ಧ ರಷ್ಯಾ ನಡೆಸುತ್ತಿರುವ ಭಯೋತ್ಪಾದನೆ ನಿಲ್ಲಿಸಲು ಎಲ್ಲ ರಾಷ್ಟ್ರಗಳೂ ಒಗ್ಗೂಡಬೇಕು' ಎಂದು ಝುಪೊರಿಝಿಯಾ ಪ್ರದೇಶದ ರಾಜ್ಯ ಆಡಳಿತದ ಮುಖ್ಯಸ್ಥ ಒಲೆಕ್ಸಾಂಡರ್ ಸ್ಟಾರುಖ್ ಮನವಿ ಮಾಡಿದ್ದಾರೆ.

ಅಪಹರಣಕ್ಕೊಳಗಾಗಿರುವ ಮೇಯರ್‌ಗಳನ್ನು ಸುರಕ್ಷಿತವಾಗಿ ಬಿಡುಗಡೆ ಮಾಡಿಸಲು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಜರ್ಮನಿ, ಫ್ರಾನ್ಸ್ ಹಾಗೂ ಇಸ್ರೇಲ್ ದೇಶಗಳ ಸಹಾಯ ಯಾಚಿಸಿದ್ದಾರೆ.

ರಷ್ಯಾ ಪಡೆಗಳ ಶೆಲ್ ದಾಳಿಗೆ ಸಿಕ್ಕಿ ನುಜ್ಜುಗುಜ್ಜಾಗಿರುವ ಮರಿಯುಪೋಲ್‌ನ ಹೆರಿಗೆ ಆಸ್ಪತ್ರೆಯ ಹೊರಗೆ ಮರಿಯಾನ ವಿಶೆಗಿರ್ಸ್‌ಕಾಯ ನಿಂತಿದ್ದರು. ಇದೇ 9ರಂದು ಈ ಆಸ್ಪತ್ರೆ ಮೇಲೆ ಶೆಲ್ ದಾಳಿ ನಡೆದಾಗ ತುಂಬು ಗರ್ಭಿಣಿ ಮರಿಯಾನ ಗಾಯಗೊಂಡು ಪ್ರಾಣಾಪಾಯದಿಂದ ಪಾರಾಗಿದ್ದು, ಮರಿಯುಪೋಲ್‌ನ ಬೇರೊಂದು ಆಸ್ಪತ್ರೆಯಲ್ಲಿ ಇವರು ಹೆಣ್ಣು ಮಗುವಿಗೆ ಜನ್ಮ ನೀಡಿದ್ದಾರೆ – ಎಪಿ/ಪಿಟಿಐ ಚಿತ್ರ

ಭಾರತದ ರಾಯಭಾರ ಕಚೇರಿ ಸ್ಥಳಾಂತರ

ನವದೆಹಲಿ: ಉಕ್ರೇನ್‌ನಲ್ಲಿ ರಷ್ಯಾದ ದಾಳಿ ತೀವ್ರತೆ ಹೆಚ್ಚುತ್ತಿರುವ ಕಾರಣ ಕೀವ್‌ನಲ್ಲಿದ್ದ ತನ್ನ ರಾಯಭಾರ ಕಚೇರಿಯನ್ನು ಭಾರತ ಸುರಕ್ಷತೆ ದೃಷ್ಟಿಯಿಂದ ಪೋಲೆಂಡ್‌ಗೆ ತಾತ್ಕಾಲಿಕವಾಗಿ ಸ್ಥಳಾಂತರಿಸಿದೆ.

ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಭಾನುವಾರ ಈ ಕುರಿತು ಪ್ರಕಟಣೆ ಹೊರಡಿಸಿದೆ.

'ಉಕ್ರೇನ್‌ನ ಪಶ್ಚಿಮ ಭಾಗಗಳಲ್ಲೂ ದಾಳಿ ನಡೆಯುತ್ತಿದ್ದು, ಭದ್ರತಾ ಪರಿಸ್ಥಿತಿ ಹದಗೆಟ್ಟಿದೆ. ಭಾರತದ ರಾಯಭಾರ ಕಚೇರಿಯನ್ನು ತಾತ್ಕಾಲಿಕವಾಗಿ ಪೋಲೆಂಡ್‌ಗೆ ಸ್ಥಳಾಂತರಿಸಲಾಗಿದೆ. ಮುಂದಿನ ಬೆಳವಣಿಗೆ ಅವಲೋಕಿಸಿ, ಉಕ್ರೇನ್‌ಗೆ ಪುನಾ ರಾಯಭಾರ ಕಚೇರಿ ಸ್ಥಳಾಂತರಿಸಲು ತೀರ್ಮಾನಿಸಲಾಗುವುದು' ಎಂದು ತಿಳಿಸಿದೆ.

'ಮಾತುಕತೆಯಲ್ಲಿ ಗಮನಾರ್ಹ ಪ್ರಗತಿ'

'ಬಿಕ್ಕಟ್ಟು ಶಮನಕ್ಕೆ ಉಕ್ರೇನ್‌ನೊಂದಿಗೆ ರಷ್ಯಾದ ಪ್ರತಿನಿಧಿಗಳು ನಿರಂತರ ಮಾತುಕತೆ ನಡೆಸುತ್ತಿದ್ದು, ಗಮನಾರ್ಹ ಪ್ರಗತಿ ಸಾಧಿಸಲಾಗಿದೆ. ಮೊದಲೆರಡು ಸುತ್ತಿನ ಮಾತುಕತೆಗೆ ಹೋಲಿಸಿದರೆ ಈಗ 'ಗಣನೀಯ ಪ್ರಗತಿ'ಯಾಗಿದೆ. ಎರಡೂ ಕಡೆಯ ನಿಯೋಗಗಳು ಸದ್ಯದಲ್ಲೇ ಒಟ್ಟಿಗೆ ಸೇರಿ ಸಂಧಾನ ಮಾತುಕತೆ ನಡೆಸಲಿವೆ, ಕರಡು ಒಪ್ಪಂದಕ್ಕೆ ಬರಲಿವೆ' ಎಂದು ರಷ್ಯಾದ ಪ್ರತಿನಿಧಿ ಲಿಯೊನಿಡ್ ಸ್ಲಟ್‌ಸ್ಕಿ ಹೇಳಿಕೆ ಉಲ್ಲೇಖಿಸಿ ರಷ್ಯಾದ 'ರಿಯಾ' ಸುದ್ದಿಸಂಸ್ಥೆ ವರದಿ ಮಾಡಿದೆ.

ದಿನದ ಬೆಳವಣಿಗೆಗಳು

- ಉಕ್ರೇನಿನ 50 ನಿರಾಶ್ರಿತರನ್ನು ಕರೆದೊಯ್ಯುತ್ತಿದ್ದ ಬಸ್ ಇಟಲಿಯ ಎಮಿಲಿಯಾ-ರೊಮಾಗ್ನ ಪ್ರಾಂತ್ಯದ ಪೊರ್ಲಿಯಲ್ಲಿ ಉರುಳಿಬಿದ್ದು, ಒಬ್ಬರು ಮೃತಪಟ್ಟಿದ್ದಾರೆ. ಈ ಬಸ್ ಅಡ್ರಿಯಾಟಿಕ್ ಬಂದರು ನಗರ ಪೆಸ್ಕರಾಗೆ ತೆರಳುತ್ತಿತ್ತು
- ಉಕ್ರೇನ್ ಮೇಲಿನ ಸೇನಾ ಕಾರ್ಯಾಚರಣೆ ವಿರೋಧಿಸಿ ರಷ್ಯಾ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದ 250ಕ್ಕೂ ಹೆಚ್ಚು ನಾಗರಿಕರನ್ನು ರಷ್ಯಾ ಪೊಲೀಸರು ವಶಕ್ಕೆ ಪಡೆದಿದ್ದಾರೆ
- ಉಕ್ರೇನ್‌ನಲ್ಲಿ ರಷ್ಯಾ ಹೊಸ 'ಕೈಗೊಂಬೆ-ಗಣರಾಜ್ಯ' ಸ್ಥಾಪಿಸುವ ಪ್ರಯತ್ನ ನಡೆಸುತ್ತಿದೆ. ಉಕ್ರೇನ್ ಅನ್ನು ಒಡೆಯಲು ಹುನ್ನಾರ ನಡೆಸಿದೆ– ವೊಲೊಡಿಮಿರ್ ಝೆಲೆನ್‌ಸ್ಕಿ ಆರೋಪ
- ಮಾನವೀಯ ಕಾರಿಡಾರ್‌ಗಳ ಮೂಲಕ ಇದುವರೆಗೆ 1.25 ಲಕ್ಷ ನಾಗರಿಕರನ್ನು ಸ್ಥಳಾಂತರಿಸಲಾಗಿದೆ– ಝೆಲೆನ್‌ಸ್ಕಿ
- ಉಕ್ರೇನ್ ನಿರಾಶ್ರಿತ ಕುಟುಂಬಕ್ಕೆ ಮಾಸಿಕ ತಲಾ 350 ಪೌಂಡ್ ಧನ ಸಹಾಯ ನೀಡುವುದಾಗಿ ಬ್ರಿಟನ್ ಭರವಸೆ
- ಪಾಶ್ಚಿಮಾತ್ಯ ರಾಷ್ಟ್ರಗಳ ನಿರ್ಬಂಧಗಳಿಂದ ಅರ್ಥವ್ಯವಸ್ಥೆಗೆ ಆಗಿರುವ ನಷ್ಟವನ್ನು ಸರಿಪಡಿಸಿಕೊಳ್ಳಲು ಚೀನಾದ ನೆರವಿನ ನಿರೀಕ್ಷೆಯಲ್ಲಿದೆ ರಷ್ಯಾ. ಆದರೆ, ರಷ್ಯಾದ ಆರ್ಥಿಕತೆಯ ಪುನಶ್ಚೇತನಕ್ಕೆ ನೆರವು ನೀಡದಂತೆ ಚೀನಾಕ್ಕೆ ಅಮೆರಿಕ ಎಚ್ಚರಿಕೆ ನೀಡಿದೆ
- ರಷ್ಯಾ ಸೈನಿಕರಿಂದ ಮರಿಯುಪೋಲ್ ನಗರವೊಂದರಲ್ಲೇ ಈವರೆಗೆ 2,100 ನಾಗರಿಕರ ಹತ್ಯೆ– ಉಕ್ರೇನ್ ಅಧಿಕಾರಿಗಳ ಹೇಳಿಕೆ
- ಉಕ್ರೇನ್ ಮೇಲಿನ ರಷ್ಯಾ ಆಕ್ರಮಣ ಸಂಬಂಧ ಅಮೆರಿಕದ ಉನ್ನತ ನಿಯೋಗ ಸೋಮವಾರ ಚೀನಾದ ಉನ್ನತ ಅಧಿಕಾರಿಗಳೊಂದಿಗೆ ರೋಮ್‌ನಲ್ಲಿ ಮಹತ್ವದ ಮಾತುಕತೆ ನಡೆಸುವುದಾಗಿ ಶ್ವೇತಭವನ ಹೇಳಿದೆ

ನವೀನ್ ಮೃತದೇಹ ತರಲು ಕ್ರಮ ಕೈಗೊಳ್ಳಿ: ಮೋದಿ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಸಂಪುಟದ ಭದ್ರತಾ ಸಮಿತಿಯ ಸಭೆಯನ್ನು ಭಾನುವಾರ ನಡೆಸಿದ್ದಾರೆ. ಉಕ್ರೇನ್‌ನ ಮೇಲೆ ರಷ್ಯಾ ದಾಳಿಯ ಸಂದರ್ಭದಲ್ಲಿ ಭಾರತದ ಸುರಕ್ಷತಾ ಸನ್ನದ್ಧತೆ ಮತ್ತು ಜಾಗತಿಕ ಪರಿಸ್ಥಿತಿಯ ಪರಾಮರ್ಶೆಯು ಈ ಸಭೆಯ ಉದ್ದೇಶವಾಗಿತ್ತು.

ಹಾರ್ಕಿವ್‌ನ ಮೇಲೆ ರಷ್ಯಾ ನಡೆಸಿದ ಶೆಲ್ ದಾಳಿಯಲ್ಲಿ ಮೃತಪಟ್ಟ ಕರ್ನಾಟಕದ ವಿದ್ಯಾರ್ಥಿ ನವೀನ್ ಶೇಖರಪ್ಪ ಅವರ ಮೃತದೇಹವನ್ನು ತಾಯ್ನಾಡಿಗೆ ತರಲು ಎಲ್ಲ ಕ್ರಮ ಕೈಗೊಳ್ಳುವಂತೆ ಪ್ರಧಾನಿ ಸೂಚಿಸಿದ್ದಾರೆ.

ಭದ್ರತಾ ವ್ಯವಸ್ಥೆಗೆ ಅತ್ಯಾಧುನಿಕ ತಂತ್ರಜ್ಞಾನದ ಉಪಕರಣಗಳನ್ನು ಸೇರಿಸಿಕೊಳ್ಳಬೇಕು ಎಂದು ಸೂಚಿಸಿದರು. ರಕ್ಷಣಾ ಕ್ಷೇತ್ರದ ಉಪಕರಣಗಳ ತಯಾರಿಕೆಯಲ್ಲಿ ದೇಶವು ಸ್ವಾವಲಂಬನೆ ಸಾಧಿಸಬೇಕು ಎಂಬುದನ್ನು ಅವರು ಪುನರುಚ್ಚರಿಸಿದರು. ಉಕ್ರೇನ್‌ನಲ್ಲಿದ್ದ ಭಾರತೀಯರನ್ನು ತೆರವು ಮಾಡುವುದಕ್ಕಾಗಿ ನಡೆಸಿದ 'ಆಪರೇಷನ್ ಗಂಗಾ' ಬಗ್ಗೆಯೂ ಪ್ರಧಾನಿ ಮಾಹಿತಿ ಪಡೆದರು.

'ರಷ್ಯಾ ರಾಸಾಯನಿಕ ಅಸ್ತ್ರ ಬಳಸಿದರೆ ಯುದ್ಧ ಗತಿ ಬದಲು'

ವಾರ್ಸಾ, ಕೀವ್, ಲಂಡನ್ (ಎಎಫ್‌ಪಿ/ರಾಯಿಟರ್ಸ್): 'ಉಕ್ರೇನ್ ಮೇಲೆ ರಷ್ಯಾ ರಾಸಾಯನಿಕ ಅಸ್ತ್ರ ಬಳಸಿದ್ದರೆ ಯುದ್ಧದ ಗತಿಯೇ ಬದಲಾಗಲಿದೆ' ಎಂದು ಪೋಲೆಂಡ್ ಅಧ್ಯಕ್ಷ ಆಂಡ್ರೆ ಡುಡಾ ಭಾನುವಾರ ಎಚ್ಚರಿಸಿದರು.

'ರಷ್ಯಾ ಇಂತಹ ಕ್ರಮಕ್ಕೆ ಮುಂದಾದರೆ, ಇದನ್ನು ನಿಭಾಯಿಸುವ ಬಗ್ಗೆ ಅಮೆರಿಕ ಮತ್ತು ನ್ಯಾಟೊ ರಾಷ್ಟ್ರಗಳು ಗಂಭೀರವಾಗಿ ಚಿಂತಿಸಬೇಕು. ರಷ್ಯಾ ಮುಂದೆ ಯುರೋಪ್ ಅಷ್ಟೇ ಅಲ್ಲ ಇಡೀ ಜಗತ್ತಿಗೆ ಅಪಾಯಕಾರಿಯಾಗಲಿದೆ' ಎಂದು ಅವರು ಹೇಳಿದರು.

'ರಷ್ಯಾ-ನ್ಯಾಟೊ ನಡುವೆ ಸಂಘರ್ಷವಾದರೆ ಅದು 3ನೇ ಮಹಾಯುದ್ಧಕ್ಕೆ ನಾಂದಿ. ಯಾವುದೇ ಕಾರಣಕ್ಕೂ ರಷ್ಯಾ-ಉಕ್ರೇನ್ ಬಿಕ್ಕಟ್ಟಿಗೆ ಮಧ್ಯಸ್ಥಿಕೆ ವಹಿಸಲ್ಲ' ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಹೇಳಿಕೆ ನೀಡಿದ ಬೆನ್ನಲ್ಲೇ, ಪೋಲೆಂಡ್ ಅಧ್ಯಕ್ಷರು ಈ ರೀತಿ ಹೇಳಿದರು.

'ರಷ್ಯಾ ಅಧ್ಯಕ್ಷ ಪುಟಿನ್ ಸಾಮೂಹಿಕ ವಿನಾಶದ ಅಸ್ತ್ರ ಬಳಸಿದರೆ, ಅದು ಯುದ್ಧದ ಗತಿಯನ್ನೇ ಬದಲಿಸುತ್ತದೆ. ಜೊತೆಗೆ ರಷ್ಯಾದೊಂದಿಗೆ ಇತರ ದೇಶಗಳ ಮೈತ್ರಿ ಮೇಲೂ ಪರಿಣಾಮ ಬೀರಲಿದೆ' ಎಂದು ಅವರು 'ಬಿಬಿಸಿ'ಗೆ ನೀಡಿದ ಸಂದರ್ಶನದಲ್ಲಿ ಹೇಳಿದರು.

'ರಾಸಾಯನಿಕ ಬಾಂಬ್ ದಾಳಿ': ಉಕ್ರೇನ್‌ನ ಪೂರ್ವ ಲುಹಾನ್‌ಸ್ಕ್‌ನಲ್ಲಿ ರಷ್ಯಾದ ಪಡೆಗಳು ನಿಷೇಧಿತ ರಾಸಾಯನಿಕ ಬಾಂಬ್ (ರಂಜಕ ಅನಿಲ) ದಾಳಿ ನಡೆಸಿವೆ ಎಂದು ಪೋಪಾಸ್‌ನ ಪೊಲೀಸ್ ಮುಖ್ಯಸ್ಥ ಒಲೆಕ್ಸಿ ಬಿಲೋಶಿಟ್‌ಸ್ಕಿ ಆರೋಪಿಸಿದ್ದಾರೆ.

ಲುಹಾನ್‌ಸ್ಕ್‌ನ ಪಶ್ಚಿಮದ 100 ಕಿ.ಮೀ. ವ್ಯಾಪ್ತಿಯಲ್ಲಿ ಶನಿವಾರ ರಾಸಾಯನಿಕ ಬಾಂಬ್ ಹಾಕಲಾಗಿದೆ. ನಾಗರಿಕರನ್ನು ಸ್ಥಳಾಂತರಿಸುವ ರೈಲಿನ ಮೇಲೂ ಶೆಲ್ ದಾಳಿ ನಡೆದಿದೆ. ಒಬ್ಬರು ಮೃತಪಟ್ಟಿದ್ದು, ಮತ್ತೊಬ್ಬರು ಗಾಯಗೊಂಡಿದ್ದಾರೆ ಎಂದು ಡೊನೆಟ್‌ಸ್ಕ್ ಮಿಲಿಟರಿ ಕಮಾಂಡರ್ ಹೇಳಿದ್ದಾರೆ.

ಥಾಯ್ಲೆಂಡ್‌ನಲ್ಲಿ ಸಿಲುಕಿದ ಸಾವಿರಾರು ರಷ್ಯನ್ನರು

ಬ್ಯಾಂಕಾಕ್ (ಎಎಫ್‌ಪಿ): ಉಕ್ರೇನ್ ಮೇಲಿನ ದಾಳಿ ಖಂಡಿಸಿ ರಷ್ಯಾದ ಮೇಲೆ ಹಲವು ದೇಶಗಳು ವಿಧಿಸಿರುವ ನಿರ್ಬಂಧದಿಂದ ಸಾವಿರಾರು ರಷ್ಯನ್ ಪ್ರವಾಸಿಗರು ತಮ್ಮ ತವರಿಗೆ ಮರಳಲಾಗದೆ ಥಾಯ್ಲೆಂಡ್‌ನಲ್ಲಿ ಸಿಲುಕಿಕೊಂಡಿದ್ದಾರೆ ಎಂದು ಇಲ್ಲಿನ ಥಾಯ್ ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ರಷ್ಯಾದ ಬ್ಯಾಂಕ್‌ಗಳು, ವ್ಯವಹಾರ ಮತ್ತು ಜಾಗತಿಕ ಪಾವತಿ ಮೇಲೆ ಹಲವು ರಾಷ್ಟ್ರಗಳು ನಿರ್ಬಂಧ ಹೇರಿವೆ. ಇದರಿಂದ ಥಾಯ್ಲೆಂಡ್‌ನಲ್ಲಿ ಸಿಲುಕಿರುವ ರಷ್ಯಾದ ಪ್ರವಾಸಿಗರು ಖರ್ಚಿಗೂ ಹಣವಿಲ್ಲದೆ ಸಂಕಷ್ಟದಲ್ಲಿದ್ದಾರೆ.

ಪತ್ರಕರ್ತನ ಹತ್ಯೆ

ಇರ್ಪಿನ್ (ಎಎಫ್‌ಪಿ): ಉಕ್ರೇನ್ ರಾಜಧಾನಿ ಕೀವ್ ಪ್ರಾಂತ್ಯದ ಇರ್ಪಿನ್ ನಗರದಲ್ಲಿ ರಷ್ಯಾ ಪಡೆಗಳು ನಡೆಸಿದ ಗುಂಡಿನ ದಾಳಿಗೆ ಅಮೆರಿಕದ ಪತ್ರಕರ್ತ ಬ್ರೆಂಟ್ ರೆನಾಡ್ ಅವರು ಭಾನುವಾರ ಬಲಿಯಾಗಿದ್ದಾರೆ. ಮತ್ತೊಬ್ಬ ಪತ್ರಕರ್ತ ಗಾಯಗೊಂಡಿದ್ದಾರೆ ಎಂದು ಕೀವ್ ಪ್ರಾಂತ್ಯದ ಪೊಲೀಸ್ ಮುಖ್ಯಸ್ಥ ಆ್ಯಂಡ್ರಿಯ್ ನೈಬಿತೋವ್ ತಿಳಿಸಿದ್ದಾರೆ.

ಗಾಯಗೊಂಡಿರುವ ಪತ್ರಕರ್ತನ ಗುರುತು ಸಿಕ್ಕಿಲ್ಲ.

ಭಾರತೀಯ ಪಠ್ಯಕ್ರಮದ ವೈದ್ಯಕೀಯ ಶಿಕ್ಷಣ: ಸುಪ್ರೀಂಗೆ ಪಿಐಎಲ್

ನವದೆಹಲಿ: ಯುದ್ಧಪೀಡಿತ ಉಕ್ರೇನ್‌ನಿಂದ ಮರಳಿ ಬಂದಿರುವ ವಿದ್ಯಾರ್ಥಿಗಳಿಗೆ ಭಾರತೀಯ ಪಠ್ಯಕ್ರಮದ ಅನುಸಾರ ವೈದ್ಯಕೀಯ ಕೋರ್ಸ್ ಮುಂದುವರಿಸಲು ಅನುಮತಿ ನೀಡುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಕೋರಿ ಸುಪ್ರೀಂ ಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಲಾಗಿದೆ.

ವಕೀಲರಾದ ರಾಣಾ ಸಂದೀಪ್ ಬುಸ್ಸಾ, ಡಾ.ನೀತು ನಾಯ್ಡು ರಾಯಲಾ ಅವರು ಈ ಪಿಐಎಲ್ ಸಲ್ಲಿಸಿದ್ದಾರೆ.

ಉಕ್ರೇನ್‌ನಿಂದ ಬಂದಿರುವ ಭಾರತೀಯ ವಿದ್ಯಾರ್ಥಿಗಳು ಭಾರತದಲ್ಲಿ ವೈದ್ಯಕೀಯ ಕೋರ್ಸ್‌ಗೆ ಪ್ರವೇಶ ಮತ್ತು ಅಧ್ಯಯನ ಮುಂದುವರಿಕೆಗೆ ಸಂಬಂಧಿಸಿದಂತೆ ನಿರ್ದಿಷ್ಟ ಮಾರ್ಗಸೂಚಿಗಳನ್ನು ಹೊರಡಿಸಲು ಸಂಬಂಧಪಟ್ಟ ಪ್ರಾಧಿಕಾರಗಳಿಗೆ ನಿರ್ದೇಶನ ನೀಡುವಂತೆ ಅರ್ಜಿದಾರರು ಮನವಿ ಮಾಡಿದ್ದಾರೆ.

ಕೆರ್ಸಾನ್: ರಷ್ಯಾ ವಿರುದ್ಧ ಹೆಚ್ಚಿದ ಪ್ರತಿಭಟನೆ

ಕೀವ್(ಎಎಫ್‌ಪಿ): ರಷ್ಯಾ ಪಡೆಗಳು ವಶಪಡಿಸಿಕೊಂಡಿರುವ ಉಕ್ರೇನ್‌ನ ಕೆರ್ಸಾನ್ ನಗರದಲ್ಲಿ ಭಾನುವಾರ ಸಾವಿರಾರು ನಾಗರಿಕರು ಶಾಂತಿಯುತ ಪ್ರತಿಭಟನೆ ನಡೆಸಿದರು. ಈ ವೇಳೆ ರಷ್ಯಾ ಸೈನಿಕರು ಪ್ರತಿಭಟನಕಾರರ ಮೇಲೆ ಗುಂಡಿನ ದಾಳಿ ನಡೆಸುವುದಾಗಿ ಬೆದರಿಕೆ ಹಾಕಿದರು ಎಂದು ವರದಿಯಾಗಿದೆ.

'ಕೆರ್ಸಾನ್ ಉಕ್ರೇನಿನ ಭಾಗ ಮತ್ತು ಇದು ಉಕ್ರೇನ್ ಹೆಮ್ಮೆ' ಎಂಬ ಘೋಷಣೆಗಳನ್ನು ಪ್ರತಿಭಟನಕಾರರು ಮೊಳಗಿಸಿದರು. ಮುಸುಕುಧಾರಿ ರಷ್ಯಾದ ಯೋಧರು ಪ್ರತಿಭಟನಕಾರರತ್ತ ಬಂದೂಕುಗಳ ಗುರಿಯಿಟ್ಟಿದ್ದರು ಎನ್ನಲಾಗಿದೆ.

ಈ ವಿಡಿಯೊವನ್ನು ಟೆಲಿಗ್ರಾಂನಲ್ಲಿ ಹಂಚಿಕೊಂಡಿರುವ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು, 'ಶರಣಾಗತರಾಗದೆ ಉಕ್ರೇನ್ ನಮ್ಮ ನೆಲ ಎಂಬುದನ್ನು ಗಟ್ಟಿ ಧ್ವನಿಯಲ್ಲಿ ಹೇಳುತ್ತಿರುವ ಪ್ರತಿಯೊಬ್ಬರಿಗೂ ನಾನು ಕೃತಜ್ಞ' ಎಂದು ಬರೆದುಕೊಂಡಿದ್ದಾರೆ.

3 ದಿನಗಳ ನಿರಂತರ ಯುದ್ಧದ ಮೂಲಕ ಮಾರ್ಚ್ 3ರಂದು ರಷ್ಯಾ ಸೇನೆ ಉಕ್ರೇನ್‌ನ ಬಂದರು ನಗರ ಕೆರ್ಸಾನ್ ವಶಪಡಿಸಿಕೊಂಡಿತ್ತು. ಸೇನಾ ಕಾರ್ಯಾಚರಣೆಯಲ್ಲಿ ರಷ್ಯಾ ವಶಪಡಿಸಿಕೊಂಡ ಉಕ್ರೇನ್‌ನ ಮೊದಲ ದೊಡ್ಡ ನಗರ ಇದು.

ಉಕ್ರೇನ್‌ನಲ್ಲಿ ರಷ್ಯಾ ನಡೆಸುತ್ತಿರುವ ಯುದ್ಧವನ್ನು ವಿರೋಧಿಸಿ ಜರ್ಮನಿಯ ಫ್ರಾಂಕ್‌ಫರ್ಟ್‌ನಲ್ಲಿ ಭಾನುವಾರ ನಾಗರಿಕರು ಬೃಹತ್ ಪ್ರತಿಭಟನೆ ನಡೆಸಿದರು – ಎಎಫ್‌ಪಿ ಚಿತ್ರ

ಸಮುದ್ರ ಪೂಜೆ ಪತಂಜಲಿ ಯೋಗ ಶಿಕ್ಷಣ ಫೌಂಡೇಶನ್ ಭಾನುವಾರ ಮಂಗಳೂರಿನ ಪಣಂಬೂರಿನಲ್ಲಿ ಆಯೋಜಿಸಿದ್ದ ಸಮುದ್ರ ಪೂಜೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಜನರು-ಪ್ರಜಾವಾಣಿ ಚಿತ್ರ

ನಟ ಪುನೀತ್ ಸೇರಿ ಮೂವರಿಗೆ ಗೌರವ ಡಾಕ್ಟರೇಟ್

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಇದೇ 22ರಂದು ಮೈಸೂರು ವಿ.ವಿ ಘಟಿಕೋತ್ಸವ
- 28,581 ಅಭ್ಯರ್ಥಿಗಳಿಗೆ ಪದವಿ ಪ್ರದಾನ

ಮೈಸೂರು: ವಿಜ್ಞಾನಿ ಡಾ.ವಿ.ಕೆ.ಆತ್ರೆ, ದಿವಂಗತ ನಟ ಪುನೀತ್ ರಾಜ್‌ಕುಮಾರ್ ಹಾಗೂ ಜಾನಪದ ಕಲಾವಿದ ಎಂ.ಮಹದೇವಸ್ವಾಮಿ ಅವರಿಗೆ ಮೈಸೂರು ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪ್ರಕಟಿಸಿದೆ.

'ಪುನೀತ್ ಅವರ ಸಾಮಾಜಿಕ ಸೇವಾ ಕಾರ್ಯ ಹಾಗೂ ಚಿತ್ರರಂಗದಲ್ಲಿನ ಸಾಧನೆ ಪರಿಗಣಿಸಿ ಮರಣೋತ್ತರವಾಗಿ ಗೌರವ ಡಾಕ್ಟರೇಟ್ ನೀಡುತ್ತಿದ್ದೇವೆ. ಅವರ ಜನ್ಮದಿನಕ್ಕೆ ವಿಶ್ವವಿದ್ಯಾಲಯ ನೀಡುತ್ತಿರುವ ಪುಟ್ಟ ಉಡುಗೊರೆ ಇದು. ಪುನೀತ್ ಅವರ ಪತ್ನಿ ಅಶ್ವಿನಿ ಅವರು ಘಟಿಕೋತ್ಸವಕ್ಕೆ ಬರಲು ಒಪ್ಪಿದ್ದಾರೆ. ಡಾ.ರಾಜ್‌ಕುಮಾರ್ ಅವರಿಗೆ 1976ರಲ್ಲಿ ನಮ್ಮ ವಿಶ್ವವಿದ್ಯಾಲಯದಿಂದಲೇ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಗಿತ್ತು. ಅಪ್ಪ ಹಾಗೂ ಮಗನಿಗೆ ಒಂದೇ ವಿಶ್ವವಿದ್ಯಾಲಯದಿಂದ ಈ ಗೌರವ ಲಭಿಸಿದೆ' ಎಂದು ಕುಲಪತಿ ಪ್ರೊ. ಜಿ.ಹೇಮಂತಕುಮಾರ್ ಭಾನುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಡಾ.ವಾಸುದೇವ ಕಲ್ಕುಂಟೆ ಆತ್ರೆ ಶ್ರೇಷ್ಠ ವಿಜ್ಞಾನಿ. ಪದ್ಮಭೂಷಣ, ಪದ್ಮವಿಭೂಷಣ ಪ್ರಶಸ್ತಿ ಪುರಸ್ಕೃತರು. ರಕ್ಷಣಾ ಸಚಿವರ ವೈಜ್ಞಾನಿಕ ಸಲಹೆಗಾರರಾಗಿ, ಡಿಆರ್‌ಡಿಒ ಸಂಸ್ಥೆ ಮಹಾನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದಾರೆ' ಎಂದು ಮಾಹಿತಿ ನೀಡಿದರು.

'ಮಳವಳ್ಳಿಯ ಮಹದೇವಸ್ವಾಮಿ, ಮಹದೇಶ್ವರನ ಮೇಲೆ ಭಕ್ತಿಗೀತೆ ಹಾಡಿ ಪ್ರಸಿದ್ಧರಾಗಿದ್ದು, 80ಕ್ಕೂ ಅಧಿಕ ಕಲಾ ತಂಡಗಳಿಗೆ ತರಬೇತಿ ನೀಡಿದ್ದಾರೆ. ಜಾನಪದ ಅಕಾಡೆಮಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದಾರೆ' ಎಂದು ಹೇಳಿದರು.

'ಮಾರ್ಚ್ 22ರಂದು, 102ನೇ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಪದವಿ ಪ್ರದಾನ ಮಾಡುವರು. ರಾಷ್ಟ್ರೀಯ ಮೌಲ್ಯಾಂಕನ ಮತ್ತು ಮಾನ್ಯತಾ ಪರಿಷತ್‌ನ (ನ್ಯಾಕ್) ನಿರ್ದೇಶಕ ಪ್ರೊ.ಎಸ್.ಸಿ.ಶರ್ಮ ಘಟಿಕೋತ್ಸವ ಭಾಷಣ ಮಾಡಲಿದ್ದು, ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಭಾಗವಹಿಸಲಿದ್ದಾರೆ' ಎಂದರು.

ಪುನೀತ್

ಡಾ.ವಿ.ಕೆ.ಆತ್ರೆ

ಮಹದೇವಸ್ವಾಮಿ

'ಎಂ.ಎಸ್ಸಿ ರಸಾಯನ ವಿಜ್ಞಾನ ವಿದ್ಯಾರ್ಥಿನಿ ಜಿ.ಎಂ. ಭಾವನಾ 19 ಸ್ವರ್ಣ ಪದಕ ಪಡೆದಿದ್ದಾರೆ. ಇಲ್ಲಿ ವ್ಯಾಸಂಗ ಮಾಡುತ್ತಿರುವ ಅಫ್ಗಾನಿಸ್ತಾನದ ಕಾನೂನು ವಿದ್ಯಾರ್ಥಿ ಸೈಯದ್ ಕುದ್ರತ್ ಹಾಶಿಮಿ 2 ಸ್ವರ್ಣ ಪದಕ ಪಡೆದಿದ್ದಾರೆ' ಎಂದರು.

2021–22ನೇ ಬ್ಯಾಚ್‌ನ 28,581 ಅಭ್ಯರ್ಥಿಗಳಿಗೆ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ಪ್ರದಾನ ಮಾಡಲಾಗುವುದು. 213 ಅಭ್ಯರ್ಥಿಗಳಿಗೆ 376 ಸ್ವರ್ಣಪದಕ, 214 ದತ್ತಿ ಬಹುಮಾನ, 157 ಅಭ್ಯರ್ಥಿಗಳಿಗೆ ಪಿಎಚ್.ಡಿ ಪದವಿ ಪ್ರದಾನ ಮಾಡಲಾಗುವುದು ಎಂದರು. ಕುಲಸಚಿವ (ಪರೀಕ್ಷಾಂಗ) ಪ್ರೊ.ಎ.ಪಿ. ಜ್ಞಾನಪ್ರಕಾಶ್ ಇದ್ದರು.

ವೈರಮುಡಿ ಉತ್ಸವಕ್ಕೆ ಇಂದು ಸಿ.ಎಂ ಚಾಲನೆ

ಮಂಡ್ಯ: ಮೇಲುಕೋಟೆಯ ಚೆಲುವ ನಾರಾಯಣಸ್ವಾಮಿ ವೈರಮುಡಿ ಉತ್ಸವಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೋಮವಾರ ಚಾಲನೆ ನೀಡಲಿದ್ದಾರೆ.

ಕೋವಿಡ್‌ನಿಂದಾಗಿ ಎರಡು ವರ್ಷ ವೈರಮುಡಿ ಬ್ರಹ್ಮೋತ್ಸವ ಸರಳವಾಗಿ ನಡೆದಿತ್ತು. ಈ ವರ್ಷ ವೈಭವಯುತವಾಗಿ ನಡೆಯುತ್ತಿದ್ದು ಮೇಲುಕೋಟೆಯಲ್ಲಿ ಭಕ್ತಸಾಗರವೇ ಸೇರಿದೆ. ಮಾರ್ಚ್ 11ರಂದು ಗರುಡ ಧ್ವಜಾರೋಹಣದ ಮೂಲಕ ವಿಧ್ಯುಕ್ತವಾಗಿ ಆರಂಭಗೊಂಡಿದೆ. ರಾತ್ರಿ 8.30ಕ್ಕೆ ಮುಖ್ಯಮಂತ್ರಿ ಉತ್ಸವಕ್ಕೆ ಚಾಲನೆ ನೀಡುವರು. ಬೆಳಿಗ್ಗೆ 6.30ಕ್ಕೆ ಜಿಲ್ಲಾ ಖಜಾನೆಯಲ್ಲಿರುವ ವೈರಮುಡಿ, ರಾಜಮುಡಿ ತಿರುವಾಭರಣಗಳ ಪೆಟ್ಟಿಗೆ ತೆರೆಯಲಾಗುತ್ತದೆ. ನಗರದ ಲಕ್ಷ್ಮಿಜನಾರ್ದನ ದೇಗುಲದಲ್ಲಿ ಪ್ರಥಮ ಪೂಜೆ ಬಳಿಕ ಮೇಲುಕೋಟೆಗೆ ಮೆರವಣಿಗೆಯಲ್ಲಿ ಒಯ್ಯಲಾಗುತ್ತದೆ.

362 ಮಂದಿ ನೇಮಕ: ಮಸೂದೆಗೆ ರಾಜ್ಯಪಾಲರ ಅಂಕಿತ

ಬೆಂಗಳೂರು: 'ಕರ್ನಾಟಕ ಸಿವಿಲ್ ಸೇವೆಗಳ (2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್‌ಗಳ ಆಯ್ಕೆ ಮತ್ತು ನೇಮಕಾತಿಯ ಸಿಂಧುಗೊಳಿಸುವಿಕೆ) ಮಸೂದೆ– 2022'ಗೆ ರಾಜ್ಯಪಾಲರು ಅಂಕಿತ ಹಾಕಿದ್ದಾರೆ ಎಂದು ರಾಜಭವನದ ಮೂಲಗಳು ತಿಳಿಸಿವೆ.

2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಭರ್ತಿಗೆ ಕೆಪಿಎಸ್‌ಸಿ ನಡೆಸಿದ್ದ ಪರೀಕ್ಷೆಯಲ್ಲಿ ಆಯ್ಕೆಯಾಗಿದ್ದ 362 ಅಭ್ಯರ್ಥಿಗಳ ನೇಮಕಾತಿಗೆ ಸಿಂಧುತ್ವದ ಮುದ್ರೆ ಒತ್ತಲು ರಾಜ್ಯ ಸರ್ಕಾರ ಇದನ್ನು ಸಿದ್ಧಪಡಿಸಿತ್ತು.

ಅಕ್ರಮ, ಭ್ರಷ್ಟಾಚಾರದ ಆರೋಪಗಳ ಸುಳಿಗೆ ಸಿಲುಕಿ ತನಿಖೆ, ವಿಚಾರಣೆಗೆ ಒಳಗಾಗಿ, ಹೈಕೋರ್ಟ್, ಸುಪ್ರೀಂಕೋರ್ಟ್ ಮೆಟ್ಟಿಲು ಹತ್ತಿ ಎಂಟು ವರ್ಷಗಳಿಂದ ಅತಂತ್ರ ಸ್ಥಿತಿಯಲ್ಲಿರುವ ಈ ಆಯ್ಕೆ ಪಟ್ಟಿಯನ್ನು ಕಾಯ್ದೆಯ ಮೂಲಕ ಸಕ್ರಮಗೊಳಿಸಲು ಕಳೆದ ಅಧಿವೇಶನದಲ್ಲಿ ಸರ್ಕಾರ ಮಸೂದೆ ಮಂಡಿಸಿತ್ತು. ಚರ್ಚೆ ಇಲ್ಲದೆ ಈ ಮಸೂದೆ ಅಂಗೀಕಾರಗೊಂಡಿತ್ತು.

ಇದೀಗ, ಮಸೂದೆಗೆ ರಾಜ್ಯಪಾಲರು ಅಂಕಿತ ಬಿದ್ದಿರುವುದರಿಂದ, ಸರ್ಕಾರ ಅದರ ರಾಜ್ಯಪತ್ರ ಹೊರಡಿಸಲಿದೆ.

27 ಕಲಾವಿದರಿಗೆ ಜಾನಪದ ಲೋಕೋತ್ಸವ ಪ್ರಶಸ್ತಿ ಪ್ರದಾನ

'ಜಾನಪದ ಲೋಕದಲ್ಲಿ 'ಜನಪದ ರೆಪರ್ಟರಿ' ಸ್ಥಾಪಿಸಿ'

ಪ್ರಜಾವಾಣಿ ವಾರ್ತೆ

ರಾಮನಗರ: ಇಲ್ಲಿನ ಜಾನಪದ ಲೋಕದಲ್ಲಿ ಭಾನುವಾರ ಸಂಜೆ 'ಪ್ರವಾಸಿ ಜಾನಪದ ಲೋಕೋತ್ಸವ' ಕಾರ್ಯಕ್ರಮದ ವೇದಿಕೆಯಲ್ಲಿ ನಾಡಿನ 27 ಕಲಾವಿದರಿಗೆ ಕರ್ನಾಟಕ ಜಾನಪದ ಪರಿಷತ್ತಿನ 2022ರ ವಾರ್ಷಿಕ ಪ್ರಶಸ್ತಿ ಪ್ರದಾನ ಮಾಡಲಾಯಿತು. ನೂರಾರು ಮಂದಿ ಈ ಸಂಭ್ರಮದ ಕ್ಷಣಗಳಿಗೆ ಸಾಕ್ಷಿಯಾದರು.

ಪ್ರಶಸ್ತಿ ಪುರಸ್ಕೃತರ ಪರವಾಗಿ ಮಾತನಾಡಿದ ಜಾನಪದ ವಿದ್ವಾಂಸ ಬಿ.ಎ.ವಿವೇಕ ರೈ 'ಸರ್ಕಾರ ಕಲಾವಿದರ ಕಲ್ಯಾಣಕ್ಕೆ ಕೋಟ್ಯಂತರ ರೂಪಾಯಿ ಖರ್ಚು ಮಾಡುವ ಜೊತೆಗೆ ಅವರ ಬದುಕಿಗೆ ಬೇಕಾದ ಸವಲತ್ತು ಕಲ್ಪಿಸಬೇಕು. ಜಾನಪದ ಲೋಕದಲ್ಲಿ ಜನಪದ ರೆಪರ್ಟರಿ ಅಥವಾ ರಂಗಾಯಣ ಸ್ಥಾಪನೆಗೆ ಸರ್ಕಾರ ಮುಂದಾಗಬೇಕು. ಆಗ ಮಾತ್ರ ಈ ಕಲೆಯನ್ನು ಮುಂದಿನ ಪೀಳಿಗೆಗೆ ತಲುಪಿಸಲು ಸಾಧ್ಯ' ಎಂದರು.

'ಜಾನಪದ ಪರಿಷತ್ತು ಕಲಾವಿದರ ಪಾಲಿನ ವಿಧಾನಪರಿಷತ್ತು. ನಮ್ಮ ನೋವು–ನಲಿವುಗಳಿಗೆ ಸದಾ ಇಲ್ಲಿ ಜಾಗ ಇದೆ. ರಾಜಕಾರಣಿಗಳು–ಅಧಿಕಾರಿಗಳು ಮನಸ್ಸು ಮಾಡಿದರೆ ಈ ಕಲೆಯನ್ನು ಮತ್ತಷ್ಟು ಎತ್ತರಿಸುವುದು ಸುಲಭದ ಕೆಲಸ' ಎಂದು ಮತ್ತೊಬ್ಬ ಪ್ರಶಸ್ತಿ ಪುರಸ್ಕೃತರಾದ ಯಕ್ಷಗಾನ ಕಲಾವಿದ ಕೆರೆಮನೆ ಶಿವಾನಂದ ಹೆಗಡೆ ಅಭಿಪ್ರಾಯಪಟ್ಟರು.

'ಜಾನಪದ ಕ್ಷೇತ್ರದಲ್ಲಿ ಈ ಹಿಂದಿನ ಕಾರ್ಯ ನಿಂತೇ ಹೋಗಿದೆ. ಅದನ್ನು ಮುಂದುವರಿಸಬೇಕು' ಎಂದು ಪ್ರಶಸ್ತಿ ಪುರಸ್ಕೃತ ಜಾನಪದ ವಿದ್ವಾಂಸ ಎಂ. ಬೈರೇಗೌಡ ಒತ್ತಾಯಿಸಿದರು.

ಪ್ರಶಸ್ತಿ ಪ್ರದಾನ ಮಾಡಿದ ಶಾಸಕಿ ಅನಿತಾ ಕುಮಾರಸ್ವಾಮಿ 'ಕಲಾವಿದರಿಗೆ ಸರ್ಕಾರ ನೀಡುವ ಮಾಸಾಶನವನ್ನು ₹ 3 ಸಾವಿರದಿಂದ ₹ 5 ಸಾವಿರಕ್ಕೆ ಹೆಚ್ಚಿಸಬೇಕು. ನಿವೇಶನ ನೀಡಬೇಕು' ಎಂದು ಕೋರಿದರು.

ಇದೇ ಸಂದರ್ಭ ರಾಮನಗರ ಜಿಲ್ಲೆಯ ಜನಪದ ಕಲಾವಿದರು ಹಾಗೂ ಚಿಕ್ಕಮಗಳೂರು ಜಿಲ್ಲಾ ಜನಪದ ಕಲಾ ಸಾಧಕರು ಕೃತಿಗಳನ್ನು ಬಿಡುಗಡೆ ಮಾಡಲಾಯಿತು. ಅನ್ನದಾನೇಶ್ವರನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಮಾತನಾಡಿದರು. ವಿಧಾನ ಪರಿಷತ್ ಸದಸ್ಯರಾದ ಅ. ದೇವೇಗೌಡ, ಸಿ.ಎಂ. ಲಿಂಗಪ್ಪ, ಕರ್ನಾಟಕ ಜಾನಪದ ಪರಿಷತ್ತು ಅಧ್ಯಕ್ಷ ಟಿ. ತಿಮ್ಮೇಗೌಡ, ಮ್ಯಾನೇಜಿಂಗ್ ಟ್ರಸ್ಟಿ ಆದಿತ್ಯ ನಂಜರಾಜ್, ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಎಂ.ಎನ್. ಹರೀಶ್ ಮತ್ತಿತರರು ಇದ್ದರು. ಜಾನಪದ ಲೋಕದ ಕ್ಯುರೇಟರ್ ಯು.ಎಂ. ರವಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಿರ್ವಹಿಸಿದರು.

ಜಾನಪದ ಲೋಕದಲ್ಲಿ ಭಾನುವಾರ ಸಂಜೆ ಕಲಾವಿದರಾದ (ಎಡದಿಂದ) ಕೊಪ್ಪಳದ ಭೀಮಪ್ಪ ಪೂಜಾರ, ಚಾಮರಾಜನಗರದ ಹೊನ್ನೂರು ಗೌರಮ್ಮ, ತುಮಕೂರಿನ ಪುಟ್ಟಲಕ್ಕಮ್ಮ, ಧಾರವಾಡದ ಸುಭಾಷ್‌ಚಂದ್ರ ಹೊಸಮನಿ ಹಾಗೂ ರಾಮನಗರದ ಮಾಧುನಾಯ್ಕ ಅವರಿಗೆ ವಾರ್ಷಿಕ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಜೋಗಿಲ ಸಿದ್ದರಾಜು, ಆದಿತ್ಯ ನಂಜರಾಜ್, ಎಂ.ಎನ್. ಹರೀಶ್, ವಿಧಾನ ಪರಿಷತ್ ಸದಸ್ಯ ಅ. ದೇವೇಗೌಡ, ಅನ್ನದಾನೇಶ್ವರನಾಥ ಸ್ವಾಮೀಜಿ, ಜಾನಪದ ಪರಿಷತ್ತು ಅಧ್ಯಕ್ಷ ಟಿ. ತಿಮ್ಮೇಗೌಡ, ಪ್ರಶಸ್ತಿ ಪುರಸ್ಕೃತರಾದ ಬಿ.ಎ.ವಿವೇಕ ರೈ, ಕೆರೆಮನೆ ಶಿವಾನಂದ ಹೆಗಡೆ ಹಾಗೂ ಎಂ. ಬೈರೇಗೌಡ ಇದ್ದರು

'ರಾಗಿ ಖರೀದಿ ಹೆಚ್ಚಳಕ್ಕೆ ಚಿಂತನೆ'

ಹಾಸನ: 'ರಾಗಿ ಖರೀದಿ ಪ್ರಮಾಣ ಹೆಚ್ಚಿಸಬೇಕೆಂಬ ರೈತರ ಬೇಡಿಕೆ ಬಗ್ಗೆ ಕೇಂದ್ರ ಸರ್ಕಾರ ಚಿಂತನೆ ನಡೆಸಿದೆ. ಖರೀದಿ ಕೇಂದ್ರ ಆರಂಭಿಸುವ ಬಗ್ಗೆ ರಾಜ್ಯ ಸರ್ಕಾರದ ಜತೆ ಚರ್ಚಿಸಲಾಗುವುದು' ಎಂದು ಕೇಂದ್ರ ಕೃಷಿ, ರೈತರ ಕಲ್ಯಾಣ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ತಿಳಿಸಿದರು.

ಕಾರೆಕೆರೆ ಕೃಷಿ ಕಾಲೇಜಿನ ಕ್ರೀಡಾಂಗಣದಲ್ಲಿ ಭಾನುವಾರ ಏರ್ಪಡಿಸಿದ್ದ ಕರ್ನಾಟಕ ರೈತ ಸುರಕ್ಷತಾ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯಡಿ 'ನನ್ನ ಪಾಲಿಸಿ ನನ್ನ ಕೈಯಲ್ಲಿ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. 'ವಿಶ್ವಸಂಸ್ಥೆ ಸಹಯೋಗದಲ್ಲಿ ರಾಗಿ, ಸಿರಿಧಾನ್ಯಗಳಿಗೆ ಅಂತರರಾಷ್ಟ್ರೀಯವಾಗಿ ಮಾರುಕಟ್ಟೆ ಸೃಷ್ಟಿಸಲು ಒತ್ತು ನೀಡಲಾಗುವುದು. 2023ರೊಳಗೆ ಎಲ್ಲ ರಾಯಭಾರಿ ಕಚೇರಿಗಳಲ್ಲಿ ರಾಗಿ, ಜೋಳ, ಸಿರಿಧಾನ್ಯ ಪ್ರದರ್ಶನ ಮಾಡಲಾಗುವುದು' ಎಂದು ಹೇಳಿದರು.

'ರೈತರಿಗೆ ಕೃಷಿ, ತೋಟಗಾರಿಕೆ ವಿಶ್ವವಿದ್ಯಾಲಯದಲ್ಲಿ ಎರಡೂ ವಿಷಯಗಳ ಬಗ್ಗೆ ಮಾಹಿತಿ ನೀಡುವ ವ್ಯವಸ್ಥೆ ಮಾಡಬೇಕು' ಎಂದೂ ಸಲಹೆ ನೀಡಿದರು.

ಕರಿಘಟ್ಟಕ್ಕೆ ಹಾನಿಯಾಗಿರುವುದು

ಕರಿಘಟ್ಟಕ್ಕೆ ಬೆಂಕಿ: ನೂರಾರು ಎಕರೆ ಅರಣ್ಯ ನಾಶ

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ: ತಾಲ್ಲೂಕಿನ ಪ್ರಸಿದ್ಧ ಪ್ರಕೃತಿ ತಾಣ ಕರಿಘಟ್ಟ ಗುಡ್ಡದಲ್ಲಿ ಭಾನುವಾರ ಕುದುರೆ ಕಲ್ಲು ಗುಡ್ಡ, ಅಲ್ಲಾಪಟ್ಟಣ ಗಡಿ, ಸಿಡಿಎಸ್ ನಾಲೆ ಗಡಿ, ಶಿಖರ ಭಾಗದಲ್ಲಿ ಏಕ ಕಾಲದಲ್ಲಿ ಬೆಂಕಿ ಕಾಣಿಸಿಕೊಂಡಿದೆ. ನೂರಾರು ಎಕರೆ ಅರಣ್ಯ ಸುಟ್ಟು ಹೋಗಿದೆ.

ಅರ್ಧ ದಿನ ಬೆಂಕಿ ಉರಿಯುತ್ತಲೇ ಇತ್ತು. ಬಿಸಿಲು, ಗಾಳಿಯಿಂದಾಗಿ ಬೆಂಕಿ ನಂದಿಸಲಾಗದೇ ಅರಣ್ಯ ಇಲಾಖೆ ಸಿಬ್ಬಂದಿ ಪರದಾಡಿದರು. ಬೆಂಕಿ ರೇಖೆಯನ್ನು ದಾಟಿಕೊಂಡು ಬೆಂಕಿ ಮುನ್ನುಗ್ಗುತ್ತಿತ್ತು. ಅರಣ್ಯ ಇಲಾಖೆ ಹಾಗೂ ಪರಿಸರ ಪ್ರಿಯರು ನೆಟ್ಟು ಬೆಳೆಸುತ್ತಿದ್ದ ವಿವಿಧ ಗಿಡಗಳು ಸುಟ್ಟು ಹೋದವು. ಪ್ರಾಣಿ, ಪಕ್ಷಿಗಳು ಜೀವ ಕಳೆದುಕೊಂಡಿವೆ. ಪ್ರತಿ ವರ್ಷ ಕರಿಘಟ್ಟ ಗುಡ್ಡಕ್ಕೆ ಬೆಂಕಿ ಬೀಳುತ್ತಲೇ ಇದೆ. ಇದನ್ನು ತಡೆಯಲು ಅರಣ್ಯ ಇಲಾಖೆ ಕ್ರಮವಹಿಸಬೇಕು ಎಂದು ಅರಣ್ಯದ ಪಕ್ಕದ ನಿವಾಸಿಗಳು ಹೇಳಿದ್ದಾರೆ.

'ಘಟನೆಗೆ ಕಿಡಿಗೇಡಿಗಳ ಕೃತ್ಯ ಕಾರಣ, ಈ ಬಗ್ಗೆ ತನಿಖೆ ನಡೆಯಲಿದೆ. ಹುಲ್ಲು ಜಾಸ್ತಿ ಇದ್ದುದರಿಂದ ಬೆಂಕಿ ಎಲ್ಲ ಕಡೆ ವ್ಯಾಪಿಸಿದೆ. ಸದ್ಯ ಬೆಂಕಿಯನ್ನು ಇಲಾಖೆ ಸಿಬ್ಬಂದಿ ನಂದಿಸಿದ್ದಾರೆ' ಎಂದು ಉಪಅರಣ್ಯ ಸಂರಕ್ಷಣಾಧಿಕಾರಿ ರವಿಶಂಕರ್ ತಿಳಿಸಿದರು.

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಪರೀಕ್ಷೆ ಸಮಯದಲ್ಲಿ ವಿದ್ಯಾರ್ಥಿಗಳ ಅಂತಿಮ ಹಂತದ ಸಿದ್ಧತೆ ಹೇಗಿರಬೇಕು? ಈ ಕುರಿತ ಸಲಹೆಗಳು ಇಲ್ಲಿದೆ.

ಅನುಭವ ಮಂಟಪ
ಸುಪ್ರೀಂ 'ಮೀಸಲಾತಿ ಸಮೀಕ್ಷೆ' ರಾಜಕೀಯ ಸವಾಲುಗಳು

ಕ್ರೆಡಿಟ್ ಸ್ಕೋರ್ ಸುಧಾರಣೆ ಹೇಗೆ? 8

ಸ್ಯಾಂಕಿ ಕೆರೆ ಕಾಂಕ್ರೀಟೀಕರಣಕ್ಕೆ ವಿರೋಧ 3A

ಕೋವಿಡ್ ಪ್ರಕರಣ ಹೆಚ್ಚಳ
ಚೀನಾ: ಐಟಿ ನಗರ ಶೆನ್‌ಜೆನ್‌ನಲ್ಲಿ ಲಾಕ್‌ಡೌನ್ 9

ಆರ್‌ಟಿಒ ಕೂಟ; ದಲ್ಲಾಳಿಗಳದ್ದೇ ಆಟ

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ರಾಜ್ಯ ಸರ್ಕಾರದ ಪ್ರಮುಖ ವರಮಾನದ ಮೂಲಗಳಲ್ಲಿ ಒಂದಾಗಿರುವ ಸಾರಿಗೆ ಇಲಾಖೆ, ಅಧಿಕಾರಿಗಳು ಮತ್ತು ದಲ್ಲಾಳಿಗಳ ಅಪವಿತ್ರ ಮೈತ್ರಿಕೂಟ ನಡೆಸುತ್ತಿರುವ ಲಂಚಾವತಾರಕ್ಕೆ ನಲುಗಿ ಹೋಗುತ್ತಿದೆ. ರಾಜ್ಯದ ಬಹುತೇಕ ಪ್ರಾದೇಶಿಕ ಸಾರಿಗೆ ಕಚೇರಿಗಳು ಮತ್ತು ಅಂತರರಾಜ್ಯ ಗಡಿಗಳಲ್ಲಿರುವ ಸಾರಿಗೆ ತನಿಖಾ ಠಾಣೆಗಳು ಲಂಚ ವಸೂಲಿಯ ಕೇಂದ್ರಗಳಾಗಿ ಬದಲಾಗಿವೆ.

ರಾಜ್ಯದಲ್ಲಿ 71 ಪ್ರಾದೇಶಿಕ ಸಾರಿಗೆ ಕಚೇರಿಗಳು ಮತ್ತು ಅಂತರರಾಜ್ಯ ಗಡಿಗಳಲ್ಲಿ 15 ಸಾರಿಗೆ ತನಿಖಾ ಠಾಣೆಗಳಿವೆ. ಈ ಎಲ್ಲ ಕಡೆಗಳಲ್ಲಿ ದಲ್ಲಾಳಿಗಳೇ ವ್ಯವಸ್ಥೆಯನ್ನು ನಿಯಂತ್ರಿಸುತ್ತಿದ್ದು, ಗರಿಗರಿ ನೋಟುಗಳ ಕಾಣಿಕೆ ಅರ್ಪಿಸದೆ ಸರ್ಕಾರಿ ಸೇವೆ ಪಡೆಯಲು ಸಾಧ್ಯವಿಲ್ಲ ಎಂಬ ದೂರುಗಳಿವೆ. ಸಾರಿಗೆ ಇಲಾಖೆಯ ಕಚೇರಿಗಳಿಗಿಂತಲೂ ಅವುಗಳ ಸುತ್ತಲೂ ಇರುವ ಸ್ಟೇಷನರಿ ಅಂಗಡಿಗಳು, ಕಿರಾಣಿ ಅಂಗಡಿಗಳಲ್ಲೇ ಎಲ್ಲವೂ ನಿರ್ಧಾರವಾಗುವ ವ್ಯವಸ್ಥೆ ಇದೆ.

ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ ವಾಹನ ಚಾಲನೆ ಕಲಿಕಾ ಪರವಾನಗಿ, ವಾಹನ ಚಾಲನಾ ಪರವಾನಗಿ, ವಾಹನಗಳ ನೋಂದಣಿ ಮತ್ತು ನೋಂದಣಿ ಸಂಖ್ಯೆ ನೀಡುವುದು, ವಾಹನಗಳ ಸಾಮರ್ಥ್ಯ ಪ್ರಮಾಣ ಪತ್ರ ವಿತರಣೆ, ಮಾರಾಟವಾದ ವಾಹನಗಳ ದಾಖಲಾತಿಗಳಲ್ಲಿ ಹೆಸರು ಬದಲಾವಣೆ ಪ್ರಮುಖವಾಗಿ ನಡೆಯುತ್ತದೆ. ದಲ್ಲಾಳಿಗಳನ್ನು ಬಳಸಿಕೊಂಡು ಅಧಿಕಾರಿಗಳ 'ಕೈ ಬಿಸಿ' ಮಾಡದೇ ಇದ್ದರೆ ಈ ಯಾವ ಕೆಲಸವೂ ಇಲ್ಲಿ ಸುಲಭವಲ್ಲ ಎಂಬುದು ಸಾರ್ವಜನಿಕ ವಲಯದಲ್ಲಿ ದಶಕಗಳಿಂದಲೂ ಇರುವ ಅಳಲು.



ಭಾವು ಪತ್ತಾರ್

ಭ್ರಷ್ಟಾಚಾರ ಜನರಿಗೆ ಪ್ರಹಾರ

ಬಹುತೇಕ ಕಡೆ, ಪ್ರಕ್ರಿಯೆ ಪೂರ್ಣಗೊಂಡ ಕಡತಗಳು ಸಾರಿಗೆ ಅಧಿಕಾರಿಗಳ ಕಚೇರಿಯೊಳಕ್ಕೆ ಇರುವುದೇ ಇಲ್ಲ. ಸದ್ದಿಲ್ಲದೇ ಅವು ಸುತ್ತ-ಮುತ್ತಲಿನ ಸ್ಟೇಷನರಿ ಅಂಗಡಿ, ಕಿರಾಣಿ ಅಂಗಡಿಗೆ ಬಂದು ಕುಳಿತಿರುತ್ತವೆ. ಕಚೇರಿಗೆ ಅರ್ಜಿ ನೀಡಿದವರು ಅಂಗಡಿ, ಮಳಿಗೆಗಳಲ್ಲಿ 'ಕಾಣಿಕೆ' ಅರ್ಪಿಸಿ ಆದೇಶದ ಪ್ರತಿ ಅಥವಾ ಪರವಾನಗಿಯನ್ನು ಪಡೆದುಕೊಳ್ಳಬೇಕಾದ ದುಃಸ್ಥಿತಿ ಇದೆ.

4ನೇ ಪುಟ ನೋಡಿ
ಇನ್ನೊಂದು ಸುದ್ದಿ 4

ಸಾರಿಗೆ ಇಲಾಖೆಯಲ್ಲಿ ಯಾವ ಸೇವೆಗೆ ಎಷ್ಟು ಲಂಚ?

ಸೇವೆ	ಲಂಚದ ಮೊತ್ತ
ವಾಹನಗಳ ಸಾಮರ್ಥ್ಯ ಪ್ರಮಾಣಪತ್ರ	₹2,000
ಭಾರಿ ವಾಹನ ಚಾಲನಾ ಪರವಾನಗಿ	₹ 4,000
ಲಘು ವಾಹನ ಚಾಲನಾ ಪರವಾನಗಿ	₹ 1,000ದಿಂದ ₹ 1,500
ವಾಹನಗಳ ದಾಖಲೆ ಬದಲಾವಣೆ	₹ 3,500
ಫ್ಯಾನ್ಸಿ ನೋಂದಣಿ ಸಂಖ್ಯೆ	ಸಂಖ್ಯೆಗಳನ್ನು ಆಧರಿಸಿ ದರ
ಆಮದು ಮಾಡಿಕೊಂಡ ವಾಹನಗಳ ತೆರಿಗೆ ವಂಚನೆ	ಲಕ್ಷಗಳ ಲೆಕ್ಕದಲ್ಲಿ

ಯಾವ ಹುದ್ದೆಗೆ ಎಷ್ಟು ಲಂಚ?

ಸಾರಿಗೆ ಇಲಾಖೆ	
ಮೋಟಾರು ವಾಹನ ನಿರೀಕ್ಷಕ	₹ 20 ಲಕ್ಷದಿಂದ ₹ 50 ಲಕ್ಷ
ಹಿರಿಯ ಮೋಟಾರು ವಾಹನ ನಿರೀಕ್ಷಕ	₹ 30 ಲಕ್ಷದಿಂದ ₹ 50 ಲಕ್ಷ
ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ	₹ 5 ಲಕ್ಷದಿಂದ ₹ 25 ಲಕ್ಷ
ಪ್ರಾದೇಶಿಕ ಸಾರಿಗೆ ಅಧಿಕಾರಿ	₹ 25 ಲಕ್ಷದಿಂದ ₹ 1.5 ಕೋಟಿ

'ಭ್ರಷ್ಟಾಚಾರಕ್ಕೆ ಅವಕಾಶವೇ ಇಲ್ಲ'

'ಸಾರಿಗೆ ಇಲಾಖೆಯಲ್ಲಿ ಪ್ರಮುಖ ಸೇವೆಗಳನ್ನು ಆನ್‌ಲೈನ್ ಮೂಲಕ ಒದಗಿಸಲಾಗುತ್ತಿದೆ. ನಮ್ಮ ಇಲಾಖೆಯಲ್ಲಿ ಭ್ರಷ್ಟಾಚಾರಕ್ಕೆ ಅವಕಾಶವೇ ಇಲ್ಲ. ಹಿಂದೆ ಭ್ರಷ್ಟಾಚಾರ ಇತ್ತು, ಈಗ ಅದಕ್ಕೆ ಸಂಪೂರ್ಣವಾಗಿ ಕಡಿವಾಣ ಹಾಕಲಾಗಿದೆ' ಎಂದು ಸಾರಿಗೆ ಸಚಿವ ಬಿ. ಶ್ರೀರಾಮುಲು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು. ಇಲಾಖೆಯಲ್ಲಿ ಅಧಿಕಾರಿಗಳು ಮತ್ತು ನೌಕರರ ವರ್ಗಾವಣೆಯಲ್ಲೂ ಯಾವುದೇ ರೀತಿಯ ಭ್ರಷ್ಟಾಚಾರಕ್ಕೆ ಅವಕಾಶ ನೀಡಿಲ್ಲ. ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರದಲ್ಲಿ ಅಂತಹ ಚಟುವಟಿಕೆಗಳಿಗೆ ಅವಕಾಶವಿಲ್ಲ ಎಂದರು.

ರಿಷಭ್ ದಾಖಲೆ ಅರ್ಧಶತಕ

ರಿಷಭ್ ಪಂತ್ –ಪಿಟಿಐ ಚಿತ್ರ

ಬೆಂಗಳೂರಿನಲ್ಲಿ ನಡೆಯುತ್ತಿರುವ ಶ್ರೀಲಂಕಾ ಎದುರಿನ ಟೆಸ್ಟ್ ಪಂದ್ಯದ ಎರಡನೇ ಇನಿಂಗ್ಸ್‌ನಲ್ಲಿ ಭಾನುವಾರ ಸ್ಫೋಟಕ ಆಟವಾಡಿದ ಎಡಗೈ ಬ್ಯಾಟರ್ ರಿಷಭ್ ಪಂತ್ ಭಾರತದ ಪರ ವೇಗವಾಗಿ 50 ರನ್ ಗಳಿಸಿದ ದಾಖಲೆ ಬರೆದರು. ಜಸ್‌ಪ್ರೀತ್ ಬೂಮ್ರಾ 5 ವಿಕೆಟ್ ಗೊಂಚಲು ಪಡೆದರು.

ಟೆಸ್ಟ್‌ನಲ್ಲಿ ಭಾರತದ ಪರ ವೇಗದ ಅರ್ಧಶತಕ

ಬ್ಯಾಟರ್	ಎಸೆತ	ಎದುರಾಳಿ	ವರ್ಷ	ಸ್ಥಳ
ರಿಷಭ್ ಪಂತ್	28	ಶ್ರೀಲಂಕಾ	2022	ಬೆಂಗಳೂರು
ಕಪಿಲ್ ದೇವ್	30	ಪಾಕಿಸ್ತಾನ	1982	ಕರಾಚಿ
ಶಾರ್ದೂಲ್ ಠಾಕೂರ್	31	ಇಂಗ್ಲೆಂಡ್	2021	ಓವಲ್
ವೀರೇಂದ್ರ ಸೆಹ್ವಾಗ್	32	ಇಂಗ್ಲೆಂಡ್	2008	ಚೆನ್ನೈ

ಸ್ಕೋರ್ ಮೊದಲ ಇನಿಂಗ್ಸ್: ಭಾರತ: 252; ಶ್ರೀಲಂಕಾ: 109
ಎರಡನೇ ಇನಿಂಗ್ಸ್: ಭಾರತ: 9ಕ್ಕೆ 303 ಡಿಕ್ಲೇರ್; ಶ್ರೀಲಂಕಾ: 1ಕ್ಕೆ 28

ವಿವರ ಪುಟ 10

ಬಜೆಟ್ ಅಧಿವೇಶನ ಇಂದು ಪುನರಾರಂಭ

ನವದೆಹಲಿ: ಸಂಸತ್ತಿನ ಬಜೆಟ್ ಅಧಿವೇಶನದ ಎರಡನೇ ಭಾಗವು ಸೋಮವಾರದಿಂದ ಆರಂಭವಾಗಲಿದ್ದು, ನಿರುದ್ಯೋಗ, ಇಪಿಎಫ್ ಬಡ್ಡಿ ದರ ಕಡಿತ, ಉಕ್ರೇನ್‌ನಿಂದ ಭಾರತೀಯರ ತೆರವು ಮೊದಲಾದ ವಿಷಯಗಳ ಕುರಿತು ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳಲು ಪ್ರತಿಪಕ್ಷಗಳು ಸಜ್ಜಾಗಿವೆ. ಬಜೆಟ್‌ಗೆ ಅನುಮೋದನೆ ಪಡೆದ ಬಳಿಕ ಏಪ್ರಿಲ್ 8ರಂದು ಅಧಿವೇಶನ ಮುಕ್ತಾಯವಾಗಲಿದೆ. 8

ಎಸ್‌ಪಿಗೆ ಮಾಯಾ, ಒವೈಸಿ ತೊಡಕು

ಲಖನೌ: ಮಾಯಾವತಿ ನೇತೃತ್ವದ ಬಿಎಸ್‌ಪಿಗೆ ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಒಂದು ಕ್ಷೇತ್ರದಲ್ಲಷ್ಟೇ ಗೆಲ್ಲಲು ಸಾಧ್ಯವಾಗಿದೆ. ಅಸಾದುದ್ದೀನ್ ಒವೈಸಿ ಅವರ ಎಐಎಂಎಐ ಪಕ್ಷವು ಖಾತೆ ತೆರೆಯಲು ವಿಫಲವಾಯಿತು. ಆದರೆ ಈ ಎರಡೂ ಪಕ್ಷಗಳು ಸಮಾಜವಾದಿ ಪಕ್ಷಕ್ಕೆ (ಎಸ್‌ಪಿ) ತೀವ್ರ ಪೆಟ್ಟು ನೀಡುವಲ್ಲಿ ಸಫಲವಾದವು. 9

ಕಾಂಗ್ರೆಸ್ ಕಾರ್ಯಕಾರಿಣಿ ಸಭೆ: ಸೋಲಿನ ಆತ್ಮಾವಲೋಕನಕ್ಕೆ ಚಿಂತನ ಶಿಬಿರ

ಅಧ್ಯಕ್ಷೆಯಾಗಿ ಸೋನಿಯಾ ಮುಂದುವರಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್ ಪಕ್ಷದ ಅಧ್ಯಕ್ಷೆಯಾಗಿ ಸೋನಿಯಾ ಗಾಂಧಿ ಅವರೇ ಸದ್ಯಕ್ಕೆ ಮುಂದುವರಿಯಲಿದ್ದಾರೆ ಎಂದು ಕಾಂಗ್ರೆಸ್ ಕಾರ್ಯಕಾರಿಣಿ ಸಭೆಯು (ಸಿಡಬ್ಲ್ಯುಸಿ) ನಿರ್ಧರಿಸಿದೆ. ಐದು ರಾಜ್ಯಗಳ ವಿಧಾನಸಭಾ ಚುನಾವಣೆಯ ಸೋಲಿನ ಆತ್ಮಾವಲೋಕನಕ್ಕಾಗಿ ಭಾನುವಾರ ಸಭೆ ಕರೆಯಲಾಗಿತ್ತು. ಪಕ್ಷದ ನಾಯಕತ್ವದಲ್ಲಿ ಬದಲಾವಣೆ ಆಗಬೇಕು ಎಂಬ ಆಗ್ರಹ ಪಕ್ಷದ ಒಂದು ವರ್ಗದಿಂದ ಕೇಳಿ ಬಂದಿತ್ತು.

ಸೋಲಿನ ನೈತಿಕ ಹೊಣೆ ಹೊತ್ತು ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಡುವುದಾಗಿ ಸೋನಿಯಾ ಅವರು ಸಭೆಯಲ್ಲಿ ಹೇಳಿದರು. ಆದರೆ, ಸಿಡಬ್ಲ್ಯುಸಿ ಅದನ್ನು ಒಪ್ಪಿಕೊಳ್ಳಲಿಲ್ಲ ಎಂದು ಮೂಲಗಳು ಹೇಳಿವೆ. ಸೋನಿಯಾ ಅಧ್ಯಕ್ಷತೆಯಲ್ಲಿ ನಡೆದ ಸಭೆಯು ಸುಮಾರು ನಾಲ್ಕೂವರೆ ತಾಸು ಚರ್ಚೆ ನಡೆಸಿದೆ.

ಸೋನಿಯಾ ಅವರ ನಾಯಕತ್ವದಲ್ಲಿ ಸಿಡಬ್ಲ್ಯುಸಿ ವಿಶ್ವಾಸ ಇರಿಸಿದೆ. ಸಿಡಬ್ಲ್ಯುಸಿಯ ಎಲ್ಲ ಸದಸ್ಯರೂ ಸೋನಿಯಾ ಮುಂದುವರಿಕೆಯನ್ನು ಬಯಸಿದರು. ಪಕ್ಷದ ಆಂತರಿಕ ಚುನಾವಣೆ ನಡೆಯುವವರೆಗೆ ಅಧ್ಯಕ್ಷರಾಗಿ ಮುಂದುವರಿಯುವಂತೆ ಸೋನಿಯಾ ಅವರನ್ನು ಸಿಡಬ್ಲ್ಯುಸಿ ಕೋರಿದೆ. ಪಕ್ಷ ಬಲಪಡಿಸುವಿಕೆಯ ಬಗ್ಗೆ ಸಭೆಯಲ್ಲಿ ಚರ್ಚೆ ನಡೆದಿದೆ. ಸೋಲಿನ ಕಾರಣಗಳ ಬಗ್ಗೆ ಚರ್ಚಿಸುವುದಕ್ಕಾಗಿ ಚಿಂತನ ಶಿಬಿರವೊಂದನ್ನು ನಡೆಸಲು ಸಭೆಯು ನಿರ್ಧರಿಸಿದೆ.

3A ಪುಟ ನೋಡಿ

ರಾಹುಲ್ ಗಾಂಧಿ ನಾಯಕತ್ವಕ್ಕೆ ಆಗ್ರಹ

ರಾಹುಲ್ ಗಾಂಧಿ ಅವರು ಕಾಂಗ್ರೆಸ್ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಳ್ಳಬೇಕು ಎಂಬ ಕೂಗು ಬಲವಾಗಿ ಕೇಳಿ ಬಂದಿದೆ. ರಾಹುಲ್ ಅಧ್ಯಕ್ಷರಾಗಲಿ ಎಂದು ಪಕ್ಷದ ಹಲವು ಮುಖಂಡರು ಸಿಡಬ್ಲ್ಯುಸಿ ಸಭೆಗೆ ಮೊದಲೇ ಹೇಳಿಕೆ ಕೊಟ್ಟಿದ್ದರು.

ಪ್ರಧಾನಿ ನರೇಂದ್ರ ಮೋದಿ ಅವರನ್ನು ರಾಹುಲ್ ಅವರಂತೆ ಬೇರೆ ಯಾರೂ ತರಾಟೆಗೆ ತೆಗೆದುಕೊಳ್ಳುತ್ತಿಲ್ಲ. ಮೋದಿ ಅವರು ತಮ್ಮ ಪ್ರತಿ ಭಾಷಣವನ್ನೂ ರಾಹುಲ್ ಗಾಂಧಿ ಅವರನ್ನು ಟೀಕಿಸುತ್ತಲೇ ಆರಂಭಿಸುತ್ತಾರೆ. ಅದರ ಅರ್ಥ ಏನು ಎಂಬುದು ಎಲ್ಲರಿಗೂ ಗೊತ್ತು ಎಂದು ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಹೇಳಿದ್ದಾರೆ.

ಕರ್ನಾಟಕ ಕಾಂಗ್ರೆಸ್ ಘಟಕದ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರೂ ರಾಹುಲ್ ಅಧ್ಯಕ್ಷತೆಗೆ ಬೆಂಬಲ ಸೂಚಿಸಿ ಟ್ವೀಟ್ ಮಾಡಿದ್ದಾರೆ.

ಕಾಂಗ್ರೆಸ್ ಪಕ್ಷವನ್ನು ಮಾತ್ರವಲ್ಲ, ಇಡೀ ದೇಶದ ವಿವಿಧ ವರ್ಗಗಳನ್ನು ಜತೆಯಾಗಿ ಇರಿಸುವ ಕೊಂಡಿ ಗಾಂಧಿ ಕುಟುಂಬ. ಚುನಾವಣೆ ಸೋಲು ಅಥವಾ ಗೆಲುವಿನ ಮೇಲೆ ಅದು ಅವಲಂಬಿತ ಅಲ್ಲ ಎಂದು ಯುವ ಕಾಂಗ್ರೆಸ್ ಅಧ್ಯಕ್ಷ ಶ್ರೀನಿವಾಸ್ ಬಿ.ವಿ. ಹೇಳಿದ್ದಾರೆ.

ದೆಹಲಿ ಮತ್ತು ಸುತ್ತಮುತ್ತಲಿನ ಕಾಂಗ್ರೆಸ್ ಕಾರ್ಯಕರ್ತರು ಕೂಡ ಕಾಂಗ್ರೆಸ್ ಕಚೇರಿಯ ಸಮೀಪ ಸೇರಿದ್ದರು. ರಾಹುಲ್ ಅವರು ಪಕ್ಷದ ಅಧ್ಯಕ್ಷತೆ ವಹಿಸಿಕೊಳ್ಳಬೇಕು ಎಂಬುದು ಈ ಕಾರ್ಯಕರ್ತರ ಆಗ್ರಹವಾಗಿತ್ತು.

ಕಾಂಗ್ರೆಸ್ ಅಧ್ಯಕ್ಷರಾಗಿದ್ದ ರಾಹುಲ್ ಅವರು 2019ರ ಲೋಕಸಭಾ ಚುನಾವಣೆಯ ಸೋಲಿಗೆ ನೈತಿಕ ಹೊಣೆಹೊತ್ತು ರಾಜೀನಾಮೆ ನೀಡಿದ್ದರು.

ಕಾಯ್ದೆ ತಿದ್ದುಪಡಿಗೆ ಮಸೂದೆ

ತಾ.ಪಂ: 'ಜನಸಂಖ್ಯೆ' ಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಾಲ್ಲೂಕು ಪಂಚಾಯಿತಿ ಚುನಾವಣೆಗೆ 'ಜನಸಂಖ್ಯೆ' ಮಿತಿಗೊಳಿಸಲು ನಿರ್ಧರಿಸಿರುವ ರಾಜ್ಯ ಸರ್ಕಾರ, ಒಂದು ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿದ ತಾಲ್ಲೂಕು ಪಂಚಾಯಿತಿಯಲ್ಲಿ ಕನಿಷ್ಠ 11 ಚುನಾಯಿತ ಸದಸ್ಯರು ಇರಬೇಕು ಎಂದು ನಿಯಮ ರೂಪಿಸಲು ಮುಂದಾಗಿದೆ.

ಚುನಾಯಿತ ಸದಸ್ಯರ ಆಯ್ಕೆಗೆ ಜನಸಂಖ್ಯೆ ಮಿತಿಗೊಳಿಸಿ ಚುನಾವಣೆ ನಡೆಸಲು ಅವಕಾಶ ಕಲ್ಪಿಸಲು 'ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ– 1993' ತಿದ್ದುಪಡಿಗೆ ರಾಜ್ಯ ಸರ್ಕಾರ ತೀರ್ಮಾನಿಸಿದೆ. ಹಾಲಿ ಬಜೆಟ್ ಅಧಿವೇಶನದಲ್ಲಿಯೇ ತಿದ್ದುಪಡಿ ಮಸೂದೆ ಮಂಡಿಸಲು ಸಿದ್ಧತೆ ನಡೆಸಿದೆ.

ನಿವೃತ್ತ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಂ.ಲಕ್ಷ್ಮಿನಾರಾಯಣ ಅವರ ಅಧ್ಯಕ್ಷತೆಯ 'ಕರ್ನಾಟಕ ಪಂಚಾಯತ್‌ರಾಜ್ ಸೀಮಾ ನಿರ್ಣಯ ಆಯೋಗ'ದ ಶಿಫಾರಸಿನ ಅನ್ವಯ ಕಾಯ್ದೆ ತಿದ್ದುಪಡಿಗೆ ಸರ್ಕಾರ ಮುಂದಾಗಿದೆ. ಈ ಹಿಂದಿನ ಜನಗಣತಿ ಆಧರಿಸಿ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಕ್ಷೇತ್ರಗಳ ಗಡಿಯನ್ನು ನಿರ್ಧರಿಸುವ ಜೊತೆಗೆ, ಚುನಾಯಿಸಬೇಕಾದ ಒಟ್ಟು ಸದಸ್ಯರ ಸಂಖ್ಯೆಯನ್ನು ನಿಗದಿಪಡಿಸುವ ಕುರಿತಂತೆ ಈ ಆಯೋಗ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ತಿದ್ದುಪಡಿ ಮಸೂದೆಯ ಕರಡಿನಲ್ಲಿರುವ ಅಂಶದ ಪ್ರಕಾರ, 1 ಲಕ್ಷಕ್ಕಿಂತ ಕಡಿಮೆ, 50 ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿದ ತಾಲ್ಲೂಕುಗಳು ಕನಿಷ್ಠ ಒಂಬತ್ತು ಹಾಗೂ 50 ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರುವ ತಾಲ್ಲೂಕುಗಳು ಕನಿಷ್ಠ ಏಳು ಚುನಾಯಿತ ಸದಸ್ಯರನ್ನು ಹೊಂದಿರಬೇಕು.

ಹಾಲಿ ನಿಯಮದ ಪ್ರಕಾರ, ತಾಲ್ಲೂಕು ಪಂಚಾಯಿತಿ ಚುನಾಯಿತ ಸದಸ್ಯರ ಸಂಖ್ಯೆಯು ರಾಜ್ಯ ಚುನಾವಣಾ ಆಯೋಗದಿಂದ ಕಾಲಕಾಲಕ್ಕೆ ಅಧಿಸೂಚಿಸಲಾಗುತ್ತದೆ. ಅದರಂತೆ, ಆ ತಾಲ್ಲೂಕಿನ ಪ್ರತಿ 12,500 ರಿಂದ 15 ಸಾವಿರ ಜನಸಂಖ್ಯೆಗೆ ಒಬ್ಬರಂತೆ ಚುನಾಯಿತ ಸದಸ್ಯರಿರಬೇಕು. ಆದರೂ, ಒಂದು ಲಕ್ಷ ಜನಸಂಖ್ಯೆ ಮೀರದ ತಾಲ್ಲೂಕು ಪಂಚಾಯಿತಿ ಕನಿಷ್ಠ 11 ಚುನಾಯಿತ ಸದಸ್ಯರು ಇರಬೇಕು. ಇದೀಗ, ಈ ನಿಯಮಕ್ಕೆ ತಿದ್ದುಪಡಿ ಆಗಲಿದೆ.

4ನೇ ಪುಟ ನೋಡಿ

ಸೃಜನಾತ್ಮಕ ದೃಶ್ಯೀಕರಣ. ಹಾರ್ಲಿಕ್ಸ್ ದೈನಂದಿನ ಆಹಾರದ ಭಾಗವಾಗಿ ಸೇವಿಸಬೇಕಾದ ಪೌಷ್ಟಿಕ ಪಾನೀಯವಾಗಿದೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ

ಒಳ ಪುಟಗಳು

ಮತದಾರರಿಗೆ ಕೃತಜ್ಞತೆ ಸಲ್ಲಿಸಿದ ಎಎಪಿ 9

ಮಥುರಾ: ಮಸೀದಿ ತೆರವು ಅರ್ಜಿ ಅಂಗೀಕಾರ 8

ಇರಾಕ್: ಅಮೆರಿಕದ ದೂತಾವಾಸ ಕಚೇರಿ ಮೇಲೆ ಕ್ಷಿಪಣಿ ದಾಳಿ 9

ಸನ್ನಡತೆ: 161 ಕೈದಿಗಳ ಬಿಡುಗಡೆಗೆ ಆದೇಶ

ಬೆಂಗಳೂರು: ರಾಜ್ಯದ ವಿವಿಧ ಕಾರಾಗೃಹಗಳಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ಒಟ್ಟು 161 ಕೈದಿಗಳನ್ನು ಸನ್ನಡತೆಯ ಆಧಾರದಲ್ಲಿ ಅವಧಿಪೂರ್ವ ಬಿಡುಗಡೆ ಮಾಡಲು ಸರ್ಕಾರ ನಿರ್ಧರಿಸಿದ್ದು, ಕಾರಾಗೃಹ ಇಲಾಖೆ ಈ ಸಂಬಂಧ ಆದೇಶ ಹೊರಡಿಸಿದೆ.

ಸದರಿ ವಿಚಾರದ ಕುರಿತು ಕೈಗೊಂಡ ಕ್ರಮದ ಬಗ್ಗೆ ಇಲಾಖೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ಅಥವಾ ವರದಿ ಸಲ್ಲಿಸುವಂತೆಯೂ ಕಾರಾಗೃಹಗಳ ಉಪ ಮಹಾನಿರೀಕ್ಷಕರಿಗೆ ಸೂಚಿಸಲಾಗಿದೆ.

ರಾಜ್ಯಪಾಲರು ಮರು ಪರಿಶೀಲಿಸಲು ನಿರ್ದೇಶನ ನೀಡಿದ್ದ ಪ್ರಕರಣಗಳ ಪೈಕಿ ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿರುವ 25, ಮೈಸೂರು ಕಾರಾಗೃಹದ 21, ಬೆಳಗಾವಿ ಕಾರಾಗೃಹದ 10, ಕಲಬುರಗಿ ಕಾರಾಗೃಹದ 5, ವಿಜಯಪುರ ಕಾರಾಗೃಹದ 12, ಬಳ್ಳಾರಿ ಕಾರಾಗೃಹದ 5, ಧಾರವಾಡ ಕಾರಾಗೃಹದ 7 ಮಂದಿ ಬಿಡುಗಡೆಯಾಗಲಿದ್ದಾರೆ.

ಹಾಗೆಯೇ, ಕಾನೂನು ಇಲಾಖೆಯ ಅಭಿಪ್ರಾಯ ಕೋರಿದ್ದ ಹಾಗೂ ಎಲ್.ಸಿ.ಆರ್.ಸಮಿತಿ ಸಭೆಯಲ್ಲಿ ಶಿಫಾರಸುಗೊಂಡಿದ್ದವರ ಪೈಕಿ ಬೆಂಗಳೂರು ಕಾರಾಗೃಹದ 25, ಮೈಸೂರಿನ 9, ಕಲಬುರಗಿಯ 13, ಬಳ್ಳಾರಿಯ 8, ಧಾರವಾಡದ 6, ಶಿವಮೊಗ್ಗದ 1, ಬೆಳಗಾವಿಯ 4 ಹಾಗೂ ವಿಜಯಪುರ ಕಾರಾಗೃಹದಲ್ಲಿರುವ 10 ಮಂದಿ ಬಿಡುಗಡೆಯಾಗಲಿದ್ದಾರೆ.

ಅಂಗಾಂಗ ರವಾನೆ: 31 ಬಾರಿ ಹಸಿರು ಕಾರಿಡಾರ್

ಬೆಂಗಳೂರು: ಅಂಗಾಂಗ ಕಸಿಗಾಗಿ ರಾಜ್ಯದಲ್ಲಿ ಕಳೆದ ವರ್ಷ 31 ಬಾರಿ ಹಸಿರು ಕಾರಿಡಾರ್ ಮೂಲಕ ವಿವಿಧ ಆಸ್ಪತ್ರೆಗಳಿಗೆ ಅಂಗಾಂಗಗಳನ್ನು ರವಾನೆ ಮಾಡಲಾಗಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ರಾಜ್ಯದಲ್ಲಿ ಜೀವಸಾರ್ಥಕತೆ ಸಂಸ್ಥೆಯಡಿ ಅಂಗಾಂಗ ದಾನ ಪ್ರಕ್ರಿಯೆ ನಡೆಸಲಾಗುತ್ತಿದೆ. ಅಂಗಾಂಗ ವೈಫಲ್ಯ ಸಮಸ್ಯೆ ಎದುರಿಸುತ್ತಿರುವವರು ಸಂಸ್ಥೆಯಡಿ ಹೆಸರು ನೋಂದಾಯಿಸಿ, ಅಂಗಾಂಗ ಪಡೆಯಬಹುದಾಗಿದೆ. ಚೆನ್ನೈ ಸೇರಿದಂತೆ ರಾಜ್ಯದ ಹೊರ ನಗರಗಳಿಂದಲೂ ಅಂಗಾಂಗಗಳನ್ನೂ ಇಲ್ಲಿಗೆ ತರಲಾಗಿದೆ. ಹೆಚ್ಚಿನ ಬಾರಿ ಆಸ್ಟರ್ ಆರ್.ವಿ. ಆಸ್ಪತ್ರೆಗಳಿಂದ ನಾರಾಯಣ ಹೆಲ್ತ್ ಆಸ್ಪತ್ರೆಗಳಿಗೆ ರವಾನಿಸಲಾಗಿದೆ.

ಮಿದುಳು ನಿಷ್ಕ್ರಿಯಗೊಂಡ ಯಾವುದೇ ವ್ಯಕ್ತಿಯು ಅಂಗಾಂಗ ದಾನ ಮಾಡಬಹುದಾಗಿದ್ದು, ಅದು ಕಾನೂನುಬದ್ಧ. ಒಬ್ಬ ದಾನಿಯು ಹೃದಯ, ಮೂತ್ರಪಿಂಡ, ಯಕೃತ್ತು, ಮೇದೋಜೀರಕ ಗ್ರಂಥಿ, ಸಣ್ಣ ಕರುಳು, ಶ್ವಾಸಕೋಶ ದಾನ ಮಾಡಬಹುದು.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ: peoplesproblem@prajavani.co.in. ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

ವ್ಯಾಯಾಮ ಉಪಕರಣ ಬದಲಿಸಿ

ಬೃಂದಾವನ ಉದ್ಯಾನದಲ್ಲಿ ವ್ಯಾಯಾಮ ಉಪಕರಣ ಹಾಳಾಗಿರುವುದು

ಬನಶಂಕರಿ ಎರಡನೇ ಹಂತದ ಬೃಂದಾವನ ಉದ್ಯಾನದಲ್ಲಿ ವ್ಯಾಯಾಮ ಉಪಕರಣ ಹಾಳಾಗಿದೆ. ವಯಸ್ಸಾದವರು ಈ ಉಪಕರಣವನ್ನು ವ್ಯಾಯಾಮಕ್ಕಾಗಿ ಬಳಸುತ್ತಿದ್ದರು. ಹಲವು ದಿನಗಳಿಂದ ಮುರಿದಿರುವ ಈ ಉಪಕರಣದ ದುರಸ್ತಿಗೆ ಸಂಬಂಧಪಟ್ಟವರು ಮುಂದಾಗಿಲ್ಲ.

ಇದರಿಂದ ವ್ಯಾಯಾಮಕ್ಕೆ ಬರುವವರಿಗೆ ಸಮಸ್ಯೆಯಾಗಿದೆ. ಉಪಕರಣವನ್ನು ದುರಸ್ತಿ ಮಾಡಬೇಕು ಅಥವಾ ಅಗತ್ಯವಿದ್ದರೆ ಹೊಸ ಉಪಕರಣ ಅಳವಡಿಸಿದರೆ, ಉದ್ಯಾನಕ್ಕೆ ಬರುವವರಿಗೆ ಅನುಕೂಲವಾಗಲಿದೆ.

ಶಾಂತಾರಾಮ್, ಪದ್ಮನಾಭ ನಗರ

ಬಿಇಎಲ್ ವೃತ್ತ: ಬಸ್ ಹತ್ತಲು ನೂಕುನುಗ್ಗಲು

ಬಿಇಎಲ್ ವೃತ್ತದಲ್ಲಿ ಬಸ್ ಹತ್ತಲು ನೂಕುನುಗ್ಗಲು

ಬಿಇಎಲ್ ವೃತ್ತ, ಕಾನ್ಶಿರಾಂ ನಗರ ಹಾಗೂ ಎಂ.ಎಸ್.ಪಾಳ್ಯದ ಪ್ರಯಾಣಿಕರಿಗೆ ಅಗತ್ಯ ಪ್ರಮಾಣದಲ್ಲಿ ಸಾರ್ವಜನಿಕ ಬಸ್ ಸೇವೆ ಇಲ್ಲ. ಈ ಮಾರ್ಗದಲ್ಲಿ ಬಸ್‌ಗಳು ಸಂಚರಿಸುತ್ತವೆಯಾದರೂ ಬಹುತೇಕ ಬಸ್‌ಗಳು ಪ್ರಯಾಣಿಕರಿಂದ ತುಂಬಿರುತ್ತವೆ.

ಶಾಲಾ ಕಾಲೇಜುಗಳಿಗೆ ತೆರಳಲು ವಿದ್ಯಾರ್ಥಿಗಳು ಬಸ್‌ಗಾಗಿ ಬಿಇಎಲ್ ವೃತ್ತದಲ್ಲಿ ನೂರಾರು ಸಂಖ್ಯೆಯಲ್ಲಿ ನಿಲ್ಲುತ್ತಾರೆ. ಆದರೆ, ಬರುವ ಬಸ್‌ಗಳಿಗೆ ಹತ್ತಲು ಜಾಗವೇ ಇರುವುದಿಲ್ಲ. ಇದರಿಂದ ಅವರು ಸಕಾಲಕ್ಕೆ ಶಾಲೆಗಳನ್ನು ತಲುಪಲು ಸಾಧ್ಯವಾಗುತ್ತಿಲ್ಲ. ಬಸ್‌ಗಳಿಗೆ ಹತ್ತುವಾಗ ನೂಕುನುಗ್ಗಲು ತಪ್ಪಿದ್ದಲ್ಲ. ಬೆಳಿಗ್ಗೆ ಮತ್ತು ಸಂಜೆ ಅವಧಿಗಳಲ್ಲಾದರೂ ಈ ಮಾರ್ಗಕ್ಕೆ ಹೆಚ್ಚುವರಿ ಬಸ್‌ಗಳ ಸೇವೆ ಒದಗಿಸಿ.

ರಘು, ಸಾರ್ವಜನಿಕ

ಗೋವರ್ಧನ ರಸ್ತೆ ಸಂಪರ್ಕಿಸುವ ಮಾರ್ಗದಲ್ಲಿ ಕಸದ ರಾಶಿ

ರಸ್ತೆಯನ್ನು ಕಸಮುಕ್ತಗೊಳಿಸಿ

ಇಸ್ಕಾನ್ ದೇವಸ್ಥಾನದ ರಸ್ತೆಯಿಂದ ಗೋವರ್ಧನ ರಸ್ತೆ ಸಂಪರ್ಕಿಸುವ ಮಾರ್ಗದಲ್ಲಿ ಕಸದ ರಾಶಿ ಹಾಕಲಾಗಿದೆ. ಕೊಳೆತ ತರಕಾರಿ, ಹೂವು ಸೇರಿದಂತೆ ಎಲ್ಲ ರೀತಿಯ ಕಸ ತಂದು ಇಲ್ಲಿ ಸುರಿಯುತ್ತಾರೆ. ಈ ಜಾಗದಲ್ಲಿ ಕಸ ಸುರಿಯುವವರಿಗೆ ನಿಯಂತ್ರಣವೇ ಇಲ್ಲ. ರಸ್ತೆ ಬದಿಯಲ್ಲೇ ಮಲ–ಮೂತ್ರ ವಿಸರ್ಜನೆಯೂ ಮಾಡುತ್ತಾರೆ. ಇದರಿಂದಾಗಿ ದುರ್ನಾತದಲ್ಲೇ ಈ ರಸ್ತೆಯಲ್ಲಿ ಸಾಗುವುದು ಅನಿವಾರ್ಯವಾಗಿದೆ.

ಕೆಟ್ಟ ವಾಸನೆಯಿಂದಾಗಿ ವಾಂತಿ ಬರುವಂತಾಗುತ್ತದೆ. ಇದೇ ರಸ್ತೆಯು ತುಮಕೂರು ಹಾಗೂ ಮತ್ತಿಕೆರೆ ರಸ್ತೆಗಳನ್ನು ಸಂಪರ್ಕಿಸುತ್ತವೆ. ಪಾಲಿಕೆ ಅಧಿಕಾರಿಗಳು ಹಾಗೂ ಸ್ಥಳೀಯ ಜನಪ್ರತಿನಿಧಿಗಳು ಈ ರಸ್ತೆಯನ್ನು ಕಸಮುಕ್ತಗೊಳಿಸಲು ಕ್ರಮ ಕೈಗೊಳ್ಳಬೇಕು. ಇಲ್ಲಿ ಕಸ ಹಾಕುವುದನ್ನು ನಿಷೇಧಿಸಿ, ಕಸ ಹಾಕುವವರಿಗೆ ದಂಡ ವಿಧಿಸಬೇಕು.

ಚಂದ್ರಶೇಖರ್, ಸಾರ್ವಜನಿಕ

ರಸ್ತೆ ಗುಂಡಿ ದುರಸ್ತಿಗೆ ಕ್ರಮ

ಮೇಡಹಳ್ಳಿಯಲ್ಲಿ ರಾಜಕಾಲುವೆ ಸ್ವಚ್ಛಗೊಳಿಸಿರುವುದು.

ವರದಿ ಪರಿಣಾಮ

ಬಸವನಪುರ ವಾರ್ಡ್ ವ್ಯಾಪ್ತಿಯ ಮೇಡಹಳ್ಳಿ ಗ್ರಾಮದ ರಸ್ತೆಯಲ್ಲಿದ್ದ ಗುಂಡಿಯನ್ನು ಮುಚ್ಚಲಾಗಿದೆ.

'ಈ ಭಾಗದಲ್ಲಿ ಒಎಫ್‌ಸಿ ಕೇಬಲ್ ಅಳವಡಿಕೆ ಕಾಮಗಾರಿಗಾಗಿ ಅಗೆಯಲಾಗಿದ್ದ ಗುಂಡಿಯನ್ನು ಮುಚ್ಚದೆ, ಹಾಗೆಯೇ ಬಿಡಲಾಗಿದೆ. ಇದು, ರಸ್ತೆಯ ಮಧ್ಯಭಾಗದಲ್ಲೇ ಇರುವುದರಿಂದ ವಾಹನಗಳ ಸಂಚಾರಕ್ಕೆ ತೊಡಕಾಗಿದೆ. ಅವೈಜ್ಞಾನಿಕ ಕಾಮಗಾರಿಯಿಂದಾಗಿ ಅಪಘಾತಗಳು ಸಂಭವಿಸುತ್ತಿವೆ' ಎಂದು ಸ್ಥಳೀಯರು ದೂರಿದ್ದರು.

ಈ ಸಂಬಂಧ 'ರಸ್ತೆಯಲ್ಲೇ ಗುಂಡಿ ಬಿಟ್ಟರು' ಶೀರ್ಷಿಕೆಯಡಿ 'ಕುಂದು ಕೊರತೆ' ಅಂಕಣದಲ್ಲಿ ವರದಿ ಪ್ರಕಟವಾಗಿತ್ತು. ವರದಿ ಬಳಿಕ ಎಚ್ಚೆತ್ತ ಅಧಿಕಾರಿಗಳು ಗುಂಡಿ ಮುಚ್ಚಲು ಕ್ರಮ ಕೈಗೊಂಡಿದ್ದಾರೆ.

ಬಸ್ ತಂಗುದಾಣ ನಿರ್ಮಿಸಿ

ಚಿಕ್ಕಬಾಣಾವರದಲ್ಲಿ ಬಸ್ ತಂಗುದಾಣದ ವ್ಯವಸ್ಥೆಯಿಲ್ಲ. ಪ್ರತಿದಿನ ನೂರಾರು ಬಸ್‌ಗಳು ಈ ಮಾರ್ಗದಲ್ಲಿ ಸಂಚರಿಸುತ್ತವೆ. ಪ್ರಯಾಣಿಕರೂ ಹೆಚ್ಚಿನ ಸಂಖ್ಯೆಯಲ್ಲಿ ಇರುತ್ತಾರೆ. ಇವರೆಲ್ಲ ಬಸ್‌ಗಾಗಿ ಬಿಸಿಲಿನಲ್ಲೇ ರಸ್ತೆಯಲ್ಲಿ ನಿಲ್ಲಬೇಕಾದ ಪರಿಸ್ಥಿತಿ ಇದೆ. ಮಳೆಗಾಲದಲ್ಲಿ ಪ್ರಯಾಣಿಕರ ಪರದಾಟ ಹೇಳತೀರದು. ಬಿಸಿಲಿದ್ದಾಗ ಆಶ್ರಯಕ್ಕಾಗಿ ಮರಗಳ ಕೆಳಗೆ ನಿಲ್ಲುತ್ತಾರೆ.

ಬಸ್‌ಗಳು ಎಲ್ಲೆಂದರಲ್ಲಿ ನಿಲ್ಲಿಸಿ ಪ್ರಯಾಣಿಕರನ್ನು ಕರೆದೊಯ್ಯುತ್ತವೆ. ಈ ಸ್ಥಳಕ್ಕೆ ಹೊಸದಾಗಿ ಬರುವವರಿಗೆ ಬಸ್ ನಿಲ್ದಾಣ ಎಲ್ಲಿದೆ ಎನ್ನುವುದೇ ತಿಳಿಯುವುದಿಲ್ಲ. ವಿದ್ಯಾರ್ಥಿಗಳು ಹಾಗೂ ವೃದ್ಧರ ದೃಷ್ಟಿಯಿಂದಾದರೂ ಈ ಪ್ರದೇಶದಲ್ಲಿ ಒಂದು ಸೂಕ್ತ ಬಸ್ ತಂಗುದಾಣ ನಿರ್ಮಿಸಿದರೆ ಅನುಕೂಲವಾಗಲಿದೆ.

ಗೋಪಾಲರಾವ್, ಸ್ಥಳೀಯ

ಸುದ್ದಿ 2 ನಿಮಿಷ

ಹಲ್ಲೆ: ಅಪರಾಧಿಗೆ 7 ವರ್ಷ ಕಠಿಣ ಕಾರಾಗೃಹ ಶಿಕ್ಷೆ

ಬೆಂಗಳೂರು: ಕ್ರಿಮಿನಲ್ ಪ್ರಕರಣದಡಿ ಜೈಲು ಸೇರಿದ್ದ ತನಗೆ ಜಾಮೀನು ಕೊಡಿಸಲು ನಿರಾಕರಿಸಿದ್ದಕ್ಕಾಗಿ ಮಾರಕಾಸ್ತ್ರಗಳಿಂದ ವ್ಯಕ್ತಿಯೊಬ್ಬರ ಮೇಲೆ ಹಲ್ಲೆ ನಡೆಸಿದ್ದ ಮುನಿರಾಜ ಯಾನೆ ಹೂವಾಗೆ 60ನೇ ಸಿ.ಸಿ.ಎಚ್.ನ್ಯಾಯಾಲಯವು 7 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ಹಾಗೂ ₹10 ಸಾವಿರ ದಂಡ ವಿಧಿಸಿದೆ.

ದಂಡ ಪಾವತಿಸಲು ವಿಫಲನಾದಲ್ಲಿ 6 ತಿಂಗಳ ಸಾದಾ ಕಾರಾಗೃಹ ಶಿಕ್ಷೆ ಅನುಭವಿಸಬೇಕೆಂದು ಆದೇಶಿಸಿದೆ. ಸೂಕ್ತ ಸಾಕ್ಷಾಧಾರಗಳು ಇಲ್ಲದ ಕಾರಣ ಈ ಪ್ರಕರಣದ ಇತರ ಆರೋಪಿಗಳಾದ ಪ್ರಶಾಂತ ಯಾನೆ ಮುಳ್ಳ, ನವೀನಕುಮಾರ ಯಾನೆ ಮಾಮಾ ಅವರನ್ನು ಖುಲಾಸೆಗೊಳಿಸಿದೆ.

ಪ್ರಕರಣವೊಂದರಲ್ಲಿ ಬನಶಂಕರಿ ಪೊಲೀಸರಿಂದ ಬಂಧನಕ್ಕೊಳಪಟ್ಟಿದ್ದ ಮುನಿರಾಜಗೆ ವೆಂಕಟೇಶ್ ಯಾನೆ ಅಪ್ಪಿ ಎಂಬುವರು 2015ರ ಜನವರಿಯಲ್ಲಿ ಜಾಮೀನು ಕೊಡಿಸಿದ್ದರು. ಮತ್ತೊಂದು ಪ್ರಕರಣದಲ್ಲಿ ಜೈಲು ಸೇರಿದ್ದ ರೌಡಿಶೀಟರ್ ಮುನಿರಾಜ, ಜಾಮೀನು ಕೊಡಿಸುವಂತೆ ವೆಂಕಟೇಶ್‌ಗೆ ಮತ್ತೊಮ್ಮೆ ದುಂಬಾಲು ಬಿದ್ದಿದ್ದ. ಅದಕ್ಕೆ ವೆಂಕಟೇಶ್ ನಿರಾಕರಿಸಿದ್ದರು. ಇದರಿಂದ ಕುಪಿತನಾಗಿದ್ದ ಆತ ತನ್ನ ಸಹಚರರ ಜೊತೆ ಬಂದು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದ.

2015ರ ಏಪ್ರಿಲ್ 7ರಂದು ಯಡಿಯೂರಿನ ಎ.ಕೆ.ಕಾಲೊನಿಯ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿ ಘಟನೆ ನಡೆದಿತ್ತು. ಅದೇ ದಿನ ವೆಂಕಟೇಶ್ ಬನಶಂಕರಿ ಠಾಣೆಗೆ ದೂರು ನೀಡಿದ್ದರು. ಬನಶಂಕರಿ ಪೊಲೀಸರು 2015ರ ಮೇ 28ರಂದು 3ನೇ ಎ.ಸಿ.ಎಂ.ಎಂ. ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಆರು ಕಾರ್ಮಿಕರಿಗೆ ದೊರೆಯದ ವೇತನ: ಆರೋಪ

ಬೆಂಗಳೂರು: ಈಜಿಪುರ ಮೇಲ್ಸೇತುವೆಯ ಕಾಮಗಾರಿಯಲ್ಲಿ ತೊಡಗಿದ್ದ ಆರು ಕಾರ್ಮಿಕರಿಗೆ ಹಲವು ತಿಂಗಳುಗಳಿಂದ ವೇತನ ನೀಡಿಲ್ಲ ಎಂದು ಆಲ್ ಇಂಡಿಯಾ ಸೆಂಟ್ರಲ್ ಕೌನ್ಸಿಲ್ ಆಫ್ ಟ್ರೇಡ್ ಯೂನಿಯನ್ಸ್ (ಎಐಸಿಸಿಟಿಯು) ದೂರಿದೆ.

ಬಿಬಿಎಂಪಿ ನೇಮಿಸಿಕೊಂಡಿರುವ ಸಿಂಪ್ಲೆಕ್ಸ್ ಇನ್ಫ್ರಾಸ್ಟ್ರಕ್ಚರ್ ಕಂಪನಿ ಈ ಕಾರ್ಮಿಕರಿಗೆ ವೇತನ ನೀಡದೆ ಲಕ್ಷಾಂತರ ರೂಪಾಯಿ ಬಾಕಿ ಉಳಿಸಿಕೊಂಡಿದೆ ಎಂದು ತಿಳಿಸಿದೆ.

ಈ ಬಗ್ಗೆ ಬಿಬಿಎಂಪಿ ಕಾರ್ಯನಿರ್ವಾಹಕ ಎಂಜಿನಿಯರ್ ಮತ್ತು ಕಾರ್ಮಿಕ ಇಲಾಖೆಯ ಸಹಾಯಕ ಆಯುಕ್ತರಿಗೆ ದೂರು ಸಲ್ಲಿಸಲಾಗಿದೆ.

ಪ್ಲಾಂಟ್ ಆಪರೇಟರ್‌ಗಳಾದ ನಿತಾಯ್ ಘೋಷ್, ಮನಾಬ್ ಪಾಲ್, ಸರೋಜಿತ್ ಘೋಷ್ ಮತ್ತು ಪ್ಲಾಂಟ್ ಹೆಲ್ಪರ್ ಮಹಾದೇವ್ ಕಿರ್ತಾನಿಯಾ ಹಾಗೂ ಬೆಲ್ಟ್ ಆಪರೇಟರ್‌ಗಳಾದ ದೇವ್‌ಜ್ಯೋತಿ ಮೈತಿ, ಸುಚಾಂದ್ ದೇ ಅವರ ವೇತನವನ್ನು ಹಲವು ತಿಂಗಳುಗಳಿಂದ ಬಾಕಿ ಉಳಿಸಿಕೊಳ್ಳಲಾಗಿದೆ. ಕೆಲವರಿಗೆ 5ರಿಂದ 7 ತಿಂಗಳ ವೇತನ ನೀಡಿಲ್ಲ. ಚಾತಕ ಪಕ್ಷಿಯಂತೆ ವೇತನಕ್ಕೆ ಎಲ್ಲರೂ ಕಾಯುತ್ತಿದ್ದಾರೆ ಎಂದು ಎಐಸಿಸಿಟಿಯುನ ಅವನಿ ಚೋಕ್ಸಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗುತ್ತಿಗೆ ಕಾರ್ಮಿಕ ಕಾಯ್ದೆಯ ಸೆಕ್ಷನ್ 21(4) ಅನ್ವಯ, ಗುತ್ತಿಗೆದಾರರು ವೇತನ ನೀಡದಿದ್ದರೆ ಮೂಲ ಉದ್ಯೋಗದಾತ ಸಂಸ್ಥೆಯೇ ಪಾವತಿಸಬೇಕು. ಹೀಗಾಗಿ, ಬಿಬಿಎಂಪಿ ತಕ್ಷಣವೇ ವೇತನ ಪಾವತಿಸಲು ಕ್ರಮಕೈಗೊಳ್ಳಬೇಕು. ಜತೆಗೆ, ಸಿಂಪ್ಲೆಕ್ಸ್ ಕಂಪನಿ ವಿರುದ್ಧ ಕಾನೂನಿನ ಪ್ರಕಾರ ಕ್ರಮಕೈಗೊಳ್ಳಬೇಕು ಎಂದು ತಿಳಿಸಿದ್ದಾರೆ.

ಪೌಷ್ಟಿಕ ಆಹಾರ ಸೇವಿಸಿ

ಮನೋನಂದನ ಕೇಂದ್ರದ ರಜತ ಮಹೋತ್ಸವ ಸಮಾರಂಭದಲ್ಲಿ ಪೇಜಾವರಶ್ರೀ ಅಭಿಮತ

'ಸಂಕಷ್ಟದಲ್ಲಿರುವವರಿಗೆ ಸ್ಪಂದಿಸುವುದೇ ನಿಜವಾದ ಪೂಜೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾನವೀಯ ಕಾರ್ಯಗಳಿಗೆ ನೆರವಾಗುವುದೇ ನಿಜವಾದ ಪೂಜೆ. ನೆರವಿನ ಹಸ್ತ ಚಾಚುವ ಮೂಲಕ ದುರ್ಬಲರನ್ನು ಸಮಾಜದ ಮುಖ್ಯವಾಹಿನಿಗೆ ಕರೆತರಲು ಪ್ರಯತ್ನಿಸಬೇಕು' ಎಂದು ಪೇಜಾವರ ಮಠದ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ ಸಲಹೆ ನೀಡಿದರು.

ಹಿಂದೂ ಸೇವಾ ಪ್ರತಿಷ್ಠಾನದ ಮನೋನಂದನ ಕೇಂದ್ರದ ರಜತ ಮಹೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, 'ಸಾಮಾಜಿಕ ಚಟುವಟಿಕೆಗಳಿಗೆ ಎಲ್ಲರೂ ಬೆಂಬಲ ನೀಡಬೇಕು. ಸಂಕಷ್ಟದಲ್ಲಿರುವವರಿಗೆ ಮಾನವೀಯತೆಯಿಂದ ನೆರವು ಕಲ್ಪಿಸಬೇಕು. ವಿಶೇಷ ಮಕ್ಕಳ ಆರೈಕೆಯಲ್ಲಿ ತೊಡಗಿರುವ ಮನೋನಂದನ ಕೇಂದ್ರದ ಕಾರ್ಯ ಶ್ಲಾಘನೀಯ' ಎಂದು ಹೇಳಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವ ಹಾಲಪ್ಪ ಆಚಾರ್ ಮಾತನಾಡಿ, 'ವಿಶೇಷ ಮಕ್ಕಳ ಸೇವೆಯಲ್ಲಿ ತೊಡಗಿರುವ ಮನೋನಂದನ ಕೇಂದ್ರಕ್ಕೆ ಎಲ್ಲ ರೀತಿಯ ನೆರವು ಒದಗಿಸಲಾಗುವುದು' ಎಂದು ಭರವಸೆ ನೀಡಿದರು.

ನಗರದಲ್ಲಿ ಭಾನುವಾರ ಮನೋನಂದನ ಕೇಂದ್ರದ ರಜತ ಮಹೋತ್ಸವ ಕಾರ್ಯಕ್ರಮದಲ್ಲಿ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಸ್ಮರಣ ಸಂಚಿಕೆ ಬಿಡುಗಡೆ ಮಾಡಿದರು. ಕೇಂದ್ರದ ಉಪಾಧ್ಯಕ್ಷ ನಾಗಭೂಷಣ್, ಟ್ರಸ್ಟಿ ಮಧ್ವರಾಜ್, ಸಚಿವ ಹಾಲಪ್ಪ ಆಚಾರ್, ಕಾರ್ಯದರ್ಶಿ ಮೀರಾ ಆಚಾರ್ಯ, ಟ್ರಸ್ಟಿ ಚಂದ್ರಮೌಳಿ ಮತ್ತು ಅಧ್ಯಕ್ಷ ಮಿಲಿಂದ್ ಎಸ್. ಗೋಖಲೆ ಇದ್ದರು – ಪ್ರಜಾವಾಣಿ ಚಿತ್ರ

ಮನೋನಂದನ ಕೇಂದ್ರದ ಅಧ್ಯಕ್ಷ ಮಿಲಿಂದ್ ಎಸ್. ಗೋಖಲೆ ಮಾತನಾಡಿ, 'ಹಲವು ದಾನಿಗಳು ಮತ್ತು ಹಲವು ಕಂಪನಿಗಳು ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ಅಡಿಯಲ್ಲಿ ನೀಡಿದ ದೇಣಿಗೆಯಿಂದ ವಿಶೇಷ ಮಕ್ಕಳ ಸೇವೆ ಕೈಗೊಳ್ಳಲು ಸಾಧ್ಯವಾಗಿದೆ. ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗದ ವಿಶೇಷ ಮಕ್ಕಳಿಗಾಗಿ ಶೀಘ್ರದಲ್ಲೇ ಮತ್ತೊಂದು ಹೊಸ ಕೇಂದ್ರವನ್ನು ಆರಂಭಿಸಲಾಗುವುದು. ಈ ಕೇಂದ್ರದಲ್ಲಿ ವಿಭಿನ್ನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು' ಎಂದು ಪ್ರಕಟಿಸಿದರು.

ಸಂಸದ ತೇಜಸ್ವಿ ಸೂರ್ಯ ಮಾತನಾಡಿ, 'ಮನೋನಂದನ ಕೇಂದ್ರವು ನಿಸ್ವಾರ್ಥ ಸೇವೆ ಸಲ್ಲಿಸುತ್ತಿದೆ. ಕೇಂದ್ರ ಸರ್ಕಾರವು ವಿಶೇಷ ಮಕ್ಕಳ ಕಲ್ಯಾಣಕ್ಕಾಗಿ ರೂಪಿಸಿರುವ ಹಲವು ಯೋಜನೆಗಳನ್ನು ಸದುಪಯೋಗಪಡಿಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

'ಯುವ ಸಮುದಾಯ ಸಾಮಾಜಿಕ ಚಟುವಟಿಕೆಗಳಲ್ಲಿ ಹೆಚ್ಚು ತೊಡಗಿಸಿಕೊಳ್ಳಬೇಕು. ಸ್ವಯಂ ಸೇವಕರಾಗಿ ದುಡಿಯುವ ಮೂಲಕ ಸಮಾಜದಲ್ಲಿ ಸಂಕಷ್ಟದಲ್ಲಿರುವವರಿಗೆ ನೆರವಾಗಬೇಕು. ಈ ರೀತಿಯ ಕಾರ್ಯಗಳಿಂದ ಸಮಾಜದಲ್ಲಿ ಬದಲಾವಣೆ ತರಲು ಸಾಧ್ಯ' ಎಂದು ಹೇಳಿದರು.

ಸಂಸ್ಥಾಪಕ ನಿರ್ದೇಶಕಿ ಡಾ. ಕುಸುಮಾ ಭಟ್ಟ ಅವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಇನ್‌ಫರ್ ಇಂಡಿಯಾ ಕಂಪನಿಯ ವ್ಯವಸ್ಥಾಪಕ ವಿ. ಕಾರ್ತಿಕ್ ಇದ್ದರು.

ಹನಿಗವನ ಸಾಹಿತ್ಯ ಪ್ರಶಸ್ತಿಗೆ ಕೃತಿಗಳ ಆಹ್ವಾನ

ಬೆಂಗಳೂರು: ಕರ್ನಾಟಕ ವಿಕಾಸ ರಂಗವು 'ಜರಗನಹಳ್ಳಿ ಶಿವಶಂಕರ್ ಹನಿಗವನ ಸಾಹಿತ್ಯ ಪ್ರಶಸ್ತಿ'ಗೆ ಕೃತಿಗಳನ್ನು ಆಹ್ವಾನಿಸಿದೆ.

ಚುಟುಕು ಕವಿ ಜರಗನಹಳ್ಳಿ ಶಿವಶಂಕರ್ ಸ್ಮರಣಾರ್ಥ ಈ ವರ್ಷದಿಂದ ಪ್ರಶಸ್ತಿ ನೀಡಲಾಗುತ್ತದೆ. 2021ರ ಜ.1ರಿಂದ ಡಿ.31ರ ಅವಧಿಯಲ್ಲಿ ಪ್ರಥಮ ಮುದ್ರಣದಲ್ಲಿ ಪ್ರಕಟವಾದ ಹನಿಗವನ ಕೃತಿಗಳನ್ನು ಪ್ರಶಸ್ತಿಗೆ ಪರಿಗಣಿಸಲಾಗುತ್ತದೆ. ಆಯ್ಕೆಯಾದ ಕೃತಿಕಾರರಿಗೆ ತಲಾ ₹ 5 ಸಾವಿರ ನಗದು, ಫಲಕ ನೀಡಲಾಗುತ್ತದೆ.

ಕೃತಿಯ ಎರಡು ಪ್ರತಿಗಳನ್ನು ಏ.10ರೊಳಗೆ ವ.ಚ. ಚನ್ನೇಗೌಡ, ಅಧ್ಯಕ್ಷರು, ಕರ್ನಾಟಕ ವಿಕಾಸ ರಂಗ, ಸಂಖ್ಯೆ 226, 8ನೇ ಮುಖ್ಯ ರಸ್ತೆ, 4ನೇ ಅಡ್ಡ ರಸ್ತೆ, 14ನೇ ಬ್ಲಾಕ್, ನಾಗರಬಾವಿ 2ನೇ ಹಂತ, ಬೆಂಗಳೂರು–560 072 ಈ ವಿಳಾಸಕ್ಕೆ ಕಳುಹಿಸಬೇಕು. ಸಂಪರ್ಕ ಸಂಖ್ಯೆ: 9449446475

ಅಪ್ಪ–ಅಮ್ಮ ಬೈದಿದ್ದಕ್ಕೆ ಯುವಕ ಆತ್ಮಹತ್ಯೆ

ಬೆಂಗಳೂರು: ಅಪ್ಪ–ಅಮ್ಮ ಬೈದಿದ್ದಕ್ಕೆ ಸುಂಕದಕಟ್ಟೆಯ ಶ್ರೀನಿವಾಸ ನಗರ ನಿವಾಸಿ ಸಂಜಯ್ (22) ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಮೂರು ದಿನಗಳಿಂದ ಸಂಜಯ್ ಮನೆಗೆ ಬಂದಿರಲಿಲ್ಲ. ಪ್ರಶ್ನಿಸಿದ್ದಕ್ಕೆ ತಾಯಿಯ ಮೇಲೆ ರೇಗಾಡಿದ್ದ. ಮನೆಯವರು ಹಾಗೂ ನೆಂಟರೆಲ್ಲಾ ಸೇರಿ ಆತನಿಗೆ ಬೈದು ಬುದ್ಧಿವಾದ ಹೇಳಿದ್ದರು. ಆತ ಶನಿವಾರ ರಾತ್ರಿ ಎಲ್ಲರೂ ಮಲಗಿದ ಮೇಲೆ ಫ್ಯಾನ್‌ಗೆ ನೇಣು ಬಿಗಿದುಕೊಂಡಿದ್ದಾನೆ' ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ನಗರದಲ್ಲಿ ಇಂದು

'ಕೃತಕ ಬುದ್ಧಿಮತ್ತೆ ಮತ್ತು ರೊಬೊಟಿಕ್ಸ್ ತಂತ್ರಜ್ಞಾನ ಪಾರ್ಕ್' ಕಚೇರಿ ಉದ್ಘಾಟನೆ ಹಾಗೂ ಆರ್ಟ್‌ಪಾರ್ಕ್ ಇನ್ನೊವೇಶನ್ ಸಭೆ: ಉದ್ಘಾಟನೆ–ಸಚಿವ ಸಿ.ಎನ್.ಅಶ್ವತ್ಥನಾರಾಯಣ, ಅತಿಥಿಗಳು–ನೀತಿ ಆಯೋಗದ ಉಪಾಧ್ಯಕ್ಷ ರಾಜೀವ್ ಕುಮಾರ್, ಐಐಎಸ್ಸಿ ನಿರ್ದೇಶಕ ಪ್ರೊ.ರಂಗರಾಜನ್, ಸ್ಥಳ–ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್ಸಿ) ಆವರಣ, ಬೆಳಿಗ್ಗೆ 9

ಶಾಂತವೇರಿ ಗೋಪಾಲಗೌಡರ ಶತಮಾನೋತ್ಸವ: ಉದ್ಘಾಟನೆ–ಮುಖ್ಯ ಮಂತ್ರಿ ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ–ಗೃಹ ಸಚಿವ ಆರಗ ಜ್ಞಾನೇಂದ್ರ, ಅತಿಥಿಗಳು–ಸಚಿವ ವಿ.ಸುನಿಲ್ ಕುಮಾರ್, ರಾಮಮನೋಹರ ಶಾಂತವೇರಿ, ಆಯೋಜನೆ–ಶಾಂತವೇರಿ ಗೋಪಾಲ ಗೌಡ ಸಮಾಜವಾದಿ ಪ್ರತಿಷ್ಠಾನ ಮತ್ತು ಆಚರಣೆ ಸಮಿತಿ, ಸ್ಥಳ–ಶಾಂತವೇರಿ ಗೋಪಾಲಗೌಡ ವೃತ್ತ, ವಿಧಾನಸೌಧ ಎದುರು, ಬೆಳಿಗ್ಗೆ 10

ರಾಮಯ್ಯ ವಿಶ್ವವಿದ್ಯಾಲಯದ ಘಟಿಕೋತ್ಸವ: ಅತಿಥಿ–ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಯ (ಎಐಸಿಟಿಇ) ಅಧ್ಯಕ್ಷ ಅನಿಲ್ ಡಿ.ಸಹಸ್ರಬುದ್ಧೆ, ಕುಲಪತಿ ಎಂ.ಆರ್. ಜಯರಾಂ, ಸ್ಥಳ–ಜ್ಞಾನ ಗಂಗೋತ್ರಿ ಕ್ಯಾಂಪಸ್, ಎಂ.ಎಸ್.ರಾಮಯ್ಯ ನಗರ, ನ್ಯೂ ಬಿಇಎಲ್ ರಸ್ತೆ, ಬೆಳಿಗ್ಗೆ 10.30



ಅನಿಲ್ ಡಿ. ಸಹಸ್ರಬುದ್ಧೆ

ಪ್ರಮೀಳಾ ನಾಯ್ಡು

ಅಂತರರಾಷ್ಟ್ರೀಯ ಮಹಿಳಾ ದಿನ: ಅತಿಥಿಗಳು–ಪ್ರಮೀಳಾ ನಾಯ್ಡು, ಉಮರ್ ಇಸ್ಮಾಯಿಲ್ ಖಾನ್, ಜುಬೇರ್ ಅನ್ವರ್, ಆಯೋಜನೆ ಮತ್ತು ಸ್ಥಳ–ಅಲ್ ಅಮೀನ್ ಕಾಲೇಜ್ ಆಫ್ ಎಜುಕೇಷನ್, ಲಾಲ್‌ಬಾಗ್ ಪ್ರವೇಶದ್ವಾರದ ಹತ್ತಿರ, ಹೊಸೂರು ರಸ್ತೆ, ಬೆಳಿಗ್ಗೆ 11

ಛಾಯಾಚಿತ್ರ ಪ್ರದರ್ಶನ: ವಿಷಯ–ಕೋವಿಡ್ ಸವಾಲುಗಳಿಂದ ಜನಸಾಮಾನ್ಯರ ಬದುಕು ವಿನಾಶದತ್ತ ಸಾಗಿದ ಸಂದರ್ಭ, ಉದ್ಘಾಟನೆ–ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಅತಿಥಿ–ಬಿ.ಎಲ್.ಶಂಕರ್, ಸ್ಥಳ–ಕರ್ನಾಟಕ ಚಿತ್ರಕಲಾ ಪರಿಷತ್, ಬೆಳಿಗ್ಗೆ 11 (ಇದೇ 18ರವರೆಗೆ ಪ್ರದರ್ಶನ ಇರಲಿದೆ)

ಕನ್ನಡ ಜಾನಪದ ಪರಿಷತ್ ಶಾಂತಿನಗರ ಘಟಕದ ನೂತನ ಪದಾಧಿಕಾರಿಗಳ ಅಧಿಕಾರ ಸ್ವೀಕಾರ ಮತ್ತು ಜಾನಪದ ಸಾಧಕರಿಗೆ ಸನ್ಮಾನ: ಉದ್ಘಾಟನೆ–ಶಾಸಕ ಎನ್.ಎ.ಹ್ಯಾರೀಸ್, ಅಧ್ಯಕ್ಷತೆ–ಎಸ್. ಬಾಲಾಜಿ, ಅತಿಥಿಗಳು–ಸೌಮ್ಯಾ ಶಿವ ಕುಮಾರ್, ಸ್ಥಳ–ಕರ್ನಾಟಕ ಹಾಕಿ ಕ್ರೀಡಾಂಗಣ ಕ್ಲಬ್ ಸಭಾಂಗಣ, ನಂಜಪ್ಪ ವೃತ್ತ, ಬೆಳಿಗ್ಗೆ 11.30

ನರೇಗಾ ಹಬ್ಬ: ಉದ್ಘಾಟನೆ–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅತಿಥಿಗಳು–ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್, ಎಂ. ರಾಜೀವ್ ಚಂದ್ರಶೇಖರ್, ವಿಧಾನಸಭೆ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ನರೇಗಾ ವಾಣಿ ಬಿಡುಗಡೆ ಮತ್ತು ಪ್ರಶಸ್ತಿ ವಿತರಣೆ–ಸಚಿವ ಕೆ.ಎಸ್. ಈಶ್ವರಪ್ಪ, ಅಧ್ಯಕ್ಷತೆ–ರಿಜ್ವಾನ್ ಅರ್ಷದ್, ಆಯೋಜನೆ–ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಸ್ಥಳ–ಬ್ಯಾಂಕ್ವೆಟ್ ಸಭಾಂಗಣ, ವಿಧಾನಸೌಧ, ಮಧ್ಯಾಹ್ನ 3.30

'ಭಾವಯಾನ' ರಾಜ್ಯಮಟ್ಟದ ಗೀತೋತ್ಸವ: ಉದ್ಘಾಟನೆ–ಮಾನಸ ಹೊಳ್ಳ, ಅತಿಥಿಗಳು–ಅಶೋಕ್ ಛಲವಾದಿ, ರೋಹಿಣಿ ಮೋಹನ್, ಆಯೋಜನೆ–ಇಂಚರ ಸುಗಮ ಸಂಗೀತ ಟ್ರಸ್ಟ್, ಸ್ಥಳ–ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

ಎಸ್ಸೆಸ್ಸೆಲ್ಸಿ–ಪಿಯುಸಿ ಉಚಿತ ಶೈಕ್ಷಣಿಕ ಕಾರ್ಯಕ್ರಮಗಳ ಸಮಾರೋಪ: ಅತಿಥಿಗಳು–ಶಿಕ್ಷಣ ಸಚಿವ ಬಿ.ಸಿ.ನಾಗೇಶ್, ಆಶಯ ನುಡಿ–ಎಂ.ಆರ್. ದೊರೆಸ್ವಾಮಿ, ಅಧ್ಯಕ್ಷತೆ–ಶ್ರೀರಾಮೇಗೌಡ, ಆಯೋಜನೆ–ಉದಯಭಾನು ಕಲಾಸಂಘ, ಗವಿಪುರ ಸಾಲು ಛತ್ರಗಳ ಎದುರು, ಕೆಂಪೇಗೌಡನಗರ, ಸಂಜೆ 5.30

ಬಸವರಾಜ ಸ್ವಾಮಿ ಅವರ 'ಸಿದ್ಧರಾಮ ಶಿವಯೋಗಿಗಳ ವಚನಾನುಭಾವ–2' **ಗ್ರಂಥ ಬಿಡುಗಡೆ:** ಲಕ್ಷ್ಮೀಶ ತೋಳ್ಪಾಡಿ, ಸಾನ್ನಿಧ್ಯ–ಶಿವರುದ್ರ ಸ್ವಾಮೀಜಿ, ಅಧ್ಯಕ್ಷತೆ–ಅರವಿಂದ ಜತ್ತಿ, ಆಯೋಜನೆ–ಬಸವ ಸಮಿತಿ, ಬಸವ ಸೇವಾ ಪ್ರತಿಷ್ಠಾನ, ಸ್ಥಳ–ಬಸವ ಸಮಿತಿ, ಬಸವ ಭವನ, ಬಸವೇಶ್ವರ ರಸ್ತೆ, ಸಂಜೆ 5.30

ಸಂಕ್ರಮಣ–2022 ಸಾಂಸ್ಕೃತಿಕ ಉತ್ಸವ: ನೃತ್ಯ ಪ್ರದರ್ಶನ–ಅದಿತಿ ರವಿಪ್ರಕಾಶ್, ಗಾಯಿತ್ರಿ ಗುರುಪ್ರಸಾದ್–ಕಾವ್ಯ ಕಾಶೀನಾಥ್, ಆಯೋಜನೆ–ಸಪ್ತಸ್ವರ ಆರ್ಟ್ಸ್ ಆ್ಯಂಡ್ ಕ್ರಿಯೇಷನ್ಸ್, ಸ್ಥಳ–ಸಂಸ ಬಯಲು ರಂಗಮಂದಿರ, ಸಂಜೆ 5.45

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164 9845114560 / 9731810277/ 9886213331

AUTOMOTIVE

Automobile Services

Auto Consultants

CERAMIC COATING: USA make chemical application. OFFER PRICE Rs. 24990 all inclusive (Reg 35k) including windshield coat and full interior detail. Expires 31st March 2022. Book appointment: MidCity Motors 8147853841 Open 7am.

BUSINESS

Business Offers

Finance

NRI'S INVESTMENT And Finance Available On Low Interest Against Properties, Land& Building, Sites, Flats, Converted& Agriculture Lands Call: 7411265189

Business to Business

Business

INVEST OR Get Investments Minimum 2 Lakhs P.A. in #1 Banking Company. Build your Business with IIM ALUMNUS. Contact: 9702702999/ 83742-43687

JOB OPPORTUNITIES

Accounts & Finance

WANTED ACCOUNTANTS B.Com/ M.Com Freshers for Reputed Printing Industry Located in Majestic, Send Resume: bangaloreoffset@yahoo.co.in . Phone: 9845151730/ 9900691118.

Graphic Designers

WANTED DTP Operator/ Graphic Designer Corel Draw, Illustrator & Photoshop for a Pvt Limited Company in around Rajajinagar Contact: 23307910/ 9108458798

Wanted

WANTED DELIVERY Executive! Earn Upto 35000 / Month . Joining Bonus 5000/ - and 3000* Referral Bonus . Call Now : 080 - 46805962

EDUCATIONAL

Correspondence Courses

PASS IN ONE YEAR! LL.B/LL.M/B.Tech/M.Tech/ Diploma/M.Phil/MBA/MCA/ M.Sc/BCA/BBA/B.Sc/B.Com/ 10th/ PU (NIOS). Asha Academy, Bangalore: 9448460103/ 7093438248

REAL ESTATE SELLING

House

Magadi Road

3,200 SFT, West Facing Residential Property is for Sale at Magadi Road Housing Board. Contact: 6362961311/ 9901050888

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

GM-Advertisement

DH DECCAN HERALD

SELL, RENT, BUY PROPERTY THROUGH PROPERTY CLASSIFIEDS ADS IN DECCAN HERALD & PRAJAVANI NEWS PAPER

BOOK YOUR CLASSIFIEDS ADS ONLINE WWW.DHCLASSIFIEDS.COM

ಪ್ರಜಾವಾಣಿ ಕ್ಲಾಸಿಫೈಡ್ಸ್

FOR MORE INFORMATION CONTACT 9880856233 | 9886213331 Email: santhoshkumar@deccanherald.co.in

ಮಾವು ಬೆಳೆ ಇಳಿಕೆ: ಸಂಕಷ್ಟದಲ್ಲಿ ರೈತರು

ಚಿಗುರಿದ ಮಾವು, ಫಸಲು ಕುಸಿತ?

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: ನೆಲಮಂಗಲ ತಾಲ್ಲೂಕಿನ ಪ್ರಮುಖ ವಾಣಿಜ್ಯ ಬೆಳೆಯಾದ ಮಾವು ಹೆಚ್ಚಿನ ಪ್ರಮಾಣದಲ್ಲಿ ಚಿಗುರಿದ್ದು, ಫಸಲು ಕಡಿಮೆಯಾಗಿ ರೈತರನ್ನು ಆತಂಕಕ್ಕೆ ತಳ್ಳಿದೆ.

'ತಾಲ್ಲೂಕಿನಲ್ಲಿ ಸುಮಾರು 1,875 ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆ ಇದೆ. ಮುಂಗಾರಿನಲ್ಲಿ ಬಂದ ಅಧಿಕ ಮಳೆ ಹಾಗೂ ಮೋಡ ಕವಿದ ವಾತಾವರಣದಿಂದ ಗಿಡಗಳು ಚಿಗುರಿದ್ದು, ಈಗ ಹೂವು ಕಚ್ಚಲು ಸಾಧ್ಯವಾಗದೆ ಇಳುವರಿ ಕುಸಿಯಲಿದೆ' ಎನ್ನುತ್ತಾರೆ ತೋಟಗಾರಿಕೆ ಸಹಾಯಕ ನಿರ್ದೇಶಕ ಸುಬ್ರಹ್ಮಣ್ಯ.

ಬಾದಾಮಿ, ಮಲ್ಲಿಕಾ, ರಸಪೂರಿ, ಬೆನಿಶಾ ಇಲ್ಲಿನ ಪ್ರಮುಖ ತಳಿಗಳು. ಈ ತಳಿಯ ಗಿಡಗಳಲ್ಲಿ ಹೂವು ಹೀಚಾಗಲು ಬಿಸಿಲ ಶಾಖ ಬೇಕಾಗುತ್ತದೆ. ಈ ಬಾರಿ ಮಳೆಯಿಂದ ಬಿಸಿಲು ಕಡಿಮೆಯಾಗಿ ಮರಗಳು ಚಿಗುರಿದವು. ಒಳ ಭಾಗದಲ್ಲಿ ಇದ್ದ ಬಿಸಿಲ ಶಾಖ ತಗುಲಿದ ಹೂವುಗಳಷ್ಟೇ ಕಾಯಿ ಕಟ್ಟುತ್ತಿವೆ ಎಂದರು.

ರೈತ ತ್ಯಾಗರಾಜು ಅವರ ತೋಟದಲ್ಲಿ ಮಾವಿನ ಗಿಡಗಳು ಚಿಗುರಿರುವುದು

ಕಳೆದ ಬಾರಿ ಉತ್ತಮ ಫಸಲು ಇದ್ದರೂ ಕೋವಿಡ್ ಕಾರಣದಿಂದ ರೈತರು ಗಿಡದಿಂದ ಹಣ್ಣು ಕೀಳಲೇ ಇಲ್ಲ. ಇದರಿಂದರೈತರುನಷ್ಟಅನುಭವಿಸಿದರು. ಈ ಬಾರಿ ಫಸಲು ಕಡಿಮೆ ಆಗಿದ್ದು, ರೈತರಿಗೆ ಉತ್ತಮ ಬೆಲೆ ಸಿಗುವ ನಿರೀಕ್ಷೆ ಇದೆ. ರೈತರು ಹಾಪ್ ಕಾಮ್ಸ್ ಮಳಿಗೆಗಳು, ಮೇಳಗಳು ಹಾಗೂ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮಕ್ಕೆ ಸರಬರಾಜು ಮಾಡಿದರೆ ದಲ್ಲಾಳಿಗಳ ಕಾಟದಿಂದ ಮುಕ್ತರಾಗಬಹುದು. ರಾಸಾಯನಿಕ ಬಳಸಿ ಕೃತಕವಾಗಿ ಹಣ್ಣು ಮಾಡಿಸುವುದಕ್ಕಿಂತ ನೈಸರ್ಗಿಕವಾಗಿ ಹಣ್ಣು ಮಾಡಿಸಿದರೆ ಉತ್ತಮ ಬೆಲೆ ಸಿಗುತ್ತದೆ ಎಂದು ಹೇಳಿದರು.

ಮಾವಿನಲ್ಲಿ ಕಂಡು ಬರುವ ಜಿಗಿ ರೋಗ, ಬೂದಿ ರೋಗ ನಿಯಂತ್ರಣಕ್ಕೆ ಅವಕಾಶ ಇದೆ. ಸಾವಯವ ಔಷಧ ಸಿಂಪಡಿಸುವುದರಿಂದ ಉತ್ತಮ ಫಸಲು ಬರುತ್ತದೆ ಎಂದು ಸುಬ್ರಹ್ಮಣ್ಯ ತಿಳಿಸಿದರು.

'ಕಳೆದ ವರ್ಷ ಬೆಲೆ ಕುಸಿತವಾದರೆ ಈ ವರ್ಷ ಫಸಲು ಕಡಿಮೆಯಾಗಿ ಮಾವು ಬೆಳೆಗಾರರು ಸಂಕಷ್ಟ ಎದುರಿಸುತ್ತಿದ್ದಾರೆ. ಬೇಸತ್ತಿರುವ ರೈತರು ಮಾವಿನ ಗಿಡಗಳನ್ನು ತಮ್ಮ ಜಮೀನಿನಿಂದ ತೆಗೆಸುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಇದು ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆ' ಎನ್ನುತ್ತಾರೆ ಮಾವು ಬೆಳೆಗಾರರು.

ಮುಖ್ಯಾಂಶಗಳು

- ಬಾದಾಮಿ, ಮಲ್ಲಿಕಾ, ರಸಪೂರಿ, ಬೆನಿಶಾ ಪ್ರಮುಖ ತಳಿಗಳು
- ಸುಮಾರು 1,875 ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆ
- ಮಾವಿನ ಗಿಡಗಳನ್ನು ತಮ್ಮ ಜಮೀನಿನಿಂದ ತೆಗೆಸುತ್ತಿರುವ ರೈತರು

24ರಿಂದ ನಾದಜ್ಯೋತಿ ಸಂಗೀತ ಸಂಭ್ರಮ

ಬೆಂಗಳೂರು: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್ ವತಿಯಿಂದ 'ನಾದಜ್ಯೋತಿ ಸಂಗೀತ ಸಂಭ್ರಮ' ಹಾಗೂ ಪುರಂದರದಾಸರ ಮತ್ತು ತ್ರಿಮೂರ್ತಿಗಳ ಉತ್ಸವವನ್ನು ಮಾ.24ರಿಂದ 28ರವರೆಗೆ ಮಲ್ಲೇಶ್ವರದ ಶ್ರೀರಾಮ-ಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ.

24ರಂದು ಸಂಜೆ 6 ಗಂಟೆಗೆ ಬೆಂಗಳೂರು ಗಾಯನ ಸಮಾಜದ ಉಪಾಧ್ಯಕ್ಷ ಅಚ್ಯುತರಾವ್ ಪದಕಿ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಅತಿಥಿಗಳಾಗಿ ಎನ್.ದಕ್ಷಿಣಮೂರ್ತಿ, ಎನ್.ಗಣೇಶ್ ರಾಜು ಭಾಗವಹಿಸಲಿದ್ದಾರೆ.

ಸಂಗೀತ ಕಲಾವಿದರಾದ ಎಂ.ಕೆ. ಪ್ರಾಣೇಶ್, ಐಶ್ವರ್ಯ ವಿದ್ಯಾರಘುನಾಥ್, ಶ್ರೀರಂಗಂ ವೆಂಕಟ್ ನಾಗರಾಜನ್ ಸೇರಿದಂತೆ 25 ಕಲಾವಿದರಿಂದ ಸಂಗೀತ ಕಾರ್ಯಕ್ರಮಗಳು ನಡೆಯಲಿವೆ.

27ರಂದು ಸಂಜೆ 6.30ಕ್ಕೆ ವೀಣಾ ವಿದ್ವಾಂಸ ರಾ.ವಿಶ್ವೇಶ್ವರನ್ ಅವರಿಗೆ ₹20 ಸಾವಿರ ನಗದು ಒಳಗೊಂಡ 'ಜೀವಮಾನ ಸಾಧನೆ ಪುರಸ್ಕಾರ', ಮೃದಂಗ ವಾದಕ ಜಿ.ವಿ.ಕೃಷ್ಣಪ್ರಸಾದ್ ಅವರಿಗೆ ₹20 ಸಾವಿರ ಮೊತ್ತದ 'ಕಲಾಜ್ಯೋತಿ' ಪ್ರಶಸ್ತಿ ಹಾಗೂ ವಿದುಷಿ ಚಂದನಬಾಲ ಕಲ್ಯಾಣ್ ಅವರಿಗೆ ₹15 ಸಾವಿರ ನಗದು ಒಳಗೊಂಡಿರುವ 'ನಾದಜ್ಯೋತಿ ಪುರಸ್ಕಾರ' ಪ್ರದಾನ ನಡೆಯಲಿದೆ.

ಅತಿಥಿಗಳಾಗಿ ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ, 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಇಂದು ನಾಟಕ ಪ್ರದರ್ಶನ

ದಾಬಸ್ ಪೇಟೆ: ನರಸೀಪುರದ ಶ್ರೀ ಶನೇಶ್ವರ ಹಾಗೂ ಆತ್ಮಾರಾಮ ಕೃಪಾಪೋಷಿತ ನಾಟಕ ಮಂಡಳಿಯವರಿಂದ ಇದೇ 14ರಂದು ರಾತ್ರಿ 8.30 ಗಂಟೆಗೆ 'ರಾಜ ಸತ್ಯವ್ರತ ಅಥವಾ ಶನಿಪ್ರಭಾವ ಎಂಬ ಪೌರಾಣಿಕ ನಾಟಕ ಪ್ರದರ್ಶನ ನಡೆಯಲಿದೆ ಎಂದು ಪ್ರಕಟಣೆಲ್ಲಿ ತಿಳಿಸಲಾಗಿದೆ.

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಪೌಷ್ಟಿಕ ಆಹಾರ ಸೇವಿಸಿ

ಡೀಸೆಲ್ ಕಳ್ಳನ ಕಾಲಿಗೆ ಗುಂಡೇಟು

ಬೆಂಗಳೂರು: ರಾತ್ರಿ ವೇಳೆ ರಸ್ತೆ ಬದಿ ನಿಲ್ಲಿಸಿರುತ್ತಿದ್ದ ವಾಹನಗಳ ಡೀಸೆಲ್ ಕದಿಯುತ್ತಿದ್ದ ಆರೋಪಿಯನ್ನು ಜಿಗಣಿ ಪೊಲೀಸರು ಕಾಲಿಗೆ ಗುಂಡು ಹೊಡೆದು ಬಂಧಿಸಿದ್ದಾರೆ.

'ಶ್ರೀನಿವಾಸ್ ಯಾನೆ ರಾಜು, ಮಲ್ಲನಗೌಡ ಹಾಗೂ ಇತರ ಇಬ್ಬರು ಟಾಟಾ ಸುಮೊದಲ್ಲಿ ಬಂದು ಜಿಗಣಿ ಕೈಗಾರಿಕಾ ಪ್ರದೇಶದಲ್ಲಿ ವಾಹನಗಳಿಂದ ಡೀಸೆಲ್ ಕದಿಯುತ್ತಿದ್ದರು. ಭಾನುವಾರ ಮುಂಜಾನೆ 5.30ರ ಸುಮಾರಿಗೆ ಆರೋಪಿಗಳು ಕೆ.ಇ.ಬಿ.ರಸ್ತೆಯಲ್ಲಿ ನಿಲ್ಲಿಸಿದ್ದ ಲಾರಿಯಿಂದ ಡೀಸೆಲ್ ಕಳ್ಳತನ ಮಾಡುತ್ತಿರುವ ಬಗ್ಗೆ ಮಾಹಿತಿ ದೊರೆಯಿತು. ಬಳಿಕ ಮೂವರನ್ನು ಬಂಧಿಸಲಾಗಿತ್ತು' ಎಂದು ಪೊಲೀಸ್‌ರು ಹೇಳಿದ್ದಾರೆ.

'ಆರೋಪಿ ಶ್ರೀನಿವಾಸ್ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿ ಪರಾರಿಯಾಗಲು ಯತ್ನಿಸಿದ್ದ. ಶರಣಾಗುವಂತೆ ಹೇಳಿ ಗಾಳಿಯಲ್ಲಿ ಒಂದು ಸುತ್ತು ಗುಂಡು ಹಾರಿಸಲಾಗಿತ್ತು. ಅದನ್ನೂ ಲೆಕ್ಕಿಸದೆ ಮತ್ತೆ ಹಲ್ಲೆಗೆ ಮುಂದಾಗಿದ್ದ. ಈ ವೇಳೆ ಸ್ವಯಂ ರಕ್ಷಣೆಗಾಗಿ ಆತನ ಕಾಲಿಗೆ ಗುಂಡು ಹೊಡೆಯಲಾಯಿತು. ಕುಸಿದು ಬಿದ್ದ ಆತನನ್ನು ಆಸ್ಪತ್ರೆಗೆ ದಾಖಲಿಸಲಾಯಿತು. ಗಾಯಗೊಂಡಿರುವ ಸಿಬ್ಬಂದಿಗೂ ಚಿಕಿತ್ಸೆ ಕೊಡಿಸಲಾಗಿದೆ' ಎಂದಿದ್ದಾರೆ.

ಡಾ.ಸಿ.ಎನ್.ಅಶ್ವತ್ಥನಾರಾಯಣ, ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಸ್ಥಳೀಯರಿಂದ ಆಕ್ರೋಶ

ಸ್ಯಾಂಕಿ ಕೆರೆ ಕಾಂಕ್ರೀಟೀಕರಣಕ್ಕೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಸ್ಯಾಂಕಿ ಕೆರೆ ಹಾಗೂ 18ನೇ ತಿರುವಿನಲ್ಲಿರುವ ಮೈದಾನವನ್ನು 'ಕಾಂಕ್ರೀಟೀಕರಣ' ಮಾಡಲು ಹೊರಟಿರುವ ಬಿಬಿಎಂಪಿ ಕ್ರಮದ ವಿರುದ್ಧ ಸ್ಥಳೀಯರು ಪ್ರತಿಭಟನೆ ನಡೆಸಿದ್ದಾರೆ.

ಗೋಕಾಕ್ ಉದ್ಯಾನದಿಂದ ಸ್ಯಾಂಕಿ ಟ್ಯಾಂಕ್‌ವರೆಗೂ ಪಾದಯಾತ್ರೆ ನಡೆಸಿದ ಸ್ಥಳೀಯರು ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ ಹಾಗೂ ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

'ನಮಗೆ ಕಾಂಕ್ರೀಟ್ ಪಾದಚಾರಿ ಮಾರ್ಗಗಳು ಬೇಕಿಲ್ಲ. 'ವಾಟರ್ ಫಾಲ್ಸ್'ನ ಅಗತ್ಯವೂ ಇಲ್ಲ. ನೈಸರ್ಗಿಕದತ್ತ ಕೆರೆ ನಮ್ಮ ಬೇಡಿಕೆ. ನಾವು ಕೆರೆಯ ದಂಡೆಯಲ್ಲಿ ಬೆಳೆದಿರುವ ಹಸಿರು ಹುಲ್ಲು ಹಾಸಿನ ಮೇಲೆಯೇ ಕುಳಿತು ಪ್ರಕೃತಿಯ ಸೌಂದರ್ಯ ಆಸ್ವಾದಿಸುತ್ತೇವೆ. ಅಭಿವೃದ್ಧಿ ಹೆಸರಿನಲ್ಲಿ ಸ್ಯಾಂಕಿ ಕೆರೆಯ ಸೌಂದರ್ಯ ನಾಶಗೊಳಿಸಬೇಡಿ' ಎಂದು ಮಲ್ಲೇಶ್ವರ ಸೋಷಿಯಲ್ ತಂಡದ ಸುಚಿತ್ರ ದೀಪ್ ಒತ್ತಾಯಿಸಿದರು.

'18ನೇ ತಿರುವಿನಲ್ಲಿರುವ ಮೈದಾನಕ್ಕೆ ವಿಶೇಷ ಇತಿಹಾಸವಿದೆ. ಅದರ ಸುತ್ತಲೂ 41 'ಫ್ಲಡ್ ಲೈಟ್' ಅಳವಡಿಸಲು ಬಿಬಿಎಂಪಿಯವರು ಮುಂದಾಗಿದ್ದಾರೆ. ಸಿಮೆಂಟ್ ಗೋಡೆಗಳನ್ನು ಕಟ್ಟಲು ನಿರ್ಧರಿಸಿದ್ದಾರೆ. ಇದರ ಬದಲು ಕುಡಿಯುವ ನೀರು ಹಾಗೂ ಶೌಚಾಲಯದ ವ್ಯವಸ್ಥೆ ಮಾಡಿದರೆ ಎಲ್ಲರಿಗೂ ಪ್ರಯೋಜನವಾಗುತ್ತದೆ' ಎಂದು ಪ್ರತಿಭಟನಾಕಾರರು ತಿಳಿಸಿದರು.

ಮಲ್ಲೇಶ್ವರದಲ್ಲಿ ಅವೈಜ್ಞಾನಿಕವಾಗಿ ರಸ್ತೆ ಅಗೆದಿರುವುದನ್ನು ಖಂಡಿಸಿ ಸಾಮಾಜಿಕ ಕಾರ್ಯಕರ್ತ ಅನೂಪ್ ಅಯ್ಯಂಗಾರ್ ನೇತೃತ್ವದಲ್ಲಿ ಸ್ಥಳೀಯರು ಗುಂಡಿಬಿದ್ದ ರಸ್ತೆಗಳಿಗೆ ಪೂಜೆ ಮಾಡಿ ಪ್ರತಿಭಟಿಸಿದರು– ಪ್ರಜಾವಾಣಿ ಚಿತ್ರ

'ದೂರದೃಷ್ಟಿಯಿಂದ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ. ಇದರ ವಿರುದ್ಧ ಪ್ರತಿಭಟಿಸುತ್ತಿರುವ ಶಕ್ತಿಗಳ ಹಿಂದೆ ರಾಜಕೀಯ ದುರುದ್ದೇಶವಿದೆ' ಎಂದು ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ ಪ್ರತಿಕ್ರಿಯಿಸಿದ್ದಾರೆ.

'ಮಲ್ಲೇಶ್ವರ ಕ್ಷೇತ್ರ 15 ವರ್ಷಗಳ ಹಿಂದೆ ಹೇಗಿತ್ತು? ಈಗ ಹೇಗಿದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಸ್ಥಳೀಯರ ಹೆಸರಿನಲ್ಲಿ ಪ್ರತಿಭಟನೆ ಮಾಡುವುದನ್ನು ನಿಲ್ಲಿಸಬೇಕು' ಎಂದರು.

'ಸ್ಯಾಂಕಿ ಕೆರೆಯನ್ನು ವಾಯು ವಿಹಾರಿಗಳ ನೆಚ್ಚಿನ ತಾಣವನ್ನಾಗಿ ಅಭಿವೃದ್ಧಿಪಡಿಸಲಾಗುತ್ತಿದೆ. ಸ್ಯಾಂಕಿ ಟ್ಯಾಂಕ್ ವಾಯುವಿಹಾರಿಗಳ ಸಂಘದವರನ್ನು ವಿಶ್ವಾಸಕ್ಕೆ ತೆಗೆದುಕೊಂಡೇ ಅಲ್ಲಿ ಅಭಿವೃದ್ಧಿ ಕಾಮಗಾರಿ ನಡೆಸಲಾಗುತ್ತಿದೆ. ಒಂದು ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದೆ' ಎಂದು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಕಾಂಗ್ರೆಸ್ ಮುಖಂಡ ಚಂದ್ರಶೇಖರ್ ಮನೆಯಲ್ಲಿ ಕಳ್ಳತನ

ಬೆಂಗಳೂರು: ಕಾಂಗ್ರೆಸ್ ಮುಖಂಡ ಚಂದ್ರಶೇಖರ್ ಮನೆಗೆ ನುಗ್ಗಿರುವ ಆರೋಪಿಗಳು ಮಲಗುವ ಕೋಣೆಯ ಕಪಾಟಿನಲ್ಲಿಟ್ಟಿದ್ದ ನಗದು ಹಾಗೂ ಸುಮಾರು ₹50 ಲಕ್ಷಕ್ಕೂ ಅಧಿಕ ಮೌಲ್ಯದ ಚಿನ್ನಾಭರಣಗಳನ್ನು ಕಳವು ಮಾಡಿದ್ದಾರೆ. ಪುಟ್ಟೇನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಚಂದ್ರಶೇಖರ್ ಅವರು ಠಾಣೆ ವ್ಯಾಪ್ತಿಯ ಕ್ಲಾಸಿಕ್ ಆರ್ಕೆಡ್ ಲೇಔಟ್‌ನಲ್ಲಿ ವಾಸವಿದ್ದರು. ಕುಟುಂಬದವರೆಲ್ಲಾ ಶುಕ್ರವಾರ ಧರ್ಮಸ್ಥಳಕ್ಕೆ ಹೋಗಿದ್ದರು. ಅಲ್ಲಿಂದ ಬಂದು ನೋಡಿದಾಗ ಚಿನ್ನಾಭರಣ ಹಾಗೂ ನಗದು ಕಳವು ಆಗಿರುವುದು ಗೊತ್ತಾಗಿದೆ' ಎಂದು ಪೊಲೀಸರು ಹೇಳಿದ್ದಾರೆ.

'ನೇಪಾಳದ ವ್ಯಕ್ತಿಯೊಬ್ಬರು ಭದ್ರತಾ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದರು. ಆತನ ಪತ್ನಿ ಮನೆಕೆಲಸ ಮಾಡಿಕೊಂಡಿದ್ದಳು. ಕಳವು ನಡೆದ ನಂತರ ಇಬ್ಬರೂ ನಾಪತ್ತೆಯಾಗಿದ್ದಾರೆ. ಅವರೇ ಕೃತ್ಯ ನಡೆಸಿರುವ ಶಂಕೆ ಇದೆ. ಕಳ್ಳರು ಬೀಗ ಮುರಿದು ಮನೆಯೊಳಗೆ ನುಗ್ಗಿದ್ದಾರೆ' ಎಂದು ಮಾಹಿತಿ ನೀಡಿದ್ದಾರೆ.

ಲಿಂಗ ಸಮಾನತೆಗೆ ಬೈಕ್ ಜಾಥಾ ನಡೆಸಿದ ಮಹಿಳೆಯರು

ಬೆಂಗಳೂರು: ಲಿಂಗ ಸಮಾನತೆ ಹಾಗೂ ಮಹಿಳಾ ಸುರಕ್ಷತೆಗೆ ಸಂಬಂಧಿಸಿದಂತೆ ಮಹಿಳೆಯರು ನಗರದಲ್ಲಿ ಭಾನುವಾರ ಬೈಕ್ ಜಾಥಾ ನಡೆಸಿ, ಜಾಗೃತಿ ಮೂಡಿಸಿದರು.

ಮಾರತಹಳ್ಳಿಯ ರೈನ್‌ಬೋ ಮಕ್ಕಳ ಆಸ್ಪತ್ರೆಯು 'ಮಿಡ್‌ನೈಟ್ ರೈಡ್ 2022' ಶೀರ್ಷಿಕೆಯಡಿ ಹಮ್ಮಿಕೊಂಡ ಜಾಥಾಕ್ಕೆ ಆಸ್ಪತ್ರೆಯ ಅಧ್ಯಕ್ಷ ಡಾ. ರಮೇಶ್ ಕಂಚಾರ್ಲ, ನಟಿ ಮೇಘನಾ ರಾಜ್ ಮತ್ತು ಕರ್ನಾಟಕ ಕರಕುಶಲ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ರೂಪಾ ಡಿ. ಮೌದ್ಗಿಲ್ ಚಾಲನೆ ನೀಡಿದರು.

'ಸಮಾಜದಲ್ಲಿ ಸಮಾನತೆ ಮೂಡಿಸುವ ಅಗತ್ಯವಿದೆ. ಮಹಿಳೆಯರು ರಾತ್ರಿ ವೇಳೆ ಹೊರಗಡೆ ಸಂಚರಿಸಬಾರದು ಎನ್ನುವುದು ಸರಿಯಲ್ಲ. ಪುರುಷರು ಹೊರಗಡೆ ಸಂಚರಿಸಿದರೆ ಯಾರು ಅವರನ್ನು ಪ್ರಶ್ನಿಸುವುದಿಲ್ಲ. ಆದರೆ, ಮಹಿಳೆಯರಿಗೆ ನೂರೆಂಟು ಪ್ರಶ್ನೆ ಹಾಕಲಾಗುತ್ತದೆ. ಮಹಿಳೆಯರು ಯಾವುದೇ ಸ್ಥಳದಲ್ಲಿ ವಾಹನ ಚಲಾಯಿಸಬಹುದು ಎಂಬುದನ್ನು ಈ ಜಾಥಾ ತೋರಿಸಿಕೊಟ್ಟಿದೆ' ಎಂದು ಡಾ. ರಮೇಶ್ ಕಂಚಾರ್ಲ ತಿಳಿಸಿದರು.

'ದೇಶದಲ್ಲಿ ಮಹಿಳೆಯರು ಸಂಜೆ ವೇಳೆ ಮನೆಯಿಂದ ಹೊರಗಡೆ ತೆರಳುವಾಗ ಪುರುಷರ ಅನುಮತಿ ಪಡೆಯಬೇಕಿದೆ. ಪುರುಷರಿಗೆ ಎಲ್ಲ ಸ್ವಾತಂತ್ರ್ಯ ಇರುವಾಗ ಮಹಿಳೆಯರಿಗೆ ಏಕೆ ನಿರ್ಬಂಧ' ಎಂದು ರೂಪಾ ಡಿ. ಮೌದ್ಗಿಲ್ ಪ್ರಶ್ನಿಸಿದರು.

ಬೈಕ್ ರ್‍ಯಾಲಿ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಚಾಮರಾಜಪೇಟೆ ಮಹಿಳಾ ಘಟಕದಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಬೈಕ್ ರ್‍ಯಾಲಿ ಭಾನುವಾರ ನಡೆಯಿತು –ಪ್ರಜಾವಾಣಿ ಚಿತ್ರ

ಅಧ್ಯಕ್ಷೆಯಾಗಿ ಸೋನಿಯಾ ಮುಂದುವರಿಕೆ

ಒಂದನೇ ಪುಟದಿಂದ

ಬಜೆಟ್ ಅಧಿವೇಶನ ಮುಗಿದ ನಂತರ ಈ ಚಿಂತನ ಶಿಬಿರ ನಡೆಸಲು ಸಭೆ ನಿರ್ಧರಿಸಿತು. ಪ್ರಸಕ್ತ ಹಾಗೂ ಮುಂದಿನ ವರ್ಷ ಕೆಲ ರಾಜ್ಯಗಳ ವಿಧಾನಸಭೆಗೆ ನಡೆಯಲಿರುವ ಚುನಾವಣೆ, 2024ರ ಲೋಕಸಭಾ ಚುನಾವಣೆಗೆ ಪಕ್ಷದ ಕಾರ್ಯತಂತ್ರದ ಕುರಿತು ಈ ಚಿಂತನ ಶಿಬಿರದಲ್ಲಿ ಚರ್ಚಿಸಲು ಸಭೆ ನಿರ್ಧರಿಸಿತು ಎಂದು ಮೂಲಗಳು ಹೇಳಿವೆ.

ಉದ್ದೇಶಿತ ಚಿಂತನ ಶಿಬಿರವನ್ನು ರಾಜಸ್ಥಾನದಲ್ಲಿ ಆಯೋಜಿಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ. 2003ರಲ್ಲಿ ಇಂಥ ಚಿಂತನ ಶಿಬಿರ ನಡೆದಿತ್ತು.

ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪಕ್ಷದ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ, 'ಪಕ್ಷದಲ್ಲಿ ಸಂಘಟನಾತ್ಮಕ ಬದಲಾವಣೆಗಳು ಹಾಗೂ ತಂತ್ರಗಾರಿಕೆ ಕುರಿತು ಚರ್ಚಿಸಲು ಇದೇ ತಿಂಗಳು ಮತ್ತೊಮ್ಮೆ ಸಿಡಬ್ಲ್ಯುಸಿ ಆಯೋಜಿಸುವ ಚಿಂತನೆ ಇದೆ' ಎಂದು ಹೇಳಿದರು.

'ಪಕ್ಷ ಬಲಪಡಿಸಲು ಹಾಗೂ ಎದುರಾಗಿರುವ ಸವಾಲುಗಳನ್ನು ಮೆಟ್ಟಿ ನಿಲ್ಲಲು ಬೇಕಾದ ಪರಿಹಾರ ಕ್ರಮಗಳನ್ನು ಕೈಗೊಳ್ಳಲು ಸೋನಿಯಾ ಗಾಂಧಿ ಅವರ ನಾಯಕತ್ವದಲ್ಲಿ ನಂಬಿಕೆ ಹೊಂದಿರುವುದಾಗಿ ಸಿಡಬ್ಲ್ಯುಸಿ ಪುನರುಚ್ಚರಿಸಿತು' ಎಂದರು.

'ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಪಕ್ಷದ ಕಳಪೆ ಸಾಧನೆ ಕುರಿತು ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಸಭೆಗೆ ವಿವರಿಸಿದರು. ಈ ಹಂತದಲ್ಲಿ ಮಧ್ಯಪ್ರವೇಶಿಸಿದ ಹಿರಿಯ ಮುಖಂಡ ಗುಲಾಂ ನಬಿ ಆಜಾದ್, ಉತ್ತರ ಪ್ರದೇಶದಲ್ಲಿ ಮಿತ್ರ ಪಕ್ಷಗಳೊಂದಿಗೆ ವ್ಯಾಪಕ ಸಮಾಲೋಚನೆಯ ಅಗತ್ಯವನ್ನು ಪ್ರತಿಪಾದಿಸಿದರು' ಎಂದು ಮುಖ್ಯ ವಕ್ತಾರ ರಣದೀಪ್ ಸಿಂಗ್ ಸುರ್ಜೇವಾಲಾ ಹೇಳಿದರು.

ಮುಖಂಡರಾದ ಮಲ್ಲಿಕಾರ್ಜುನ ಖರ್ಗೆ, ಅಂಬಿಕಾ ಸೋನಿ, ಮೀರಾ ಕುಮಾರ್, ರಾಜೀವ್ ಶುಕ್ಲಾ, ದಿನೇಶ್ ಗುಂಡೂರಾವ್ ಅವರು ಕೂಡ ಸುದ್ದಿಗಾರರೊಂದಿಗೆ ಪ್ರತ್ಯೇಕವಾಗಿ ಮಾತನಾಡಿ, 'ಸೋನಿಯಾ ಗಾಂಧಿ ಅವರ ನಾಯಕತ್ವವನ್ನು ಪ್ರಶ್ನಿಸುವ ಮಾತೇ ಇಲ್ಲ. ಅವರೇ ಪಕ್ಷವನ್ನು ಮುನ್ನಡೆಸಲಿದ್ದಾರೆ' ಎಂದರು.

ಲೋಹದ ಡಬ್ಬಿಯಲ್ಲಿ ಮಾದಕ ವಸ್ತು

ಅಪರಾಧ ಸುದ್ದಿ

ಬೆಂಗಳೂರು: ತೆಳುವಾದ ತಾಮ್ರದ ತಂತಿ ಸುತ್ತಲು ಬಳಸುವ ಚಕ್ರದಾಕಾರದ ಸಣ್ಣ ಸಣ್ಣ ಲೋಹದ ಡಬ್ಬಿಗಳಲ್ಲಿ ಪೌಡರ್ ಮಾದರಿಯ 'ಸ್ಯೂಡೋಫೆಡ್ರಿನ್' ಮಾದಕ ವಸ್ತುವನ್ನು ಅಡಗಿಸಿಟ್ಟು ಕೊರಿಯರ್ ಮೂಲಕ ನ್ಯೂಜಿಲೆಂಡ್‌ಗೆ ರವಾನಿಸಲು ಮುಂದಾಗಿದ್ದ ಜಾಲವನ್ನು ಎನ್‌ಸಿಬಿ ಬೆಂಗಳೂರು ಘಟಕದ ಅಧಿಕಾರಿಗಳು ಭೇದಿಸಿದ್ದಾರೆ.

'ನಗರದಲ್ಲಿ ವಾಸವಿರುವ ವ್ಯಕ್ತಿ ಹಾಗೂ ದಕ್ಷಿಣ ಆಫ್ರಿಕಾದ ಪ್ರಜೆಯನ್ನು ಬಂಧಿಸಲಾಗಿದೆ. ಒಟ್ಟು 1 ಕೆ.ಜಿ. 970 ಗ್ರಾಂ 'ಸ್ಯೂಡೋಫೆಡ್ರಿನ್' ಜಪ್ತಿ ಮಾಡಲಾಗಿದೆ' ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

'ಆರೋಪಿಗಳು ಕೊರಿಯರ್ ಮೂಲಕ ಮಾದಕ ವಸ್ತು ರವಾನೆ ಮಾಡುತ್ತಿರುವ ಬಗ್ಗೆ ಖಚಿತ ಮಾಹಿತಿ ಲಭಿಸಿತ್ತು. ಅದರ ಆಧಾರದಲ್ಲಿ ಶುಕ್ರವಾರ ರಾತ್ರಿ ಕೊರಿಯರ್ ಕೇಂದ್ರದ ಮೇಲೆ ದಾಳಿ ನಡೆಸಲಾಗಿತ್ತು. ಪಾರ್ಸೆಲ್ ಪೆಟ್ಟಿಗೆಯನ್ನು ತೆರೆದು ನೋಡಿದಾಗ ಅದರಲ್ಲಿ ಸಣ್ಣ ಗಾತ್ರದ ಒಟ್ಟು 50 ಲೋಹದ ಡಬ್ಬಿಗಳು ಇದ್ದವು. ಡಬ್ಬಿಗಳ ಮೇಲ್ಭಾಗದಲ್ಲಿ 'ಪೌಡರ್ ಮಾದರಿಯ 'ಸ್ಯೂಡೋಫೆಡ್ರಿನ್' ಹಾಕಿ ಪ್ಲಾಸ್ಟರ್‌ನಿಂದ ಸುತ್ತಲಾಗಿತ್ತು. ಅನುಮಾನ ಬಾರದಿರಲಿ ಎಂದು ಅದರ ಮೇಲೆ ತೆಳುವಾದ ತಾಮ್ರದ ತಂತಿ ಸುತ್ತಲಾಗಿತ್ತು. ಒಂದೊಂದು ಡಬ್ಬಿಯಲ್ಲೂ ಸುಮಾರು 40 ಗ್ರಾಂ ಪೌಡರ್ ಪತ್ತೆಯಾಗಿತ್ತು' ಎಂದು ಮಾಹಿತಿ ನೀಡಿದರು. 'ಡ್ರಗ್ ಜಾಲದಲ್ಲಿ ಸಕ್ರಿಯವಾಗಿ ಭಾಗಿಯಾಗಿರುವುದನ್ನು ಆರೋಪಿಗಳಿಬ್ಬರೂ ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾರೆ' ಎಂದರು.

ಚಿತ್ರಾವಳಿ

ಭಾರತ ಮತ್ತು ಶ್ರೀಲಂಕಾ ಕ್ರಿಕೆಟ್ ತಂಡಗಳ ನಡುವೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಎರಡನೇ ಟೆಸ್ಟ್ ಪಂದ್ಯದ ವೀಕ್ಷಣೆಯ ವೇಳೆ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಸಂಸದ ತೇಜಸ್ವಿ ಸೂರ್ಯ ಮಾತುಕತೆ ನಡೆಸಿದರು.

ಫ್ರೇಜರ್ ಟೌನ್‌ನ ಬಿಬಿಎಂಪಿ ಪದವಿ ಪೂರ್ವ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ವಾರ್ಷಿಕೋತ್ಸವವನ್ನು ಶಾಸಕ ಆರ್.ಅಖಂಡ ಶ್ರೀನಿವಾಸ ಮೂರ್ತಿ ಉದ್ಘಾಟಿಸಿದರು. ಕಾಲೇಜಿನ ಪ್ರಾಂಶುಪಾಲರು, ಸಿಬ್ಬಂದಿ ಹಾಗೂ ಇತರರು ಇದ್ದಾರೆ.



ಕೋರಮಂಗಲದ ಸೇಂಟ್ ಫ್ರಾನ್ಸಿಸ್ ಕಾಲೇಜು ವತಿಯಿಂದ ಶನಿವಾರ ಹಮ್ಮಿಕೊಂಡಿದ್ದ ಎಂಬಿಎ ಮತ್ತು ಎಂಸಿಎ ಸ್ನಾತಕೋತ್ತರ ತರಗತಿಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಸಂಸದ ತೇಜಸ್ವಿ ಸೂರ್ಯ, ವಿಧಾನ ಪರಿಷತ್ ಸದಸ್ಯ ಗೋಪಿನಾಥ್ ರೆಡ್ಡಿ, ಕಾಲೇಜಿನ ಅಧ್ಯಕ್ಷ ರೆವೆರೆಂಡ್ ಬ್ರದರ್ ಕ್ಸೇವಿಯರ್ ಅಲೆಕ್ಸಾಂಡರ್, ನಿರ್ದೇಶಕ ಆಂಥೋಣಿ ಡಿ.ವಯಲಿಲ್, ಉಪ ನಿರ್ದೇಶಕ ಬ್ರದರ್ ಪೀಟರ್, ಪ್ರಾಂಶುಪಾಲ ಆರ್.ಎನ್.ಸುಬ್ಬರಾವ್ ಹಾಗೂ ಇತರರು ಭಾಗವಹಿಸಿದ್ದರು

'ಒಗ್ಗಟ್ಟು, ಶ್ರಮದಿಂದ ಮತ್ತೆ ಅಧಿಕಾರಕ್ಕೆ'

ಐದು ರಾಜ್ಯ ಚುನಾವಣೆ: ಗೆಲುವಿನ ರೂವಾರಿಗಳಿಗೆ ರಾಜ್ಯ ಬಿಜೆಪಿ ಸನ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಧಾನಿ ಮೋದಿ ನಾಮಬಲ, ಅಭಿವೃದ್ಧಿ ಕಾರ್ಯಕ್ರಮಗಳ ಬಲ, ಶ್ರಮ, ಸಂಘಟನೆಯ ಶಕ್ತಿಯಿಂದ ರಾಜ್ಯದಲ್ಲಿ 2023ರ ವಿಧಾನಸಭೆಯಲ್ಲಿ ಕಮಲ ಅರಳಲಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭವಿಷ್ಯ ನುಡಿದರು.

ಇತ್ತೀಚೆಗೆ ನಡೆದ ಐದು ರಾಜ್ಯಗಳ ಚುನಾವಣೆಯಲ್ಲಿ ಉಸ್ತುವಾರಿಗಳಾಗಿ ಜವಾಬ್ದಾರಿ ವಹಿಸಿದ್ದ ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ಶೋಭಾ ಕರಂದ್ಲಾಜೆ ಮತ್ತು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಅವರಿಗೆ ಬಿಜೆಪಿ ರಾಜ್ಯ ಕಾರ್ಯಾಲಯ 'ಜಗನ್ನಾಥ ಭವನ'ದಲ್ಲಿ ಭಾನುವಾರ ಏರ್ಪಡಿಸಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಒಗ್ಗಟ್ಟಿನ ಮಂತ್ರ, ಶ್ರಮದಿಂದ ರಾಜ್ಯದಲ್ಲೂ 24 ಗಂಟೆ ನಿರಂತರ ದುಡಿದು ಛಲದಿಂದ ಬಿಜೆಪಿಗೆ ಗೆಲುವಿಗೆ ಸಾಧಿಸಬೇಕು. ಯೋಜನಾಬದ್ಧ ಚುನಾವಣೆ ಮಾಡೋಣ. ಒಟ್ಟಾಗಿ ನಿಲ್ಲೋಣ. ಒಂದುಗೂಡಿ ಗೆಲುವು ತರೋಣ' ಎಂದು ಪಕ್ಷದ ಪ್ರಮುಖರಿಗೆ ಅವರು ಸಲಹೆ ನೀಡಿದರು.

'ಬಿಜೆಪಿ ಆರಂಭದ ದಿನಗಳಿಂದಲೂ ಸಂಘಟನೆ ಬಲ ಆಧರಿತ ರಾಜಕಾರಣ ಮಾಡುತ್ತಿದೆ. ಕಾರ್ಯಕರ್ತರ ಪಡೆಯ ಮೂಲಕ ಜನಸಾಮಾನ್ಯರಿಗೆ ಪಕ್ಷದ ನೀತಿ ತಿಳಿಸುವ ಕಾರ್ಯ ನಡೆದಿದೆ. ತತ್ವದ ಆಧಾರದಲ್ಲಿ ಚುನಾವಣೆ ಎದುರಿಸಲಾಗುತ್ತಿದೆ. ನಮ್ಮ ವಿಚಾರಧಾರೆ ಒಪ್ಪಿ ಜನರು ನಮ್ಮತ್ತ ಆಕರ್ಷಿತರಾದರು' ಎಂದರು.

ಐದು ರಾಜ್ಯ ಚುನಾವಣೆಯ ಉಸ್ತುವಾರಿಗಳಾಗಿ ಜವಾಬ್ದಾರಿ ನಿರ್ವಹಿಸಿದ ಮಹೇಶ್ ಟೆಂಗಿನಕಾಯಿ, ಕೇಂದ್ರ ಸಚಿವರಾದ ಶೋಭಾ ಕರಂದ್ಲಾಜೆ, ಪ್ರಲ್ಹಾದ ಜೋಶಿ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಅವರನ್ನು ಸನ್ಮಾನಿಸಲಾಯಿತು. ಎನ್. ರವಿಕುಮಾರ್, ನಿರ್ಮಲ್ ಕುಮಾರ್ ಸುರಾಣ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್, ಸಚಿವ ವಿ. ಸೋಮಣ್ಣ, ಸಂಸದ ಪಿ.ಸಿ. ಮೋಹನ್, ಸಚಿವ ಮುನಿರತ್ನ, ಛಲವಾದಿ ನಾರಾಯಣಸ್ವಾಮಿ ಇದ್ದಾರೆ

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಮಾತನಾಡಿ, 'ರಾಷ್ಟ್ರೀಯ ನಾಯಕತ್ವ ಕರ್ನಾಟಕದ ಕಾರ್ಯಕರ್ತರ ಮೇಲೆ ವಿಶ್ವಾಸ ಹೊಂದಿದೆ. ರಾಜ್ಯದಲ್ಲಿ ಮತ್ತೆ ಬಿಜೆಪಿ ಗೆಲುವುದು ಸಾಧಿಸಲಿದೆ' ಎಂದರು.

ಪ್ರಲ್ಹಾದ ಜೋಶಿ ಮಾತನಾಡಿ, 'ಕರ್ನಾಟಕದಲ್ಲಿ ಅದ್ಭುತ ಬಜೆಟ್ ಅನ್ನು ಬೊಮ್ಮಾಯಿ ನೀಡಿದ್ದಾರೆ. ಮನೆಗೆ ದಾಖಲೆಪತ್ರ ತಲುಪಿಸುವ ಕಂದಾಯ ಇಲಾಖೆಯ ಕೆಲಸ ಆರಂಭವಾಗಿದೆ. ಯಡಿಯೂರಪ್ಪ, ಬೊಮ್ಮಾಯಿ ಅವರ ಕಾಲದ ಉತ್ತಮ ಕಾರ್ಯಗಳನ್ನು ಜನರಿಗೆ ತಲುಪಿಸಬೇಕಿದೆ. ಆ ಮೂಲಕ, ಕರ್ನಾಟಕದಲ್ಲೂ ಗೆಲುವು ಸಾಧ್ಯವಾಗಬೇಕು' ಎಂದರು.

'ಉತ್ತರಾಖಂಡದಲ್ಲಿ ಈ ಬಾರಿ ಕಾಂಗ್ರೆಸ್ ಬರಲಿದೆ ಎಂಬ ಭಾವನೆ ಜನರಲ್ಲಿತ್ತು. ಆ ಭಾವನೆಯನ್ನು ಬದಲಾಯಿಸಿದ್ದು ಮೋದಿಯವರ ತಾಕತ್ತು ಮತ್ತು ದೂರದೃಷ್ಟಿ. ಮೋದಿ ಸರ್ಕಾರ ಬಂದ ಬಳಿಕ ಅಭಿವೃದ್ಧಿ ಎಂಬುದು ಕಾರ್ಯಸೂಚಿ ಆಗಿದೆ' ಎಂದರು.

ಸಿ.ಟಿ. ರವಿ ಮಾತನಾಡಿ, 'ನಿರ್ಣಯ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಯೋಗದಾನ ನಮ್ಮದಾಗಿತ್ತು. ಪಕ್ಷದ ಪ್ರತಿಯೊಬ್ಬ ಕಾರ್ಯಕರ್ತ ಬಿಜೆಪಿ ಮಾಲೀಕರು ಎಂದು ತಿಳಿಸಿ, ಬೂತ್ ಗೆಲುವಿನ ಗುರಿ ನೀಡಲಾಯಿತು. ನೀತಿ, ನಿಯತ್ತು, ಮೋದಿಯವರ ವಿಶ್ವಮಾನ್ಯ ನೇತೃತ್ವ ಇದ್ದ ಕಾರಣ ಗೆಲುವು ಸಹಜವಾಗಿಯೇ ಬಂದಿದೆ' ಎಂದು ವಿಶ್ಲೇಷಿಸಿದರು.

ಶೋಭಾ ಕರಂದ್ಲಾಜೆ ಮಾತನಾಡಿ, 'ಉತ್ತರ ಪ್ರದೇಶದಲ್ಲಿ ಮೊದಲ ಎರಡು ತಿಂಗಳು ಸಂಘಟನಾತ್ಮಕ ಪ್ರವಾಸಕ್ಕೆ ಒತ್ತು ಕೊಡಲಾಯಿತು. ತಿಂಗಳಿಗೆ ಎರಡು ಬಾರಿ ಪಡಿತರ ಸರಿಯಾಗಿ ಸಿಗುತ್ತಿದ್ದುದು, ಗೂಂಡಾಗಿರಿ ಇಲ್ಲದ ಕಾನೂನು ಸುವ್ಯವಸ್ಥೆ, ಕೇಂದ್ರ ಸರ್ಕಾರದ ವಿವಿಧ ಯೋಜನೆಗಳು ಸರಿಯಾಗಿ ತಲುಪಿದ್ದುದೇ ಚುನಾವಣೆ ಕಾರ್ಯಸೂಚಿ ಆಗಿತ್ತು. ಅಲ್ಲಿ ಜಾತಿ, ಧರ್ಮ ಮೀರಿ ಮತಗಳು ಬಿಜೆಪಿಗೆ ಸಿಕ್ಕಿದೆ' ಎಂದರು.

ಡಾ.ಸಿ.ರಾಮಚಂದ್ರ ಅವರಿಗೆ ಸೇವಾ ಚೇತನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಬಂಟರ ಸಂಘದ ಕಾರ್ಯದರ್ಶಿ ಮಧುಕರ ಎಂ.ಶೆಟ್ಟಿ, ಕೇಂದ್ರ ಕಾರ್ಮಿಕ ಕಲ್ಯಾಣ ಇಲಾಖೆಯ ಡಾ. ಮಂಜುನಾಥಶೆಟ್ಟಿ, ಸಂಘದ ಅಧ್ಯಕ್ಷ ಆರ್. ಉಪೇಂದ್ರ ಶೆಟ್ಟಿ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ್ ಜೋಶಿ, ಕೊರ್ಗಿ ಭೋಜರಾಜಶೆಟ್ಟಿ ಇದ್ದರು –ಪ್ರಜಾವಾಣಿ ಚಿತ್ರ

'ವೈದ್ಯರಿಗೆ ಹಣಕ್ಕಿಂತ ಮನುಷ್ಯತ್ವ ಮುಖ್ಯ'

ಬೆಂಗಳೂರು: 'ವೈದ್ಯರಿಗೆ ಹಣಕ್ಕಿಂತ ಮನುಷ್ಯತ್ವ ಮುಖ್ಯ ಆಗಬೇಕು. ಮನುಷ್ಯತ್ವ ಇಲ್ಲದವರು ವೈದ್ಯರಾಗಲೇಬಾರದು' ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ ಡಾ.ಸಿ.ರಾಮಚಂದ್ರ ಅವರು ಪ್ರತಿಪಾದಿಸಿದರು.

ಬಂಟರ ಸಂಘದಲ್ಲಿ ಭಾನುವಾರ ನಡೆದ 2ನೇ ವರ್ಷದ ಸೇವಾ ಚೇತನ ಸಮಾರೋಪ ಕಾರ್ಯಕ್ರಮದಲ್ಲಿ ಸೇವಾ ಚೇತನ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅವರು, 'ವೈದ್ಯರಾದವರು ಎಂದೂ ಹಣದ ಹಿಂದೆ ಹೋಗಬಾರದು. ಮಾನವೀಯತೆ ಬೆಳೆಸಿಕೊಂಡರೆ ಹಣ ತಾನಾಗಿಯೇ ಬರಲಿದೆ' ಎಂದರು.

ಬಂಟರ ಸಂಘ, ಸಮಾಜ ಸೇವಾ ಸಮಿತಿ, ಸೇವಾದಳದ ವತಿಯಿಂದ ಆಯೋಜಿಸಿದ್ದ ಆರೋಗ್ಯ ತಪಾಸಣಾ ಶಿಬಿರವನ್ನು ಅಬಕಾರಿ ಇಲಾಖೆ ಸಚಿವ ಕೆ.ಗೋಪಾಲಯ್ಯ ಉದ್ಘಾಟಿಸಿದರು. ಕೇಂದ್ರ ಕಾರ್ಮಿಕ ಕಲ್ಯಾಣ ಇಲಾಖೆಯ ಎನ್.ಮಂಜುನಾಥ್ ಶೆಟ್ಟಿ, ಪತ್ರಕರ್ತ ಜಯಪ್ರಕಾಶ್ ಶೆಟ್ಟಿ ಉಪ್ಪಳ ಅವರನ್ನು ಇದೇ ವೇಳೆ ಸನ್ಮಾನಿಸಲಾಯಿತು.

'ದಿ ಕಾಶ್ಮೀರ್ ಫೈಲ್ಸ್' ಸಿನಿಮಾಕ್ಕೆ ತೆರಿಗೆ ವಿನಾಯಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಿ ಕಾಶ್ಮೀರ್ ಫೈಲ್ಸ್' ಸಿನಿಮಾಕ್ಕೆ ಕರ್ನಾಟಕದಲ್ಲಿ ತೆರಿಗೆ ವಿನಾಯಿತಿ ನೀಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದ್ದಾರೆ.

ಒರಾಯನ್ ಮಾಲ್‌ನಲ್ಲಿ ಸಿನಿಮಾ ವೀಕ್ಷಿಸಿದ ನಂತರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಚಿತ್ರ ನೋಡಿದ ಬಳಿಕ ಮಾತನಾಡಲು ಆಗುತ್ತಿಲ್ಲ. ಪ್ರತಿಯೊಬ್ಬ ಭಾರತೀಯರು ನೋಡಲೇಬೇಕಾದ ಸಿನಿಮಾ ಇದು. ಆದ್ದರಿಂದ ತೆರಿಗೆ ವಿನಾಯಿತಿ ನೀಡಿ ಸೋಮವಾರವೇ ಆದೇಶ ಹೊರಡಿಸಲಾಗುವುದು' ಎಂದರು.

ಇಂಧನ ಟ್ಯಾಂಕರ್ ಅಪಘಾತ

ಪಾವಗಡ: ಶನಿವಾರ ರಾತ್ರಿ ತುಮಕೂರು ಕಡೆಯಿಂದ ವೈ.ಎನ್ ಹೊಸಕೋಟೆಗೆ ಹೋಗುತ್ತಿದ್ದ 12 ಸಾವಿರ ಲೀಟರ್ ಇಂಧನ ತುಂಬಿದ್ದ ಟ್ಯಾಂಕರ್ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆಯಿತು. ಟ್ಯಾಂಕರ್‌ನ ಚಕ್ರಗಳು ಬೇರ್ಪಟ್ಟು ಪೆಟ್ರೋಲ್, ಡೀಸೆಲ್ ರಸ್ತೆಗೆ ಹರಿಯಿತು. ಅಗ್ನಿಶಾಮಕ ಸಿಬ್ಬಂದಿ, ರಸ್ತೆ ಮೇಲೆ ಹರಿದಿದ್ದ ಇಂಧನದ ಮೇಲೆ ಮಣ್ಣು ಸಿಂಪಡಿಸಿದರು.

ಮೇಣದ ಬತ್ತಿ ಬೆಳಗಿ ಪ್ರತಿಭಟನೆ ನಡೆಸಿದ ಮಕ್ಕಳು –ಪ್ರಜಾವಾಣಿ ಚಿತ್ರ

'ದುರ್ಬಲ ವರ್ಗದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್‌ನಿಂದಾಗಿ ಹಲವರ ಬದುಕು ಬೀದಿಗೆ ಬಿದ್ದಿದೆ. ದುರ್ಬಲ ಸಮುದಾಯದ ಮಕ್ಕಳ ವಿದ್ಯಾಭ್ಯಾಸದ ಮೇಲೂ ದುಷ್ಪರಿಣಾಮ ಉಂಟಾಗಿದೆ. ಅಂತಹ ಮಕ್ಕಳನ್ನು ಗುರುತಿಸಿ ಅವರಿಗೆ ಗುಣಮಟ್ಟದ ಶಿಕ್ಷಣ ಒದಗಿಸಬೇಕು' ಎಂದು ಸ್ಲಂ ಮಹಿಳಾ ಸಂಘಟನೆ ಸದಸ್ಯರು ಒತ್ತಾಯಿಸಿದರು.

'ದುರ್ಬಲ ವರ್ಗದ ಮಕ್ಕಳ ಶಿಕ್ಷಣದ ಸಮಸ್ಯೆ–ಕೋವಿಡ್' ಘೋಷವಾಕ್ಯದಡಿ ಸಂಘಟನೆಯ ಸದಸ್ಯರು, ಪೋಷಕರು, ಮಕ್ಕಳು ಹಾಗೂ ಸಮುದಾಯದ ಮುಖಂಡರು ಪುರಭವನದ ಎದುರು ಮೇಣದ ಬತ್ತಿ ಬೆಳಗಿ ಶನಿವಾರ ಪ್ರತಿಭಟನೆ ನಡೆಸಿದರು.

'ಕೋವಿಡ್‌ನಿಂದಾಗಿ ಬಹುಪಾಲು ಮಕ್ಕಳಿಗೆ ಶಾಲಾ ಶುಲ್ಕ ಭರಿಸುವುದಕ್ಕೆ ಆಗುತ್ತಿಲ್ಲ. ಹೀಗಾಗಿ ಮಕ್ಕಳು ಶಾಲೆಯಿಂದ ಹೊರಗುಳಿಯುತ್ತಿದ್ದು, ಬಾಲ ಕಾರ್ಮಿಕರಾಗಿ ಬದಲಾಗುತ್ತಿದ್ದಾರೆ. ಈ ವರ್ಗದ ಮಕ್ಕಳು ಆನ್‌ಲೈನ್ ಶಿಕ್ಷಣದಿಂದಲೂ ವಂಚಿತರಾಗುತ್ತಿದ್ದಾರೆ. ಓದಿನ ಕುರಿತ ಆಸಕ್ತಿ ಅವರಲ್ಲಿ ಕುಂಠಿತವಾಗುತ್ತಿದೆ' ಎಂದು ಪ್ರತಿಭಟನಾಕಾರರು ದೂರಿದರು. 'ಕೋವಿಡ್ ಸಮಯದಲ್ಲಿ ಈ ಮಕ್ಕಳು ಶಿಕ್ಷಣದಿಂದ ಸಂಪೂರ್ಣವಾಗಿ ವಂಚಿತರಾಗಿದ್ದಾರೆ. ಈ ಅವಧಿಯಲ್ಲಿ ಶಾಲೆಯಲ್ಲಿ ಕಲಿತಿದ್ದನ್ನೂ ಮರೆತಿದ್ದಾರೆ. ಈ ಮಕ್ಕಳ ಹಕ್ಕುಗಳನ್ನು ರಕ್ಷಿಸಲು ಸರ್ಕಾರ ಮುಂದಾಗಬೇಕು ಎಂದು ಆಗ್ರಹಿಸಿದರು.

ಮೊಳೆ ಮುಕ್ತ ಮರ ಅಭಿಯಾನ

ಮರಗಳಿಗೆ ಮೊಳೆ: ಪೊಲೀಸರಿಗೆ ದೂರು

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಮರಗಳಿಗೆ ಮೊಳೆ ಹೊಡೆಯುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ವೈಟ್‌ಫೀಲ್ಡ್ ಪೊಲೀಸ್ ಠಾಣೆಗೆ ಪರಿಸರವಾದಿಗಳು ದೂರು ನೀಡಿದರು.

ವೃಕ್ಷ ಬಚಾವೋ ಸಮಿತಿ, ಮಿಡಿತ ಫೌಂಡೇಷನ್ ಹಾಗೂ ಪ್ರಶಾಂತ್ ಫೌಂಡೇಷನ್ ವತಿಯಿಂದ ಹಮ್ಮಿಕೊಂಡಿದ್ದ ಮೊಳೆ ಮುಕ್ತ ಮರ ಅಭಿಯಾನದ ಭಾಗವಾಗಿ ಪೊಲೀಸ್ ಠಾಣೆಗೆ ದೂರು ನೀಡಲಾಯಿತು.

ಫೌಂಡೇಷನ್ ಅಧ್ಯಕ್ಷ ಪರಿಸರ ಮಂಜು ಮಾತನಾಡಿ, 'ವರ್ತೂರು ಕೋಡಿಯಿಂದ ಹೋಪ್ ಫಾರಂ ಸಿಗ್ನಲ್ ತನಕ 100ಕ್ಕೂ ಹೆಚ್ಚು ಮರಗಳಿಗೆ ಜಾಹಿರಾತು ಪತ್ರ ಅಂಟಿಸಲು ಮೊಳೆ ಹೊಡೆಯಲಾಗಿದೆ. ಅವುಗಳನ್ನು ತೆಗೆಯುವ ಕಾರ್ಯದಲ್ಲಿ ತೊಡಗಿದ್ದೇವೆ. ಮರಗಳಿಗೆ ಹಾನಿ ಮಾಡುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಅಗತ್ಯವಿದೆ' ಎಂದರು.

ವೈಟ್ ಫೀಲ್ಡ್ ಠಾಣೆಯ ಅಧಿಕಾರಿಗಳಿಗೆ ವೃಕ್ಷ ಬಚಾವೋ ಸಮಿತಿ, ಮಿಡಿತ ಫೌಂಡೇಷನ್ ಹಾಗೂ ಪ್ರಶಾಂತ್ ಫೌಂಡೇಷನ್ ಕಾರ್ಯಕರ್ತರು ದೂರು ಸಲ್ಲಿಸಿದರು

ಪ್ರಶಾಂತ್ ಫೌಂಡೇಷನ್ ಮುಖ್ಯಸ್ಥ ಕೆ.ವಿ.ಪ್ರಶಾಂತ್ ರೆಡ್ಡಿ ಮಾತನಾಡಿ, 'ಮರಗಳಿಗೆ ಮೊಳೆ ಹೊಡೆಯುವುದರಿಂದ ಮರಗಳ ಜೀವನಕ್ಕೆ ಅಪಾಯವಿದೆ. ನಗರದ ಸೌಂದರ್ಯಕ್ಕೆ ಮರಗಳೆ ಕಾರಣ. ಭಾರತದ ಪ್ರಮುಖ ನಗರಗಳಿಗೆ ಹೋಲಿಸಿದರೆ ಬೆಂಗಳೂರು ನಗರ ಪರಿಸರದ ಗುಣಗಳಿಗೆ ಹೆಚ್ಚು ಇಷ್ಟವಾಗುತ್ತದೆ. ಈಗಿನಿಂದಲೇ ಮರ ಉಳಿಸುವ ಕಾರ್ಯವನ್ನು ನಾವೆಲ್ಲರೂ ಮಾಡಬೇಕು' ಎಂದರು.

ಮಿಡಿತ ಫೌಂಡೇಷನ್ ಸಂಸ್ಥೆಯ ಸಿಂಹಾದ್ರಿ, ಸೌಮ್ಯ ಪವಾರ್, ಮಾಲಾ, ಜಬೀಲಾ, ಹರೀಶ್, ರಂಜಿತ್, ಮದನ್, ಶಿವಪ್ಪ ಇದ್ದರು.

ಕಾರಿನಲ್ಲಿ ಬೆಂಕಿ: ವ್ಯಕ್ತಿ ಸಜೀವ ದಹನ

ಬೆಂಗಳೂರು: ಚಲಿಸುತ್ತಿದ್ದ ಕಾರಿನಲ್ಲಿ ಆಕಸ್ಮಿಕವಾಗಿ ಬೆಂಕಿ ಹೊತ್ತಿಕೊಂಡಿದ್ದರಿಂದ ವ್ಯಕ್ತಿಯೊಬ್ಬರು ಸಜೀವ ದಹನವಾಗಿದ್ದಾರೆ.

'ಮೃತ ವ್ಯಕ್ತಿಯನ್ನು ಉತ್ತರಹಳ್ಳಿಯ ದರ್ಶನ್ (40) ಎಂದು ಗುರುತಿಸಲಾಗಿದೆ. ಇವರು ಬಿಪಿಒ ಕಂಪನಿಯೊಂದರ ಉದ್ಯೋಗಿಯಾಗಿದ್ದರು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

'ತುಮಕೂರು ರಸ್ತೆಯಲ್ಲಿರುವ ಸಂಬಂಧಿಕರ ಮನೆಯಲ್ಲಿ ಕಾರ್ಯಕ್ರಮವೊಂದರಲ್ಲಿ ಭಾಗಿಯಾಗಿದ್ದ ದರ್ಶನ್, ಶನಿವಾರ ರಾತ್ರಿ 10.30ರ ಸುಮಾರಿಗೆ ಸ್ಯಾಂಟ್ರೊ ಕಾರಿನಲ್ಲಿ ಮನೆಗೆ ಮರಳುತ್ತಿದ್ದರು. ನೈಸ್ ರಸ್ತೆಯ ಚನ್ನಸಂದ್ರ ಸೇತುವೆ ಬಳಿ ಬಂದಾಗ ಕಾರಿನಲ್ಲಿ ಬೆಂಕಿ ಕಾಣಿಸಿದೆ. ಬಳಿಕ ಕಾರು ಹೊತ್ತಿ ಉರಿದಿದೆ. ಈ ಬಗ್ಗೆ ಮಾರ್ಗದಲ್ಲಿ ಹೋಗುತ್ತಿದ್ದವರು ನೈಸ್ ಸಂಸ್ಥೆಯ ತುರ್ತು ನೆರವು ತಂಡಕ್ಕೆ ಮಾಹಿತಿ ನೀಡಿದ್ದರು. ಅಷ್ಟರಲ್ಲಾಗಲೇ ಕಾರು ಸುಟ್ಟು ಕರಕಲಾಗಿತ್ತು. ಅವಘಡಕ್ಕೆ ನಿಖರ ಕಾರಣ ಗೊತ್ತಿಲ್ಲ' ಎಂದು ಪೊಲೀಸರು ಹೇಳಿದ್ದಾರೆ.

ಕೋವಿಡ್ ನಿಯಂತ್ರಣ: ಲಸಿಕೆ ಪಡೆಯಲು ಜನರ ನಿರಾಸಕ್ತಿ – ಖಾಲಿಯಾಗದ ದಾಸ್ತಾನು

ಲಸಿಕೆ ಖರೀದಿ ನಿಲ್ಲಿಸಿದ ಖಾಸಗಿ ಆಸ್ಪತ್ರೆಗಳು

● ವರುಣ ಹೆಗಡೆ

ಬೆಂಗಳೂರು: ಕೋವಿಡ್ ಮೂರನೇ ಅಲೆ ನಿಯಂತ್ರಣದಿಂದಾಗಿ ಲಸಿಕೆಯ ಎರಡು ಹಾಗೂ ಮೂರನೇ ಡೋಸ್‌ಗೆ ನಗರದ ಜನರಿಂದ ನಿರಾಸಕ್ತಿ ವ್ಯಕ್ತವಾಗುತ್ತಿದೆ. ಇದರಿಂದಾಗಿ ಖಾಸಗಿ ಆಸ್ಪತ್ರೆಗಳು ಲಸಿಕೆ ತಯಾರಕರಿಂದ ಖರೀದಿ ನಿಲ್ಲಿಸಿವೆ.

ಕೋವಿಡ್ ತಾಂತ್ರಿಕ ಸಲಹಾ ಸಮಿತಿಯ ಶಿಫಾರಸಿನ ಅನುಸಾರ ಮುನ್ನೆಚ್ಚರಿಕೆ ಡೋಸ್ ಲಸಿಕೆಯನ್ನೂ ವಿತರಿಸಲಾಗುತ್ತಿದೆ. ಈಗಾಗಲೇ ಮೊದಲ ಡೋಸ್ ವಿತರಣೆಯಲ್ಲಿ ಶೇ 100 ರಷ್ಟು ಗುರಿ ಸಾಧಿಸಲಾಗಿದೆ. ಆದರೆ, ಮೊದಲ ಡೋಸ್ ಪಡೆದವರಲ್ಲಿ 9.56 ಲಕ್ಷ ಮಂದಿ ಎರಡನೇ ಡೋಸ್ ಲಸಿಕೆ ಪಡೆದುಕೊಂಡಿಲ್ಲ. ತಗ್ಗಿದ ಕೊರೊನಾ ಸೋಂಕಿನ ತೀವ್ರತೆ ಹಾಗೂ ಹೊಸ ಪ್ರಕರಣಗಳ ಸಂಖ್ಯೆ ಇಳಿಕೆಯಿಂದಾಗಿ ಹೆಚ್ಚಿನವರು ಅವಧಿ ಮೀರಿದರೂ ಮೂರನೇ ಡೋಸ್ ಲಸಿಕೆ ಪಡೆದುಕೊಳ್ಳುತ್ತಿಲ್ಲ.

ಈವರೆಗೆ ಬಿಬಿಎಂಪಿ ವ್ಯಾಪ್ತಿಯಲ್ಲಿ 85.33 ಲಕ್ಷ ಹಾಗೂ ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ 12.41 ಲಕ್ಷ ಮಂದಿ ಎರಡನೇ ಡೋಸ್ ಲಸಿಕೆ ಹಾಕಿಸಿಕೊಂಡಿದ್ದಾರೆ. ಅವರಲ್ಲಿ ಕ್ರಮವಾಗಿ 3.02 ಲಕ್ಷ ಹಾಗೂ 43 ಸಾವಿರ ಮಂದಿ ಮಾತ್ರ ಮೂರನೇ ಡೋಸ್ ಪಡೆದಿದ್ದಾರೆ. 600ಕ್ಕೂ ಅಧಿಕ ಸರ್ಕಾರಿ ಕೇಂದ್ರಗಳಲ್ಲಿ ಉಚಿತವಾಗಿ ಲಸಿಕೆ ಒದಗಿಸಲಾಗುತ್ತಿದೆ. ಇದರಿಂದಾಗಿ ಖಾಸಗಿ ಆಸ್ಪತ್ರೆಗಳಲ್ಲಿನ ಲಸಿಕೆಯ ದಾಸ್ತಾನಿನ ಅವಧಿ ಮೀರುತ್ತಿದ್ದು, ಹೊಸದಾಗಿ ಖರೀದಿ ಮಾಡುವುದನ್ನು ನಿಲ್ಲಿಸಿವೆ. ಲಸಿಕೆ ವ್ಯರ್ಥವಾಗುವುದನ್ನು ತಪ್ಪಿಸಲು ಅವಧಿ ಮೀರಲು ಬಂದ ಡೋಸ್‌ಗಳನ್ನು ಬಿಬಿಎಂಪಿಗೆ ನೀಡುತ್ತಿವೆ.

2ನೇ ಅಲೆಯಲ್ಲಿ ಅಭಾವ: 2021ರ ಜ.16 ರಿಂದ ಲಸಿಕೆ ವಿತರಣೆ ನಡೆಯುತ್ತಿದೆ. ಎರಡನೇ ಅಲೆಯಲ್ಲಿ ಸೋಂಕಿನ ತೀವ್ರತೆಗೆ ಹೆಚ್ಚಿನವರು ಅಸ್ವಸ್ಥಗೊಳ್ಳುವ ಜತೆಗೆ ಅಧಿಕ ಸಂಖ್ಯೆಯಲ್ಲಿ ಮರಣ ಪ್ರಕರಣಗಳು ವರದಿಯಾಗಿದ್ದವು. ಇದರಿಂದಾಗಿ ಕೋವಿಡ್ ಲಸಿಕೆಗೆ ದಿಢೀರ್ ಬೇಡಿಕೆ ಹೆಚ್ಚಳವಾಗಿತ್ತು. ಆ ವೇಳೆ ನಿಗದಿತ ಪ್ರಮಾಣದಲ್ಲಿ ಲಸಿಕೆ ಉತ್ಪಾದನೆ ಹಾಗೂ ಪೂರೈಕೆಯಾಗದ ಕಾರಣ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ 18–44 ವರ್ಷದವರಿಗೆ ಲಸಿಕೆ ವಿತರಣೆ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ಸ್ಥಗಿತ ಮಾಡಲಾಗಿತ್ತು. ಬಳಿಕ ಅಪಾರ್ಟ್‌ಮೆಂಟ್ ವಸತಿ ಸಮುಚ್ಚಯ ಸೇರಿದಂತೆ ವಿವಿಧೆಡೆ ಲಸಿಕಾ ಅಭಿಯಾನ ನಡೆಸಿ, ಮೊದಲ ಡೋಸ್ ವಿತರಣೆಯಲ್ಲಿ ಗುರಿ ತಲುಪಲಾಗಿದೆ.

'ಕೋವಿಡ್ ಲಸಿಕೆ ಪಡೆಯಲು ಜನರು ನಿರಾಸಕ್ತಿ ತಾಳುತ್ತಿದ್ದಾರೆ. ಮೂರನೇ ಅಲೆಯ ಬಳಿಕ ಪ್ರತಿ ವಾರಕ್ಕೆ 10ರಿಂದ 20 ಮಂದಿ ಮಾತ್ರ ಲಸಿಕೆ ಪಡೆಯಲು ಬರುತ್ತಿದ್ದಾರೆ. ಕೆಲ ಆಸ್ಪತ್ರೆಗಳಲ್ಲಿ ಲಸಿಕೆ ವ್ಯರ್ಥವಾಗಿವೆ. ಹೊಸದಾಗಿ ಖರೀದಿಸುತ್ತಿಲ್ಲ. ಹಾಲಿ ಇರುವ ದಾಸ್ತಾನು ಅವಧಿ ಮೀರುವ ಒಂದು ತಿಂಗಳ ಮುನ್ನ ಬಿಬಿಎಂಪಿಗೆ ನೀಡಿ, ಅಷ್ಟೇ ಡೋಸ್‌ಗಳು ಲಸಿಕೆ ಪಡೆಯಲಾಗುತ್ತಿದೆ. ಮುನ್ನೆಚ್ಚರಿಕೆ ಡೋಸ್‌ಗಳಿಗೆ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ' ಎಂದು ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್‌ನ (ಫನಾ) ನಿಕಟಪೂರ್ವ ಅಧ್ಯಕ್ಷ ಹಾಗೂ ಸುಗುಣಾ ಆಸ್ಪತ್ರೆ ಮುಖ್ಯಸ್ಥ ಡಾ.ಆರ್. ರವೀಂದ್ರ ತಿಳಿಸಿದರು.

ಡಾ. ಪ್ರಸನ್ನ

'50 ಸಾವಿರ ಡೋಸ್‌ಗಳು ವ್ಯರ್ಥ'

'ಕೋವಿಡ್ ಮೊದಲೆರಡು ಅಲೆಗಳಲ್ಲಿ ಲಸಿಕೆಗೆ ಹೆಚ್ಚಿನ ಬೇಡಿಕೆಯಿತ್ತು. ಆಗ ಪೂರೈಕೆಯಲ್ಲಿ ವ್ಯತ್ಯಯವಾಗಿತ್ತು. ಈಗ ಲಸಿಕೆ ಪಡೆಯಲು ಜನರು ಮುಂದೆ ಬರುತ್ತಿಲ್ಲ. ತಯಾರಕರಿಂದ ಖಾಸಗಿ ಆಸ್ಪತ್ರೆಗಳು ಕಳೆದ ವರ್ಷ ಖರೀದಿಸಿದ್ದ ಲಸಿಕೆಯ ಡೋಸ್‌ಗಳಲ್ಲಿ 50 ಸಾವಿರದಷ್ಟು ಡೋಸ್‌ಗಳು ವ್ಯರ್ಥವಾಗಿವೆ. ಹೀಗಾಗಿ, ಆಸ್ಪತ್ರೆಗಳು 100ರಿಂದ 500 ಡೋಸ್‌ಗಳಷ್ಟು ಲಸಿಕೆಯನ್ನು ಮಾತ್ರ ದಾಸ್ತಾನು ಇರಿಸಿಕೊಳ್ಳುತ್ತಿವೆ. ಕೆಲ ಆಸ್ಪತ್ರೆಗಳಲ್ಲಿ ವಿತರಣೆ ಸ್ಥಗಿತ ಮಾಡಲಾಗಿದೆ' ಎಂದು ಫನಾ ಅಧ್ಯಕ್ಷ ಡಾ. ಪ್ರಸನ್ನ ಎಚ್.ಎಂ. ತಿಳಿಸಿದರು.

ಕೋವಿಡ್ ಲಸಿಕೆ ವಿತರಣೆ ವಿವರ

- **1.07** ಕೋಟಿ — ಈವರೆಗೆ ಮೊದಲ ಡೋಸ್ ಪಡೆದವರು
- **97.74** ಲಕ್ಷ — ಎರಡನೇ ಡೋಸ್ ಪಡೆದವರು
- **3.46** ಲಕ್ಷ, ಮೂರನೇ ಡೋಸ್ ಪಡೆದವರು
- **617** — ಲಸಿಕೆ ವಿತರಿಸುತ್ತಿರುವ ಸರ್ಕಾರಿ ಕೇಂದ್ರಗಳು
- **152** — ಲಸಿಕೆ ವಿತರಿಸುತ್ತಿರುವ ಖಾಸಗಿ ಕೇಂದ್ರಗಳು

ವಾರಾಂತ್ಯದಲ್ಲಿ ದೂರದ ಪ್ರಯಾಣ ದರ ದುಪ್ಪಟ್ಟು

ಬೆಂಗಳೂರು: ಕೋವಿಡ್ ಮೂರನೇ ಅಲೆ ಬಳಿಕ ಎಲ್ಲ ಆರ್ಥಿಕ ಚಟುವಟಿಕೆಗಳು ಸಹಜ ಸ್ಥಿತಿಗೆ ಮರುಳುತ್ತಿದ್ದಂತೆ ಖಾಸಗಿ ಬಸ್‌ಗಳು ಪ್ರಯಾಣ ದರವನ್ನು ಮನ ಬಂದಂತೆ ಹೆಚ್ಚಿಸುತ್ತಿವೆ.

ವಾರಾಂತ್ಯದಲ್ಲಿ ದುಪ್ಪಟ್ಟು ಪ್ರಯಾಣ ದರವನ್ನು ಹೆಚ್ಚಿಸುವುದು ಸಾಮಾನ್ಯವಾಗಿದೆ. ಉದಾಹರಣೆಗೆ ಬೆಂಗಳೂರಿನಿಂದ ಶಿರಸಿಗೆ ಸಾಮಾನ್ಯ ದಿನಗಳಲ್ಲಿ ₹595 ಇದ್ದರೆ, ವಾರಾಂತ್ಯಗಳಲ್ಲಿ ₹1020 ಪಡೆಯಲಾಗುತ್ತಿದೆ. ಹಬ್ಬದ ದಿನಗಳಿಗೆ ಮುನ್ನ ಈ ರೀತಿ ದುಪ್ಪಟ್ಟು ಮತ್ತು ಮೂರು ಪಟ್ಟು ಹೆಚ್ಚಿಸುವುದು ಇದುವರೆಗೆ ಸಾಮಾನ್ಯವಾಗಿತ್ತು. ಆದರೆ, ಈಗ ಪ್ರತಿ ವಾರವೂ ತಮಗೆ ತಿಳಿದಂತೆ ಹೆಚ್ಚಿಸುತ್ತಿವೆ. ಇಲ್ಲಿ ಯಾವುದೇ ರೀತಿಯ ನಿಯಂತ್ರಣವೇ ಇಲ್ಲ ಎಂದು ಪ್ರಯಾಣಿಕರು ದೂರಿದ್ದಾರೆ.

ಉಳಿದ ದಿನಗಳಲ್ಲೂ ಕೆಲವು ಮಾರ್ಗಗಳಲ್ಲಿ ₹150ರಿಂದ ₹400 ಹೆಚ್ಚಿಸಲಾಗುತ್ತಿದೆ. ಒತ್ತಡ ಇಲ್ಲದ ಕೆಲವು ಮಾರ್ಗಗಳಲ್ಲಿ ಪ್ರಯಾಣಿಕರನ್ನು ಆಕರ್ಷಿಸಲು ಮೂಲ ದರಕ್ಕಿಂತಲೂ ₹100ರಿಂದ ₹200ರವರೆಗೆ ವಿನಾಯಿತಿ ನೀಡುತ್ತಿರುವ ಉದಾಹರಣೆಗಳಿವೆ.

ಜತೆಗೆ, ಕೆಲವು ಮಾರ್ಗಗಳಲ್ಲಿ ಬಸ್‌ಗಳ ಸಂಖ್ಯೆಯನ್ನು ಖಾಸಗಿ ಕಂಪನಿಗಳು ಕಡಿಮೆ ಮಾಡಿವೆ. ಖಾಸಗಿ ಬಸ್‌ಗಳ ಪ್ರಯಾಣ ದರಗಳ ಮೇಲೆ ಸಾರಿಗೆ ಇಲಾಖೆ ನಿರಂತರವಾಗಿ ನಿಗಾವಹಿಸಬೇಕು. ವಾರಾಂತ್ಯಗಳಲ್ಲಿ ಊರಿಗೆ ತೆರಳುವುದೇ ಕಷ್ಟವಾಗುತ್ತಿದೆ' ಎಂದು ಪ್ರಯಾಣಿಕರು ತಿಳಿಸಿದ್ದಾರೆ.

'ಕೋವಿಡ್‌ನಿಂದ ಖಾಸಗಿ ಬಸ್‌ಗಳ ಮಾಲೀಕರು ಸಂಕಷ್ಟದಲ್ಲಿದ್ದಾರೆ. ಕೆಲವರು ಬಸ್‌ಗಳನ್ನು ಮಾರಿದ್ದಾರೆ. ಹೀಗಾಗಿ, ಬೇಡಿಕೆಗೆ ತಕ್ಕಂತೆ ಮತ್ತು ಪ್ರಯಾಣಿಕರ ಒತ್ತಡ ಹೆಚ್ಚಾದಾಗ ದರಗಳನ್ನು ಹೆಚ್ಚಿಸಲಾಗುತ್ತಿದೆ. ಹಲವು ದಿನಗಳ ದರಗಳನ್ನು ಸಹ ಕಡಿಮೆ ಮಾಡಲಾಗುತ್ತಿದೆ' ಎಂದು ಖಾಸಗಿ ಬಸ್‌ಗಳ ಕಂಪನಿಯೊಂದರ ವ್ಯವಸ್ಥಾಪಕರೊಬ್ಬರು ತಿಳಿಸಿದರು. ಪ್ರಯಾಣ ದರ ಹೆಚ್ಚಳದ ಬಗ್ಗೆ ಅಧಿಕಾರಿಗಳ ಪ್ರತಿಕ್ರಿಯೆ ಪಡೆಯಲು ಸಂಪರ್ಕಿಸಲಾಯಿತು. ಆದರೆ, ಅವರು ಕರೆ ಸ್ವೀಕರಿಸಲಿಲ್ಲ.

ಸಂಕ್ಷಿಪ್ತ ಸುದ್ದಿ

ಫಡಣವೀಸ್ ಹೇಳಿಕೆ ದಾಖಲಿಸಿದ ಪೊಲೀಸರು

ಮುಂಬೈ (ಪಿಟಿಐ): ಫೋನ್ ಕದ್ದಾಲಿಕೆ ಪ್ರಕರಣದಲ್ಲಿ ಮುಂಬೈನ ಬಿಕೆಸಿ ಸೈಬರ್ ಪೊಲೀಸ್‌ನ ಹಿರಿಯ ಅಧಿಕಾರಿಗಳ ತಂಡವು ಬಿಜೆಪಿ ಮುಖಂಡ, ಮಾಜಿ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರ ನಿವಾಸಕ್ಕೆ ತೆರಳಿ ಹೇಳಿಕೆ ದಾಖಲಿಸಿತು.

ಅವರ ನಿವಾಸದ ಬಳಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು. ಎಸಿಪಿ ನಿತಿನ್ ಜಾಧವ್ ಮತ್ತು ಇಬ್ಬರು ಇನ್‌ಸ್ಪೆಕ್ಟರ್ ಭೇಟಿ ನೀಡಿದ್ದರು ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಕಾರ್ಯಕರ್ತರ ಆಕ್ರೋಶ: ಫಡಣವೀಸ್ ಅವರಿಗೆ ನೋಟಿಸ್ ಜಾರಿ ಮಾಡಿದ್ದಕ್ಕೆ ಪಕ್ಷದ ಕಾರ್ಯಕರ್ತರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದು, ರಾಜ್ಯದ ವಿವಿಧೆಡೆ ನೋಟಿಸ್‌ನ ಪ್ರತಿ ಸುಟ್ಟುಹಾಕಿದರು. ಪೊಲೀಸರ ತಂಡ ನಿವಾಸಕ್ಕೆ ತೆರಳಿದ್ದಾಗಲೂ ವಿವಿಧ ಮುಖಂಡರು, ಕಾರ್ಯಕರ್ತರು ಸೇರಿದ್ದರು. ಪೊಲೀಸರ ಕ್ರಮ ವಿರೋಧಿಸಿ ಪುಣೆ, ಫಂಡರಾಪುರ್, ನಾಗಪುರ, ಚಂದ್ರಾಪುರ, ಸಾಂಗ್ಲಿಯಲ್ಲಿ ಪ್ರತಿಭಟನೆ ನಡೆದಿದೆ.

ಬೆಂಗಳೂರಿನಿಂದ ಹೊರಟಿದ್ದ ವಿಮಾನ ಪ್ರಯಾಣಿಕ ಸಾವು

ಭುವನೇಶ್ವರ (ಪಿಟಿಐ): ಬೆಂಗಳೂರಿನಿಂದ ಕೋಲ್ಕತ್ತಕ್ಕೆ ತೆರಳುತ್ತಿದ್ದ ಏರ್ ಏಷ್ಯಾ ವಿಮಾನದಲ್ಲಿ ಪ್ರಯಾಣಿಸುತ್ತಿದ್ದ ವ್ಯಕ್ತಿಯೊಬ್ಬರು ತೀವ್ರವಾಗಿ ಅಸ್ವಸ್ಥಗೊಂಡಿದ್ದರಿಂದ ಇಲ್ಲಿನ ಬಿಜು ಪಟ್ನಾಯಕ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಿಮಾನ ಭಾನುವಾರ ತುರ್ತು ಭೂಸ್ಪರ್ಶ ಮಾಡಿತು.

'ಪಶ್ಚಿಮ ಬಂಗಾಳದ ಮೆದಿನಾಪುರದ ನಿವಾಸಿ ಹಬೀಬುರ್ ಖಾನ್ (28) ಅವರನ್ನು ತಕ್ಷಣವೇ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ, ಆಸ್ಪತ್ರೆಗೆ ತಲುಪುವಷ್ಟರಲ್ಲೇ ಅವರು ಮೃತಪಟ್ಟಿದ್ದರು. ಸಾವಿನ ಕಾರಣವೇನೆಂದು ಇನ್ನೂ ತಿಳಿದಿಲ್ಲ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

'ಆಕಸ್ಮಿಕ ಕ್ಷಿಪಣಿ ದಾಳಿ: ಸಂಯಮ ತೋರಿದ್ದೇವೆ'

ಲಾಹೋರ್ (ಪಿಟಿಐ): 'ಭಾರತದ ಕ್ಷಿಪಣಿ ತನ್ನ ನೆಲದ ಮೇಲೆ ಬಿದ್ದ ಘಟನೆಗೆ ಪಾಕಿಸ್ತಾನ ಪ್ರತ್ಯುತ್ತರ ನೀಡಬಹುದಿತ್ತು. ಆದರೆ, ಆ ರೀತಿ ಮಾಡದೇ ಸಂಯಮ ತೋರಿದ್ದೇವೆ' ಎಂದು ಪ್ರಧಾನಿ ಇಮ್ರಾನ್ ಖಾನ್ ಭಾನುವಾರ ಹೇಳಿದ್ದಾರೆ.

ಪಂಜಾಬ್ ಪ್ರಾಂತ್ಯದ ಹಫೀಜಾಬಾದ್ ಜಿಲ್ಲೆಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಅವರು, 'ನಮ್ಮ ರಕ್ಷಣಾ ವ್ಯವಸ್ಥೆಯನ್ನು ಬಲಪಡಿಸಿಕೊಳ್ಳುವ ಮೂಲಕ ದೇಶವನ್ನು ಬಲಿಷ್ಠಗೊಳಿಸಬೇಕು' ಎಂದರು.

ಭಾರತ ಸೇನೆಯ ಶರವೇಗದ ಸೂಪರ್‌ಸಾನಿಕ್ ಕ್ಷಿಪಣಿಯು ಮಾರ್ಚ್ 9ರಂದು ಆಕಸ್ಮಿಕವಾಗಿ ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಮಿಯಾನ್ ಚುನ್ನು ನಗರದ ಸಮೀಪ ನೆಲಕ್ಕೆ ಅಪ್ಪಳಿಸಿತ್ತು.

ಮದ್ಯ ನಿಷೇಧಕ್ಕೆ ಒತ್ತಾಯಿಸಿ ಕಲ್ಲೆಸೆದ ಉಮಾಭಾರತಿ

ಭೋಪಾಲ್(ಪಿಟಿಐ): ತಮ್ಮದೇ ಪಕ್ಷದ ಆಡಳಿತವಿರುವ ಮಧ್ಯಪ್ರದೇಶದಲ್ಲಿ ಪೂರ್ತಿ ಮದ್ಯ ನಿಷೇಧಕ್ಕೆ ಒತ್ತಾಯಿಸಿ ಬಿಜೆಪಿಯ ಹಿರಿಯ ನಾಯಕಿ ಉಮಾ ಭಾರತಿ ಭಾನುವಾರ ಇಲ್ಲಿನ ಆಜಾದ್‌ನಗರದಲ್ಲಿ ಮದ್ಯದಂಗಡಿಯಲ್ಲಿದ್ದ ಮದ್ಯ ಬಾಟಲ್‌ಗಳಿಗೆ ಕಲ್ಲು ತೂರಿದ್ದಾರೆ. ಇನ್ನೊಂದು ವಾರದಲ್ಲಿ ಎಲ್ಲಾ ಮದ್ಯದಂಗಡಿಗಳನ್ನು ಬಂದ್ ಮಾಡಿಸಬೇಕು ಎಂದು ಸ್ಥಳೀಯ ಆಡಳಿತಕ್ಕೆ ಎಚ್ಚರಿಕೆ ನೀಡಿದ್ದಾರೆ. ತಮ್ಮ ಬೆಂಬಲಿಗರು ಮತ್ತು ಸ್ಥಳೀಯ ನಿವಾಸಿಗಳನ್ನು ಕರೆದೊಯ್ದು, ಮದ್ಯದ ಬಾಟಲಿಗಳನ್ನು ಒಡೆದು ಹಾಕಿರುವ ವಿಡಿಯೊವನ್ನು ಅವರು ಟ್ವೀಟರ್‌ನಲ್ಲಿ ಹಂಚಿಕೊಂಡಿದ್ದು, ಅದು ವೈರಲ್ ಆಗಿದೆ.

'ಸಾಹಿತ್ಯಕ್ಕೆ ವರ್ತಮಾನದ ಸಂವೇದನೆ ಅಗತ್ಯ'

ಡಾ.ಕೆ.ಎನ್. ಗಣೇಶಯ್ಯ ಅಭಿಮತ ● 'ಕಾನನ ಜನಾರ್ದನ' ಪುಸ್ತಕ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಹಿತ್ಯವು ಇತಿಹಾಸದ ಜತೆಗೆ ವರ್ತಮಾನದ ಸಂವೇದನೆಯನ್ನೂ ಒಳಗೊಂಡಿರಬೇಕು' ಎಂದು ಕೀಟ ತಜ್ಞ ಹಾಗೂ ಲೇಖಕ ಡಾ.ಕೆ.ಎನ್. ಗಣೇಶಯ್ಯ ತಿಳಿಸಿದರು.

'ಬುಕ್ ಬ್ರಹ್ಮ'ದ ಸಹಯೋಗದಲ್ಲಿ 'ಅಂಕಿತ ಪುಸ್ತಕ' ಪ್ರಕಾಶನ ನಗರದಲ್ಲಿ ಭಾನುವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ ಅವರ 'ಕಾನನ ಜನಾರ್ದನ' ಕಾದಂಬರಿ ಬಿಡುಗಡೆಯಾಯಿತು. ತಮ್ಮ ಕೃತಿಯ ಬಗ್ಗೆ ಮಾತನಾಡಿದ ಅವರು, 'ವಸ್ತು ಮತ್ತು ಹುಡುಕಾಟ ಸಾಹಿತ್ಯ ರಚನೆಯ ನಿರಂತರ ಚಟುವಟಿಕೆ. ಸಮೂಹ ಕುತೂಹಲ ದೊಂದಿಗೆ ನನ್ನ ಭಾವಕೋಶದಲ್ಲಿ ಸಾಹಿತ್ಯ ರೂಪುಗೊಳ್ಳುತ್ತದೆ. ಕಾದಂಬರಿ ಯಲ್ಲಿ ಪ್ರಸ್ತಾಪಿತವಾದ ಧರ್ಮ ಹಾಗೂ ರಾಜಕಾರಣ ಮಾತ್ರ ಚರಿತ್ರೆಯನ್ನು ಆಧರಿಸಿದೆ. ಇತಿಹಾಸದ ಕೌತುಕ ಸಂಗತಿಗಳನ್ನು ಕಥೆಯಾಗಿಸುವ ಹುಡುಕಾಟ ನನ್ನ ಮನೋಧರ್ಮ' ಎಂದರು.



'ಕಾನನ ಜನಾರ್ದನ' ಕಾದಂಬರಿಯನ್ನು ಮಲ್ಲೇಪುರಂ ಜಿ. ವೆಂಕಟೇಶ್ ಬಿಡುಗಡೆ ಮಾಡಿದರು. (ಎಡದಿಂದ ಬಲಕ್ಕೆ) ವಿಜ್ಞಾನ ಬರಹಗಾರ ನಾಗೇಶ ಹೆಗಡೆ, ಲೇಖಕ ಡಾ.ಕೆ.ಎನ್. ಗಣೇಶಯ್ಯ ಹಾಗೂ ಬೈರಮಂಗಲ ರಾಮೇಗೌಡ ಇದ್ದಾರೆ.

ಬಹುಭಾಷಾ ವಿದ್ವಾಂಸ ಮಲ್ಲೇಪುರಂ ಜಿ. ವೆಂಕಟೇಶ್, 'ಮಾನವ, ಆಹಾರ, ಪರ್ಯಟನೆ, ವಲಸೆ, ದೈವತೆ ಸೇರಿದಂತೆ ವಿವಿಧ ಸಂಗತಿಗಳಿಗೆ ಸಂಬಂಧಿಸಿದ ಚರಿತ್ರೆಗಳನ್ನು ಕಾದಂಬರಿಯಲ್ಲಿ ಹೇಳಲಾಗಿದೆ. ಕಾದಂಬರಿಕಾರ ಯಾರ ಪರವಾಗಿಯೂ ಇರುವುದಿಲ್ಲ. ಇರುವುದನ್ನು ಪಾಕಮಾಡಿ, ರಸಪೂರ್ಣವಾಗಿ ನೀಡುವುದು ಕೆಲಸವಾಗಿರುತ್ತದೆ. ಗಣೇಶಯ್ಯ ಅವರು ಅದನ್ನೇ ಮಾಡಿದ್ದಾರೆ. ಚರಿತ್ರೆಯ ವಾಸ್ತವವನ್ನೂ ಕಾದಂಬರಿಯಲ್ಲಿ ಹೇಳಲಾಗಿದೆ. ದೇಶದಲ್ಲಿನ ಸಾಮಾಜಿಕ ಜೀವನದಲ್ಲಿ 3 ಸಾವಿರ ವರ್ಷಗಳ ಅವಧಿಯಲ್ಲಿ ಸಾಕಷ್ಟು ಬದಲಾವಣೆ ಕಾಣಬಹುದು. ತಂತ್ರಜ್ಞಾನದ ಬದಲಾವಣೆಯಂತೂ ಊಹೆಗೆ ನಿಲುಕದಷ್ಟು ಆಗಿದೆ' ಎಂದು ಹೇಳಿದರು.

ಪುಸ್ತಕ ಪರಿಚಯ

ಪುಸ್ತಕ: 'ಕಾನನ ಜನಾರ್ದನ'
ಲೇಖಕರು: ಡಾ.ಕೆ.ಎನ್. ಗಣೇಶಯ್ಯ
ಪುಟಗಳು: ₹ 400
ಬೆಲೆ: ₹ 395
ಪ್ರಕಾಶನ: ಅಂಕಿತ ಪುಸ್ತಕ

ಸಾಹಿತಿ ಬೈರಮಂಗಲ ರಾಮೇಗೌಡ, 'ಕಾದಂಬರಿಯು ಐತಿಹಾಸಿಕ ಸಂಗತಿಗಳ ಕುರಿತು ಕುತೂಹಲ ಕೆರಳಿಸುತ್ತದೆ. ಕೌತುಕ-ವಿಸ್ಮಯಗಳನ್ನು ಸಂಭ್ರಮಿಸುವಂತೆ ಮಾಡುತ್ತದೆ. ವಿಚಾರ ಪ್ರಚೋದಕವೂ ಆಗಿದೆ. ಇಂತಹ ಕಾದಂಬರಿಗಳನ್ನು ವಿಮರ್ಶಿಸಲು ಸಾಂಪ್ರದಾಯಿಕ ಮಾನದಂಡಗಳು ಸಾಕಾಗಲಾರವು. ಧರ್ಮಕಾರಣ-ರಾಜಕಾರಣಗಳ ಅಪವಿತ್ರ ಮೈತ್ರಿ ಹೆಚ್ಚುತ್ತಿರುವ ಇಂದಿನ ಕಾಲಘಟ್ಟದಲ್ಲಿ ಈ ಕಾದಂಬರಿಯ ವಸ್ತು ವಿಮರ್ಶೆಗೆ ಒಳಪಡಬೇಕು' ಎಂದು ತಿಳಿಸಿದರು.

ಮಹಿಳೆಯರಿಗೆ ಸನ್ಮಾನ

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ವಕೀಲ ವಾಹಿನಿ ದ್ವಿಭಾಷಾ ಮಾಸ ಪತ್ರಿಕೆಯ ಸಹಯೋಗದಲ್ಲಿ ಸೌಂದರ್ಯ ಕಾನೂನು ಕಾಲೇಜು ನಗರದಲ್ಲಿ ಆಯೋಜಿಸಿದ ಕಾರ್ಯಕ್ರಮದಲ್ಲಿ ಸಮಾಜ ಸೇವಕಿ ಕಾತ್ಯಾಯಿನಿ ಚಾಮರಾಜ್, ಹೈಕೋರ್ಟ್ ವಕೀಲೆ ಲಕ್ಷ್ಮಿ ಅಯ್ಯಂಗಾರ್ ಹಾಗೂ ಶಿಕ್ಷಣ ತಜ್ಞೆ ಸಮೀರಾ ಫೆರ್ನಾಂಡಿಸ್ ಅವರನ್ನು ಸನ್ಮಾನಿಸಲಾಯಿತು. ಸೌಂದರ್ಯ ಶಿಕ್ಷಣ ಸಂಸ್ಥೆಗಳ ಸಮೂಹದ ಮುಖ್ಯಕಾರ್ಯನಿರ್ವಹಣಾಧಿಕಾರಿ ಕೀರ್ತನ್ ಕುಮಾರ್ ಎಂ., ವಕೀಲ ವಾಹಿನಿ ಸಂಪಾದಕ ಎಸ್.ಎನ್. ಪ್ರಶಾಂತ್ ಚಂದ್ರ, ವಕೀಲ ವಾಹಿನಿಯ ಪ್ರಕಾಶಕ ಡಿ.ಎಂ. ಹೆಗಡೆ, ಸೌಂದರ್ಯ ಶಿಕ್ಷಣ ಸಂಸ್ಥೆಗಳ ಸಮೂಹ ನಿರ್ದೇಶಕ ಕೆ. ಮಥಾಯಿ, ಕಾಲೇಜಿನ ಪ್ರಾಂಶುಪಾಲರಾದ ಸುರೇಶ್ ಸಿ., ಮಹೇಶ್ ಬಿ.ಪಿ. ಇದ್ದರು.

ಎಸ್.ಜಿ. ಸಿದ್ಧರಾಮಯ್ಯ ಬೇಸರ ● 'ಭೂಮ್ತಾಯಿ' ಪುಸ್ತಕ ಬಿಡುಗಡೆ

'ಹಿಟ್ಲರ್ ಪ್ರಜ್ಞೆಯಲ್ಲಿ ಮುಳುಗಿವೆ ಎಡ, ಬಲ ಪಂಥ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಸ್ತುತ ರಾಜಕಾರಣದಲ್ಲಿ ಪ್ರಾಮಾಣಿಕತೆ ಮರೀಚಿಕೆ ಆಗಿದೆ. ಎಡ ಮತ್ತು ಬಲ ಪಂಥಗಳು ಹಿಟ್ಲರ್ ಪ್ರಜ್ಞೆಯಲ್ಲಿ ಮುಳುಗಿದ್ದು, ಜಗತ್ತನ್ನು ಯುದ್ಧಕೋರತನ ಮೂಲಕ ನಾಶ ಮಾಡಲು ಹವಣಿಸುತ್ತಿವೆ' ಎಂದು ಸಾಹಿತಿ ಪ್ರೊ.ಎಸ್.ಜಿ. ಸಿದ್ಧರಾಮಯ್ಯ ಬೇಸರ ವ್ಯಕ್ತಪಡಿಸಿದರು.

ಸಾಹಿತ್ಯ ಸಂಗಮ ಟ್ರಸ್ಟ್ ಹಾಗೂ ಜಾಣಗೆರೆ ಪತ್ರಿಕೆ ಪ್ರಕಾಶನ ಜಂಟಿಯಾಗಿ ನಗರದಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಜಾಣಗೆರೆ ವೆಂಕಟರಾಮಯ್ಯ ಅವರ 'ಭೂಮ್ತಾಯಿ' ಪುಸ್ತಕವನ್ನು ಬಿಡುಗಡೆಮಾಡಿ, ಮಾತನಾಡಿದರು. 'ಇಡೀ ದೇಶ ಸುಳ್ಳಿನ ಭ್ರಮೆಯೊಳಗೆ ಕೊಚ್ಚಿಹೋಗುತ್ತಿದೆ. ಸುಳ್ಳಿನ ಸರಕನ್ನು ಖರೀದಿಸಿದ ಪ್ರಜೆಗಳು ಬಲಿಪಶುಗಳಾಗಿದ್ದಾರೆ. ಎಲ್ಲ ರಾಜಕಾರಣಿಗಳಿಗೆ ಭ್ರಷ್ಟಾಚಾರ, ಭಂಜಕತ್ವ, ದುರಾಸೆಗಳು ಸಂಪತ್ತಾಗಿವೆ. ಇಂದಿನ ಯುವಪಡೆ ಮನಸ್ಥಿತಿ ನೋಡಿದರೆ ದೇಶವನ್ನು ಎಲ್ಲಿಗೆ ಕೊಂಡೊಯ್ಯುತ್ತಾರೆ ಎಂಬ ಆತಂಕ ಕಾಡುತ್ತಿದೆ' ಎಂದು ಹೇಳಿದರು.



ಪ್ರೊ.ಎಸ್.ಜಿ. ಸಿದ್ಧರಾಮಯ್ಯ ಅವರು 'ಭೂಮ್ತಾಯಿ' ಪುಸ್ತಕ ಬಿಡುಗಡೆ ಮಾಡಿದರು. ಪತ್ರಕರ್ತ ಪ್ರೇಮ್‌ಕುಮಾರ್ ಹರಿಯಬ್ಬೆ, ಪ್ರಕಾಶಕ ಎಸ್. ನಾಗಭೂಷಣ, ಲೇಖಕ ಜಾಣಗೆರೆ ವೆಂಕಟರಾಮಯ್ಯ, ಪತ್ರಕರ್ತ ಬಿ.ಎಂ. ಹನೀಫ್, ಕೆ.ಈ. ರಾಧಾಕೃಷ್ಣ ಹಾಗೂ ವಿಮರ್ಶಕ ಪ್ರೊ.ಎಚ್. ದಂಡಪ್ಪ ಇದ್ದರು.

'ಅಧಿಕಾರ ದಾಹಕ್ಕಾಗಿ ಹಣ, ಹೆಂಡ ಮತ್ತು ಜಾತಿಯ ವಿಷಬೀಜ ಬಿತ್ತುತ್ತ ಪ್ರಾಮಾಣಿಕತೆ ಮಾರಿಕೊಂಡ ರಾಜಕಾರಣಿಗಳು ಇರುವವರೆಗೂ ಪ್ರಜಾಪ್ರಭುತ್ವಕ್ಕೆ ನ್ಯಾಯ ಸಿಗುವುದಿಲ್ಲ. ಕೋಮು ವೈರಾಣುವನ್ನು ಕೊರೊನಾ ವೈರಾಣುವಿನ ಹಾಗೆ ಬಿತ್ತಲಾಗುತ್ತಿದೆ. ಕೋಮುದ್ವೇಷದಲ್ಲಿ ದೇಶವೇ ಹೊತ್ತಿ ಉರಿಯುತ್ತಿರುವ ಅರಿವು ನಮಗಿದ್ದರೂ, ಸಾಹಿತ್ಯ, ಕಲೆ, ಮಾಧ್ಯಮಗಳು ಸೇರಿ ಯಾವುದೇ ವಲಯಗಳಲ್ಲಿ ಕ್ರಿಯಾಶೀಲಗೊಳಿಸಲು ಸಾಧ್ಯವಾಗುತ್ತಿಲ್ಲ' ಎಂದರು.

ಚಿಂತಕ ಪ್ರೊ.ಕೆ.ಈ. ರಾಧಾಕೃಷ್ಣ, 'ಸಾಹಿತ್ಯ ವಲಯವು ರಾಜಕಾರಣದಂತೆ ಕೆಡಬಾರದು. ಅದು ಹೊಸ ದಿಕ್ಕಿನಲ್ಲಿ ಸಾಗಬೇಕು. ಸಾಹಿತ್ಯಲೋಕ ಜವಾಬ್ದಾರಿಯಿಂದ ವರ್ತಿಸಬೇಕು. ಎಡ–ಬಲ ಪಂಥಗಳ ನಡುವೆ ಕಚ್ಚಾಟ ಸರಿಯಲ್ಲ. ಸಾಹಿತ್ಯವು ಸಮಾಜದಲ್ಲಿ ಶಾಂತಿ, ಸಹಬಾಳ್ವೆ ಮೂಡಿಸುವ ಕೆಲಸ ಮಾಡಬೇಕು' ಎಂದು ಹೇಳಿದರು.

ಪುಸ್ತಕ ಪರಿಚಯ

ಪುಸ್ತಕ: 'ಭೂಮ್ತಾಯ
ಲೇಖಕರು: ಜಾಣಗೆರೆ ವೆಂಕಟರಾಮಯ್ಯ
ಪುಟಗಳು: 360
ಬೆಲೆ: ₹ 300
ಪ್ರಕಾಶನ: ಶಶಿ ಪಬ್ಲಿಕೇಷನ್ಸ್

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ

'ಕನ್ನಡ ಭಾಷೆಯ ಬಗ್ಗೆ ಅಭಿಮಾನ ಹೊಂದಬೇಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಗತ್ತಿನ ಮೂರು ಪರಿಪೂರ್ಣ ಭಾಷೆಗಳಲ್ಲಿ ಕನ್ನಡವೂ ಒಂದಾಗಿದೆ. ನಮ್ಮ ಭಾಷೆಯ ಬಗೆಗೆ ಹೆಮ್ಮೆ, ಅಭಿಮಾನ ಇರಬೇಕು' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಮಹೇಶ ಜೋಶಿ ತಿಳಿಸಿದರು.

ಕಾರ್ಪೋರೇಟ್ ಕನ್ನಡಿಗರು ಸಂಘ ನಗರದಲ್ಲಿ ಹಮ್ಮಿಕೊಂಡ 'ಕರುನಾಡ ಬೆಳಕು' ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು. 'ನಾಡಿನ ಹೊರಗಡೆಯೂ ಕನ್ನಡದ ಕಂಪನ್ನು ಹರಡುವ ಕೆಲಸ ಆಗಬೇಕು. ಕನ್ನಡಿಗರು ಇರುವ ಕಡೆಯಲೆಲ್ಲ ತೆರಳಿ, ಕಸಾಪ ಸದಸ್ಯತ್ವ ನೀಡಲಾಗುವುದು. ಹಾವೇರಿಯಲ್ಲಿ ನಡೆಯಲಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸರ್ಕಾರವು ಬಜೆಟ್‌ನಲ್ಲಿ ₹ 20 ಕೋಟಿ ಅನುದಾನ ಘೋಷಿಸಿದೆ. ಹೀಗಾಗಿ, ಅದ್ದೂರಿಯಾಗಿ ಸಮ್ಮೇಳನ ಮಾಡಲಾಗುವುದು' ಎಂದರು.

ಕಲಾವಿದೆ ವತ್ಸಲಾ ಮೋಹನ್, 'ಪ್ರಪಂಚದ ಐದು ವೈಜ್ಞಾನಿಕ ಭಾಷೆಗಳಲ್ಲಿ ಕನ್ನಡವೂ ಒಂದಾಗಿದೆ. ಈ ಭಾಷೆಯನ್ನು ಕಲಿತರೆ ಪ್ರಪಂಚದ ಯಾವುದೇ ಭಾಷೆಯನ್ನು ಕಲಿಯಬಹುದು. ನಮ್ಮ ಭಾಷೆ ಬಗ್ಗೆ ನಾವು ಕೆಲಸ ಮಾಡುವ ಜಾಗದಲ್ಲಿ ಅಭಿಮಾನ ಇಟ್ಟುಕೊಳ್ಳಬೇಕು. ಕನ್ನಡ ಬರದವರಿಗೆ ಕನ್ನಡ ಕಲಿಸಬೇಕು' ಎಂದು ಹೇಳಿದರು.

'ಕರುನಾಡ ಬೆಳಕು' ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ನೀಡ್ ಬೇಸ್ ಇಂಡಿಯಾ ಸರ್ಕಾರೇತರ ಸಂಸ್ಥೆಯ ಸದಸ್ಯರು ನೃತ್ಯ ಪ್ರದರ್ಶಿಸಿದರು.

ನಿರ್ಮಾಪಕ ಅನೂಪ್ ಗೌಡ, 'ಚೆನ್ನೈ, ಮುಂಬೈ ಸೇರಿದಂತೆ ವಿವಿಧ ಮಹಾನಗರಗಳಿಗೆ ತೆರಳಿದಾಗ ಅಲ್ಲಿನ ಭಾಷೆಯಲ್ಲಿಯೇ ಮಾತನಾಡಲು ನಾವು ಪ್ರಯತ್ನಿಸುತ್ತೇವೆ. ಅಲ್ಲಿಯವರು ಇಲ್ಲಿಗೆ ಬಂದಾಗ ತಮ್ಮ ಭಾಷೆಯಲ್ಲಿಯೇ ವ್ಯವಹರಿಸುತ್ತಾರೆ. ನಾವು ನಮ್ಮ ಭಾಷೆಯನ್ನು ಮರೆತು ಸಂವಹನ ನಡೆಸುತ್ತೇವೆ. ವಿವಿಧ ರಾಜ್ಯದವರು ಇಲ್ಲಿಗೆ ಬಂದಾಗ ಕನ್ನಡ ಕಲಿಸುವ ಕೆಲಸವಾಗಬೇಕು' ಎಂದರು.

ಮಹದೇಶ್ವರ ಬೆಟ್ಟದ ರಸ್ತೆಯಲ್ಲಿ 7 ಟನ್ ಪ್ಲಾಸ್ಟಿಕ್ ಕಸ ಸಂಗ್ರಹ

ಪ್ರಜಾವಾಣಿ ವಾರ್ತೆ

ಹನೂರು: ಮಲೆಮಹದೇಶ್ವರ ವನ್ಯಧಾಮ ಹಾಗೂ ವಿವಿಧ ಸ್ವಯಂ ಸೇವಾ ಸಂಸ್ಥೆಯ ಕಾರ್ಯಕರ್ತರು ಭಾನುವಾರ ಮಲೆಮಹದೇಶ್ವರ ಬೆಟ್ಟದ ಮುಖ್ಯರಸ್ತೆಯಲ್ಲಿ ಪ್ರಯಾಣಿಕರು ಬಿಸಾಡಿ ಹೋಗಿದ್ದ 7 ಟನ್ ಪ್ಲಾಸ್ಟಿಕ್ ಕಸ ಸಂಗ್ರಹಿಸಿದರು.

ಬೆಂಗಳೂರು, ಮೈಸೂರು, ಕನಕಪುರ ಮುಂತಾದ ಕಡೆಗಳಿಂದ 16 ಸ್ವಯಂ ಸೇವಾ ಸಂಸ್ಥೆಗಳಿಂದ 350 ಸ್ವಯಂ ಸೇವಕರು, ರಾಮಾಪುರ ವನ್ಯಜೀವಿ ವಲಯದ ಸಂತೇಕಾಣೆ ನರ್ಸರಿಯಿಂದ ಮಹದೇಶ್ವರ ಬೆಟ್ಟದವರೆಗೆ ರಸ್ತೆ ಬದಿಯಲ್ಲಿ ಬಿದ್ದಿದ್ದ ಪ್ಲಾಸ್ಟಿಕ್ ವಸ್ತುಗಳನ್ನು ತೆರವುಗೊಳಿಸಿದರು.

ಇದಕ್ಕೂ ಮುನ್ನ ಸಂತೇಕಾಣೆ ನರ್ಸರಿಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಮಲೆಮಹದೇಶ್ವರ ವನ್ಯಧಾಮದ ಉಪ ಅರಣ್ಯ ಸಂರಕ್ಷಣಾಧಿಕಾರಿ ವಿ.ಏಡುಕುಂಡಲು, 'ಪ್ಲಾಸ್ಟಿಕ್ ವಸ್ತುಗಳ ಬಳಕೆಯಿಂದ ಮಾನವನಿಗೆ, ವನ್ಯ ಪ್ರಾಣಿಗಳಿಗೆ, ಪಕ್ಷಿಗಳಿಗೆ ತುಂಬಾ ಅನಾನುಕೂಲವಾಗಲಿದೆ. ಹೀಗಾಗಿ, ಪ್ಲಾಸ್ಟಿಕ್ ಬದಲಿಗೆ ಪರ್ಯಾಯ ವಸ್ತುಗಳನ್ನು ಬಳಸಬೇಕು' ಎಂದು ಸೂಚಿಸಿದರು.

ಮಹದೇಶ್ವರ ಬೆಟ್ಟದ ರಸ್ತೆಯಲ್ಲಿ ಭಾನುವಾರ ಸ್ವಯಂ ಸೇವಕರು ಸಂಗ್ರಹಿಸಿರುವ ಪ್ಲಾಸ್ಟಿಕ್ ಕಸದ ರಾಶಿ

ಮಹಿಳೆಯರಿಗೆ ಲೈಂಗಿಕ ಕಿರುಕುಳ: ಬಂಧನ

ಭೋಪಾಲ್ (ಪಿಟಿಐ): ಮಧ್ಯಪ್ರದೇಶದ ಅಲಿರಾಜ್‌ಪುರ ಜಿಲ್ಲೆಯ ವಲ್ಲಪುರದಲ್ಲಿ ಮಹಿಳೆಯರಿಗೆ ಯುವಕರ ಗುಂಪೊಂದು ಲೈಂಗಿಕ ಕಿರುಕುಳ ನೀಡಿದ್ದು ಹಾಗೂ ಈ ದುಷ್ಕೃತ್ಯಗಳನ್ನು ಕೆಲವರು ಚಿತ್ರೀಕರಿಸಿ, ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದಾರೆ.

ಈ ಸಂಬಂಧ ಬುಡಕಟ್ಟು ಜನಾಂಗಕ್ಕೆ ಸೇರಿದ ಮೂವರನ್ನು ಬಂಧಿಸಿರುವ ಪೊಲೀಸರು, ಇಬ್ಬರನ್ನು ವಶಕ್ಕೆ ತೆಗೆದುಕೊಂಡಿದ್ದಾರೆ.

ಬುಡಕಟ್ಟು ಜನರು ಆಚರಿಸುವ 'ಭಗೋರಿಯಾ' ಉತ್ಸವದ ಸಂದರ್ಭದಲ್ಲಿ ಈ ಘಟನೆ ನಡೆದಿದೆ. ಜನರ ಗುಂಪಿನಲ್ಲಿದ್ದ ಕೆಲವರು ಮಹಿಳೆಯರೊಂದಿಗೆ ಅನುಚಿತವಾಗಿ ವರ್ತಿಸುತ್ತಿದ್ದರು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮನೋಜ್ ಸಿಂಗ್ ತಿಳಿಸಿದ್ದಾರೆ.

'ಮಹಿಳೆಯರನ್ನು ನೂಕುವುದು, ಅಪ್ಪಿಕೊಳ್ಳಲು ಯತ್ನಿಸುತ್ತಿದ್ದ ಯುವಕರು, ಕೆಲಮಹಿಳೆಯರಿಗೆಮುತ್ತಿಕ್ಕಲುಮುಂದಾಗಿದ್ದ ದೃಶ್ಯಗಳು ವಿಡಿಯೊದಲ್ಲಿ ಸೆರೆಯಾಗಿವೆ' ಎಂದೂ ಅವರು ಹೇಳಿದ್ದಾರೆ.

27 ಕಲಾವಿದರಿಗೆ ವಾರ್ಷಿಕ ಪ್ರಶಸ್ತಿ

ಜಾನಪದ ಲೋಕೋತ್ಸವ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ರಾಮನಗರ: ಇಲ್ಲಿನ ಜಾನಪದ ಲೋಕದಲ್ಲಿ ಭಾನುವಾರ ಸಂಜೆ ನಾಡಿನ 27 ಕಲಾವಿದರಿಗೆ ಕರ್ನಾಟಕ ಜಾನಪದ ಪರಿಷತ್ತಿನ 2022ರ ವಾರ್ಷಿಕ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಜಾನಪದ ಅಕಾಡೆಮಿಯಿಂದ ನೀಡಲಾಗುವ ₹25 ಸಾವಿರ ನಗದು ಸಹಿತ ವಾರ್ಷಿಕ ಪ್ರಶಸ್ತಿಗಳನ್ನು ಯಕ್ಷಗಾನ ಕಲಾವಿದ ಕೆರೆಮನೆ ಶಿವಾನಂದ ಹೆಗಡೆ (ಎಚ್.ಎಲ್. ನಾಗೇಗೌಡ ಜಾನಪದ ಲೋಕಶ್ರೀ ಪ್ರಶಸ್ತಿ), ಜಾನಪದ ವಿದ್ವಾಂಸ ಬಿ.ಎ. ವಿವೇಕ ರೈ (ಜೀ.ಶಂ.ಪರಮಶಿವಯ್ಯ ಜಾನಪದ ಪ್ರಶಸ್ತಿ),₹15 ಸಾವಿರ ನಗದು ಸಹಿತ ಪ್ರಶಸ್ತಿಯನ್ನು ರಾಮನಗರದ ಜಾನಪದ ವಿದ್ವಾಂಸ ಎಂ.ಬೈರೇಗೌಡ (ಜಿ.ನಾರಾಯಣ ಜಾನಪದ ಲೋಕ ಪ್ರಶಸ್ತಿ) ಸ್ವೀಕರಿಸಿದರು.

ತುಮಕೂರಿನ ಜನಪದ ಹಾಡುಗಾರ್ತಿ ಪುಟ್ಟಲಕ್ಕಮ್ಮ (ಲಕ್ಷ್ಮಮ್ಮ ನಾಗೇಗೌಡ ಪ್ರಶಸ್ತಿ), ಚಾಮರಾಜನಗರದ ಹೊನ್ನೂರು ಗೌರಮ್ಮ (ಸೋಬಾನೆ ಚಿಕ್ಕಮ್ಮ ಪ್ರಶಸ್ತಿ), ಕೊಪ್ಪಳದ ಬಯಲಾಟ ಕಲಾವಿದ ಭೀಮಪ್ಪ ಯಲ್ಲಪ್ಪ ಪೂಜಾರ (ದೊಡ್ಡಮನೆ ಪ್ರಶಸ್ತಿ), ಧಾರವಾಡದ ಕಣಿ ವಾದನ ಕಲಾವಿದ ಸುಭಾಷ್ ಚಂದ್ರ ಹೊಸಮನಿ (ದೊಡ್ಡಮನೆ ಲಿಂಗೇಗೌಡ ಪ್ರಶಸ್ತಿ), ರಾಮನಗರ ಜಿಲ್ಲೆಯವರಾದ ನೀಲಗಾರ ಕಲಾವಿದ ಮಾಧು ನಾಯ್ಕ, ಸೋಬಾನೆ ಕಲಾವಿದೆ ಕೆಂಪಮ್ಮ, ಜನಪದ ಗಾಯಕ ಚಿಕ್ಕಮರೀಗೌಡ ಪ್ರಶಸ್ತಿ ಸ್ವೀಕರಿಸಿದರು.

ಶಿವಮೊಗ್ಗದ ಡೊಳ್ಳು ಕಲಾವಿದ ದೊಂಬರ ಹುಚ್ಚಪ್ಪ ಕೊಟ್ಟ, ಮಂಡ್ಯದ ಜನಪದ ಗಾಯಕ ವಿ .ಈ.ಲೋಕೇಶ್, ಕಲಬುರ್ಗಿ ಜಿಲ್ಲೆಯ ತತ್ವಪದ ಕಲಾವಿದೆ ಶರಣಮ್ಮ ಪಿ.ಸಜ್ಜನ, ಚಿಕ್ಕಮಗಳೂರು ಜಿಲ್ಲೆಯ ಅಲೆಮಾರಿ ಸಮುದಾಯದ ಗಾಯಕಿಯರಾದ ನ್ಯೂಸ್‌ಜೀ ಮತ್ತು ಚಿಟ್ಟಿನ್‌ಬಿ, ಉತ್ತರ ಕನ್ನಡ ಜಿಲ್ಲೆಯ ಜನಪದ ವೈದ್ಯ ಹನುಮಂತಗೌಡ ಬೆಳಂಬಾರ, ದಕ್ಷಿಣ ಕನ್ನಡ ಜಿಲ್ಲೆಯ ದೈವಪಾತ್ರಿ ಕಲಾವಿದ ಭೋಜ ಪೂಜಾರಿ, ಗದಗದ ಲಂಬಾಣಿ ಕಸೂತಿ ಕಲಾವಿದೆ ಸೋಮವ್ವ ಲಮಾಣಿ,- ಬಳ್ಳಾರಿಯ ಬಯಲಾಟ ಪ್ರಸಾದನ ಕಲಾವಿದ ಕೊಟ್ಗೆ ಹಾಲೇಶಪ್ಪ, ಮಂಡ್ಯದ ಪೂಜಾ ಕುಣಿತ ಕಲಾವಿದ ಸಿದ್ದೇಗೌಡ, ಕೋಲಾಟ ಕಲಾವಿದ ಹೊನ್ನಯ್ಯ, ಗದಗದ ಜೋಗತಿ ನೃತ್ಯ ಕಲಾವಿದ ಶಂಕರಪ್ಪ ಸಂಕಣ್ಣವರ, ಉತ್ತರ ಕನ್ನಡ ಜಿಲ್ಲೆಯ ಜನಪದ ಹಾಡುಗಾರ್ತಿ ಕೇಶಿ ಗೋವಿಂದಗೌಡ, ಯಾದಗಿರಿಯ ಜನಪದ ಗಾಯಕ ನೀಲಪ್ಪ ಚೌದರಿ, ಹಾಸನದ ರಂಗದ ಕುಣಿತ ಕಲಾವಿದ ಬಿ.ಟಿ. ಮಾನವ, ರಾಯಚೂರಿನ ಹಗಲುವೇಷ ಕಲಾವಿದ ಜಂಬಣ್ಣ ಶಂಕ್ರಪ್ಪ ಹಸಮಕಲ್, ರಾಮನಗರದ ಪಟ ಕುಣಿತ ಕಲಾವಿದ ರಂಗಯ್ಯ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಜಾನಪದ ವಿದ್ವಾಂಸ ಬಿ.ಎ. ವಿವೇಕ ರೈ ಅವರಿಗೆ ಜೀ.ಶಂ.ಪರಮಶಿವಯ್ಯ ಜಾನಪದ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಅ. ದೇವೇಗೌಡ, ಹರೀಶ್, ಅನ್ನದಾನೇಶ್ವರ ಸ್ವಾಮೀಜಿ, ಅನಿತಾ ಕುಮಾರಸ್ವಾಮಿ, ತಿಮ್ಮೇಗೌಡ, ಆದಿತ್ಯ ನಂಜರಾಜ್ ಹಾಗೂ ಕೆರೆಮನೆ ಶಿವಾನಂದ ಹೆಗಡೆ ಇದ್ದರು

ನಂಬರ್ ಪ್ಲೇಟ್ ವಿಳಂಬ: ರೋಸಿರುವ ಜನ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ವಾಹನಗಳ ಕಳವು ಮತ್ತು ದುರುಪಯೋಗ ತಡೆಯಲು ಎಲ್ಲ ವಾಹನಗಳಿಗೂ ಹೈ ಸೆಕ್ಯೂರಿಟಿ ನಂಬರ್ ಪ್ಲೇಟ್ (ಎಚ್‌ಎಸ್‌ಆರ್‌ಪಿ) ಅಳವಡಿಕೆ ಮಾಡುವ ಪ್ರಕ್ರಿಯೆ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳ್ಳದೇ ಹೊಸ ವಾಹನ ಖರೀದಿ ಮಾಡುವ ಜನ ರೋಸಿ ಹೋಗಿದ್ದಾರೆ. ಹಳೇ ವಾಹನಗಳ ನಂಬರ್ ಪ್ಲೇಟ್ ಬದಲಾವಣೆ ಪ್ರಕ್ರಿಯೆ ಇನ್ನೂ ಆರಂಭವೇ ಆಗಿಲ್ಲ.

ಎಲ್ಲ ವಾಹನಗಳಿಗೂ ಹೈ ಸೆಕ್ಯೂರಿಟಿ ನಂಬರ್ ಪ್ಲೇಟ್ ಅಳವಡಿಕೆಯನ್ನು ಕೇಂದ್ರ ಸರ್ಕಾರ ಕಡ್ಡಾಯಗೊಳಿಸಿದೆ. 2019 ರ ಮಾರ್ಚ್ 31ರ ಬಳಿಕ ರಸ್ತೆಗೆ ಇಳಿಯುತ್ತಿರುವ ಹೊಸ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ಸಂಖ್ಯೆಯನ್ನು ಆರಂಭದಲ್ಲೇ ಅಳವಡಿಸಲಾಗುತ್ತಿದೆ. ಹಾಲೊಗ್ರಾಂ ಜೊತೆಗೆ ವಿಶಿಷ್ಟ ಗುರುತಿನ ಸಂಖ್ಯೆಯನ್ನು ಸಾರಿಗೆ ಇಲಾಖೆ ನೀಡುತ್ತದೆ. ಎಂಜಿನ್ ಸಂಖ್ಯೆ, ಚಾಸಿ ಸಂಖ್ಯೆ ಸೇರಿ ಎಲ್ಲ ಮಾಹಿತಿ ಒಳಗೊಂಡಿರುತ್ತದೆ.

ಈ ನಂಬರ್ ಪ್ಲೇಟ್ ಸಿದ್ಧಪಡಿಸಿ ಕೊಡುವ ಜವಾಬ್ದಾರಿಯನ್ನು ರಾಜ್ಯದಲ್ಲಿ 5 ಕಂಪನಿಗಳು ಪಡೆದುಕೊಂಡಿವೆ. ವಾಹನಗಳನ್ನು ಮಾರಾಟ ಮಾಡುವ ಡೀಲರ್ ಏಜೆನ್ಸಿಗಳು ಹೋಮೋಲೋಗೇಷನ್ ಪೋರ್ಟಲ್‌ನಲ್ಲಿ ವಾಹನಕ್ಕೆ ಸಂಬಂಧಿಸಿದ ಮಾಹಿತಿಯನ್ನು ಅಪ್‌ಲೋಡ್ ಮಾಡುತ್ತವೆ. ಅದಕ್ಕೆ ಸಾರಿಗೆ ಇಲಾಖೆ ಅಧಿಕಾರಿಗಳು ಅನುಮೋದನೆ ನೀಡುತ್ತಾರೆ. ನಂಬರ್ ಪ್ಲೇಟ್ ಸಿದ್ಧಪಡಿಸುವ ಕಂಪನಿಗೆ ಆ ಮಾಹಿತಿ ರವಾನೆಯಾಗುತ್ತದೆ. ನಂಬರ್ ಪ್ಲೇಟ್ ಸಿದ್ಧಪಡಿಸಿ ತಂದು ಕೊಡುವುದು ಆ ಕಂಪನಿಯ ಜವಾಬ್ದಾರಿ.

ಮಾರ್ಗಸೂಚಿ ಪ್ರಕಾರ ವಾಹನ ಖರೀದಿಸಲು ಬರುವ ಗ್ರಾಹಕರು ಹಣ ಪಾವತಿಸಿದ 6 ಗಂಟೆಗಳಲ್ಲೇ ಈ ಎಲ್ಲ ಪ್ರಕ್ರಿಯೆಗಳು ಪೂರ್ಣಗೊಳ್ಳಬೇಕು. ಆದರೆ, ನಂಬರ್ ಪ್ಲೇಟ್‌ಗಾಗಿ ವಾರಗಟ್ಟಲೆ, ಕೆಲವೆಡೆ ತಿಂಗಳು ಕಾಯಬೇಕಾದ ಸ್ಥಿತಿ ಇದೆ. ಒಮ್ಮೊಮ್ಮೆ ಡೀಲರ್ ಏಜೆನ್ಸಿಗಳಿಂದ, ಕೆಲವೊಮ್ಮೆ ಸಾರಿಗೆ ಇಲಾಖೆಗಳಿಂದ ಮತ್ತು ನಂಬರ್ ಪ್ಲೇಟ್ ಮುದ್ರಿಸಿಕೊಡುವ ಕಂಪನಿಗಳಿಂದ ವಿಳಂಬವಾಗುತ್ತಿದೆ. ವಾಹನಗಳನ್ನು ಖರೀದಿಸುವ ಗ್ರಾಹಕರು ತಾತ್ಕಾಲಿಕ ನಂಬರ್‌ನಲ್ಲಿ ಹೆಚ್ಚು ದಿನ ಚಾಲನೆ ಮಾಡಿದರೆ ಪೊಲೀಸರಿಂದ ದಂಡ ಬೀಳುತ್ತದೆ. ಹೊಸ ವಾಹನ ಖರೀದಿಸಿ, ದಂಡ ಕಟ್ಟಬೇಕಾಗಿರುವುದು ಜನರಲ್ಲಿ ಬೇಸರ ಹುಟ್ಟಿಸಿದೆ.

‘ಈ ಪ್ರಕ್ರಿಯೆ ವಿಳಂಬಕ್ಕೆ ಕಾರಣ ಯಾರು ಎಂಬುದನ್ನು ಪತ್ತೆ ಹಚ್ಚಲು ಈ ಪೋರ್ಟಲ್‌ನಲ್ಲಿ ಅವಕಾಶ ಇದೆ. ಅದನ್ನು ಆಧರಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬಹುದು. ಮುಖ್ಯವಾಗಿ ಈ ವ್ಯವಸ್ಥೆಯನ್ನು ಸಕಾಲ ವ್ಯಾಪ್ತಿಗೆ ತರಬೇಕು. ವಾಹನಗಳ ನೋಂದಣಿ ವಿಳಂಬ ಮಾಡುವ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳಬೇಕು’ ಎನ್ನುತ್ತಾರೆ ಸಾರಿಗೆ ಇಲಾಖೆ ನಿವೃತ್ತ ಅಧಿಕಾರಿಗಳು.

‘ಹೊಸ ವಾಹನಗಳ ನೋಂದಣಿಗೇ ಇಷ್ಟೊಂದು ವಿಳಂಬವಾದರ ಇನ್ನು ಹಳೇ ವಾಹನಗಳಿಗೂ (1.76 ಕೋಟಿ) ಈ ಮಾದರಿಯ ನಂಬರ್ ಪ್ಲೇಟ್ ಅಳವಡಿಕೆ ಮಾಡಲು ಇನ್ನೆಷ್ಟು ಕಾಲ ಹಿಡಿಯುತ್ತದೆ ಗೊತ್ತಾಗುತ್ತಿಲ್ಲ. ಈ ಪ್ರಕ್ರಿಯೆಯಲ್ಲಿ ‘ಹಣಕಾಸಿನ ವ್ಯವಹಾರ’ಕ್ಕೆ ಅಷ್ಟಾಗಿ ಆಸ್ಪದ ಇಲ್ಲ. ಆದ್ದರಿಂದ ಸಾರಿಗೆ ಇಲಾಖೆ ಅಧಿಕಾರಿಗಳಿಗೆ ಆಸಕ್ತಿ ಇಲ್ಲ’ ಎನ್ನುತ್ತಾರೆ ವಾಹನಗಳ ಮಾಲೀಕರು.

‘ಎಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಕೆಗೆ ಕೇಂದ್ರ ಸರ್ಕಾರ ರೂಪಿಸಿರುವ ಮಾರ್ಗಸೂಚಿ ಪ್ರಕಾರ ಸಾರಿಗೆ ಇಲಾಖೆ ಸಮರ್ಪಕವಾಗಿ ಪ್ರಕ್ರಿಯೆಯನ್ನು ಅನುಸರಿಸುತ್ತಿಲ್ಲ. ಕೇವಲ 6 ಗಂಟೆಗಳಲ್ಲಿ ನೋಂದಣಿ ಪ್ರಕ್ರಿಯೆ ಪೂರ್ಣಗೊಂಡು ನಂಬರ್ ಪ್ಲೇಟ್ ವಾಹನಕ್ಕೆ ಅಳವಡಿಕೆ ಆಗಬೇಕಿದೆ. ಆದರೆ, ಈಗ ತಿಂಗಳುಗಟ್ಟಲೆ ಕಾಯಬೇಕಾದ ಸ್ಥಿತಿ ಇದೆ’ ಎಂದು ಕರ್ನಾಟಕ ರಾಜ್ಯ ಟ್ರಾವೆಲ್ಸ್ ಮಾಲೀಕರ ಸಂಘದ ಅಧ್ಯಕ್ಷ ಕೆ.ರಾಧಾಕೃಷ್ಣ ಹೊಳ್ಳ ಹೇಳಿದರು.

ಕೇಂದ್ರ ಸರ್ಕಾರ ಮತ್ತು ಸುಪ್ರೀಂ ಕೋರ್ಟ್ ನೀಡಿದ್ದ ಗಡುವು ಪೂರೈಸಲು ಎರಡು ದಶಕಗಳಿಂದ ವಿಫಲವಾಗಿರುವ ಸಾರಿಗೆ ಇಲಾಖೆ, ಮೂರು ವರ್ಷಗಳಲ್ಲಿ ಎಲ್ಲಾ ವಾಹನಗಳಿಗೂ ಈ ನಂಬರ್ ಪ್ಲೇಟ್ ಅಳವಡಿಕೆಯಾಗುವಂತೆ ನೋಡಿಕೊಳ್ಳಲು ಇತ್ತೀಚೆಗೆ ಎಲ್ಲಾ ಪ್ರಾದೇಶಿಕ ಸಾರಿಗೆ ಕಚೇರಿಗಳಿಗೆ ಸೂಚನೆ ನೀಡಿದೆ.

‘ಹಳೇ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಸುವ ಮೊದಲು ವಾಹನಗಳ ತಪಾಸಣೆ ಆಗಬೇಕಿದೆ. ಬೆಂಗಳೂರು ಒಂದರಲ್ಲೇ ತಿಂಗಳಿಗೆ 500 ವಾಹನಗಳು ಕಳವಾಗುತ್ತಿವೆ. ಕದ್ದ ವಾಹನಗಳಿಗೆ ನಕಲಿ ನೋಂದಣಿ ಪ್ರಮಾಣ ಪತ್ರ (ಆರ್.ಸಿ) ಸಿದ್ಧಪಡಿಸಿಕೊಂಡು ಓಡಾಡುತ್ತಿದ್ದಾರೆ. ಆರ್.ಸಿ ಮಾನ್ಯತೆ ಪರಿಶೀಲಿಸದೆ ಎಚ್‌ಎಸ್‌ಆರ್‌ಪಿ ನೀಡಿದರೆ ಅಂತಹ ವಾಹನಗಳನ್ನು ನಾವೇ ಕಾನೂನುಬದ್ಧಗೊಳಿಸಿದಂತೆ ಆಗಲಿದೆ’ ಎನ್ನುವ ಆತಂಕ ಇಲಾಖೆ ಹಿರಿಯ ಅಧಿಕಾರಿಯೊಬ್ಬರದು.

ಇಲಾಖೆಯ ವೆಬ್‌ಸೈಟ್‌ನಲ್ಲಿ ದೂರವಾಣಿ ಸಂಖ್ಯೆ ಮಾಯ

ಭ್ರಷ್ಟಾಚಾರ ತಡೆಗೆ ಪಾರದರ್ಶಕತೆ ಅಳವಡಿಸಿಕೊಳ್ಳಲಾಗುತ್ತಿದೆ ಎಂದು ಹೇಳುವ ಸಾರಿಗೆ ಇಲಾಖೆ, ಅಧಿಕೃತ ವೆಬ್‌ಸೈಟ್‌ನಲ್ಲಿದ್ದ ಎಲ್ಲಾ ಅಧಿಕಾರಿಗಳ ಸಂಪರ್ಕ ಸಂಖ್ಯೆಯನ್ನು ‘ಮಾಯ’ಮಾಡಿದೆ.

ಇಲಾಖೆಯ ಆಯುಕ್ತರು ಸೇರಿ ಎಲ್ಲಾ ಹೆಚ್ಚುವರಿ ಸಾರಿಗೆ ಆಯುಕ್ತರು, ಜಂಟಿ ಆಯುಕ್ತರು, ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಮೊಬೈಲ್ ದೂರವಾಣಿ ಸಂಖ್ಯೆ ಕಳೆದ ಕೆಲವು ದಿನಗಳ ತನಕ ವೆಬ್‌ಸೈಟ್‌ನಲ್ಲಿ ಇತ್ತು. ಈಗ ಕಚೇರಿಯ ಸ್ಥಿರ ದೂರವಾಣಿ ಸಂಖ್ಯೆಗಳಷ್ಟೇ ಲಭ್ಯವಿದೆ. ಇವುಗಳಲ್ಲಿ ಕೆಲವು ದೂರವಾಣಿ ಸಂಖ್ಯೆಗಳು ನಿಷ್ಕ್ರಿಯಗೊಂಡಿದ್ದರೆ, ಇನ್ನು ಕೆಲವು ರಿಂಗ್ ಆದರೂ ಕರೆ ಸ್ವೀಕರಿಸುತ್ತಿಲ್ಲ.

‘ದಿನವಿಡೀ ಕರೆ ಮಾಡಿದರೂ ಸಂಪರ್ಕ ಮಾಡುವುದು ಕಷ್ಟ. ಸಾರ್ವಜನಿಕರ ಸಮಸ್ಯೆ ಕೇಳಿಸಿಕೊಳ್ಳಲು ಅಧಿಕಾರಿಗಳಿಗೆ ಕಷ್ಟ ಎನಿಸಿದರೆ ಅವರಿಗೆ ಸಾರ್ವಜನಿಕರ ತೆರಿಗೆ ಹಣದಿಂದ ಸಂಬಳ ಏಕೆ ಕೊಡಬೇಕು’ ಎಂಬುದು ಸಾರಿಗೆ ಇಲಾಖೆಯ ಧೋರಣೆಯಿಂದ ಬೇಸತ್ತಿರುವ ಜನರ ಪ್ರಶ್ನೆ.

ಸುದ್ದಿ 2 ನಿಮಿಷ

‘ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೃದಯ ಕಲ್ಲಾಗಿದೆ’

ಮೈಸೂರು: ‘ಬಸವರಾಜ ಬೊಮ್ಮಾಯಿ ಅವರು ಹೃದಯವಂತರು, ಮೃದು ವ್ಯಕ್ತಿತ್ವವುಳ್ಳವರು. ಆದರೆ, ಮುಖ್ಯಮಂತ್ರಿ ಆದ ಮೇಲೆ ಅವರ ಹೃದಯ ಕಲ್ಲಿನಷ್ಟೇ ಕಠಿಣವಾಗಿದೆ’ ಎಂದು ಸಾಹಿತಿ ದೇವನೂರ ಮಹಾದೇವ ಟೀಕಿಸಿದರು.

‘ರಾಜ್ಯ ಸರ್ಕಾರ 3 ಕೃಷಿ ತಿದ್ದುಪಡಿ ಕಾನೂನುಗಳನ್ನು ಹಿಂಪಡೆಯಬೇಕು’ ಎಂದು ಆಗ್ರಹಿಸಿ ಜನಾಂದೋಲನ ಮಹಾಮೈತ್ರಿ ಹಮ್ಮಿಕೊಂಡಿರುವ ಜನಜಾಗೃತಿ ಜಾಥಾದಲ್ಲಿ ಅವರು ಭಾನುವಾರ ಮಾತನಾಡಿದರು.

‘ಬಸವರಾಜ ಬೊಮ್ಮಾಯಿ ಅವರಲ್ಲಿ ಆದ ಪರಿವರ್ತನೆ ಅತ್ಯಂತ ಕೆಟ್ಟದ್ದು. ಕೇಂದ್ರ ಕಾನೂನು ತಂದಂತೆ ಇಲ್ಲೂ ತಂದಿದ್ದಾರೆ. ಈ ಕಾನೂನುಗಳನ್ನು ತರಲು ₹ 50 ಸಾವಿರ ಕೋಟಿವರೆಗೆ ಅವ್ಯವಹಾರ ನಡೆದಿದೆ ಎಂಬ ಸುದ್ದಿ ಇದೆ. ಈ ಕುರಿತು ಸಿ.ಎಂ ಪರಿಶೀಲಿಸಬೇಕು. ಅವರಲ್ಲಿ ಮನುಷ್ಯತ್ವ ಇದ್ದರೆ ಈ ಕಾನೂನುಗಳನ್ನು ಈಗಲಾದರೂ ವಾಪಸು ತೆಗೆದುಕೊಳ್ಳಬೇಕು’ ಎಂದು ಒತ್ತಾಯಿಸಿದರು.

‘ಕೃಷಿ ಕಾನೂನುಗಳನ್ನು ವಾಪಸ್ ತೆಗೆದುಕೊಳ್ಳಲು ಆಗ್ರಹಿಸಿ ರೈತರು ನಡೆಸುತ್ತಿದ್ದ ಪ್ರತಿಭಟನೆಯಲ್ಲಿ ಹಲವರು ಮೃತರಾದಾಗ ಮೇಘಾಲಯ ರಾಜ್ಯಪಾಲರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿ ಈ ಕುರಿತು ಗಮನಹರಿಸಲು ಕೋರಿದರು. ಆಗ ಮೋದಿ, ‘ಅವರು ನಮಗಾಗಿ ಸತ್ತರೇ’ ಎಂದು ಪ್ರಶ್ನಿಸಿದರು. ಇದು ನಿಜಕ್ಕೂ ನಿರ್ದಯ ಹಾಗೂ ಕಠೋರವಾದದು’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ತನ್ನ ಪ್ರಜೆಗಳನ್ನು ತನ್ನ ಮಕ್ಕಳು ಎಂದು ಹೇಳಿಕೊಳ್ಳಲಾಗದವರಿಗೆ ಈ ದೇಶದ ಪ್ರಧಾನಿಯಾಗಲು ಯೋಗ್ಯತೆ ಇದೆಯೇ’ ಎಂದು ಪ್ರಶ್ನಿಸಿದ ಅವರು, ‘ಅವರ ಹೃದಯದಲ್ಲಿ ಹೃದಯ ಇಲ್ಲ ಕೇವಲ ಕಲ್ಲಿದೆ ಅನಿಸುತ್ತೆ’ ಎಂದು ಬೇಸರ ವ್ಯಕ್ತಪಡಿಸಿದರು.

‘ರಾಜ್ಯದಲ್ಲೂ ಆಳ್ವಿಕೆ ಮಾಡುತ್ತಿರುವವರು ತಾವು ಮೋದಿ ತುಂಡು ಎಂದು ಭಾವಿಸಿ ಅವರಂತೆ ನಿರ್ದಯೆಯಿಂದ ನಡೆದುಕೊಳ್ಳುತ್ತಿದ್ದಾರೆ’ ಎಂದು ಹೇಳಿದರು.

ಪ್ರಜಾಪ್ರಭುತ್ವಕ್ಕೆ ಅಪಾಯ ಕಾದಿದೆ : ಪ್ರಶಾಂತ್ ಭೂಷಣ್ ಅಭಿಮತ

ತುಮಕೂರು: ‘ಈಚೆಗೆ ನಡೆದ ಪಂಚರಾಜ್ಯ ಚುನಾವಣೆಗಳಲ್ಲಿ ಬಿಜೆಪಿ ಗೆಲುವು ಸಾಧಿಸಿರುವುದರಿಂದ ಗಣತಂತ್ರ ವ್ಯವಸ್ಥೆಗೆ ಮತ್ತಷ್ಟು ಅಪಾಯ ಕಾದಿದೆ’ ಎಂದು ಸುಪ್ರೀಂ ಕೋರ್ಟ್ ವಕೀಲ ಪ್ರಶಾಂತ್ ಭೂಷಣ್ ಹೇಳಿದರು.

ನಗರದಲ್ಲಿ ಜನಾಂದೋಲನಗಳ ಮಹಾಮೈತ್ರಿ ಸಂಯುಕ್ತ ಹೋರಾಟ–ಕರ್ನಾಟಕ ಹಾಗೂ ಇತರೆ ಸ್ಥಳೀಯ ಜನಪರ ಸಂಘಟನೆಗಳ ಸಹಕಾರದೊಂದಿಗೆ ಭಾನುವಾರ ಹಮ್ಮಿಕೊಂಡಿದ್ದ ‘ಪ್ರಜಾತಂತ್ರ ವ್ಯವಸ್ಥೆಯ ಸವಾಲುಗಳು ಮತ್ತು ಪರಿಹಾರೋಪಾಯಗಳು’ ಕುರಿತ ವಿಚಾರ ಸಂಕಿರಣದಲ್ಲಿ ಮಾತನಾಡಿದರು.

‘ಪ್ರಜಾಪ್ರಭುತ್ವ ವ್ಯವಸ್ಥೆ ಮತ್ತು ಸಾರ್ವಜನಿಕ ಸಂಸ್ಥೆಗಳನ್ನು ಕೇಂದ್ರ ಸರ್ಕಾರ ಹಾಳು ಮಾಡುತ್ತಿದೆ. ಪ್ರಜ್ಞಾವಂತರ ತಂಡ ಕಟ್ಟುವ ಮೂಲಕ ಪರ್ಯಾಯ ವ್ಯವಸ್ಥೆ ಹುಟ್ಟು ಹಾಕುವ ಕೆಲಸ ಮಾಡಬೇಕು. ವ್ಯಾಪಕವಾದ ಭ್ರಷ್ಟಾಚಾರ, ನಿರುದ್ಯೋಗದ ವಿರುದ್ಧ ಧ್ವನಿ ಗೂಡಿಸಬೇಕು’ ಎಂದು ಅಭಿಪ್ರಾಯಪಟ್ಟರು.

ಆರ್‌ಟಿಒ ಕೂಟ; ದಲ್ಲಾಳಿಗಳದ್ದೇ ಆಟ

ಒಂದನೇ ಪುಟದಿಂದ

ವಾಹನ ಚಾಲನೆ ಕಲಿಕಾ ತರಬೇತಿ ಶಾಲೆಗಳ ಜತೆಗೂ ಸಾರಿಗೆ ಅಧಿಕಾರಿಗಳ ನಂಟು ಬಲವಾದದ್ದು. ನೇರವಾಗಿ ವಾಹನ ಚಾಲನೆ ಕಲಿಕಾ ಪರವಾನಗಿ ಅಥವಾ ವಾಹನ ಚಾಲನೆ ಪರವಾನಗಿ ಪಡೆಯಲು ಪ್ರಯತ್ನಿಸುವವರಿಗೆ ಹತ್ತಾರು ಸವಾಲುಗಳು ಎದುರಾಗುತ್ತವೆ. ಕಣ್ಣು, ಕಿವಿಯ ದೋಷದ ನೆಪ ಹೇಳಿ ಅರ್ಜಿ ತಿರಸ್ಕರಿಸುವ ಪ್ರಯತ್ನ ಮಾಡಲಾಗುತ್ತದೆ. ಆದರೆ, ತರಬೇತಿ ಶಾಲೆಗಳ ಮೂಲಕ ಹೋದರೆ ಈ ಕೆಲಸ ನೀರು ಕುಡಿದಷ್ಟೇ ಸಲೀಸು. ಆದರೆ, ಇಲ್ಲಿ ನಿಗದಿತ ಶುಲ್ಕದ ಜತೆಗೆ ಒಂದಷ್ಟು ಹೆಚ್ಚು ಹಣ ಖರ್ಚು ಮಾಡಬೇಕಾದ ಹೊರೆಯನ್ನು ಹೊತ್ತುಕೊಳ್ಳಲೇಬೇಕು.

ದಲ್ಲಾಳಿಗಳ ದರ್ಬಾರು: ದಲ್ಲಾಳಿಗಳ ನೆರವಿಲ್ಲದೇ ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ ಸಾರ್ವಜನಿಕರು ಸೇವೆ ಪಡೆಯುವುದು ಕಷ್ಟ. ಅರ್ಜಿ, ಸರ್ಕಾರ ನಿಗದಿಪಡಿಸಿರುವ ಶುಲ್ಕದ ಜತೆಗೆ ಕಚೇರಿಯೊಳಗೆ ನಿಗದಿಯಾಗಿರುವ ಲಂಚದ ಮೊತ್ತವನ್ನೂ ದಲ್ಲಾಳಿಗಳ ಕೈಗಿತ್ತರೆ ಮುಂದಿನ ಪ್ರಕ್ರಿಯೆ ಸಲೀಸು. ಲಂಚ ಕೊಡಲು ನಿರಾಕರಿಸಿ ಖುದ್ದಾಗಿ ಸೇವೆ ಪಡೆಯಲು ಬಯಸಿದರೆ ಅಲೆದೂ, ಅಲೆದೂ ಸುಸ್ತು ಹೊಡೆಯಬೇಕು ಎನ್ನುತ್ತಾರೆ ಸಾರಿಗೆ ಕಚೇರಿಗಳ ಒಳ-ಹೊರಗನ್ನು ಬಲ್ಲ ಸಾರಿಗೆ ಕ್ಷೇತ್ರದ ಉದ್ಯಮಿಯೊಬ್ಬರು.

‘ಅಧಿಕಾರಿಗಳೇ ದಲ್ಲಾಳಿಗಳನ್ನು ನೇಮಿಸಿಕೊಂಡಿರುತ್ತಾರೆ. ಅವರೇ ಇಡೀ ಕಚೇರಿಯ ಮೇಲೆ ನಿಯಂತ್ರಣ ಹೊಂದಿರುತ್ತಾರೆ. ದಲ್ಲಾಳಿಗಳು ಸೂತ್ರಧಾರರಂತೆ ಕೆಲಸ ಮಾಡುತ್ತಾರೆ. ಅಧಿಕಾರಿಗಳು ಪಾತ್ರಧಾರಿಗಳಂತೆ ನಡೆದುಕೊಳ್ಳುತ್ತಾರೆ. ಕೆಲವು ಕಚೇರಿಗಳಲ್ಲಿ ಸಾರ್ವಜನಿಕರಿಗೆ ಸರದಿಯ ಟೋಕನ್ ನೀಡುವ ಅಧಿಕಾರವನ್ನೂ ದಲ್ಲಾಳಿಗಳ ಕೈಗೆ ನೀಡಲಾಗಿದೆ’ ಎಂದು ಉದ್ಯಮಿ ಅವರು ವಿವರಿಸಿದರು.

ಸಿಂಡಿಕೇಟ್ ಹಿಡಿತದಲ್ಲಿ ಇಲಾಖೆ!

ಕೆಲವು ಪ್ರಭಾವಿ ಅಧಿಕಾರಿಗಳು ‘ಸಿಂಡಿಕೇಟ್’ ಕಟ್ಟಿಕೊಂಡು ಇಡೀ ಸಾರಿಗೆ ಇಲಾಖೆಯನ್ನು ಹಿಡಿತದಲ್ಲಿ ಇಟ್ಟುಕೊಳ್ಳುವ ವ್ಯವಸ್ಥೆ ದೀರ್ಘ ಕಾಲದಿಂದ ನಡೆದುಕೊಂಡು ಬರುತ್ತಿದೆ. ಈಗ ಕೂಡ ಜಂಟಿ ಸಾರಿಗೆ ಆಯುಕ್ತರು, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಮತ್ತು ಮೋಟಾರು ವಾಹನ ನಿರೀಕ್ಷಕರು ಸೇರಿಕೊಂಡಿರುವ ಐವರು ಅಧಿಕಾರಿಗಳ ಒಂದು ‘ಸಿಂಡಿಕೇಟ್’ ಎಲ್ಲವನ್ನೂ ನಿರ್ಧರಿಸುತ್ತಿದೆ ಎಂಬ ಮಾಹಿತಿ ಇಲಾಖೆಯ ಒಳಗಿನಿಂದಲೇ ಲಭ್ಯವಾಗಿದೆ.

ಯಾವ ಅಧಿಕಾರಿ ಯಾವ ಹುದ್ದೆಯಲ್ಲಿರಬೇಕು? ಯಾರಿಗೆ ಆಯಕಟ್ಟಿನ ಹುದ್ದೆ ನೀಡಬೇಕು? ಯಾರಿಗೆ ಲಾಭವಿಲ್ಲದ ಹುದ್ದೆ ನೀಡಬೇಕು? ಎಂಬುದನ್ನು ಸಿಂಡಿಕೇಟ್‌ನಲ್ಲಿರುವ ಐವರು ಅಧಿಕಾರಿಗಳ ಕೂಟವೇ ನಿರ್ಧರಿಸುತ್ತಿದೆ. ವರ್ಗಾವಣೆಯ ಲಂಚದ ಹಣ ಸಂಗ್ರಹ, ತಿಂಗಳ ಮಾಮೂಲಿ ಸಂಗ್ರಹ, ಅದನ್ನು ‘ಮೇಲಿನವರಿಗೆ’ ತಲುಪಿಸುವ ಕೆಲಸ ಎಲ್ಲವನ್ನೂ ಈ ಅಧಿಕಾರಿಗಳೇ ನಿರ್ವಹಿಸುತ್ತಿದ್ದಾರೆ ಎಂಬುದರ ಕುರಿತು ಸಾರಿಗೆ ಇಲಾಖೆಯ ಅಧಿಕಾರಿಗಳು ತರಹೇವಾರಿ ಕತೆಗಳನ್ನು ಬಿಚ್ಚಿಡುತ್ತಾರೆ.

ಸಾರಿಗೆ ಇಲಾಖೆಯಲ್ಲಿ ಮೋಟಾರು ವಾಹನ ನಿರೀಕ್ಷಕರು, ಹಿರಿಯ ಮೋಟಾರು ವಾಹನ ನಿರೀಕ್ಷಕರು ಮತ್ತು ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಹೆಚ್ಚಿನ ‘ಸಂಪಾದನೆ’ ಇದೆ. ಸಹಾಯಕ ಪ್ರಾದೇಶಿಕ ಅಧಿಕಾರಿಗಳಿಗೆ ಹೆಚ್ಚು ‘ಸಂಪಾದನೆ’ಗೆ ಅವಕಾಶವಿಲ್ಲ. ಹೀಗಾಗಿ ಬಡ್ತಿಯನ್ನೂ ಪಡೆಯದೆ ಹಿರಿಯ ಮೋಟಾರು ವಾಹನ ನಿರೀಕ್ಷಕರ ಹುದ್ದೆಯಲ್ಲಿ ಮುಂದುವರಿಯಲು ಆಸಕ್ತಿ ತೋರುವ ಅಧಿಕಾರಿಗಳ ಸಂಖ್ಯೆಯೂ ಇಲ್ಲಿ ಹೆಚ್ಚು.

ತನಿಖಾ ಠಾಣೆಗಳಲ್ಲಿ ಝಣಝಣ ಕಾಂಚಾಣ

ಸಾರಿಗೆ ತನಿಖಾ ಠಾಣೆಗಳಲ್ಲಿ ಹುದ್ದೆ ಪಡೆಯಲು ತೀವ್ರ ಪೈಪೋಟಿ ಇದೆ. ಝಳಕಿ, ಹುಮ್ನಾಬಾದ್, ನಂಗಲಿ, ಬಾಗೇಪಲ್ಲಿ, ನಿಪ್ಪಾಣಿ, ಕಾಗವಾಡ, ಅತ್ತಿಬೆಲೆ ಮತ್ತು ಹಗರಿ ತನಿಖಾ ಠಾಣೆಗಳಿಗೆ ಪೈಪೋಟಿ ಇದೆ.

ಇಲ್ಲಿ ಮಂಜೂರಾದ ಹುದ್ದೆಗಳಿಗೆ ಹೋಲಿಸಿದರೆ ಅರ್ಧದಷ್ಟು ಹುದ್ದೆಗಳು ಮಾತ್ರ ಭರ್ತಿ ಇರುತ್ತವೆ. ಆದರೆ, ಮಂಜೂರಾದ ಹುದ್ದೆಗಳ ಲೆಕ್ಕದಲ್ಲೇ ವರ್ಗಾವಣೆಯ ‘ಕಾಣಿಕೆ’, ತಿಂಗಳ ‘ಮಾಮೂಲಿ’ ಸಂದಾಯವಾಗುತ್ತದೆ. ಅಲ್ಲಿ ನಿಯುಕ್ತಿಗೊಂಡ ಅಧಿಕಾರಿಗಳು ತಮ್ಮದೇ ಆದ ಖಾಸಗಿ ವ್ಯಕ್ತಿಗಳ ಪಡೆ ಕಟ್ಟಿಕೊಂಡು ತನಿಖಾ ಠಾಣೆ ನಿರ್ವಹಿಸುತ್ತಾರೆ. 15 ತನಿಖಾ ಠಾಣೆಗಳಲ್ಲೇ ಮಾಸಿಕ ₹ 5 ಕೋಟಿಯಿಂದ ₹ 6 ಕೋಟಿ ಮಾಮೂಲಿ ಸಂಗ್ರಹಿಸಿ ಐವರು ಅಧಿಕಾರಿಗಳ ‘ಸಿಂಡಿಕೇಟ್’ಗೆ ತಲುಪಲಿದೆ ಎಂಬ ಆರೋಪವಿದೆ.

ತನಿಖಾ ಠಾಣೆಗಳು	
ಝಳಕಿ	₹ 50 ಲಕ್ಷದಿಂದ ₹ 75 ಲಕ್ಷ
ಹುಮ್ನಾಬಾದ್	₹ 40 ಲಕ್ಷ
ಹಗರಿ	₹ 40 ಲಕ್ಷ
ಅತ್ತಿಬೆಲೆ	₹ 30 ಲಕ್ಷ
ನಿಪ್ಪಾಣಿ, ಕಾಗವಾಡ	₹ 30 ಲಕ್ಷ
ನಂಗಲಿ, ಬಾಗೇಪಲ್ಲಿ	₹ 25 ಲಕ್ಷ
ಉಳಿದ ತನಿಖಾ ಠಾಣೆಗಳು	₹ 15 ಲಕ್ಷದಿಂದ ₹ 25 ಲಕ್ಷ

ಕನ್ನಡಿಯೊಳಗಿನ ಗಂಟು ಆನ್‌ಲೈನ್ ಸೇವೆ

30ಕ್ಕೂ ಹೆಚ್ಚು ಸೇವೆಗಳನ್ನು ಆನ್‌ಲೈನ್ ಮೂಲಕ ಒದಗಿಸುವ ವ್ಯವಸ್ಥೆ ಸಾರಿಗೆ ಇಲಾಖೆಯಲ್ಲಿದೆ. ಭ್ರಷ್ಟಾಚಾರ ನಿಯಂತ್ರಣಕ್ಕಾಗಿ ಈ ವ್ಯವಸ್ಥೆ ತಂದಿರುವುದಾಗಿ ಸರ್ಕಾರ ಹೇಳುತ್ತಿದೆ. ಆದರೆ, ಸಾರಿಗೆ ಇಲಾಖೆಯಲ್ಲಿ ಆನ್‌ಲೈನ್ ಸೇವೆ ಎಂಬುದು ಕನ್ನಡಿಯೊಳಗಿನ ಗಂಟಿನಂತಾಗಿದೆ.

‘ಆನ್‌ಲೈನ್‌ನಲ್ಲಿ ಸೇವೆ ಕೋರಿ ಸಲ್ಲಿಸುವ ಅರ್ಜಿಗಳಿಗೆ ಸಕಾಲದಲ್ಲಿ ಪ್ರತಿಕ್ರಿಯೆ ಬರುವುದೇ ಇಲ್ಲ. ತಿಂಗಳ ಬಳಿಕ ಅಧಿಕಾರಿಗಳು ಪ್ರತಿಕ್ರಿಯಿಸುತ್ತಾರೆ. ಹೆಚ್ಚಿನ ಅರ್ಜಿಗಳಿಗೆ ತಿರಸ್ಕಾರದ ಹಿಂಬರಹ ಖಚಿತ ಎಂಬ ಸ್ಥಿತಿ ಇದೆ. ಆದರೆ, ದಲ್ಲಾಳಿಗಳ ಮೂಲಕ ನೇರ ಕಚೇರಿಗೆ ಹೋದರೆ ಒಂದೇ ದಿನದಲ್ಲಿ ಸೇವೆಗಳು ಲಭಿಸುತ್ತವೆ’ ಎಂದು ಸಾರಿಗೆ ಉದ್ಯಮಿಯೊಬ್ಬರು ತಿಳಿಸಿದರು.

ತಪ್ಪುಗ್ರಹಿಕೆ ನಿವಾರಣೆಗೆ ಬೃಹತ್ ಕಾರ್ಯಕ್ರಮ: ಹೊಸಬಾಳೆ

ದತ್ತಾತ್ರೇಯ ಹೊಸಬಾಳೆ

ಅಹಮದಾಬಾದ್ (ಪಿಟಿಐ): ‘ದೇಶದ ಬಗ್ಗೆ ಜಾಗತಿಕವಾಗಿ ತಪ್ಪು ಮಾಹಿತಿಯನ್ನೆ ಪ್ರಚುರಪಡಿಸಲಾಗುತ್ತಿದೆ. ಈ ತಪ್ಪುಕಲ್ಪನೆಗಳನ್ನು ಹೋಗಲಾಡಿಸಿ, ಭಾರತದ ಬಗ್ಗೆ ವಾಸ್ತವ ಸಂಗತಿಗಳಿಂದ ಕೂಡಿದ ವಿವರಣೆ ನೀಡಲು ಸಂಘ ನಿರ್ಧರಿಸಿದೆ’ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಭಾನುವಾರ ಹೇಳಿದ್ದಾರೆ.

ಇಲ್ಲಿ ನಡೆಯುತ್ತಿರುವ ಆರ್‌ಎಸ್‌ಎಸ್‌ನ ಮೂರು ದಿನಗಳ ವಾರ್ಷಿಕ ಸಮಾವೇಶ ‘ಅಖಿಲ ಭಾರತೀಯ ಪ್ರತಿನಿಧಿ ಸಭಾ’ದ ಹಿನ್ನೆಲೆಯಲ್ಲಿರುವ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದರು.

'ಈ ಉದ್ದೇಶಕ್ಕಾಗಿ ಸಂಶೋಧಕರು, ಲೇಖಕರ ನೆರವು ಪಡೆಯಲಾಗುವುದು. ಭಾರತೀಯ ಸಮಾಜ, ಹಿಂದೂ ಸಮುದಾಯದ ಇತಿಹಾಸ, ಸಂಸ್ಕೃತಿ ಹಾಗೂ ಜೀವನಶೈಲಿ ಕುರಿತು ಜಗತ್ತಿಗೆ ಹಾಗೂ ದೇಶೀಯವಾಗಿ ನೈಜಚಿತ್ರಣ ನೀಡಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಈ ಮೂರು ದಿನಗಳ ಸಮಾವೇಶದಲ್ಲಿ ಚರ್ಚಿಸಲಾಗುವುದು’ ಎಂದೂ ಅವರು ಹೇಳಿದರು.

‘2025ರಲ್ಲಿ ಆರ್‌ಎಸ್‌ಎಸ್‌ಗೆ ಶತಮಾನೋತ್ಸವ ಸಂಭ್ರಮ. ಈ ಹಿನ್ನೆಲೆಯಲ್ಲಿ ಸಂಘದ ನೆಲೆಯನ್ನು ವಿಸ್ತರಿಸಲು ಕಾರ್ಯಕ್ರಮ ರೂಪಿಸಲಾಗುವುದು. ಸಂಖ್ಯಾ ದೃಷ್ಟಿಯಿಂದ ಮಾತ್ರವಲ್ಲ, ರಾಷ್ಟ್ರೀಯತೆ ಹಾಗೂ ಏಕತೆಯಂತಹ ವಿಚಾರಗಳ ತಳಹದಿಯಲ್ಲಿ ಸಂಘದ ಚಟುವಟಿಕೆಗಳನ್ನು ವಿಸ್ತರಿಸಲು ಯೋಜಿಸಲಾಗಿದೆ’ ಎಂದೂ ಹೇಳಿದರು.

ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳುವ ಸಮಿತಿಯಾಗಿರುವ ‘ಅಖಿಲ ಭಾರತೀಯ ಪ್ರತಿನಿಧಿ ಸಭಾ’ ಕಾರ್ಯಕ್ರಮದಲ್ಲಿ 1,252 ಪದಾಧಿಕಾರಿಗಳು ಪಾಲ್ಗೊಂಡಿದ್ದಾರೆ.

‘ಅವಧಿಪೂರ್ವ ಚುನಾವಣೆ ಇಲ್ಲ’



ಬಸವರಾಜ ಬೊಮ್ಮಾಯಿ

ಬೆಂಗಳೂರು: ರಾಜ್ಯ ವಿಧಾನಸಭೆಗೆ ಅವಧಿ ಪೂರ್ವ ಚುನಾವಣೆ ನಡೆಯುವುದಿಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾನುವಾರ ಹೇಳಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಸಂಪುಟ ವಿಸ್ತರಣೆ ಕುರಿತು ವರಿಷ್ಠರಿಂದ ಸೂಚನೆ ಬಂದ ತಕ್ಷಣ ದೆಹಲಿಗೆ ಹೋಗುತ್ತೇನೆ’ ಎಂದರು.

‘ಬಿಜೆಪಿಯಿಂದ ಯಾರೂ ಪಕ್ಷಾಂತರ ಮಾಡುವ ಪ್ರಶ್ನೆಯೇ ಇಲ್ಲ. ಮೊದಲೂ ಇರಲಿಲ್ಲ. ಈಗಲೂ ಇಲ್ಲ. ನಮ್ಮ ಪಕ್ಷದಿಂದ ಯಾರೂ ಬೇರೆ ಪಕ್ಷಕ್ಕೆ ಹೋಗುವುದಿಲ್ಲ. ಆದರೆ, ಬೇರೆ ಪಕ್ಷದಿಂದ ಬಿಜೆಪಿ ಬರುವವರ ಬಗ್ಗೆ ಕಾದು ನೋಡಿ’ ಎಂದರು.

ರಾಜ್ಯ ಪ್ರವಾಸ: ‘ಇದೇ 30 ಮತ್ತು 31ರಂದು ರಾಜ್ಯ ಕಾರ್ಯಕಾರಿಣಿ ಸಭೆ ನಡೆಯಲಿದೆ. ಸಭೆಯಲ್ಲಿ ರಾಜ್ಯ ಪ್ರವಾಸದ ಕುರಿತು ಮತ್ತು ಎಲ್ಲ ವಿಷಯಗಳ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು’ ಎಂದರು.

ಉಕ್ರೇನ್‌ನಲ್ಲಿ ಬಾಂಬ್ ದಾಳಿ ನಿಂತ ಕೂಡಲೇ ನವೀನ್ ಮೃತದೇಹವನ್ನು ತರುವ ಪ್ರಕ್ರಿಯೆಗೆ ಮತ್ತೆ ಚಾಲನೆ ನೀಡಲಾಗುವುದು ಎಂದೂ ಹೇಳಿದರು.

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net

Prajavani.net Prajavani Prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಪಿಯು ವಿದ್ಯಾರ್ಥಿಗಳಿಗಾಗಿ ಆನ್‌ಲೈನ್ ಬೋಧನಾ ಸರಣಿ

ಬಯಾಲಜಿ ಟಿಪ್ಸ್

ಡಾ.ಚಂದ್ರಗಿರೀಶ್, ಪ್ರಾಂಶುಪಾಲರು, ವಿದ್ಯಾನಿಧಿ ಪಿಯು ಕಾಲೇಜು, ರಾಯಚೂರು

ಸಂಜೆ 4 ರಿಂದ 6 ರವರೆಗೆ

ಪ್ರಜಾವಾಣಿ ಕನ್ನಡ ಧ್ವನಿ

ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9,

ಸಂಪಾದಕೀಯ: ಬೆಳಿಗ್ಗೆ 9.30,

ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಅರ್ಹ ನೋಂದಾಯಿತ ಟೆಂಡರುದಾರರಿಂದ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರ.ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇ.ಎಂ.ಡಿ(ರೂ.ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
ಮುಖ್ಯ ಅಭಿಯಂತರರ ಕಚೇರಿ(ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560 009.					
1	ಉತ್ತರ	ಬೆಂಜಮಂ/ಇಎನ್‌ಟಿಇ/ಸಅ–1/2506 2021–22 ದಿನಾಂಕ: 07.03.2022	ರೂ. 12,03,096/– ರೂ. 30,100/–	28.03.2022ರ ಮಧ್ಯಾಹ್ನ 3:00 ಗಂಟೆವರೆಗೆ	29.03.2022ರ ಸಂಜೆ 4:00ಗಂಟೆಯ ನಂತರ
ಸಹಿ/–ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ).					
2	ವಾಯುವ್ಯ–1	ಬೆಂಜಮಂ/ಕಾನಿಅ(ವಾಯುವ್ಯ–1)/ಪಿಬಿ/3659/ 2021–22 ದಿನಾಂಕ:. 07.03.2022 (ಪರಿಶಿಷ್ಟ ಪಂಗಡ ಪ್ರವರ್ಗಕ್ಕೆ ಮೀಸಲು)	ರೂ. 21,80,442/– ರೂ. 25,000/–	28.03.2022ರ ಸಂಜೆ 5:00 ಗಂಟೆಯವರೆಗೆ	29.03.2022ರ ಸಂಜೆ 5:00 ಗಂಟೆಯ ನಂತರ
3	ವಾಯುವ್ಯ–1	ಬೆಂಜಮಂ/ಕಾನಿಅ(ವಾಯುವ್ಯ–1)/ಪಿಬಿ/3659/ 2021–22 ದಿನಾಂಕ:. 07.03.2022	ರೂ. 31,33,198/– 62,700/–		
4	ವಾಯುವ್ಯ–1	ಬೆಂಜಮಂ/ಕಾನಿಅ(ವಾಯುವ್ಯ–1)/ಪಿಬಿ/3659/ 2021–22 ದಿನಾಂಕ:. 07.03.2022 (ಪರಿಶಿಷ್ಟ ಜಾತಿ ಪ್ರವರ್ಗಕ್ಕೆ ಮೀಸಲು)	ರೂ. 27,96,094/– ರೂ. 28,000/–		
5	ವಾಯುವ್ಯ–1	ಬೆಂಜಮಂ/ಕಾನಿಅ(ವಾಯುವ್ಯ–1)/ಪಿಬಿ/3659/ 2021–22 ದಿನಾಂಕ:. 07.03.2022	ರೂ. 21,90,678/– ರೂ. 50,000/–		
6	ವಾಯುವ್ಯ–1	ಬೆಂಜಮಂ/ಕಾನಿಅ(ವಾಯುವ್ಯ–1)/ಪಿಬಿ/3659/ 2021–22 ದಿನಾಂಕ: 07.03.2022 (ಪರಿಶಿಷ್ಟ ಜಾತಿ ಪ್ರವರ್ಗಕ್ಕೆ ಮೀಸಲು)	ರೂ. 28,68,066/– ರೂ. 28,700/–		
ಸಹಿ/–ಕಾರ್ಯನಿರ್ವಾಹಕ ಅಭಿಯಂತರರು (ವಾಯುವ್ಯ–1).					
7	ನೈರುತ್ಯ	ಬೆಂಜಮಂ/ಕಾನಿಅ(ನೈರುತ್ಯ)/ತಾಂಅ/ಪಿಬಿ/ 3471/2021–22 ದಿನಾಂಕ: 05.03.2022	ರೂ. 17,28,230/– ರೂ. 43,300/–	28.03.2022ರ ಸಂಜೆ 4:00 ಗಂಟೆಯವರೆಗೆ	30.03.2022ರ ಮಧ್ಯಾಹ್ನ 3:00 ಗಂಟೆಯ ನಂತರ
8	ನೈರುತ್ಯ		ರೂ. 8,95,834/– ರೂ. 22,400/–		
9	ನೈರುತ್ಯ		ರೂ. 17,39,352/– ರೂ. 43,500/–		
ಸಹಿ/–ಕಾರ್ಯನಿರ್ವಾಹಕ ಅಭಿಯಂತರರು (ನೈರುತ್ಯ).					
ಮುಖ್ಯ ಅಭಿಯಂತರರ ಕಚೇರಿ(ತ್ಯಾನೀನಿ), 5ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560 009.					
10	ಎಸ್‌ಟಿಪಿ–ವಿ.ವ್ಯಾಲಿ	ಬೆಂಜಮಂ/ಕಾನಿಅ(ಎಸ್‌ಟಿಪಿ)ವಿ.ವ್ಯಾಲಿ/ಪಿಬಿ/ 1079/2021–22 ದಿನಾಂಕ: 08.03.2022	ರೂ. 8.60 ಲಕ್ಷಗಳು ರೂ. 21,500/–	21.03.2022ರ ಸಂಜೆ 5:30 ಗಂಟೆವರೆಗೆ	23.03.2022ರ ಸಂಜೆ 4:00 ಗಂಟೆಯ ನಂತರ
ಸಹಿ/–ಕಾರ್ಯನಿರ್ವಾಹಕ ಅಭಿಯಂತರರು (ಎಸ್‌ಟಿಪಿ–ವಿ.ವ್ಯಾಲಿ).					
11	ತ್ಯಾನೀನಿ–ವಿ.ವ್ಯಾಲಿ	ಬೆಂಜಮಂ/ಕಾನಿಅ(ತ್ಯಾನೀನಿ–ವಿ.ವ್ಯಾಲಿ)/ಪಿಬಿ/ 1904/2021–22 ದಿನಾಂಕ: 07.03.2022	ರೂ. 93.35 ಲಕ್ಷಗಳು ರೂ. 1.87 ಲಕ್ಷಗಳು	21.03.2022ರ ಸಂಜೆ 5:30 ಗಂಟೆವರೆಗೆ	23.03.2022ರ ಸಂಜೆ 4:00 ಗಂಟೆಗೆ
ಸಹಿ/–ಕಾರ್ಯನಿರ್ವಾಹಕ ಅಭಿಯಂತರರು (ತ್ಯಾನೀನಿ–ವಿ.ವ್ಯಾಲಿ).					
ಮುಖ್ಯ ಅಭಿಯಂತರರ ಕಚೇರಿ(ವಿನ್ಯಾಸ), 9ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560 009.					
12	ಕೇಂದ್ರ ಉಗ್ರಾಣ	ಬೆಂಜಮಂ/ಕಾನಿಅ(ಕೇಂ.ಉ.)/ಸಕಾನಿಅ/ಸಉಅ/ಸಅ/ ಉಗ್ರಾಣ/844/2021–22 ದಿನಾಂಕ: 09.03.2022	ರೂ. 84,05,536/– ರೂ. 1,68,120/–	28.03.2022ರ ಸಂಜೆ 4:00 ಗಂಟೆಗೆ ಮುಂಚಿತವಾಗಿ	30.03.2022ರ ಮಧ್ಯಾಹ್ನ 12:00 ಗಂಟೆಗೆ
13	ಕೇಂದ್ರ ಉಗ್ರಾಣ	ಬೆಂಜಮಂ/ಕಾನಿಅ(ಕೇಂ.ಉ.)/ಸಕಾನಿಅ/ಸಅ/ ಉಗ್ರಾಣ/853/2021–22 ದಿನಾಂಕ: 09.03.2022	ರೂ. 76,91,255/– ರೂ. 1,53,825/–	23.03.2022ರ ಸಂಜೆ 4:00 ಗಂಟೆಗೆ ಮುಂಚಿತವಾಗಿ	25.03.2022ರ ಮಧ್ಯಾಹ್ನ 12:00 ಗಂಟೆಗೆ
ಸಹಿ/–ಕಾರ್ಯನಿರ್ವಾಹಕ ಅಭಿಯಂತರರು (ಕೇಂದ್ರ ಉಗ್ರಾಣ).					

ಟೆಂಡರ್ ಮತ್ತು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಭಾಗವಹಿಸುವ ಬಗ್ಗೆ ವಿವರಗಳನ್ನು https://eproc.karnataka.gov.in ಗೆ ಲಾಗಿನ್‌ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗಾಗಿ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

DIPR/DDU/RA/3732/2021-22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

‘ಚಾಮುಂಡೇಶ್ವರಿ ಕ್ಷೇತ್ರದಿಂದ ಸ್ಪರ್ಧಿಸುವುದಿಲ್ಲ’

ಪ್ರಜಾವಾಣಿ ವಾರ್ತೆ

ಸಿದ್ದರಾಮಯ್ಯ

ಮಂಡ್ಯ: ‘ಮುಂದಿನ ವಿಧಾನ ಸಭಾ ಚುನಾವಣೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದಿಂದ ಸ್ಪರ್ಧಿಸುವುದಿಲ್ಲ. ಇತರ ನಾಲ್ಕೈದು ಕ್ಷೇತ್ರಗಳಿಂದ ಆಹ್ವಾನ ಬಂದಿದೆ. ಎಲ್ಲಿ ಸ್ಪರ್ಧಿಸಬೇಕೆಂಬ ಇನ್ನೂ ತೀರ್ಮಾನಿಸಿಲ್ಲ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಭಾನುವಾರ ಹೇಳಿದರು.

ಮದ್ದೂರಿನಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಜಿ.ಟಿ.ದೇವೇಗೌಡ ಅವರು ಕಾಂಗ್ರೆಸ್‌ಗೆ ಬರುವುದು ಇನ್ನೂ ನಿರ್ಧಾರ ಆಗಿಲ್ಲ. ಅವರು ಮಗನಿಗೂ ಟಿಕೆಟ್ ಕೇಳಿದ್ದಾರೆ. ಈ ಕುರಿತು ಹೈಕಮಾಂಡ್ ಜೊತೆ ಚರ್ಚಿಸಬೇಕು’ ಎಂದರು.

‘ಜೆಡಿಎಸ್‌ನವರು ಬಿಜೆಪಿ ಜೊತೆ ಅಂಡರ್ ಸ್ಟ್ಯಾಂಡಿಂಗ್ ಅಥವಾ ಅಲಯನ್ಸ್ ಮಾಡಿಕೊಳ್ಳಲಿ ನಾವು ತಲೆಕೆಡಿಸಿಕೊಳ್ಳುವುದಿಲ್ಲ. ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ತರುವುದೇ ನಮ್ಮ ಗುರಿ’ ಎಂದರು.

‘ಕಾಂಗ್ರೆಸ್ ತ್ಯಜಿಸಿ ಯಾರೂ ಬಿಜೆಪಿ ಸೇರುವುದಿಲ್ಲ, ಬಿಜೆಪಿಯಿಂದ ಕಾಂಗ್ರೆಸ್‌ಗೆ ಎಷ್ಟು ಮಂದಿ ಶಾಸಕರು ಸೇರುತ್ತಾರೆ ಎಂಬುದನ್ನು ಕಾದು ನೋಡಿ’ ಎಂದು ಹೇಳಿದರು.

‘ಸಿ.ಎಂ.ಇಬ್ರಾಹಿಂಗೆ ಕಾಂಗ್ರೆಸ್ ಪಕ್ಷ ಎಲ್ಲವನ್ನೂ ಕೊಟ್ಟಿತ್ತು. ಮನುಷ್ಯನಿಗೆ ಆಸೆ ಇರಬೇಕು, ಆದರೆ ದುರಾಸೆ ಇರಬಾರದು’ ಎಂದು ಪ್ರತಿಕ್ರಿಯಿಸಿದರು.

ಕಾಂಗ್ರೆಸ್ ಇನ್ನಾದರೂ ನಕಾರಾತ್ಮಕ ಪ್ರಚಾರ ಬಿಡಲಿ. ಗೋವಾದಲ್ಲಿ ಕೂಸು ಹುಟ್ಟುವ ಮುನ್ನವೇ ಕಾಂಗ್ರೆಸ್ ಕುಲಾವಿ ಹೊಲಿಸಿತ್ತು. ಗೋವಾಗೆ ಗೂಂಡಾಗಿರಿ ಮಾಡಲು ವೀಕ್ಷಕರನ್ನು ಕಳುಹಿಸಿತ್ತೆ ಎನ್ನುವುದು ಅರ್ಥವಾಗಲಿಲ್ಲ

ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಕರ್ನಾಟಕದಲ್ಲೂ ಕಾಂಗ್ರೆಸ್ ಧೂಳಿಪಟವಾಗಲಿದೆ. ಐದುರಾಜ್ಯಗಳ ಚುನಾವಣೆ ಫಲಿತಾಂಶ ಕಾಂಗ್ರೆಸ್ ನಿದ್ದೆಗೆಡಿಸಿದೆ. ಬಿಜೆಪಿ ಕಾರ್ಯಕರ್ತರಿಗೆ ಆನೆಬಲ ತಂದುಕೊಟ್ಟಿದೆ

ಬಿ.ವೈ ವಿಜಯೇಂದ್ರ,

ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ

ಬಿಎಸ್‌ವೈ ಗೆ ವಯಸ್ಸಾಗಿದೆ, ಆರಾಮವಾಗಿರಲಿ: ಯತ್ನಾಳ

ವಿಜಯಪುರ: ‘ಬಿ.ಎಸ್.ಯಡಿಯೂರಪ್ಪ ಅವರಿಗೆ ವಯಸ್ಸಾಗಿದೆ. ಅವರು ಮುಂದೆ ಆರಾಮವಾಗಿರುವುದು ಒಳ್ಳೆಯದು. ಎರಡನೇ ಹಂತದ ನಾಯಕರಿದ್ದಾರೆ. ಬಿಎಸ್‌ವೈ 110 ಸ್ಥಾನದೊಳಗಿದ್ದರು, ನಾವು 130ಕ್ಕೂ ಹೆಚ್ಚು ಸ್ಥಾನ ಗೆದ್ದು ತೋರಿಸುತ್ತೇವೆ’ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಭಾನುವಾರ ಸುದ್ದಿಗಾರರ ಜೊತೆಗೆ ಅವರು ಮಾತನಾಡಿದರು..

ಒಳನೋಟ

ಬೇಕಿದೆ ಕಾಯಕಲ್ಪ

ಬೆಂಗಳೂರು: ‘ಕಟ್ಟಡಗಳಿವೆ; ಸೌಕರ್ಯಗಳೇ ಇಲ್ಲ!’ ಶೀರ್ಷಿಕೆಯಡಿ ‘ಪ್ರಜಾವಾಣಿ’ಯಲ್ಲಿ ಭಾನುವಾರ (ಮಾ.13) ಪ್ರಕಟವಾದ ‘ಒಳನೋಟ’ ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

ಶಿಕ್ಷಣ ಇನ್ನೂ ದುಬಾರಿ

ದೇಶದ ವಿದ್ಯಾರ್ಥಿಗಳಲ್ಲಿ ಅಪಾರ ಪ್ರತಿಭೆಯಿದ್ದರೂ ಅವರಿಗೆ ತಕ್ಕ ಅವಕಾಶಗಳಿಲ್ಲ. ಶಿಕ್ಷಣ ಪಡೆಯುವಷ್ಟು ಅನುಕೂಲಗಳನ್ನು ಸರ್ಕಾರವೂ ಮಾಡುವುದಿಲ್ಲ. ಇದರಿಂದ ನೆಚ್ಚಿನ ಕ್ಷೇತ್ರದ ಆಯ್ಕೆಗೆ ವಿದ್ಯಾರ್ಥಿಗಳು ಹೆಣಗಾಡಬೇಕಾಗಿದೆ. ಸರ್ಕಾರಿ ಕಾಲೇಜುಗಳಲ್ಲಿ ಶುಲ್ಕ ಇರುತ್ತದೆ. ಆದರೆ, ಮೂಲಸೌಕರ್ಯಗಳಿರುವುದಿಲ್ಲ. ಈ ಕಾರಣದಿಂದ ವಿದ್ಯಾರ್ಥಿಗಳು ಶಿಕ್ಷಣ ಪಡೆಯಲು ವಿದೇಶಗಳತ್ತ ಮುಖ ಮಾಡುತ್ತಾರೆ.

ಅನುಷಾ ಹಿರೇಮಠ್, ಕೊಪ್ಪಳ

ಪ್ರದರ್ಶನಕ್ಕೆ ಕಾಲೇಜುಗಳ ಆರಂಭ

ಸರ್ಕಾರಗಳು ತನ್ನ ಸಾಧನೆ ಪ್ರದರ್ಶಿಸಲು ಎಂಜಿನಿಯರಿಂಗ್ ಕಾಲೇಜುಗಳನ್ನು ಪ್ರಾರಂಭಿಸುತ್ತವೆ. ಆದರೆ, ಅವುಗಳಿಗೆ ಅಗತ್ಯವಾದ ಹಾಗೂ ಆಧುನಿಕ ಸೌಕರ್ಯಗಳನ್ನು ಕಲ್ಪಿಸುವುದಿಲ್ಲ. ಪ್ರಯೋಗಾಲಯ, ತಾಂತ್ರಿಕ ಸಿಬ್ಬಂದಿ ನೇಮಕಾತಿ ಮಾಡಿಕೊಳ್ಳಲು ನಿರ್ಲಕ್ಷ್ಯ ತೋರಿ, ವಿದ್ಯಾರ್ಥಿಗಳ ಭವಿಷ್ಯದ ಜೊತೆಗೆ ಆಟವಾಡುತ್ತಿದ್ದಾರೆ.

ಆರ್.ಕುಮಾರ್, ಬೆಂಗಳೂರು

ಶೈಕ್ಷಣಿಕ ಗುಣಮಟ್ಟಕ್ಕೆ ಪೆಟ್ಟು

ಎಂಜಿನಿಯರಿಂಗ್ ಕಾಲೇಜುಗಳಿಗೆ ಕಾಯಂ ಉಪನ್ಯಾಸಕರು ಹಾಗೂ ಸಿಬ್ಬಂದಿ ನೇಮಿಸದೆ, ಬಹುತೇಕರನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಲಾಗಿದೆ. ಇಂತಹ ಕೌಶಲರಹಿತ ಸಿಬ್ಬಂದಿಯಿಂದ ಶಿಕ್ಷಣದ ಗುಣಮಟ್ಟವನ್ನು ಪೂರ್ಣಪ್ರಮಾಣದಲ್ಲಿ ನಿರೀಕ್ಷಿಸಲು ಸಾಧ್ಯವಿಲ್ಲ. ಇದರಿಂದ ವಿದ್ಯಾರ್ಥಿಗಳ ಕಲಿಕೆ ಹಾಗೂ ಸಮಾಜದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಅರ್ಹತೆ ಇರುವ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಬೇಕು.

ಯಲ್ಲಪ್ಪ, ಬಾಗಲಕೋಟೆ

ಮೂಲಸೌಕರ್ಯ ಅನಿವಾರ್ಯ

ಹಿಂದಿನ ವರ್ಷಗಳಲ್ಲಿ ಯಾವುದೇ ಕಟ್ಟಡಗಳಿಲ್ಲದೆ, ಮೂಲ ಸೌಕರ್ಯಗಳಿಲ್ಲದೆಯೂ ಶಿಕ್ಷಣ ಸಾಗುತ್ತಿತ್ತು. ಆದರೆ, ಈ ಆಧುನಿಕ ಯುಗದಲ್ಲಿ ಎಲ್ಲ ಸೌಕರ್ಯಗಳು ಸಿಗದಿದ್ದರೆ, ವಿದ್ಯಾರ್ಥಿಗಳ ಭವಿಷ್ಯ ಹಾಳಾಗುತ್ತದೆ. ಸಮಾಜಕ್ಕೆ ಉತ್ತಮ ಎಂಜಿನಿಯರ್‌ಗಳನ್ನು ಕೊಡುಗೆಯಾಗಿ ನೀಡಲು ಸಾಧ್ಯವಿಲ್ಲ. ಇದರಿಂದ ದೇಶದ ಪ್ರಗತಿಗೂ ಹಿನ್ನಡೆ ತಪ್ಪಿದ್ದಲ್ಲ.

ವಿಶಾಖ, ಎಚ್.ಡಿ.ಕೋಟೆ

ಕಾಲೇಜುಗಳನ್ನು ಸ್ಮಾರ್ಟ್‌ಗೊಳಿಸಿ

ಆಧುನಿಕ ತಂತ್ರಜ್ಞಾನಗಳ ವ್ಯವಸ್ಥೆ ಕಲ್ಪಿಸುವ ಮೂಲಕ ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳನ್ನು ಸ್ಮಾರ್ಟ್‌ಗೊಳಿಸಬೇಕು. ಮಧ್ಯಮ ವರ್ಗದ ವಿದ್ಯಾರ್ಥಿಗಳಿಗೆ ಕಾಲೇಜಿನ ಶುಲ್ಕ ಪಾವತಿಸುವುದು ಸವಾಲಾಗಿದೆ. ಸರ್ಕಾರ ಕಟ್ಟಡ ನಿರ್ಮಾಣಕ್ಕೆ ಕೊಡುವ ಗಮನವನ್ನು ಬೋಧಕರ ನೇಮಕ, ಮೂಲಸೌಲಭ್ಯಕ್ಕೂ ನೀಡಬೇಕು. ಆಗ ವಿದ್ಯಾರ್ಥಿಗಳು ಖಾಸಗಿ ಕಾಲೇಜುಗಳಿಗೆ ಹೋಗುವುದು ನಿಲ್ಲುತ್ತದೆ.

ವೀಣಾ, ದಾವಣಗೆರೆ

ಕೊರತೆಗಳನ್ನು ನೀಗಿಸಿ



ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯೇ ಇರದಿದ್ದಾಗ ಕಾಲೇಜುಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಆರಂಭಿಸಿದರೆ ಪ್ರಯೋಜನ ಏನು? ಈ ಸ್ಥಿತಿ ಹೀಗೆಯೇ ಮುಂದುವರಿದರೆ ವಿದ್ಯಾರ್ಥಿಗಳು ಕಲಿಯುವುದನ್ನು ಬಿಟ್ಟು ರಾಜಕೀಯ ಪಕ್ಷಗಳ ಹಿಂದೆ ಬಿದ್ದು ಜೀವನ ಹಾಳುಮಾಡಿಕೊಳ್ಳುತ್ತಾರೆ. ಸರ್ಕಾರ ಆದ್ಯತೆ ಮೇರೆಗೆ ಸೌಲಭ್ಯ ಕಲ್ಪಿಸಬೇಕು.

ವಿಕ್ರಾಂತ್, ಮೈಸೂರು

ತಾಲ್ಲೂಕು ಪಂಚಾಯಿತಿ ‘ಜನಸಂಖ್ಯೆ’ ಮಿತಿ

ಒಂದನೇ ಪುಟದಿಂದ

ಜಿಲ್ಲಾ ಪಂಚಾಯಿತಿ ಸದಸ್ಯ ಕ್ಷೇತ್ರಕ್ಕೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರತಿ 30 ಸಾವಿರ ಜನಸಂಖ್ಯೆಗೆ ಒಬ್ಬ ಸದಸ್ಯರಿರಬೇಕು ಎಂಬ ಹಾಲಿ ನಿಯಮ ಬದಲಿಸಲೂ ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ. ಹೊಸ ನಿಯಮದಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ತರೀಕೆರೆ, ಕಡೂರು, ಅಜ್ಜಂಪುರ ತಾಲ್ಲೂಕುಗಳನ್ನು ಹೊರತುಪಡಿಸಿದ ಪ್ರದೇಶದಲ್ಲಿ ಪ್ರತಿ 30 ಸಾವಿರಕ್ಕೆ ಒಬ್ಬರು ಸದಸ್ಯರು ಇರಬೇಕು ಎಂಬ ನಿಯಮ ಅನ್ವಯ ಆಗಲಿದೆ.

ಉಸ್ತುವಾರಿ ಸಚಿವರು ಜಿಲ್ಲಾ ಯೋಜನಾ ಸಮಿತಿ ಅಧ್ಯಕ್ಷರು: ಪ್ರಸ್ತಾಪಿತ ಮಸೂದೆ ಪ್ರಕಾರ, ಇನ್ನು ಮುಂದೆ ಜಿಲ್ಲಾ ಯೋಜನಾ ಸಮಿತಿಗೆ ಆಯಾ ಜಿಲ್ಲೆಯ ಉಸ್ತುವಾರಿ ಸಚಿವರು ಅಧ್ಯಕ್ಷ ಆಗಲಿದ್ದಾರೆ. ಜಿಲ್ಲಾ ಪಂಚಾಯಿತಿ ಅಧ್ಯಕ್ಷರು ಸಮಿತಿ ಉಪಾಧ್ಯಕ್ಷ ಆಗಲಿದ್ದಾರೆ. ಮೇಯರ್ ಅಥವಾ ಸಂಬಂಧಿಸಿದ ಜಿಲ್ಲಾ ಕೇಂದ್ರದ ನಗರಸಭೆ ಅಥವಾ ಪುರಸಭೆಯ ಅಧ್ಯಕ್ಷರೂ ಉಪಾಧ್ಯಕ್ಷ ಆಗಿರುತ್ತಾರೆ. ಈವರೆಗೆ ಎಲ್ಲರೂ ಸಮಿತಿ ಸದಸ್ಯರು ಎಂದು ಪರಿಗಣಿಸಲಾಗುತ್ತಿತ್ತು. ತಿದ್ದುಪಡಿ ಮೂಲಕ, ಮುಖ್ಯಮಂತ್ರಿ ಅಧ್ಯಕ್ಷರಾಗಿರುವ ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಗೆ ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷರನ್ನು ವಿಶೇಷ ಆಹ್ವಾನಿತರಾಗಿ ಮಾಡಲು ಉದ್ದೇಶಿಸಲಾಗಿದೆ.

ಶಿಕ್ಷಣ

ವರ್ಷವಿಡೀ ಓದಿದ್ದರೂ, ಪರೀಕ್ಷೆ ಸಮೀಪಿಸುತ್ತಿದ್ದಂತೆ ಕೆಲ ವಿದ್ಯಾರ್ಥಿಗಳಲ್ಲಿ ಸಹಜವಾಗಿಯೇ ಸಣ್ಣದೊಂದು ಆತಂಕವಿರುತ್ತದೆ. 'ಓದಿದ್ದೆಲ್ಲವನ್ನೂ ಇನ್ನೊಂದು ಸಾರಿ ತಿರುವಿ ಹಾಕಿಬಿಡೋಣ' ಎಂದು ಮನಸ್ಸು ಹೇಳುತ್ತಿರುತ್ತದೆ. ಇಂಥ ಪರಿಸ್ಥಿತಿಯಲ್ಲಿ ಪರೀಕ್ಷೆಗೆ ಅಂತಿಮ ಹಂತದ ಸಿದ್ಧತೆ ಹೇಗೆ ಮಾಡಿಕೊಳ್ಳಬೇಕೆಂಬ ಕುರಿತ ಸಲಹೆಗಳು ಇಲ್ಲಿವೆ.

ಪರೀಕ್ಷೆ: ವಿಶ್ವಾಸವೇ ಶ್ರೀರಕ್ಷೆ

ವೆಂಕಟ ಸುಬ್ಬರಾವ್ ವಿ.

ನೋಡ ನೋಡುತ್ತಲೇ ಈ ಬಾರಿಯ ಶೈಕ್ಷಣಿಕ ವರ್ಷದ ಅಂತಿಮ ಘಟ್ಟ ತಲುಪಿದ್ದೇವೆ. ಪರೀಕ್ಷೆಗಳು ಸಮೀಪಿಸುತ್ತಿವೆ. ಈ ವಾರಾಂತ್ಯದಿಂದಲೇ ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಾಲೆ ಪರೀಕ್ಷೆಗಳು ಸರಣಿಯಾಗಿ ಶುರುವಾಗುತ್ತವೆ. ಮುಂದಿನ ವಾರ ಎಸ್ಸೆಸ್ಸೆಲ್ಸಿ, ಮುಂದಿನ ತಿಂಗಳು ಪಿಯುಸಿಯ ವಾರ್ಷಿಕ ಪರೀಕ್ಷೆಗಳು ಆರಂಭವಾಗುತ್ತವೆ.

'ಕೊರೊನಾ' ಕಾರಣ ಬಹುತೇಕ ಮಕ್ಕಳು ಎರಡೂ ವರ್ಷ ಆನ್‌ಲೈನ್‌ನಲ್ಲಿ ಪರೀಕ್ಷೆಗಳನ್ನು ಬರೆದಿದ್ದರು. ಈ ವರ್ಷ ಶಾಲೆಗಳು ತಡವಾಗಿ ಆರಂಭವಾಗಿದ್ದರೂ ಭೌತಿಕವಾಗಿ ಪರೀಕ್ಷೆ ನಡೆಸಲಾಗುತ್ತಿದೆ. ತರಗತಿಗಳು ವಿಳಂಬವಾದ ಕಾರಣ, ಎಸ್‌ಎಸ್‌ಎಲ್‌ಸಿಯ ಪಠ್ಯಗಳನ್ನು ಶೇ 20ರಷ್ಟು ಕಡಿತ ಮಾಡಲಾಗಿದೆ. ಆನ್‌ಲೈನ್ ಪಾಠ–ಪರೀಕ್ಷೆಗಳಿಗೆ ಒಗ್ಗಿದ್ದ ಮಕ್ಕಳು ಈಗ ಭೌತಿಕವಾಗಿ ಪರೀಕ್ಷೆಗೆ ಸಜ್ಜಾಗುತ್ತಿದ್ದೀರಿ.

'ಎಲ್ಲ ಓದಿ ಮುಗಿಸಿದ್ದೀನಪ್ಪಾ' ಎಂದುಕೊಂಡರೂ, ಕೆಲವು ಮಕ್ಕಳಿಗೆ ಪರೀಕ್ಷೆ ಸಮೀಪಿಸುತ್ತಿದ್ದಂತೆ ಸ್ವಲ್ಪ ಮಟ್ಟಿನ ಗಾಬರಿ, ಆತಂಕ ಇದ್ದೇ ಇರುತ್ತದೆ. ಅದು ಸಹಜ. ಏನೇ ಓದಿದ್ದರೂ, ಎಷ್ಟೇ ಸಿದ್ಧರಾಗಿದ್ದರೂ, ಕೊನೆ ಗಳಿಗೆಯ ಸಿದ್ಧತೆಗಳೂ ಮಹತ್ವದ್ದಾಗಿರುತ್ತವೆ. ಈ ಸಮಯದಲ್ಲಿ ಏನು ಓದಬೇಕು–ಹೇಗೆ ಓದಬೇಕೆಂಬ ಗೊಂದಲವೂ ಇರುತ್ತದೆ. ಮಕ್ಕಳಲ್ಲಿರುವ ಆತಂಕ ಹೋಗಲಾಡಿಸುವುದಕ್ಕಾಗಿ ಈ ಲೇಖನದಲ್ಲಿ ಕೊನೆ ಹಂತದ ತಯಾರಿ ಕುರಿತು ಕೆಲವೊಂದು ಟಿಪ್ಸ್‌ಗಳನ್ನು ನೀಡಲಾಗಿದೆ.

ಹೀಗೆ ಮಾಡಿ...

- ಪರೀಕ್ಷೆ ಸಮೀಪವಿರುವಾಗ ಹೊಸದಾಗಿ ಪಾಠಗಳನ್ನು ಓದಲು ಪ್ರಾರಂಭಿಸುವ ಬದಲು, ಮೊದಲೇ ಓದಿದ ವಿಷಯಗಳ ಪುನರಾವರ್ತನೆ ಮಾಡುವುದು ಉತ್ತಮ. ಈ ಸಮಯದಲ್ಲಿ ನೀವು ಮೊದಲೇ ಸಿದ್ಧಪಡಿಸಿದ 'ಮೈಂಡ್-ಮ್ಯಾಪ್' ಗಳು ಸಹಾಯವಾಗುತ್ತವೆ.
- ಪರೀಕ್ಷೆಗೆ ಇನ್ನೆಷ್ಟು ಸಮಯವಿದೆ ಎಂದು ನೋಡಿಕೊಂಡು, ಆ ಸಮಯಕ್ಕೆ ತಕ್ಕಂತೆ ವೇಳಾಪಟ್ಟಿ ಸಿದ್ಧಪಡಿಸಿಕೊಳ್ಳಿ. 'ಇನ್ನೂ ಟೈಮ್ ಇದೆಯಲ್ಲಾ, ನಾಳೆ ಓದೋಣ' ಎಂಬ ನಿರ್ಲಕ್ಷ್ಯದೊಂದಿಗೆ ವೇಳಾಪಟ್ಟಿಯಲ್ಲಿ ನಿಗದಿಪಡಿಸಿದ ಸಮಯವನ್ನು ಮುಂದೂಡಬೇಡಿ. ಕೆಲವು ಬಾರಿ, ಒತ್ತಡದಲ್ಲಿ ಸಿಲುಕಿ, ಯೋಚಿಸುತ್ತಾ ಸಮಯ ಹಾಳಾಗಬಹುದು. ಸಮಯವನ್ನು ಸರಿಯಾಗಿ ಉಪಯೋಗಿಸಿ.
- ಹೊಸ ವಿಷಯಗಳನ್ನು ಬಾಯಿಪಾಠ ಅಥವಾ ಕಂಠಪಾಠ ಮಾಡಿ ನೆನಪಿಟ್ಟುಕೊಳ್ಳಲು ಪ್ರಯತ್ನಿಸಬೇಡಿ. ಯಾವಾಗಲೂ ಪರೀಕ್ಷೆಯಲ್ಲಿ ನೀವು ಸರಿಯಾಗಿ ಅರ್ಥೈಸಿಕೊಂಡ ಪಾಠಗಳು ಸಹಜವಾಗಿಯೇ ನೆನಪಿಗೆ ಬರುತ್ತವೆ.
- ಎಲ್ಲಾ ಅಧ್ಯಯನ ಸಾಮಗ್ರಿ, ಪರಿಕರಗಳು ಸುಲಭವಾಗಿ ನಿಮ್ಮ ಕೈಗೆಟುಕುವಂತೆ ಇಟ್ಟುಕೊಳ್ಳಿ. ಇವುಗಳಲ್ಲಿ ಮುಖ್ಯವಾಗಿ ಪುನರಾವರ್ತನೆಯ ಟಿಪ್ಪಣಿಗಳು, ಹಿಂದಿನ ವರ್ಷಗಳ ಪ್ರಶ್ನೆಪತ್ರಿಕೆಗಳು, ಉತ್ತರಗಳು ಇರಲಿ.
- ಈ ಎರಡು ವರ್ಷಗಳಲ್ಲಿ, ಕೆಲವರಿಗೆ, ಬರೆಯುವ ಅಭ್ಯಾಸ ಕಡಿಮೆಯಾಗಿರಬಹುದು. ಹಾಗೆಯೇ, ಪುನರಾವರ್ತನೆಯ ಪಾಠಗಳು ಅರ್ಥವಾಗಿವೆ ಎಂದೆನ್ನಿಸಿದ್ದರೂ, ಪರೀಕ್ಷೆ ಬರೆಯುವಾಗ ಒಮ್ಮೊಮ್ಮೆ ನೆನಪಿಗೆ ಬರುವುದಿಲ್ಲ. ಆದ್ದರಿಂದ ಓದಿದ್ದನ್ನು ಬರೆದು ಅಭ್ಯಾಸ ಮಾಡಿ. ಇದರಿಂದ ಬರವಣಿಗೆಯೂ ಉತ್ತಮಗೊಳ್ಳುತ್ತದೆ. ಪರೀಕ್ಷೆಯಲ್ಲಿ ಹೇಗೆ ಸಮಯ ನಿರ್ವಹಣೆ ಮಾಡಿಕೊಳ್ಳಬೇಕೆಂದೂ ಅರ್ಥವಾಗುತ್ತದೆ.
- ನೀವು ಕಲಿತಿರುವ ವಿಷಯಗಳನ್ನು ಬೇರೆಯವರೊಂದಿಗೆ ಹಂಚಿಕೊಳ್ಳಿ. ಉದಾಹರಣೆಗೆ, ನೀವು ಕಲಿತಿರುವ ಪ್ರಶ್ನೋತ್ತರಗಳನ್ನು ನಿಮ್ಮ ಮನೆಯ ಸದಸ್ಯರಿಗೋ, ನಿಮ್ಮ ಗೆಳೆಯರಿಗೋ ವಿವರಿಸಿ. ಬೇಕಾದರೆ, ನಿಮ್ಮ ಗೆಳೆಯರಿಗೆ ಕಲಿಸಿ. ಇದರಿಂದ ನಿಮ್ಮ ಆತ್ಮವಿಶ್ವಾಸವೂ ಹೆಚ್ಚುತ್ತದೆ. ಸಮಯವೂ ಉಳಿಯುತ್ತದೆ. ಆದರೆ, ಈ ಪ್ರಕ್ರಿಯೆಯಲ್ಲಿ ನೀವು ವಿನಾ ಕಾರಣ ಸಮಯ ವ್ಯರ್ಥ ಮಾಡುತ್ತಿಲ್ಲ ಎಂಬುದನ್ನು ಖಾತ್ರಿಪಡಿಸಿಕೊಳ್ಳಿ.
- ಓದುವ ಕಡೆಗೆ ಗಮನ ಕೊಟ್ಟು, ಊಟ–ಉಪಾಹಾರವನ್ನು ನಿರ್ಲಕ್ಷಿಸಬೇಡಿ. ನಿದ್ದೆಗೆಟ್ಟು ಓದುವುದೂ ಒಳ್ಳೆಯದಲ್ಲ. ಸರಿಯಾದ ಸಮಯಕ್ಕೆ, ಪೌಷ್ಟಿಕ ಆಹಾರ ಸೇವಿಸಿ, ಆರೋಗ್ಯ ಕಾಪಾಡಿಕೊಳ್ಳಿ. ನಿದ್ದೆ ಮುಂದೂಡಲು ಅತಿಯಾದ ಕಾಫಿ ಅಥವಾ ಟೀ ಕುಡಿಯುವ ಅಭ್ಯಾಸ ಮಾಡಬೇಡಿ. ಇವು ಆ ಕ್ಷಣದಲ್ಲಿ ಸಹಾಯಕವಾಗಿದೆ ಎನಿಸಿದರೂ, ಆರೋಗ್ಯ ಕೆಡಿಸುವ ಹಾಗೂ ಚಟವಾಗುವ ಸಾಧ್ಯತೆ ಹೆಚ್ಚು. ಎಚ್ಚರವಿರಲಿ.
- ಕೆಲವರಿಗೆ ಬೆಳಿಗ್ಗೆ ಬೇಗ ಏಳಲು ಸಾಧ್ಯವಾಗದಿರಬಹುದು. ಕೆಲವರಿಗೆ ರಾತ್ರಿ ಬಹಳ ಹೊತ್ತು ಎದ್ದಿರಲು ಸಾಧ್ಯವಾಗದಿರಬಹುದು. ಇದರ ಬಗ್ಗೆ ಚಿಂತಿಸಬೇಡಿ. ಈ ವಿಷಯದಲ್ಲಿ ಬೇರೆಯವರೊಂದಿಗೆ ಹೋಲಿಕೆಯೂ ಬೇಡ. ಮಲಗುವ ಮತ್ತು ಏಳುವ ಸಮಯದ ಆಧಾರದ ಮೇಲೆ ನೀವು ಓದಬೇಕಾದ ವೇಳಾಪಟ್ಟಿ ಮಾಡಿಕೊಳ್ಳಿ.
- ಪರೀಕ್ಷೆಗೆ ಕೊಂಡೊಯ್ಯಬೇಕಾದ ಪೆನ್ನುಗಳು, ಪ್ರವೇಶಪತ್ರ ಇತ್ಯಾದಿಗಳನ್ನು ಮೊದಲೇ ಅಣಿಮಾಡಿಟ್ಟುಕೊಳ್ಳಿ. ಇದರಿಂದ ಕೊನೆಯ ಕ್ಷಣದಲ್ಲಿನ ಆತಂಕ ಕಡಿಮೆಯಾಗುತ್ತದೆ.
- ಈ ಸಮಯದಲ್ಲಿ, ನಿಮ್ಮ ಸಹಪಾಠಿಗಳೊಂದಿಗೆ ಮತ್ತು ಅವರು ಓದುತ್ತಿರುವ ವಿಧಾನಗಳಿಗೆ ನಿಮ್ಮನ್ನು ಹೋಲಿಸಿಕೊಳ್ಳಬೇಡಿ. ಪ್ರತಿಯೊಬ್ಬರು ಓದುವ ರೀತಿ, ಗ್ರಹಿಸುವ ರೀತಿ ಬೇರೆಯದ್ದಾಗಿರುತ್ತದೆ.

ತರಗತಿಗಳು ಆನ್-ಲೈನ್ ಆಗಿರಲಿ, ಆಫ್-ಲೈನ್ ಆಗಿರಲಿ ಕಲಿಕಾ ಪ್ರಕ್ರಿಯೆ ನಡೆದೇ ಇದೆ. ಆದ್ದರಿಂದ, ಈ ಸಮಯದಲ್ಲಿ ಯಾವುದೇ ಗೊಂದಲಗಳಿಲ್ಲದೆ, ಪರೀಕ್ಷೆಯಲ್ಲಿ ಆತ್ಮವಿಶ್ವಾಸದಿಂದ ಉತ್ತರಿಸಿ. ಶುಭವಾಗಲಿ.

(ಲೇಖಕರು: ನಿರ್ದೇಶಕರು, ಸ್ಮಾರ್ಟ್ ಸೆರೆಬ್ರಮ್ ಪ್ರೈ. ಲಿ.)

ವಿದ್ಯಾರ್ಥಿ ವೇತನ ಕೈಪಿಡಿ

ನಿಕಾನ್ ಸ್ಕಾಲರ್‌ಶಿಪ್ ಪ್ರೋಗ್ರಾಂ 2022-23

ವಿವರ: ನಿಕಾನ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಛಾಯಾಗ್ರಾಹಣ ಕೋರ್ಸ್ ಮಾಡುತ್ತಿರುವ ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನಿಸಿದೆ.

ಅರ್ಹತೆ: 3 ತಿಂಗಳು ಅಥವಾ ಅದಕ್ಕಿಂತ ಹೆಚ್ಚಿನ ಅವಧಿಯ ಛಾಯಾಗ್ರಹಣ ಕೋರ್ಸ್‌ಗಳನ್ನು ಮಾಡುತ್ತಿರುವ ವಿದ್ಯಾರ್ಥಿಗಳು ಇದಕ್ಕೆ ಅರ್ಹರು. ಅರ್ಜಿ ಸಲ್ಲಿಸುವವರ ಕುಟುಂಬದ ವಾರ್ಷಿಕ ಆದಾಯವು ₹ 6 ಲಕ್ಷಕ್ಕಿಂತ ಕಡಿಮೆಯಿರಬೇಕು.

ಆರ್ಥಿಕ ನೆರವು: ₹ 1 ಲಕ್ಷದವರೆಗೆ

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಮಾರ್ಚ್ 31, 2022

ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಮೂಲಕ

ಹೆಚ್ಚಿನ ಮಾಹಿತಿಗೆ: www.b4s.in/praja/NSP8

ಯಾವ 'ಪ್ರೋಗ್ರಾಮಿಂಗ್ ಕೋರ್ಸ್' ಉತ್ತಮ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ವಿ. ಪ್ರದೀಪ್ ಕುಮಾರ್

1. ನಾನು 2021ರಲ್ಲಿ ಬಿಸಿಎ ಮುಗಿಸಿದ್ದೇನೆ. ಈಗ ಎಂಸಿಎ/ಎಂಟೆಕ್ ಮಾಡುವುದೋ ಅಥವಾ ಬೇರೆ ಯಾವುದಾದರೂ ಕೋರ್ಸ್ ಮಾಡುವುದೋ ಎಂಬ ಗೊಂದಲದಲ್ಲಿದ್ದೇನೆ. ಹಾಗಾಗಿ ಬಿಸಿಎ ಮುಗಿಸಿದವರಿಗೆ ಯಾವ 'ಪ್ರೋಗ್ರಾಮಿಂಗ್ ಕೋರ್ಸ್' ಆಯ್ಕೆ ಮಾಡಿಕೊಳ್ಳುವುದು ಒಳ್ಳೆಯದು, ತಿಳಿಸಿ?

ಹೆಸರು, ಊರು ತಿಳಿಸಿಲ್ಲ.

ಮಾಹಿತಿ ತಂತ್ರಜ್ಞಾನ(ಐಟಿ) ಕ್ಷೇತ್ರ ಬಹಳ ವಿಸ್ತಾರವಾಗಿದೆ. ಈಗ ತ್ವರಿತವಾಗಿ ಅಭಿವೃದ್ಧಿಯಾಗುತ್ತಿರುವ ಐಟಿ ಕ್ಷೇತ್ರದಲ್ಲಿ ಅನೇಕ 'ಪ್ರೋಗ್ರಾಮಿಂಗ್ ಲ್ಯಾಂಗ್ವೇಜ್' ಕೋರ್ಸ್‌ಗಳಿವೆ. ಅವುಗಳಲ್ಲಿ ಒಂದನ್ನು ಆಯ್ಕೆ ಮಾಡುವುದು ಸುಲಭದ ಕೆಲಸವಲ್ಲ. ಏಕೆಂದರೆ, ಪ್ರತಿ ಕೋರ್ಸ್‌ಗೆ (ಉದಾಹರಣೆಗೆ, ಜಾವಾ, ಜಾವಾ ಸ್ಕ್ರಿಪ್ಟ್, ಸಿ, ಸಿ++, ಎಚ್‌ಟಿಎಂಎಲ್, ಪೈಥಾನ್, ಸ್ವಿಫ್ಟ್, ಯೂನಿಟಿ, ಗೋ, ರಸ್ಟ್ ಇತ್ಯಾದಿ) ತನ್ನದೇ ಆದ ಉಪಯುಕ್ತತೆ ಮತ್ತು ಇತಿಮಿತಿಯಿರುತ್ತದೆ. ಈ ಕ್ಷೇತ್ರದಲ್ಲಿರುವ ಆಕರ್ಷಕ ಮತ್ತು ವೈವಿಧ್ಯಮಯ ಉದ್ಯೋಗಾವಕಾಶಗಳನ್ನು ಬಳಸಿಕೊಳ್ಳಲು ಸ್ಪಷ್ಟವಾದ ವೃತ್ತಿಯೋಜನೆಯಿರಲೇ ಬೇಕು. ಆದ್ದರಿಂದ, ನಿಮ್ಮ ಸ್ವಾಭಾವಿಕ ಪ್ರತಿಭೆ, ಆಸಕ್ತಿ, ಅಭಿರುಚಿಯಂತೆ ವೃತ್ತಿಯೋಜನೆಯನ್ನು ಮಾಡಿದರೆ ನಿಮಗೆ ಯಾವ ಪ್ರೋಗ್ರಾಮಿಂಗ್ ಲ್ಯಾಂಗ್ವೇಜ್ ಕೋರ್ಸ್‌ನಲ್ಲಿ ಪರಿಣತಿಬೇಕಾಗುತ್ತದೆ ಎಂದು ಅರಿವಾಗುತ್ತದೆ. ಬಿಸಿಎ ನಂತರ ಪ್ರೋಗ್ರಾಮಿಂಗ್ ಅಲ್ಲದೇ ಡೇಟಾ ಸೈಂಟಿಸ್ಟ್, ಡಿಜಿಟಲ್ ಮಾರ್ಕೆಟಿಂಗ್, ಪ್ರಾಡಕ್ಟ್ ಮ್ಯಾನೇಜ್‌ಮೆಂಟ್, ಬ್ಲಾಕ್‌ಚೈನ್ ಮುಂತಾದ ಕ್ಷೇತ್ರಗಳಲ್ಲೂ ವೃತ್ತಿಯನ್ನು ಅರಸಬಹುದು. ಹೆಚ್ಚಿನ ತಜ್ಞತೆಗಾಗಿ ಎಂಸಿಎ/ಎಂಟೆಕ್ ಮಾಡಬಹುದು.

2. ದೂರ ಶಿಕ್ಷಣದಲ್ಲಿ ಪಡೆದ ಪದವಿ, ಯುಜಿಸಿ ಮಾನ್ಯತೆ ಹೊಂದಿದೆಯೇ ಎಂಬುದನ್ನು ನಾವು ಹೇಗೆ ಖಚಿತ ಪಡಿಸಿಕೊಳ್ಳಬೇಕು?

ಮಹೇಶ್, ಊರು ತಿಳಿಸಿಲ್ಲ.

ವಿಶ್ವವಿದ್ಯಾಲಯದ ಧನಸಹಾಯ ಆಯೋಗ (ಯುಜಿಸಿ) ನಿಯಮದ ಪ್ರಕಾರ ರಾಷ್ಟ್ರೀಯ ಮೌಲ್ಯಾಂಕನ ಮತ್ತು ಮಾನ್ಯತಾ ಮಂಡಳಿ (ನ್ಯಾಕ್), 'ಎ' ಶ್ರೇಣಿಯ ಮಾನ್ಯತೆ ಪಡೆದಿರುವ ಎಲ್ಲ ವಿಶ್ವವಿದ್ಯಾಲಯಗಳಿಗೂ ದೂರ ಶಿಕ್ಷಣ ಕೋರ್ಸ್ ಆರಂಭಿಸಲು ಅನುಮತಿ ನೀಡುತ್ತದೆ. ಈ ಕೋರ್ಸ್‌ಗಳನ್ನು ನಡೆಸಲು ದೂರ ಶಿಕ್ಷಣ ಬ್ಯೂರೊ, ಯುಜಿಸಿ ಮಾನ್ಯತೆಯನ್ನು ಪಡೆದಿರಬೇಕು. ಪ್ರತಿ ಶೈಕ್ಷಣಿಕ ವರ್ಷಕ್ಕೆ ಅನುಗುಣವಾಗುವಂತೆ ಮಾನ್ಯತೆ ಪಡೆದಿರುವ ಕೋರ್ಸ್‌ಗಳ ಪಟ್ಟಿಯನ್ನು ದೂರ ಶಿಕ್ಷಣ ಬ್ಯೂರೊ, ಯುಜಿಸಿ ಸಂಸ್ಥೆಯ ಜಾಲತಾಣದಲ್ಲಿ ಪ್ರಕಟಿಸುತ್ತದೆ. ಈ ಜಾಲತಾಣದಲ್ಲಿ ಕಳೆದ ಹಲವಾರು ವರ್ಷಗಳಿಗೆ ಅನ್ವಯವಾಗುವ ಮಾನ್ಯತೆ ಪಡೆದ ಕೋರ್ಸ್‌ಗಳ ಮಾಹಿತಿಯೂ ಲಭ್ಯ. ಹಾಗಾಗಿ, ದೂರ ಶಿಕ್ಷಣ ಮತ್ತು ಆನ್‌ಲೈನ್ ಕೋರ್ಸ್‌ಗೆ ಸೇರುವ ಮೊದಲು ಈ ಜಾಲತಾಣದಲ್ಲಿನ ಮಾಹಿತಿಯನ್ನು ಪರಾಮರ್ಶಿಸಿ: https://deb.ugc.ac.in/

3. ನಾನು ವಿಜ್ಞಾನ ಪದವಿ ಮುಗಿಸಿದ್ದೇನೆ. ಪ್ರಸ್ತುತ, ಒಂದು ವರ್ಷದಿಂದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿದ್ದೇನೆ. ಓದಿನ ಜೊತೆಗೆ ಅರೆಕಾಲಿಕ ಕೆಲಸ ಪಡೆಯಲು ಕಡಿಮೆ ಅವಧಿಯ ಉತ್ತಮ ಕೋರ್ಸ್ ತಿಳಿಸಿ. ಮಾಹಿತಿ ತಂತ್ರಜ್ಞಾನ ವಲಯದಲ್ಲಿದ್ದರೆ ಒಳ್ಳೆಯದು.

ಹೆಸರು, ಊರು ತಿಳಿಸಿಲ್ಲ.

ನಿಮ್ಮ ಆಸಕ್ತಿಗೆ ಅನುಗುಣವಾಗಿ ಮಾಹಿತಿ ತಂತ್ರಜ್ಞಾನ ವಲಯದ ಗ್ರಾಫಿಕ್ ಡಿಸೈನ್, ವೆಬ್ ಡಿಸೈನ್, ವಿಎಫ್‌ಎಕ್ಸ್, ಅನಿಮೇಷನ್, ಎಸ್‌ಇಒ, ಡಿಜಿಟಲ್ ಮಾರ್ಕೆಟಿಂಗ್, ಡೇಟಾ ಸೈನ್ಸ್, ಮೆಷಿನ್ ಲರ್ನಿಂಗ್ ಇತ್ಯಾದಿ ಕೋರ್ಸ್‌ಗಳನ್ನು ಮಾಡಬಹುದು. ಜೊತೆಗೆ, ಯಾವುದೇ ಕೋರ್ಸ್‌ನ ಅಗತ್ಯವಿಲ್ಲದೇ ಮಾಡಬಹುದಾದ ಅನೇಕ ಅರೆಕಾಲಿಕ ಉದ್ಯೋಗಾವಕಾಶಗಳೂ ಲಭ್ಯ. ಹೆಚ್ಚಿನ ಮಾರ್ಗದರ್ಶನಕ್ಕಾಗಿ ಗಮನಿಸಿ: http://www.vpradeepkumar.com/earn-while-you-learn-3/

4. ನಾನು ಡಿಪ್ಲೊಮಾ ಮಾಡಿದ್ದು ಪೊಲೀಸ್ ಕಾನ್ಸ್ಟೇಬಲ್ ಆಗಬೇಕು ಅಂತ ತುಂಬಾ ಆಸೆ ಇದೆ. ಪೊಲೀಸ್ ಕಾನ್ಸ್ಟೇಬಲ್ ಹುದ್ದೆಗೆ ಪರೀಕ್ಷೆ ಬರೆಯಬಹುದೇ?

ಮೊಹಮದ್ ಅಲಿ, ರಂಗೇನಹಳ್ಳಿ.

ಮೂರು ವರ್ಷದ ಡಿಪ್ಲೊಮಾ ಕೋರ್ಸ್ ಅಥವಾ ಎರಡು ವರ್ಷದ ಐಟಿಐ ಕೋರ್ಸ್ ಅನ್ನು ಪಿಯುಸಿಗೆ ತತ್ಸಮಾನ ಎಂದು ಪರಿಗಣಿಸಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಗಮನಿಸಿ: https://ksp.karnataka.gov.in/page/Administration/Recruitment/kn

5. ನಾನು ಕೆಪಿಎಸ್‌ಸಿ ಇಲಾಖೆ ನಡೆಸುತ್ತಿರುವ ಪ್ರಥಮ ದರ್ಜೆ ಸಹಾಯಕ (ಎಫ್‌ಡಿಎ) ಮತ್ತು ದ್ವಿತೀಯ ದರ್ಜೆ ಸಹಾಯಕ (ಎಸ್‌ಡಿಎ) ಹುದ್ದೆಗಳಿಗೆ ತಯಾರಿ ನಡೆಸುತ್ತಿದ್ದೇನೆ. ಈ ಮೊದಲು ಇರುವಂತೆ 'ಕನ್ನಡ ವಿಷಯ ಪತ್ರಿಕೆ-2' ಈ ಮುಂದೆ ನಡೆಯುವ ಪರೀಕ್ಷೆಗೆ ಇರಲಿದೆಯೇ?

ಆನಂದ, ಬೆಳಗಾವಿ.

ಎಫ್‌ಡಿಎ/ಎಸ್‌ಡಿಎ ಪರೀಕ್ಷೆಗಳು ಇದೇ ವರ್ಷದ ಸೆಪ್ಟೆಂಬರ್ 18 ಮತ್ತು 19 ರಂದು ನಡೆಯಲಿದೆ. ಪರೀಕ್ಷೆಯ ಇನ್ನಿತರ ವಿವರಗಳ ನಿಖರವಾದ ಮಾಹಿತಿ ಸದ್ಯಕ್ಕೆ ಲಭ್ಯವಿಲ್ಲ. ಹೆಚ್ಚಿನ ಮಾಹಿತಿಗಾಗಿ ಗಮನಿಸಿ: https://www.kpsc.kar.nic.in/

6. ನಾನು ಕನ್ನಡ ಶಿಕ್ಷಕನಾಗಲು ಇಚ್ಛಿಸಿದ್ದೇನೆ . ಈಗ ಬಿಎ ಪದವಿಯಲ್ಲಿ ಐಚ್ಛಿಕ ಕನ್ನಡ ವಿಷಯದಲ್ಲಿ ವ್ಯಾಸಂಗ ಮಾಡುತ್ತಿದ್ದೇನೆ. ಶಿಕ್ಷಕನಾಗಬೇಕಾದರೆ ಮುಂದೆ ಯಾವ ಕೋರ್ಸ್‌ಗಳನ್ನು ಮಾಡಬೇಕು?

ಹೆಸರು, ಊರು ತಿಳಿಸಿಲ್ಲ.

ಪ್ರೌಢ ಶಾಲೆಗಳಲ್ಲಿ ಶಿಕ್ಷಕರಾಗಲು ಬಿಎ, ಬಿ.ಇಡಿ ನಂತರ ಟಿಇಟಿ/ಸಿಟಿಇಟಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ಮೇಲೆ ಪದವಿ ಕೋರ್ಸ್‌ನಲ್ಲಿ ಓದಿರುವ ಪ್ರಮುಖ ವಿಷಯಗಳನ್ನು ಬೋಧಿಸಬಹುದು. ಹೆಚ್ಚಿನ ಮಾಹಿತಿಗಾಗಿ ಗಮನಿಸಿ: https://collegedunia.com/courses/bachelor-of-education-bed/how-to-become-a-teacher#2

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು **shikshana@prajavani.co.in** ಗೆ ಕಳಿಸಬಹುದು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

Degrees of Comparison

ಎಸ್ಸೆಸ್ಸೆಲ್ಸಿ

English

There are three degrees of comparison. They are **Positive, Comparative, and Superlative.**

If an adjective indicates only the simple quality of the noun, it is said to be the **Positive degree.**

(No/none other + common noun …… H.V as + adjective + as + proper noun) / as /so not adjective as

No other boy in the class is as wise as Vivek.

If the adjective denotes a higher or lower degree of quality in comparison with that of another things or things of the same species, it is **Comparative degree.** We have to use **than** after the comparative form.

(Proper noun + helping verb + adjective (er) + than any other + Common Noun + ...)

Vivek is wiser than any other boy in the class.

An adjective in the **Superlative degree** represents the **highest or lowest quality** of the thing in reference to the same quality of more than two things of the same kind. The superlative form is always preceded by the definite article **'the'** and adjective takes **est.**

(Proper noun + helping verb + the + adjective (est) + Common Noun + ...)

Vivek is the wisest boy in the class.

NOTE: Sometimes positive degree begins with **'Very few'** followed by plural helping verb.

1 .**Very few** cricketers are as great as Rahul Dravid.

2. R. Dravid is greater than **most/ many** other cricketers.

3. R. Dravid is **one of the** greatest cricketers.

- Sentence 2 is comparative degree and it takes **'most/many'** in the above exceptional cases.
- Sentence 3 is a superlative degree and it takes **'one of the'** after helping verb in the above cases.

All mono syllabic and some of the disyllabic adjectives form comparative by adding 'er ' or 'r' and the superlative degree by adding 'est' or 'st'		
Positive	**Comparative**	**Superlative**
small	smaller	smallest
fine	finer	finest

If a one - syllable adjective ends in vowel + consonant, the consonant is doubled when 'er' / 'est' is added.		
Positive	**Comparative**	**Superlative**
big	bigger	biggest
hot	hotter	hottest

There are some other adjectives which are irregular in the formation of the comparative and superlative.		
good/well	better	best
little	less	least

Adjectives more than two syllables take 'more' 'most' in comparative and superlative respectively.		
intelligent	more intelligent	most intelligent
difficult	more difficult	most difficult

	Positive Degree	Comparative Degree	Superlative Degree
1	No other artist is as great as Sathish Gujral.	**Sathish Gujral is greater than any other artist.**	**Sathish Gujral is the greatest artist.**
2	**No other state is as literate as Kerala in India.**	Kerala is more literate than any other state in India.	**Kerala is the most literate state in India.**
3	**Very few trees are as useful as Neem.**	**Neem is more useful than many other trees.**	Neem is one of the most useful trees.
1	Very few representatives were as wise as Vivekananda.	**[Exercise]**	**[Exercise]**
2	**[Exercise]**	'Shakuntala' is better than any other drama in Sanskrit.	**[Exercise]**
3	**[Exercise]**	**[Exercise]**	Sachin Tendulkar is the finest batsman in the world.
1		**Vivekananda was wiser than many other representatives.**	**Vivekananda was one of the wisest of representatives.**
2	No other drama is as good as 'Shakuntala' in Sanskrit.		**'Shakuntala' is the best drama in Sanskrit.**
3	**None other batsman is as fine as Sachin Tendulkar in the world.**	**Sachin Tendulkar is finer than any other batsman in the world.**	

Annappa Shetty MA,M.Ed, SRP in English,Hassan

ಮಾದರಿ ಪ್ರಶ್ನೋತ್ತರ

ಬೆಳಕಿನ ಚದುರುವಿಕೆ

ಪಿಯುಸಿ

ಭೌತಶಾಸ್ತ್ರ

35) ಯಾವುದಕ್ಕೆ ಪೋಲರಾಯಿಡ್‌ನ ಪಾಸ್-ಅಕ್ಷ ಎನ್ನುವರು?

ಉತ್ತರ:-ಒಂದು ಪೋಲರಾಯಿಡ್ ಒಂದು ನಿರ್ದಿಷ್ಟ ದಿಕ್ಕಿನಲ್ಲಿ ಜೋಡಿಸಲ್ಪಟ್ಟ ಅಣುಗಳ ಉದ್ದನೆಯ ಸರಪಣಿಯನ್ನು ಹೊಂದಿದೆ. ಈ ಅಣುಗಳ ದಿಕ್ಕಿನಲ್ಲಿರುವ ವಿದ್ಯುತ್ ಸದಿಶಗಳು (ಸಂಚರಣೆಯ ದಿಕ್ಕಿನಲ್ಲಿರುವ ಬೆಳಕಿನ ತರಂಗದ) ಹೀರಿಕೊಳ್ಳಲ್ಪಡುತ್ತವೆ. ಹೀಗೆ, ಅಂತಹ ಪೋಲರಾಯಿಡ್‌ಗೆ ಅಧ್ರುವೀಕೃತ ಬೆಳಕಿನ ತರಂಗವು ಆಪಾತವಾದರೆ, ಆ ತರಂಗವು ರೇಖೀಯವಾಗಿ ಧ್ರುವೀಕೃತ ಹೊಂದಿ ಅಣುಗಳ ಲಂಬ ದಿಕ್ಕಿನಲ್ಲಿ ವಿದ್ಯುತ್ ಸದಿಶಗಳು ಕಂಪನ ಹೊಂದಿರುತ್ತದೆ; ಈ ದಿಕ್ಕನ್ನು ಪೋಲರಾಯಿಡ್‌ನ ಪಾಸ್-ಅಕ್ಷ ಎನ್ನುವರು.

36) ಬೆಳಕಿನ ಚದುರುವಿಕೆಯ ಧ್ರುವೀಕರಣ ಬಗ್ಗೆ ಬರೆಯಿರಿ

ಉತ್ತರ:- 1920ರಲ್ಲಿ ಸಿ.ವಿ. ರಾಮನ್ ಮತ್ತು ಅವರ ಸಹೋದ್ಯೋಗಿಗಳು ಅಣುಗಳಿಂದಾಗುವ ಬೆಳಕಿನ ಚದುರುವಿಕೆಯ ಬಗ್ಗೆ ಆಳವಾದ ಅಧ್ಯಯನ ನಡೆಸಿದರು. ಈ ಕಾರ್ಯಕ್ಕಾಗಿ ರಾಮನ್ ಅವರಿಗೆ 1930ರಲ್ಲಿ ನೊಬೆಲ್ ಪುರಸ್ಕಾರ ನೀಡಲಾಯಿತು. ಶುಭ್ರನೀಲಿ ಆಕಾಶದ ಭಾಗದಿಂದ ಬಂದ ಬೆಳಕನ್ನು ತಿರುಗುತ್ತಿರುವ ಪೋಲರಾಯಿಡ್ ಮೂಲಕ ನೋಡಿದಾಗ ತೀವ್ರತೆಯ ಏರಿಕೆ ಮತ್ತು ಇಳಿಕೆ ಕಂಡುಬರುತ್ತದೆ. ಭೂಮಿಯ ವಾತಾವರಣದಲ್ಲಿರುವ ಅಣುಗಳ ಜೊತೆಗೆ ಬೆಳಕು ಸಂಧಿಸಿ ಅದರ ದಿಕ್ಕು (ಚದುರುವಿಕೆಯಿಂದ) ಬದಲಿಸುವುದರಿಂದ ಮಾತ್ರ ಹೀಗಾಗುತ್ತದೆ. ಚಿತ್ರದಲ್ಲಿ ತೋರಿಸಿರುವಂತೆ ಆಪಾತ ಸೂರ್ಯನ ಬೆಳಕು ಅಧ್ರುವೀಕೃತವಾಗಿರುತ್ತದೆ. ಚುಕ್ಕಿಗಳು ಚಿತ್ರದ ಸಮತಲಕ್ಕೆ ಲಂಬವಾಗಿರುವ ಧ್ರುವೀಕರಣವನ್ನು ಸೂಚಿಸುತ್ತದೆ. ದುಪ್ಪಟ್ಟು ಬಾಣಗಳು ಚಿತ್ರದ ಸಮತಲದಲ್ಲಿನ ಧ್ರುವೀಕರಣವನ್ನು ಸೂಚಿಸುತ್ತದೆ. (ಇದೆರಡರ ನಡುವೆ ಅಧ್ರುವೀಕೃತ ಬೆಳಕಿನಲ್ಲಿ ಪ್ರಾವಸ್ಥಾ ಸಂಬಂಧವಿರುವುದಿಲ್ಲ). ಆಪಾತ ತರಂಗದ ವಿದ್ಯುತ್‌ಕ್ಷೇತ್ರದ ಪ್ರಭಾವದಿಂದ ಅಣುಗಳ ಇಲೆಕ್ಟ್ರಾನ್‌ಗಳು ಈ ಎರಡೂ ದಿಕ್ಕುಗಳಲ್ಲಿ ಚಲನೆಯ ಘಟಕಗಳನ್ನು ಪಡೆದುಕೊಳ್ಳುತ್ತವೆ. ಸೂರ್ಯನ ದಿಕ್ಕಿಗೆ (90^0ಡಿಗ್ರಿಯಲ್ಲಿ ವೀಕ್ಷಿಸುತ್ತಿರುವ ವೀಕ್ಷಕನನ್ನು ಚಿತ್ರದಲ್ಲಿ ತೋರಿಸಲಾಗಿದೆ). ಸ್ಪಷ್ಟವಾಗಿ, ದುಪ್ಪಟ್ಟು ಬಾಣಗಳಿಗೆ ಸಮಾಂತರವಾದ ವೇಗೋತ್ಕರ್ಷ ಹೊಂದಿದ ವಿದ್ಯುದಾಂಶಗಳು ಈ ವೀಕ್ಷಕನೆಡೆಗೆ ಶಕ್ತಿಯನ್ನು ಹೊರಸೂಸುವುದಿಲ್ಲ, ಏಕೆಂದರೆ ವೇಗೋತ್ಕರ್ಷವು ಅಡ್ಡ ಘಟಕವನ್ನು ಹೊಂದಿರುವುದಿಲ್ಲ. ಆದ್ದರಿಂದ ಅಣುವು ಚದುರಿಸಿದ ವಿಕಿರಣವನ್ನು ಚುಕ್ಕಿಗಳಿಂದ ಸೂಚಿಸಲಾಗುತ್ತದೆ. ಇದು ಚಿತ್ರದ ಸಮತಲಕ್ಕೆ ಲಂಬವಾಗಿ ಧ್ರುವೀಕೃತಗೊಂಡಿರುತ್ತದೆ. ಇದು ಆಕಾಶದಿಂದ ಚದುರಿದ ಬೆಳಕಿನ ಧ್ರುವೀಕರಣವನ್ನು ವಿವರಿಸುತ್ತದೆ.



ಚಿತ್ರ (a) ಆಕಾಶದಿಂದ ಬಂದ ಚದುರಿದ ನೀಲಿ ಬೆಳಕಿನ ಧ್ರುವೀಕರಣ. ಆಪಾತ ಸೂರ್ಯನ ಬೆಳಕು ಅಧ್ರುವೀಕೃತವಾಗಿದೆ (ಚುಕ್ಕಿಗಳು ಮತ್ತು ಬಾಣಗಳು). ಮಾದರಿ ಅಣುವೊಂದನ್ನು ತೋರಿಸಿದೆ. ಹಾಳೆಯ ಸಮತಲಕ್ಕೆ ಲಂಬವಾಗಿ ಅಣುವು ಬೆಳಕನ್ನು 90^0ಯಿಂದ ಚದುರಿಸುತ್ತದೆ (ಚುಕ್ಕಿಗಳು ಮಾತ್ರ). (b) ಬ್ರೂಸ್ಟರ್ ಕೋನದಲ್ಲಿ ಪಾರದರ್ಶಕ ಮಾಧ್ಯಮದಿಂದ ಪ್ರತಿಫಲನಗೊಂಡ ಬೆಳಕಿನ ಧ್ರುವೀಕರಣ (ಪ್ರತಿಫಲಿತ ಕಿರಣವು ವಕ್ರೀಭವಿತ ಕಿರಣಕ್ಕೆ ಲಂಬವಾಗಿದೆ).

37) ಯಾವುದನ್ನು ಆಂಶಿಕ ಧ್ರುವೀಕೃತ ಬೆಳಕು ಎನ್ನುವರು?

ಉತ್ತರ:- 90^0ಯಲ್ಲಿ ಬೆಳಕಿನ ಚದುರುವಿಕೆ ಮತ್ತು ಬ್ರೂಸ್ಟರ್ ಕೋನದಲ್ಲಿನ ಪ್ರತಿಫಲನದ ಸಂದರ್ಭದಲ್ಲಿ, ವಿದ್ಯುತ್ ಕ್ಷೇತ್ರದ ಎರಡು ಲಂಬ ಘಟಕಗಳಲ್ಲಿ ಒಂದು ಶೂನ್ಯವಾಗಿರುತ್ತದೆ. ಬೇರೆ ಕೋನಗಳಲ್ಲಿ ಎರಡು ಘಟಕಗಳೂ ಇರುತ್ತವೆ. ಆದರೆ ಒಂದು ಇನ್ನೊಂದಕ್ಕಿಂತ ಪ್ರಬಲವಾಗಿರುತ್ತದೆ. ಅಧ್ರುವೀಕೃತ ಪುಂಜದ ಎರಡು ಲಂಬಘಟಕಗಳಿಂದ ಇವುಗಳನ್ನು ಪಡೆದುಕೊಂಡಿರುವುದರಿಂದಾಗಿ ಈ ಎರಡು ಲಂಬ ಘಟಕಗಳ ನಡುವೆ ಸ್ಥಿರವಾದ ಪ್ರಾವಸ್ಥಾ ಸಂಬಂಧವಿರುವುದಿಲ್ಲ. ತಿರುಗುತ್ತಿರುವ ವಿಶ್ಲೇಷಕದಿಂದ ಅಂತಹ ಬೆಳಕನ್ನು ವೀಕ್ಷಿಸಿದಾಗ, ವೀಕ್ಷಕನು ಗರಿಷ್ಠ ಮತ್ತು ಕನಿಷ್ಠ ತೀವ್ರತೆಯನ್ನು ಕಾಣುತ್ತಾನೆ. ಆದರೆ ಪೂರ್ಣ ಕತ್ತಲನ್ನಲ್ಲ. ಇಂತಹ ಬೆಳಕನ್ನು ಆಂಶಿಕ ಧ್ರುವೀಕೃತ ಬೆಳಕು ಎನ್ನುವರು.

38) ವಿದ್ಯುತ್ ಕಾಂತೀಯ ವಿಕಿರಣದ ಫೋಟಾನ್ ಚಿತ್ರಣವನ್ನು ಸಂಕ್ಷಿಪ್ತವಾಗಿ ತಿಳಿಸಿ

ಉತ್ತರ:- ವಿದ್ಯುತ್ ಕಾಂತೀಯ ವಿಕಿರಣದ ಫೋಟಾನ್ ಚಿತ್ರಣವನ್ನು ಈ ಕೆಳಕಂಡಂತೆ ಸಂಕ್ಷಿಪ್ತವಾಗಿ ಹೇಳಬಹುದು.

(i) ದ್ರವ್ಯದೊಂದಿಗಿನ ವಿಕಿರಣದ ಪ್ರಕ್ರಿಯೆಯಲ್ಲಿ, ವಿಕಿರಣವು ಕಣದಂತೆ ವರ್ತಿಸುತ್ತದೆ. ಈ ಕಣಗಳನ್ನು ಫೋಟಾನ್‌ಗಳೆಂದು ಕರೆಯುತ್ತೇವೆ.

(ii) ಪ್ರತಿ ಫೋಟಾನ್‌ನ ಶಕ್ತಿಯು E (= hv) ಹಾಗೂ ಸಂವೇಗವು p (= h v/c), ಹಾಗೂ ಇಲ್ಲಿ c, ಯು ಬೆಳಕಿನ ವೇಗವಾಗಿರುತ್ತದೆ.

(iii) ವಿಕಿರಣದ ತೀವ್ರತೆ ಎಷ್ಟೇ ಇದ್ದರೂ ಒಂದು ನಿರ್ದಿಷ್ಟ ಆವೃತ್ತಿ v, ಅಥವಾ ತರಂಗದೂರ , λ ಹೊಂದಿರುವ ಎಲ್ಲಾ ಬೆಳಕಿನ ಫೋಟಾನ್‌ಗಳ ಶಕ್ತಿಯು E (= hv = hc/ λ) ಹಾಗೂ ಸಂವೇಗವು p (= hv/c = h/ λ), ಗೆ ಸಮನಾಗಿರುತ್ತದೆ ನಿರ್ದಿಷ್ಟ ತರಂಗದದೂರದ ಬೆಳಕಿನ ತೀವ್ರತೆಯನ್ನು ಹೆಚ್ಚಿಸಿದಾಗ ಪ್ರತಿ ಸೆಕೆಂಡಿನಲ್ಲಿ ಬಿಂದು ನಿರ್ಧಿಷ್ಟ ಕ್ಷೇತ್ರದ ಮೂಲಕ ಹಾದು ಹೋಗುವ ಫೋಟಾನ್‌ಗಳ ಸಂಖ್ಯೆಯು ಮಾತ್ರ ಹೆಚ್ಚಾಗುತ್ತದೆ (ಪ್ರತಿ ಫೊಟಾನ್‌ಗಳ ಶಕ್ತಿಯು ಒಂದೇ ಆಗಿರುತ್ತದೆ) ಹೀಗಾಗಿ ಫೋಟಾನ್‌ನ ಶಕ್ತಿಯು ವಿಕಿರಣದ ತೀವ್ರತೆಯೊಂದಿಗೆ ಸ್ವತಂತ್ರವಾಗಿರುತ್ತದೆ.

(iv) ಫೋಟಾನ್‌ನ ವಿದ್ಯುದಾವೇಶವು ತಟಸ್ಥವಾಗಿದೆ ಹಾಗೂ ವಿದ್ಯುತ್ಕಾಂತೀಯ ಕ್ಷೇತ್ರಗಳಿಂದ ವಿಚಲನೆಗೊಳ್ಳುವುದಿಲ್ಲ.

(v) ಫೋಟಾನ್ ಕಣ ಡಿಕ್ಕಿಯಲ್ಲಿ (ಫೋಟಾನ್ - ಎಲೆಕ್ಟ್ರಾನ್ ನಡುವಿನ ಡಿಕ್ಕಿಯಂತೆ) ಒಟ್ಟು ಶಕ್ತಿ ಹಾಗೂ ಒಟ್ಟು ಸಂವೇಗವು ಸಂರಕ್ಷಿತವಾಗಿರುತ್ತದೆ. ಆದಾಗ್ಯೂ ಯಾವುದೇ ಡಿಕ್ಕಿಯಲ್ಲಿ ಫೋಟಾನ್‌ಗಳ ಸಂಖ್ಯೆಯು ಸಂರಕ್ಷಿತವಾಗಿರುವುದಿಲ್ಲ ಫೋಟಾನ್ ಹೀರಲ್ಪಡಬಹುದು ಅಥವಾ ಹೊಸ ಫೋಟಾನ್ ಸೃಷ್ಟಿಯಾಗಬಹುದು.

**39) ಲೇಸರ್‌ನಿಂದ ಉತ್ಪತ್ತಿಯಾಗುವ ಏಕವರ್ಣೀಯ ಬೆಳಕಿನ ಆವೃತ್ತಿಯು 6.0 x10^{14} Hz ಆಗಿದ್ದು, ಅದರ ಸಾಮರ್ಥ್ಯ 2.0 x 10^{-3} W. **

(a) ಈ ಬೆಳಕಿನಲ್ಲಿರುವ ಫೋಟಾನ್‌ನ ಶಕ್ತಿಯನ್ನು ಲೆಕ್ಕಿಸಿ.

(b) ಪ್ರತಿಯೊಂದು ಸೆಕೆಂಡಿಗೆ ಸರಾಸರಿ ಹೊರಸೂಸುವ ಫೋಟಾನ್‌ಗಳು ಎಷ್ಟು?

ಪರಿಹಾರ (ಚಿ) ಪ್ರತಿಯೊಂದು ಫೋಟಾನಿನ ಶಕ್ತಿ

$$E = h\nu = (6.63 \times 10^{-34}\ \mathrm{J\ s})(6.0 \times 10^{14}\ \mathrm{Hz})$$
$$= 3.98 \times 10–19\ \mathrm{J}$$

(b) ಪ್ರತಿ ಸೆಕೆಂಡಿಗೆ ಹೊರಸೂಸುವ ಫೋಟಾನುಗಳ ಸಂಖ್ಯೆ N ಆಗಿರಲಿ. ಆದುದರಿಂದ ಕಿರಣ ಸಾಮರ್ಥ್ಯ P ಎಂಬುದು N ಬಿಂದು ಫೋಟಾನ್‌ನ ಶಕ್ತಿ E, so that P = N E. ನಂತರ

$$N = \frac{P}{E} = \frac{2.0\times10^{-3}\,\mathrm{W}}{3.98\times10^{-19}\,\mathrm{J}}$$

= = 5.0 × 1015 ಪ್ರತಿ ಸೆಕೆಂಡಿನ ಫೋಟಾನುಗಳು.

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಬೆಂಗಳೂರು

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ಭೌತಶಾಸ್ತ್ರದ ಆಂಗ್ಲಭಾಷೆಯ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

❦ ಸುಭಾಷಿತ ❦

ಜೀವನದ ಪ್ರತೀ ಕ್ಷಣ ಒಂದು ಪವಾಡ ಮತ್ತು ನಿಗೂಢ ಎಂಬ ವಾಸ್ತವವನ್ನು ನಮ್ಮಿಂದ ಮರೆಮಾಚಲು ಗಡಿಯಾರ ಹಾಗೂ ಕ್ಯಾಲೆಂಡರ್‌ಗೆ ನಾವು ಅವಕಾಶ ನೀಡಬಾರದು.

-ಎಚ್.ಜಿ.ವೆಲ್ಸ್

ಮನೆ ಬಾಗಿಲಿಗೆ ದಾಖಲೆ: ಕಂದಾಯ ಇಲಾಖೆ ಕಚೇರಿಗೆ ಅಲೆದಾಟ ತಪ್ಪಲಿ

ಕಂದಾಯ ದಾಖಲೆಗಳನ್ನು ಹೇಗೆ ಪಡೆದುಕೊಳ್ಳಬೇಕು ಎಂಬ ಬಗ್ಗೆ ಕೆಲವು ರೈತರಿಗೆ ಅರಿವು ಇಲ್ಲದಿರುವುದನ್ನೇ ಬಂಡವಾಳ ಮಾಡಿಕೊಳ್ಳುವ ಸರ್ಕಾರಿ ಅಧಿಕಾರಿಗಳು ದಾಖಲೆಗಳನ್ನು ಒದಗಿಸಲು ಸತಾಯಿಸುತ್ತಾರೆ. ಅಗತ್ಯ ದಾಖಲೆಗಳನ್ನು ಪಡೆಯಲು ಸರ್ಕಾರಿ ಕಚೇರಿಗಳಿಗೆ ಅಲೆದಾಡಿ ಸುಸ್ತಾಗುವಂತಹ ಸ್ಥಿತಿ ರಾಜ್ಯದಲ್ಲಿದೆ. ಇಂತಹ ಅಲೆದಾಟವನ್ನು ತಪ್ಪಿಸಲು ರಾಜ್ಯ ಸರ್ಕಾರ ಮುಂದಾಗಿದೆ. ಪಹಣಿ ಪತ್ರ, ಅಟ್ಲಾಸ್, ಜಾತಿ ಪ್ರಮಾಣಪತ್ರ, ಆದಾಯ ಪ್ರಮಾಣಪತ್ರವನ್ನು ಜನರ ಮನೆ ಬಾಗಿಲಿಗೆ ತಲುಪಿಸುವ ಉದ್ದೇಶದಿಂದ 'ಕಂದಾಯ ದಾಖಲೆ ರೈತರ ಮನೆ ಬಾಗಿಲಿಗೆ' ಕಾರ್ಯಕ್ರಮಕ್ಕೆ ರಾಜ್ಯ ಸರ್ಕಾರ ಚಾಲನೆ ನೀಡಿದೆ. ಇದು ಸ್ವಾಗತಾರ್ಹ. 'ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆ', 'ಮನೆ ಬಾಗಿಲಿಗೆ ಪಿಂಚಣಿ'ಯಂತಹ ಕಾರ್ಯಕ್ರಮಗಳನ್ನು ಈ ಹಿಂದೆಯೇ ಕಂದಾಯ ಇಲಾಖೆ ಆರಂಭಿಸಿತ್ತು. ಇದೀಗ ಜನಸ್ನೇಹಿ ಎನ್ನಬಹುದಾದ ಮತ್ತೊಂದು ಹೆಜ್ಜೆ ಇಟ್ಟಿದೆ. 62.85 ಲಕ್ಷ ರೈತರಿಗೆ ಐದು ಕೋಟಿ ದಾಖಲೆಗಳನ್ನು ಅವರ ಮನೆ ಬಾಗಿಲಿಗೇ ಮುಟ್ಟಿಸುವುದು ಇದರ ಉದ್ದೇಶ. ಕುಟುಂಬಗಳಿಗೆ ಸರ್ಕಾರಿ ನೌಕರರೇ ದಾಖಲೆಗಳನ್ನು ತಲುಪಿಸಲಿದ್ದಾರೆ. ಈ ಕಾರ್ಯಕ್ರಮ ಪರಿಣಾಮಕಾರಿಯಾಗಿ ಅನುಷ್ಠಾನಗೊಂಡರೆ ಇಲಾಖೆಯ ಬಗ್ಗೆ ಜನರಿಗೆ ಒಂದಿಷ್ಟು ಭರವಸೆ ಮೂಡುವುದರಲ್ಲಿ ಸಂದೇಹವಿಲ್ಲ. ಆದರೆ, ಇದು ಆರಂಭಶೂರತ್ವ ಆಗಬಾರದು. ಯಾವುದೇ ಲೋಪ ಆಗದಂತೆ ಯೋಜನೆಯನ್ನು ಜಾರಿಗೊಳಿಸುವ ಹೊಣೆ ಇಲಾಖೆಯ ಮೇಲಿದೆ. ಕಂದಾಯ ಇಲಾಖೆ ಈ ಹಿಂದೆ ಕಂದಾಯ ಅದಾಲತ್‌ಗಳನ್ನು ನಡೆಸಿತ್ತು. ಅಧಿಕಾರಿಗಳ ನಿರಾಸಕ್ತಿಯಿಂದ ಈ ಕಾರ್ಯಕ್ರಮ ನಿರೀಕ್ಷಿತ ಯಶಸ್ಸು ಕಾಣಲಿಲ್ಲ. ಪೋಡಿಮುಕ್ತ ಗ್ರಾಮ ಅಭಿಯಾನವು ಬೆಂಗಳೂರಿನಲ್ಲಿ ತಕ್ಕಮಟ್ಟಿಗೆ ಪರಿಣಾಮಕಾರಿಯಾಗಿ ನಡೆಯಿತು. ಆದರೆ ಗ್ರಾಮೀಣ ಪ್ರದೇಶದಲ್ಲಿ ಯಶಸ್ಸು ಕಾಣಲಿಲ್ಲ. ಈ ಅಭಿಯಾನವನ್ನು ರಾಜ್ಯದಾದ್ಯಂತ ಸಮರ್ಪಕವಾಗಿ ಜಾರಿಗೊಳಿಸಿದ್ದರೆ ಜನರಿಗೆ ಹೆಚ್ಚಿನ ಅನುಕೂಲ ಆಗುತ್ತಿತ್ತು. ಕಂದಾಯ ಅದಾಲತ್, ಪೋಡಿಮುಕ್ತ ಗ್ರಾಮ ಅಭಿಯಾನಕ್ಕೆ ವೇಗ ತುಂಬಿದರೆ ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಜನರು ಎದುರಿಸುತ್ತಿರುವ ಕೆಲವು ಸಮಸ್ಯೆಗಳು ತಕ್ಕಮಟ್ಟಿಗೆ ಪರಿಹಾರ ಆಗಲಿವೆ. ಜನರು ಕಚೇರಿಗಳಿಗೆ ನಿತ್ಯ ಅಲೆದಾಡುವುದು ತಪ್ಪುತ್ತದೆ.

ಯಾವುದೇ ಲೋಪ ಆಗದಂತೆ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಹೊಣೆ ಇಲಾಖೆಯ ಮೇಲಿದೆ

ಜನಕಲ್ಯಾಣದ ಉದ್ದೇಶದಿಂದ ಸರ್ಕಾರಗಳು ಅನೇಕ ಯೋಜನೆಗಳನ್ನು ಜಾರಿಗೆ ತರುತ್ತವೆ. ಆರಂಭದಲ್ಲಿ ಈ ಯೋಜನೆಗಳು ಸಾಂಗವಾಗಿ ನಡೆಯುತ್ತವೆ. ಬಳಿಕ ಅವು ಉತ್ಸಾಹ ಕಳೆದುಕೊಳ್ಳುತ್ತವೆ. ಅನುಷ್ಠಾನದ ಮೌಲ್ಯಮಾಪನ ನಡೆಯುವುದಿಲ್ಲ. ಕ್ರಮೇಣ ಇದ್ದೂ ಇಲ್ಲದಂತೆ ಆಗುತ್ತವೆ. ಇದಕ್ಕೆ ಉದಾಹರಣೆ 'ಸಕಾಲ' ಯೋಜನೆ. ಬಿಜೆಪಿ ನೇತೃತ್ವದ ಸರ್ಕಾರದ ಅವಧಿಯಲ್ಲೇ 2011ರಲ್ಲಿ 'ಸಕಾಲ' ಯೋಜನೆಯನ್ನು ಬಹಳ ಉಮೇದಿನಿಂದ ಜಾರಿಗೆ ತರಲಾಯಿತು. 99 ಇಲಾಖೆಗಳ 1,115 ಸೇವೆಗಳು ಇದರ ವ್ಯಾಪ್ತಿಯಲ್ಲಿವೆ. ಜನನ-ಮರಣ ಪ್ರಮಾಣ ಪತ್ರವನ್ನು 3ರಿಂದ 7 ದಿನಗಳ ಒಳಗೆ, ಪರೀಕ್ಷೆ ಅಂಕಗಳ ಮರುಎಣಿಕೆ 15 ದಿನಗಳಲ್ಲಿ, ಜಾತಿ ಪ್ರಮಾಣಪತ್ರ 21 ದಿನಗಳ ಒಳಗೆ, ವಾಹನ ಚಾಲನಾ ಪರವಾನಗಿ 30 ದಿನಗಳಲ್ಲಿ ಕೊಡಬೇಕು. ಹೀಗೆ ಬೇರೆ ಬೇರೆ ಸೇವೆಗಳಿಗೆ ಬೇರೆ ಬೇರೆ ಕಾಲಾವಧಿ ನಿಗದಿ ಮಾಡಲಾಗಿದೆ. ಇದೊಂದು ಕ್ರಾಂತಿಕಾರಕ ಯೋಜನೆ ಎಂದು ಸರ್ಕಾರ ಹೇಳಿಕೊಂಡಿತ್ತು. ಆದರೆ, ಸಕಾಲ ಯೋಜನೆಯಡಿ ಸೇವೆ ಪಡೆಯಲು 4.17 ಲಕ್ಷ ಅರ್ಜಿಗಳು ಅವಧಿ ಮೀರಿ ಈಗ ಬಾಕಿ ಉಳಿದುಕೊಂಡಿವೆ. ಕಂದಾಯ ದಾಖಲೆ ರೈತರ ಮನೆ ಬಾಗಿಲಿಗೆ ಯೋಜನೆಯೂ 'ಸಕಾಲ'ದ ರೀತಿ ಆಗದಂತೆ ಮುನ್ನೆಚ್ಚರಿಕೆ ವಹಿಸುವ ಅಗತ್ಯ ಇದೆ.

ಕೆಲವು ಇಲಾಖೆಗಳಲ್ಲಿ ಭ್ರಷ್ಟಾಚಾರ ಮಿತಿಮೀರಿ ವ್ಯಾಪಿಸಿದೆ. ಅಂತಹವುಗಳಲ್ಲಿ ಕಂದಾಯ ಇಲಾಖೆಯೂ ಒಂದು ಎಂಬ ಮಾತು ಇದೆ. ಸಾಮಾನ್ಯ ವ್ಯಕ್ತಿಯೊಬ್ಬ ಕಂದಾಯ ಇಲಾಖೆಯಲ್ಲಿ ಸಣ್ಣಪುಟ್ಟ ದಾಖಲೆಗಳನ್ನು ಪಡೆಯಲು ತಿಂಗಳುಗಟ್ಟಲೆ ಅಲೆದಾಡಬೇಕಾಗಿದೆ. ಲಂಚ ನೀಡದೆ ಯಾವುದೇ ದಾಖಲೆ ಸಿಗುವುದಿಲ್ಲ ಎಂಬ ಸ್ಥಿತಿ ಇದೆ. ಜನರು 'ತಬರ'ನಂತೆ ಅಲೆದಾಡಿದರೂ ನಿಷ್ಕರುಣಿ ಅಧಿಕಾರಿಗಳ ಮನ ಕರಗುವುದಿಲ್ಲ. ಅಧಿಕಾರಿಗಳ ಅಸಡ್ಡೆ, ಭ್ರಷ್ಟಾಚಾರ ಹಾಗೂ ದಲ್ಲಾಳಿಗಳ ಹಾವಳಿಯಿಂದಾಗಿ ಇಲಾಖೆಗೆ ಕೆಟ್ಟ ಹೆಸರು ಅಂಟಿಕೊಂಡಿದೆ. ದಾಖಲೆಗಳನ್ನು ಪಡೆಯಲು ಜನರು ಈ ಪರಿ ಪಡಿಪಾಟಲು ಪಡಬೇಕಾದ ಸ್ಥಿತಿ ಏಕೆ ಉಂಟಾಯಿತು ಎಂಬ ಬಗ್ಗೆಯೂ ಸರ್ಕಾರ ಆತ್ಮಾವಲೋಕನ ಮಾಡಿಕೊಳ್ಳಬೇಕು. ಅಧಿಕಾರಿಗಳ ಮನೋಭಾವ ಬದಲಾಗದ ಹೊರತು ವ್ಯವಸ್ಥೆಯಲ್ಲಿ ಸುಧಾರಣೆಯಾಗದು. ನೌಕರಶಾಹಿಯ ವಿಳಂಬ ಧೋರಣೆಗೆ ಕಡಿವಾಣ ಹಾಕಿ, ಕಾಲಮಿತಿಯಲ್ಲಿ ಅರ್ಜಿಗಳು ವಿಲೇವಾರಿ ಆಗುವಂತೆ ಸರ್ಕಾರ ನೋಡಿಕೊಳ್ಳಬೇಕು. ಅಂತಹ ಇಚ್ಛಾಶಕ್ತಿಯನ್ನು ಸರ್ಕಾರ ಪ್ರದರ್ಶಿಸಬೇಕು.

ದಿನದ ಟ್ವೀಟ್

ಕಾರಣ ಏನಿರಬಹುದು?

ವಿಶ್ವದಲ್ಲಿ ಅತಿ ಹೆಚ್ಚಿನ ಪ್ರಮಾಣದಲ್ಲಿ ಲಸಿಕೆ ಹಾಕಿರುವ ರಾಷ್ಟ್ರಗಳಲ್ಲಿ ಒಂದಾದ ದಕ್ಷಿಣ ಕೊರಿಯಾದಲ್ಲಿ ಕೋವಿಡ್ ಪ್ರಕರಣಗಳು ಏರುಗತಿಯಲ್ಲಿವೆ. ಶನಿವಾರದವರೆಗೆ 3,83,665 ಪ್ರಕರಣಗಳು ವರದಿಯಾಗಿವೆ (ಇದು, ಭಾರತ ಅಥವಾ ಚೀನಾದಲ್ಲಿ ದಿನವೊಂದಕ್ಕೆ ಸುಮಾರು 1 ಕೋಟಿ ಪ್ರಕರಣಗಳು ವರದಿಯಾಗುವುದಕ್ಕೆ ಸಮ). ಅತ್ಯಂತ ಕಡಿಮೆ ಪ್ರಮಾಣದಲ್ಲಿ ಲಸಿಕೆ ನೀಡಿರುವ ಆಫ್ರಿಕಾದ ದೇಶಗಳಲ್ಲಿ ಬಹಳ ಕಡಿಮೆ ಸಂಖ್ಯೆಯಲ್ಲಿ ಪ್ರಕರಣಗಳು ವರದಿಯಾಗುತ್ತಿವೆ.

ಬ್ರಹ್ಮ ಚೆಲ್ಲನಿ, ಲೇಖಕ

ಕಿಡಿನುಡಿ

ಇದು ಭಯಾನಕ. ಇದಕ್ಕೆ ಯಾರೂ ಆಕ್ಷೇಪ ವ್ಯಕ್ತಪಡಿಸದಿರುವುದು ಅಥವಾ ಸಂತ್ರಸ್ತೆಯ ನೆರವಿಗೆ ಧಾವಿಸದಿರುವುದನ್ನು ನೋಡಿದರೆ, ಇದು ಎಷ್ಟೊಂದು ಸಾಮಾನ್ಯ ಸಂಗತಿಯಾಗಿಬಿಟ್ಟಿದೆ ಎಂಬುದು ಸ್ಪಷ್ಟವಾಗುತ್ತದೆ... ಬದಲಿಗೆ ಅವರು ಈ ಅಸಹಾಯಕ ಮಹಿಳೆಯ ಮೇಲಿನ ದಾಳಿಯನ್ನು ಚಿತ್ರೀಕರಿಸುತ್ತಿದ್ದಾರೆ!

(ಮಧ್ಯಪ್ರದೇಶದಲ್ಲಿ ಬುಡಕಟ್ಟು ಮಹಿಳೆ ಮೇಲೆ ನಡುಬೀದಿಯಲ್ಲಿ ಸಾರ್ವಜನಿಕರ ಸಮ್ಮುಖದಲ್ಲಿ ನಡೆದಿರುವ ಲೈಂಗಿಕ ಕಿರುಕುಳ ಮತ್ತು ಹಲ್ಲೆ ಘಟನೆಯ ವಿಡಿಯೊ ದೃಶ್ಯಕ್ಕೆ ಪ್ರತಿಕ್ರಿಯೆ)

ಸುಚೇತಾ ದಲಾಲ್, ಪತ್ರಕರ್ತೆ, ಲೇಖಕಿ

25 ವರ್ಷಗಳ ಹಿಂದೆ

ಶುಕ್ರವಾರ, 14-3-1997

● **ಶಾಲು ಎಸೆದ ಮಮತಾಗೆ ಸ್ಪೀಕರ್ ಸಂಗ್ಮಾ ಎಚ್ಚರಿಕೆ**

ನವದೆಹಲಿ, ಮಾ. 13– ಸಭಾಧ್ಯಕ್ಷರ ಪೀಠದ ಮುಂಭಾಗದ ಅಂಗಳಕ್ಕೆ ಬಂದು ಸಚಿವರ ಜತೆ ವಾಗ್ವಾದಕ್ಕಿಳಿದು, ತಮ್ಮ ಆದೇಶವನ್ನು ಕಡೆಗಣಿಸಿದ ಕಾಂಗ್ರೆಸ್ ಸದಸ್ಯೆ ಮಮತಾ ಬ್ಯಾನರ್ಜಿ ಅವರನ್ನು ಸಿಟ್ಟಿಗೆದ್ದ ಸಂಗ್ಮಾ ಅವರು 'ಸದನದಿಂದ ಹೊರಗೆ ಹೋಗಿ' ಎಂದು ಎಚ್ಚರಿಕೆ ನೀಡುವ ಮೂಲಕ ಅವರನ್ನು ಹೊರಗೆ ಕಳುಹಿಸಿದ ಅಪರೂಪದ ಘಟನೆ ಇಂದು ಲೋಕಸಭೆಯಲ್ಲಿ ನಡೆಯಿತು.

ಸಭಾಧ್ಯಕ್ಷ ಸಂಗ್ಮಾ ಅವರ ಆದೇಶಕ್ಕೆ ಕೋಪಗೊಂಡು ಮಮತಾ ಅವರೂ ಹೊರನಡೆಯುವಾಗ ತಮ್ಮ ಮೈಮೇಲಿದ್ದ ಕಪ್ಪು ಶಾಲನ್ನು ಸಚಿವರತ್ತ ಬಿಸಾಡಿ ಹೋದುದು ತೀರಾ ಅಪರೂಪದ ಘಟನೆ ಎನಿಸಿತು.

● **ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಲಾಠಿ ಪ್ರಹಾರ**

ಬೆಂಗಳೂರು, ಮಾ. 13– ರಾಜ್ಯದ ಜನತಾದಳ ನೇತೃತ್ವದ ಸರ್ಕಾರ ಬಸ್ ಪ್ರಯಾಣದರ ಏರಿಸಿರುವುದನ್ನು ಪ್ರತಿಭಟಿಸಿ ಇಂದು ಮಧ್ಯಾಹ್ನ ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ಯತ್ನಿಸಿದ ಕಾಂಗ್ರೆಸ್ ಕಾರ್ಯಕರ್ತರನ್ನು ಚದುರಿಸಲು ಪೊಲೀಸರು ಲಾಠಿ ಪ್ರಹಾರ ಮಾಡಿ, ವಾಟರ್‌ಜೆಟ್‌ನಿಂದ ನೀರು ಹೊಡೆದಾಗ ಪರಿಸ್ಥಿತಿ ಯಾವುದೇ ಕ್ಷಣದಲ್ಲಿ ಸ್ಫೋಟಗೊಳ್ಳುವ ಸಂದರ್ಭ ನಿರ್ಮಾಣವಾಯಿತು.

50 ವರ್ಷಗಳ ಹಿಂದೆ

ಮಂಗಳವಾರ, 14-3-1972

● **ಕಟ್ಟುನಿಟ್ಟಾದ ಆರ್ಥಿಕ ಸಂಯಮಕ್ಕೆ ಗಿರಿ ಕರೆ**

ನವದೆಹಲಿ, ಮಾ. 13– ರಾಷ್ಟ್ರಪತಿ ವಿ.ವಿ. ಗಿರಿ ಅವರು 'ಆರ್ಥಿಕ ಸ್ವರಾಜ್ಯ' ಸಾಧನೆಗೆ ಕೇಂದ್ರ ಸರ್ಕಾರ ರೂಪಿಸಿರುವ ತಂತ್ರದ ಸ್ಥೂಲ ರೂಪುರೇಷೆಗಳನ್ನು ಇಂದು ಹೊರಗೆಡವಿದರು.

ಆಂತರಿಕ ಸಂಪನ್ಮೂಲಗಳ ಕ್ರೋಡೀಕರಣ ಮತ್ತು ಕಟ್ಟುನಿಟ್ಟಾದ ಆರ್ಥಿಕ ಸಂಯಮಗಳನ್ನು ಅನುಸರಿಸುವುದು ಅಗತ್ಯ ಎಂದು ಕರೆ ನೀಡಿದ ಅವರು, ಶ್ರೀಮಂತ ರೈತವರ್ಗದವರಿಂದ ಹೆಚ್ಚಿನ ಆದಾಯ ಪಡೆಯಲು ವಿಧಾನ ರೂಪಿಸಲಾಗುವುದು ಎಂದೂ ಸೂಚಿಸಿದರು.

ಸಂಸತ್ತಿನ ಉಭಯ ಸದನಗಳನ್ನುದ್ದೇಶಿಸಿ ಮಾತನಾಡುತ್ತ, ಕಳೆದ ವರ್ಷ ಹಲವು ನಿರೀಕ್ಷಿತ ಒತ್ತಡಗಳು ಮೇಲೆ ಬಿದ್ದರೂ, ಆರ್ಥಿಕ ರಂಗವು ಗಣನೀಯವಾಗಿ ಚೇತರಿಸಿಕೊಂಡಿತು ಎಂದು ಅವರು ಸೂಚಿಸಿದರು.

● **ನಾಯಕನ ಆಯ್ಕೆಗಾಗಿ 18ರಂದು ರಾಜ್ಯ ಆಡಳಿತ ಕಾಂಗ್ರೆಸ್ ಶಾಸಕ ಪಕ್ಷದ ಸಭೆ**

ಬೆಂಗಳೂರು, ಮಾ. 13– ರಾಜ್ಯ ವಿಧಾನಸಭೆಯ ನೂತನ ಆಡಳಿತ ಕಾಂಗ್ರೆಸ್ ಪಕ್ಷದ ಸಭೆ ಮಾರ್ಚ್ 18ರಂದು ನಗರದಲ್ಲಿ ಸೇರಿ ತನ್ನ ನಾಯಕನನ್ನು ಆರಿಸುವುದು.

ಹೈಕಮಾಂಡ್ ಪ್ರತಿನಿಧಿಗಳು: ಪಕ್ಷದ ನಾಯಕನ ಆಯ್ಕೆ ಕಾಲದಲ್ಲಿ ಹಾಜರಿರಲು ಕಾಂಗ್ರೆಸ್ ಹೈಕಮಾಂಡಿನ ಪ್ರತಿನಿಧಿಗಳಾಗಿ ಶ್ರೀ ಉಮಾಶಂಕರ ದೀಕ್ಷಿತ್ ಹಾಗೂ ಮಥುರಾ ದಾಸ್ ಮಾಥೂರ್ ಅವರು ಹಾಜರಿರುವರು.

ಮಲೆನಾಡಿನಲ್ಲಿ ಹುಟ್ಟಿ ನಾಡನ್ನು ಪೋಷಿಸುತ್ತಿರುವ ಹೆಚ್ಚಿನ ಜೀವನದಿಗಳು ಅಕ್ಷರಶಃ ಸಾಯುತ್ತಿವೆ

ಸೋತು ಸಣ್ಣವಾಗುತ್ತಿರುವ ಶರಾವತಿ!

ವಿಶ್ಲೇಷಣೆ

ಡಾ. ಕೇಶವ ಎಚ್. ಕೊರ್ಸೆ

ಕಾಡು ಕಾಣೆಯಾಗುವುದು, ಕೆರೆಗಳು ಕಣ್ಮುಚ್ಚುವುದು, ಅದಿರು ಮಾಯವಾಗುವುದು ಇವೆಲ್ಲ ನಮಗೆ ಗೊತ್ತು. ಹಲವೆಡೆ ಈಗ ನದಿಗಳೂ ಕಣ್ಮರೆಯಾಗುತ್ತಿವೆ! ತುಮಕೂರಿನ ಜಯಮಂಗಲಿ ನದಿ, ಕೋಲಾರದ ಪಿನಾಕಿನಿ ನದಿ ಅಥವಾ ಚಿತ್ರದುರ್ಗ ಜಿಲ್ಲೆಯ ವೇದಾವತಿಯಂಥ ಹಲವು ನದಿಗಳ ಬಹುತೇಕ ನದಿಪಾತ್ರಗಳು ಒಣಗಿ ಬಯಲಾಗುತ್ತಿವೆ. ನೀರಿರುವ ನದಿಗಳಾದರೋ ಮಿತಿಮೀರಿ ಕಲುಷಿತವಾಗುತ್ತಿವೆ.

ರಾಜ್ಯದ ಹದಿನೇಳಕ್ಕೂ ಹೆಚ್ಚಿನ ನದಿಗಳ ನೀರು ಕುಡಿಯುವುದು ಬಿಡಿ, ಕೃಷಿಗೂ ಯೋಗ್ಯವಲ್ಲ ಎಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯೇ ಒಪ್ಪಿದೆ. ಹೀಗಾಗಿ, ಮುಂದಿನ ಎರಡು ದಶಕಗಳಲ್ಲಿ ದೇಶದ ಬಹಳಷ್ಟು ನದಿಗಳು ನಾಶವಾಗಲಿವೆ ಎಂಬ, ಹವಾಮಾನ ಬದಲಾವಣೆ ಕುರಿತ ಅಂತರರಾಷ್ಟ್ರೀಯ ಸಮಿತಿಯ (ಐಪಿಸಿಸಿ) ಇತ್ತೀಚಿನ ವರದಿಯಲ್ಲಿನ ಎಚ್ಚರಿಕೆ ಆಶ್ಚರ್ಯವನ್ನೇ ಉಂಟುಮಾಡುತ್ತಿಲ್ಲ!

ನದಿಗಳು ಜೀವ ಕಳೆದುಕೊಳ್ಳುವುದರ ಪ್ರತ್ಯಕ್ಷ ದರ್ಶನ ಆಗಬೇಕಾದರೆ, ರಾಜ್ಯದ ಜೀವನದಿಗಳಲ್ಲೊಂದಾದ ಶರಾವತಿ ನದಿಗುಂಟ ಒಮ್ಮೆ ಸಾಗಬೇಕು. ಶಿವಮೊಗ್ಗ ಹಾಗೂ ಉತ್ತರ ಕನ್ನಡ ಜಿಲ್ಲೆ ವ್ಯಾಪ್ತಿಯಲ್ಲಿ ಹರಿಯುವ 128 ಕಿ.ಮೀ. ಉದ್ದದ ಈ ನದಿಯ ಜಲಾನಯನ ಪ್ರದೇಶವು ಕೇವಲ ಮೂರು ಸಾವಿರ ಚದರ ಕಿ.ಮೀ. ಮಾತ್ರ. ಆದರೆ, ನದಿ ಸಣ್ಣದಾದರೂ ಅದರ ಪಾರಿಸರಿಕ, ಆರ್ಥಿಕ ಹಾಗೂ ಸಾಮಾಜಿಕ ಮಹತ್ವ ಮಾತ್ರ ಅನನ್ಯವಾದದ್ದು. ಲಕ್ಷಾಂತರ ರೈತರು, ವನವಾಸಿಗರು ಹಾಗೂ ಮೀನುಗಾರರು ಈ ಕಣಿವೆಯ ತೊರೆಗಳು ಮತ್ತು ಸಮೃದ್ಧ ಕಾಡನ್ನೇ ನೆಚ್ಚಿ ಬಾಳುತ್ತಿದ್ದಾರೆ. ಲಿಂಗನಮಕ್ಕಿ, ಜೋಗ ಹಾಗೂ ಗೇರುಸೊಪ್ಪೆಯ ಜಲವಿದ್ಯುತ್ ಸ್ಥಾವರಗಳು ನಾಡನ್ನು ಬೆಳಗುತ್ತಿವೆ. ಕತ್ತಲೆಕಾನಿನಂಥ ನಿತ್ಯಹರಿದ್ವರ್ಣ ಕಾಡುಗಳು ಅಪಾರ ಜೀವವೈವಿಧ್ಯವನ್ನು ಪೋಷಿಸುತ್ತ, ಪರಿಸರ ಸಮತೋಲನಕ್ಕೆ ಜಾಗತಿಕ ಕೊಡುಗೆ ನೀಡುತ್ತಿವೆ. ವರ್ತಮಾನ ಹಾಗೂ ಭವಿಷ್ಯದಲ್ಲಿ ಜನಜೀವನದ ನೆಮ್ಮದಿ ಕಾಯಬಲ್ಲ ಸುಸ್ಥಿರ ಆರ್ಥಿಕತೆಯೊಂದರ ಅಡಿಗಲ್ಲಾಗಬಲ್ಲ ಅಮೂಲ್ಯ ಜೈವಿಕವ್ಯವಸ್ಥೆಯಿದು ಎಂದು, ಭಾರತೀಯ ವಿಜ್ಞಾನ ಮಂದಿರದ ಅಧ್ಯಯನಗಳು ನಿರೂಪಿಸಿವೆ.

ಆದರೆ, ಅದನ್ನು ಈಗ ಹೇಗೆ ನಿರ್ವಹಿಸಲಾಗುತ್ತಿದೆ? ತೀರ್ಥಹಳ್ಳಿಯ ಅಂಬುತೀರ್ಥದಲ್ಲಿ ಹುಟ್ಟುವ ಸಣ್ಣತೊರೆಯೊಂದನ್ನು ಶರಾವತಿ ಮೂಲವೆಂದು ಗುರುತಿಸುವುದಾದರೂ, ಅಂಥ ನೂರಾರು ಹೊಳೆ- ಹಳ್ಳಗಳು ಸೇರಿಯೇ ಶರಾವತಿ ಮೈದುಂಬಿಕೊಳ್ಳುವುದು. ಸಾಗರ ಹಾಗೂ ಹೊಸನಗರ ತಾಲ್ಲೂಕುಗಳಲ್ಲಿ ವ್ಯಾಪಿಸಿರುವ ಈ ತೊರೆಗಳ ಜಾಲದ ಕಣಿವೆಯ ಅರಣ್ಯಗಳೆಲ್ಲ ಇದೀಗ ಭೂ-ಅತಿಕ್ರಮಣ, ಮರಕಡಿತ, ಅಕ್ರಮ ಕ್ವಾರಿಗಳು, ಅಕೇಶಿಯಾ- ನೀಲಗಿರಿ ನೆಡುತೋಪುಗಳಿಗೆ ಬಲಿಯಾಗುತ್ತಿವೆ. ಕಾಡು ಬರಿದಾದಂತೆ ಮಣ್ಣುಸವೆತ ಹೆಚ್ಚಿ, ಮಳೆನೀರು ಇಂಗುವಿಕೆ ಕಡಿಮೆಯಾಗಿ ಅಂತರ್ಜಲ ಕುಸಿಯುತ್ತಿದೆ. ಕೆರೆಗಳು ಹೂಳು ತುಂಬಿ, ತೊರೆಗಳು ಒಣಗುತ್ತಿವೆ. ಈ ಪ್ರದೇಶದ ನಂದಿಹೊಳೆ, ಮಾವಿನಹೊಳೆ, ಹುರಳಿಹೊಳೆ, ನಾಗೋಡಿಹೊಳೆ, ಹರಿದ್ರಾವತಿಯಂಥ ತೊರೆಗಳು ವರ್ಷದ ಬಹುಕಾಲ ಒಣಗಿ, ಶರಾವತಿಗೆ ಕನಿಷ್ಠ ನೀರುಣಿಸಲೂ ಹೆಣಗುತ್ತಿವೆ. ಇವೆಲ್ಲವುಗಳಿಂದಾಗಿ ಲಿಂಗನಮಕ್ಕಿ ಜಲಾಶಯದಲ್ಲಿ ಹೂಳಿನ ಪ್ರಮಾಣ ಹೆಚ್ಚುತ್ತಿದ್ದು, ರಕ್ಷಿಸಿಕೊಳ್ಳಬೇಕಾದ ಕರ್ನಾಟಕ ವಿದ್ಯುತ್ ನಿಗಮವು ಅರಿವಿದ್ದೂ ತೆಪ್ಪಗಿದೆ!

ನದಿಯ ಮಧ್ಯಭಾಗ ಎನ್ನಬಹುದಾದ ಜಗತ್ಪ್ರಸಿದ್ಧ ಜೋಗ ಜಲಪಾತದ ಸುತ್ತಲಿನ ಪರಿಸ್ಥಿತಿಯಾದರೋ ಮತ್ತಷ್ಟು ಅಪಾಯದಿಂದ ಕೂಡಿದೆ. ಪಶ್ಚಿಮಘಟ್ಟದ ಹೃದಯದಂತಿರುವ ಇಲ್ಲಿನ ಗುಡ್ಡ- ಕಣಿವೆಗಳಲ್ಲಿ, ಇತ್ತೀಚಿನ ವರ್ಷಗಳಲ್ಲಿ ಎಲ್ಲೆಂದರಲ್ಲಿ ರೆಸಾರ್ಟ್, ಬೃಹತ್ ವಿದ್ಯುತ್ ಮಾರ್ಗ ಹಾಗೂ ರಸ್ತೆ ಅಗಲೀಕರಣ ಕಾಮಗಾರಿಗಳು ಎಗ್ಗಿಲ್ಲದೆ ಸಾಗಿವೆ. ಜೊತೆಗೆ ಅಕ್ರಮ ಕ್ವಾರಿಗಳು ಗುಡ್ಡಗಳ ನೆತ್ತಿಯಲ್ಲೂ ಗುಂಡಿಗಳನ್ನು ನಿರ್ಮಿಸುತ್ತಿವೆ. ಹವಾಮಾನ ಬದಲಾವಣೆಯಿಂದಾಗಿ ಒಮ್ಮೆಲೇ ಅತಿಯಾಗಿ ಮಳೆ ಸುರಿಯುವ ಸಂದರ್ಭಗಳು ಇತ್ತೀಚಿನ ವರ್ಷಗಳಲ್ಲಿ ಹೆಚ್ಚಿರುವುದು ಅನುಭವಕ್ಕೆ ಬರುತ್ತಿದೆ. ಅಂಥ ಭಾರಿ ಮಳೆಯಲ್ಲಿ ಮೊದಲೇ ಗಾಸಿಗೊಂಡ ಗುಡ್ಡಗಳು ಜರಿಯುತ್ತಿವೆ. ಲಿಂಗನಮಕ್ಕಿ ಅಣೆಕಟ್ಟೆಯಿಂದ ಕೂಗಳತೆ ದೂರದ ಅರಲಗೋಡು ಬಳಿ ಕಳೆದ ವರ್ಷ ಪರ್ವತಗಳು ಸಾಲಾಗಿ ಕುಸಿದು, ಹಲವಾರು ಕುಟುಂಬಗಳು ಮನೆ-ಜಮೀನು ಕಳೆದುಕೊಂಡಿವೆ. ಇಲ್ಲಿನ ಹೆಚ್ಚಿನವರು ಜಲವಿದ್ಯುತ್ ಯೋಜನೆಗಳಲ್ಲಿ ಈಗಾಗಲೇ ನೆಲೆ ಕಳೆದುಕೊಂಡು ಪುನರ್ವಸತಿಯಾದ ನಿರಾಶ್ರಿತರು. ಮಂಗನಕಾಯಿಲೆ, ಬೇಸಿಗೆಯ ನೀರಿನ ಕೊರತೆ, ವನ್ಯಪ್ರಾಣಿ ಹಾವಳಿಯಿಂದಾಗಿ ಹೈರಾಣಾಗಿರುವ ಹಳ್ಳಿಗರು. ಇತ್ತೀಚಿನ ಭೂಕುಸಿತಗಳಿಂದಾಗಿ ಅವರ ಜೀವನ ಮತ್ತಷ್ಟು ನಲುಗಿಹೋಗಿದೆ.

ಜೋಗ ಜಲಪಾತದಿಂದ ಮುಂದೆ ಸಾಗಿ, ಟೆಲರೇಸ್ ಅಣೆಕಟ್ಟನ್ನೂ ದಾಟಿ, ಗೇರುಸೊಪ್ಪೆ ಬಳಿ ಶರಾವತಿ ಘಟ್ಟವನ್ನಿಳಿಯುತ್ತಾಳೆ. ಮುಂದೆ ಸುಮಾರು ಮೂವತ್ತೈದು ಕಿ.ಮೀ. ಕರಾವಳಿ ಬಯಲಲ್ಲಿ ಪ್ರಶಾಂತವಾಗಿ ಸಾಗಿ ಹೊನ್ನಾವರದಲ್ಲಿ ಅರಬ್ಬಿಸಮುದ್ರ ಸೇರುತ್ತಾಳೆ. ಈ ಹರಿವಿನ ಇಕ್ಕೆಲಗಳಲ್ಲಿ ಹಲವಾರು ಹಳ್ಳಿಗಳು, ಸಮೃದ್ಧ ಕೃಷಿ ಜಮೀನು, ಗುಡ್ಡ- ಬೆಟ್ಟಗಳಿವೆ. ಇಲ್ಲಿನ ರೈತರು, ಕೃಷಿ ಕಾರ್ಮಿಕರು, ಮೀನುಗಾರರು ಎಲ್ಲರಿಗೂ ಅವಳೇ ಅನ್ನ-ನೀರು ನೀಡುವವಳು. ಕರಾವಳಿಯ ಅಂಬಿಗರಿಗಂತೂ ಆಕೆ ಸಾಕ್ಷಾತ್ ಗಂಗೆಯೇ.

ಆರಾಧಿಸಬೇಕಾದ ನದಿಯನ್ನು ಇಲ್ಲಿ ಆದರಿಸಿರುವ ಬಗೆಯಾದರೂ ಹೇಗೆ? ಮೇಲ್ಭಾಗದ ಅಣೆಕಟ್ಟುಗಳು ನೀರನ್ನು ತಡೆಯುವುದರಿಂದ, ಇಲ್ಲಿ ವರ್ಷದ ಬಹುಕಾಲ ನೀರಿನ ಹರಿವು ಕಡಿಮೆಯೇ. ನೀರಿಗಿಂತ ಮೇಲಿಂದ ಬರುವ ಹೂಳಿನ ಪ್ರವಾಹವೇ ಹೆಚ್ಚೆನ್ನಬೇಕು. ಜೋರುಮಳೆಯ ದಿನಗಳನ್ನು ಹೊರತುಪಡಿಸಿದರೆ, ನದಿಯ ಈ ಕರಾವಳಿ ಭಾಗದಲ್ಲಿ ಸಿಹಿನೀರಿನ ಸಹಜ ಹರಿವೇ ಇಲ್ಲ. ಸಮುದ್ರಮುಖಿ ಹರಿವೇ ಇಲ್ಲದೆ, ಕಡಲಿನ ಉಪ್ಪುನೀರು ನದಿಪಾತ್ರದ ಒಳಪ್ರದೇಶಕ್ಕೆ ಮುನ್ನುಗ್ಗುತ್ತಿದೆ. ಅಕ್ಕಪಕ್ಕದ ಬಾವಿ, ಕೆರೆ, ಹೊಳೆ, ಗದ್ದೆ-ತೋಟಗಳಿಗೆ ಈ ಸವಳುನೀರು ವ್ಯಾಪಿಸಿ, ಕೃಷಿಕರು ಸೋಲುತ್ತಿದ್ದಾರೆ. ಮೀನು, ಏಡಿಗಳಂಥ ಜಲಚರಗಳಲ್ಲಿನ ವೈವಿಧ್ಯ ಮತ್ತು ಲಭ್ಯತೆ ಕಡಿಮೆಯಾಗಿ ಮೀನುಗಾರರು ಸಂಕಷ್ಟಕ್ಕೀಡಾಗುತ್ತಿದ್ದಾರೆ. ನದಿಯ ಜೈವಿಕ ಸಂರಚನೆಯೇ ಗಾಸಿಗೊಂಡು, ಜನಜೀವನ ಕುಸಿಯುತ್ತಿದೆ.

ಜೊತೆಗೆ, ಎರಡೂ ದಂಡೆಗಳ ಮಿತಿಮೀರಿದ ಅತಿಕ್ರಮಣ. ಮೊದಲೆಲ್ಲ ಕೇದಿಗೆ ಗಿಡವನ್ನು ನೆಟ್ಟೋ ತೋಟ ವಿಸ್ತರಿಸಿಯೋ ಇಂಚಿಂಚಾಗಿ ನದಿಯಂಚು ಅತಿಕ್ರಮಿಸುವ ಸಂದರ್ಭಗಳಿದ್ದವು. ಆದರೆ, ಇತ್ತೀಚಿನ ಅಳತೆಯಿಲ್ಲದ ಮರಳು ಗಣಿಗಾರಿಕೆಯಿಂದಾಗಿ ನದಿಪಾತ್ರವು ನಾಶವಾಗುತ್ತಲೇ, ಅತಿಕ್ರಮಣಕ್ಕೂ ಒಳಗಾಗುತ್ತಿದೆ. ಮರಳು ಉದ್ಯಮಿಗಳು ಪ್ರತಿವರ್ಷವೂ ನದಿಯಂಚಿನ ಹೊಸ ಜಾಗದಲ್ಲಿ ನದಿಯಲ್ಲೇ ಮಣ್ಣುತುಂಬಿ ಮರಳು ದಾಸ್ತಾನು ನಿರ್ಮಿಸುತ್ತಾರೆ. ಮುಂದಿನ ವರ್ಷ ಹೊಸ ಜಾಗ ಅತಿಕ್ರಮಿಸಿಕೊಂಡು, ಹಿಂದಿನ ವರ್ಷ ಬಳಸಿದ್ದ ನದಿಯಂಚನ್ನು ಇನ್ನಾರಿಗೋ ಮಾರುವ ರಿಯಲ್ ಎಸ್ಟೇಟ್ ಉದ್ಯಮಕ್ಕಿಳಿದಿದ್ದಾರೆ. ಬಳ್ಕೂರು, ಇಡಗುಂಜಿ, ಮಾಳ್ಕೋಡು, ಪಡ್ಕುಳಿ, ಹೊಳೆಬಾಡದಂಥ ನದಿತಟದ ಊರುಗಳಲ್ಲಿ ಇದನ್ನು ಈಗಲೂ ನೋಡಬಹುದು. ನದಿಯ ಕನಿಷ್ಠ ನಿರ್ವಹಣೆಯೂ ಕಂದಾಯ, ಗಣಿ, ಪರಿಸರ ಇಲಾಖೆಗಳು ಹಾಗೂ ಪಂಚಾಯತ್ ವ್ಯವಸ್ಥೆಗೆ ಸಾಧ್ಯವಾಗುತ್ತಿಲ್ಲ!

ಈ ಅಧ್ವಾನಗಳಿಂದಾಗಿ ನದಿಪಾತ್ರ ಕಿರಿದಾಗಿ, ಹೂಳುಗಿಡಗಂಟ ತುಂಬಿ, ಕನಿಷ್ಠ ಪ್ರಮಾಣದ ನೀರಿನ ಹರಿವೂ ಇಲ್ಲವಾಗುತ್ತಿದೆ. ಶರಧಿ ಸೇರುವ ಮುನ್ನವೇ ಶರಾವತಿ ಬರಿದಾಗುತ್ತಿದ್ದಾಳೆ. ಇದನ್ನೆಲ್ಲ ಅರ್ಥೈಸಿಕೊಂಡು ನದಿಯ ಪುನರುಜ್ಜೀವನ ಕೈಗೊಳ್ಳಲು ಸರ್ಕಾರ ಹೆಜ್ಜೆಯಿರಿಸಬೇಕಿತ್ತು. ಬದಲಾಗಿ, ನದಿಕಣಿವೆಯ ಕಾಡನ್ನು ಮತ್ತಷ್ಟು ಕತ್ತರಿಸಿ ಜಲಾನಯನ ಪ್ರದೇಶವನ್ನೇ ಛಿದ್ರ ಮಾಡುವ ನೂರಾರು ಮಿನಿ ಒಡ್ಡುಗಳ ಕಾಮಗಾರಿ ಜಾಲ ಕೈಗೊಳ್ಳಲು ಸಣ್ಣ ನೀರಾವರಿ ಇಲಾಖೆಯ 'ಪಶ್ಚಿಮವಾಹಿನಿ' ಯೋಜನೆಗೆ ಮಂಜೂರಾತಿ ನೀಡಿದೆ. ಇತ್ತ ಜೋಗದಲ್ಲಿ ಪ್ರವಾಸಿಗರನ್ನು ಆಕರ್ಷಿಸಲು, ಕೃತಕವಾಗಿ 'ಸರ್ವಋತು ಜಲಪಾತ' ನಿರ್ಮಿಸುವ ಕಾಮಗಾರಿಗೆ ಜೋಗ ಅಭಿವೃದ್ಧಿ ಪ್ರಾಧಿಕಾರಕ್ಕೆ ಒಪ್ಪಿಗೆ ನೀಡಿದೆ! ನದಿಯ ನಿರ್ವಹಣೆಗೆ ವೈಜ್ಞಾನಿಕ ನೀತಿಯನ್ನೇ ರೂಪಿಸದೆ, ಕಾಮಗಾರಿಗಳಲ್ಲೇ ಹಣ ಹರಿಸುವ ಈ ಅವಿವೇಕಕ್ಕೆ ಏನೆನ್ನಬೇಕು?

ಆರೋಗ್ಯ ಹದಗೆಟ್ಟ ರೋಗಿಗೆ ಚಿಕಿತ್ಸೆ ನೀಡುವ ಬದಲು, ಹೆಣವಾಗುವ ಮುನ್ನವೇ ಮಾಡುತ್ತಿರುವ ಶೃಂಗಾರವೆಂದೇ?

ಲೇಖಕ: ನಿರ್ದೇಶಕ, ಸಂರಕ್ಷಣಾ ಜೀವಶಾಸ್ತ್ರ ಮತ್ತು ಸುಸ್ಥಿರ ಅಭಿವೃದ್ಧಿ ಅಧ್ಯಯನ ಕೇಂದ್ರ, ಶಿರಸಿ

ಚುರುಮುರಿ

ದಮ್ ಬೇಕು ದಮ್!

● ಸುಮಂಗಲಾ

ಬೆಕ್ಕಣ್ಣ ಬೆಳಗ್ಗೆಯೇ ಚುನಾವಣೋತ್ತರ ಪ್ರಶ್ನಾವಳಿ ಹಿಡಿದು ನಿಂತಿತ್ತು.

'ಸೋರುತಿಹುದು ಮನಿಯ ಮಾಳಗಿ... ಈಗ ಈ ಹಾಡು ಯಾರಿಗಿ ಸರಿಯಾಗ್ತೈತಿ?'

'ಕೈ ಪಕ್ಷದ ಬ್ರ್ಯಾಂಡ್ ಹಾಡಿದು ಅಂತ ಬಾಲವಾಡಿ ಮಕ್ಕಳು ಸಹಿತ ಹೇಳ್ತಾವಲೇ. ಉತ್ತರಪ್ರದೇಶದಾಗೆ ಚುನಾವಣೆಗೆ ನಿಂತ 399 ಕಾಂಗಿಗಳಲ್ಲಿ ಬರೀ ಇಬ್ಬರೇ ಪಾಸ್ ಆಗ್ಯಾರೆ, ಪಾಪ 387 ಅಭ್ಯರ್ಥಿಗಳು ಠೇವಣಿನೂ ಕಳ್ಕಂಡಾರಂತ' ಎಂದೆ.

'ಕಸ ಗುಡಿಸಿ ಬಿಸಾಕಾಕೆ ಯಾವ ಪೊರಕೆ ಶಕ್ತಿಶಾಲಿ... ಹಂಚಿಕಡ್ಡಿ ಪೊರಕೆ, ತೆಂಗಿನಕಡ್ಡಿ ಪೊರಕೆ...?'

'ಅದ್ಯಾವುದೂ ಅಲ್ಲ... ಕೇಜ್ರಿಬ್ರ್ಯಾಂಡ್ ಪೊರಕೆನೇ ಗಟ್ಟಿ. ಪಂಜಾಬಿನಾಗೆ ಎಲ್ಲಾ ಪಕ್ಷಾನೂ ಗುಡಿಸಿ ಬಿಸಾಕೈತಿ. ಬಾಳಿಕಿ ಬರತೈತಾ ನೋಡಬೇಕಷ್ಟೆ' ಎಂದೆ.

'ಉತ್ತರಪ್ರದೇಶದ ಮಾಯಾವತಿ ಅಕ್ಕೋರ ಆನೆ ಈಗ ಎಲ್ಲೈತಂತ?'

'ಆನೆ ಕಾಲು ಕೆಸರಿನಾಗೆ ಹೂತುಹೋಗೈತಿ, ಆದರೆ ಸೊಂಡಲಿನಾಗೆ ಕಮಲದ ಹೂ ಎತ್ತಿಹಿಡದೈತಿ' ಎಂದೆ.

ಪ್ರಶ್ನಾವಳಿ ಪಕ್ಕಕ್ಕೆಸೆದ ಬೆಕ್ಕಣ್ಣ 'ಆಪರೇಶನ್ ಗಂಗಾ ಯಶಸ್ವಿ, ಆಪರೇಶನ್ ಚುನಾವಣೆ-ನಾಲ್ಕು ರಾಜ್ಯದಾಗೆ ಯಶಸ್ವಿ, ಡಬಲ್ ಎಂಜಿನ್ ಅಜೆಂಡಾ ಯಶಸ್ವಿ... ನೋಡು ಹೆಂಗೈತೆ ಯಶೋಗಾಥೆ' ಎನ್ನುತ್ತ ಮೀಸೆ ತಿರುವಿತು.

'ಆಪರೇಶನ್ ಸಾಕು ಬಿಡಲೇ. ಕೇಳಿಯಿಲ್ಲೋ... ಮೊನ್ನೆ ನಮ್ಮದೊಂದು ಕ್ಷಿಪಣಿ ಪಾಕಿಸ್ತಾನದ ನೆಲಕ್ಕೆ ಹೋಗಿ ಬಿತ್ತಂತ. ತಾಂತ್ರಿಕ ತಪ್ಪಿನಿಂದಾಗಿ ಹಂಗಾಗೈತಿ, ಬೇಕಂತನೇ ಮಾಡಿಲ್ಲ ಅಂತ ನಮ್ಮೋರು. ಅದ್ ಹೆಂಗೆ ಇಂಥಾ ಗಂಭೀರ ತಪ್ಪು ಆಗತೈತಿ, ಜಂಟಿ ತನಿಖೆ ನಡೆಸಬಕು ಅಂತ ಪಾಕ್ ಪ್ರಧಾನಿ ಕ್ಯಾತೆ ತೆಗೆದಾರೆ...'

ನನ್ನ ಮಾತಿನ ನಡುವೆಯೇ ಬಾಯಿಹಾಕಿದ ಬೆಕ್ಕಣ್ಣ, 'ಅದ್ ಬರೇ ತಾಂತ್ರಿಕ ತಪ್ಪು, ತಪ್ಪು ಮಾಡೇ ಮನಸ್ಯಾ ಕಲಿತಾನ. ತಪ್ ಮಾಡಾಕೂ ದಮ್ ಬೇಕು... ಮಾಡಿದ ತಪ್ಪನ್ನು ಸಮರ್ಥಿಸಿ ಕೊಳ್ಳಾಕೂ ದಮ್ ಬೇಕು. ಎಲ್ಲಾ ಥರಾ ಆಪರೇಶನ್ ಮಾಡಾಕೂ ಹಿಂಗ ದಮ್ ಬೇಕು ದಮ್' ಎಂದು ತಡಬಡನೆ ಹೇಳುತ್ತ, ದಮ್ಮು ಹತ್ತಿ ಕೆಮ್ಮತೊಡಗಿತು!

ಸಂಗತ

ಸಂಘಟನಾ ಜಾಲದ ಮೇಲುಗೈ

ಎಎಪಿ ಮತದಾರರನ್ನು ಮುಟ್ಟಿದ ರೀತಿಗೂ ಕಾಂಗ್ರೆಸ್ ತರಹದ ಪಕ್ಷಗಳು ಮತದಾರರನ್ನು ಮುಟ್ಟುವ ರೀತಿಗೂ ಅಜಗಜಾಂತರವಿದೆ

● ನೆಂಪೆ ದೇವರಾಜ್

ಐದು ರಾಜ್ಯಗಳ ಚುನಾವಣಾ ಫಲಿತಾಂಶ ಬಹುಮುಖ್ಯವಾದ ಪಾಠಗಳನ್ನು ಪ್ರಮುಖ ಪಕ್ಷಗಳಿಗೆ ಎದೆಗಿರಿಯುವಂತೆ ಕೊಟ್ಟು ಹೋಗಿದೆ. ಅದರಲ್ಲೂ ಕಾಂಗ್ರೆಸ್ ಮತ್ತು ಇತರ ಕೆಲವು ಪಕ್ಷಗಳಿಗೆ 'ನೀವು ಸ್ಥಾಪಿತ ಸೂತ್ರಗಳಿಂದ ಹೊರಬರಲೇಬೇಕು' ಎಂಬ ಸಂದೇಶ ಕೊಟ್ಟಿದೆ.

ವಂಶಾಡಳಿತ, ಜಾತಿ ಸಮೀಕರಣಗಳಿಗೆ ಸರಿಯಾದ ಪೆಟ್ಟು ನೀಡಿದ್ದೇನೆಂದು ಹೇಳಿದ್ದು ಮಾತ್ರವಲ್ಲ, ಮಾಡಿದ್ದನ್ನು, ಮಾಡಬೇಕಾದ್ದನ್ನು ಸಕಾಲದಲ್ಲಿ ಮತದಾರರಿಗೆ ತಲುಪಿಸಿದರೆ ಫಲಿತಾಂಶ ಸಕಾರಾತ್ಮಕವಾಗಿ ಇರುತ್ತದೆ ಎಂಬುದನ್ನೂ ಪಂಜಾಬ್‌ನ ಚುನಾವಣೆ ಸಾರಿದೆ.

ಟಿಕೆಟ್ ಪಡೆದ ಪಂಜಾಬ್‌ನ ಕಾಂಗ್ರೆಸ್ ಮತ್ತು ಅಕಾಲಿದಳದ ಹದಿನೈದು ಅಭ್ಯರ್ಥಿಗಳಲ್ಲಿ ಒಬ್ಬರ ತಂದೆ ಅಥವಾ ತಾಯಿ ಈ ಹಿಂದೆ ಶಾಸಕರೋ ಮಂತ್ರಿಯೋ ಆಗಿದ್ದರೆಂದು ವರದಿಯೊಂದು ತಿಳಿಸುತ್ತದೆ. ಮಣಿಪುರ, ಗೋವಾ, ಉತ್ತರಾಖಂಡದ ಸ್ಥಿತಿಯೂ ಇದಕ್ಕಿಂತ ಹೊರತಲ್ಲ. ಮಂತ್ರಿಯೋ ಶಾಸಕರೋ ಆಗಿದ್ದವರ ಬೆಳೆಯುತ್ತಿರುವ ಕುಡಿಗಳು ಕಾಂಗ್ರೆಸ್‌ನ ಟಿಕೆಟ್ ಪಡೆಯುತ್ತಿರುವುದು ಗೊತ್ತಿದ್ದರೂ ನಿಯಂತ್ರಿಸುವ ಗೋಜಿಗೆ ಹೋದರೆ ಜೇನುನೊಣಗಳಿಂದ ಕಚ್ಚಿಸಿಕೊಳ್ಳುವ ಭಯದಲ್ಲಿ ಹೈಕಮಾಂಡ್ ಸುಮ್ಮನಾಗಬೇಕಾದ ಸ್ಥಿತಿ.

ಪಂಜಾಬ್‌ನಲ್ಲಿ ಆಮ್ ಆದ್ಮಿ ಪಕ್ಷ (ಎಎಪಿ) ಟಿಕೆಟ್ ನೀಡುವ ವಿಷಯದಲ್ಲಿ ವಂಶಾಡಳಿತದ ನೆರಳು ಕೂಡಾ ಸೋಕದಂತೆ ನೋಡಿಕೊಂಡದ್ದಷ್ಟೇ ಅದರ ಗೆಲುವನ್ನು ನಿರ್ಧರಿಸಲಿಲ್ಲ. ಅದು ಕಾರ್ಯಕರ್ತರ ಪಡೆಯನ್ನು ಸುಭದ್ರವಾಗಿ ಕಟ್ಟಿತ್ತು. ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ಎಎಪಿಯು ಲಾಗಾಯ್ತಿನ ಪರಂಪರೆ, ಸಂಪ್ರದಾಯಗಳನ್ನು ಮುರಿದು ಮತದಾರರನ್ನು ಮುಟ್ಟಿದ ರೀತಿಗೂ ಕಾಂಗ್ರೆಸ್ ತರಹದ ಸಾಂಪ್ರದಾಯಿಕ ಶೈಲಿಯ ಪಕ್ಷಗಳು ಮತದಾರರನ್ನು ಮುಟ್ಟುವ ರೀತಿಗೂ ಅಜಗಜಾಂತರವಿದೆ.

ಉತ್ತರಪ್ರದೇಶದಲ್ಲಿ ಜಾತಿ, ಧರ್ಮದ ಸಮೀಕರಣ ಪದೇಪದೇ ಮೇಲುಗೈ ಸಾಧಿಸುತ್ತಿದೆ. ಎಲ್ಲ ಪಕ್ಷಗಳೂ ಇದೇಸಮೀಕರಣಅನುಸರಿಸುವುದರಲ್ಲಿಹಿಂದೆಬಿದ್ದಿಲ್ಲ. ಆದರೆ ಈ ವಿಷಯದಲ್ಲಿ ಬಿಜೆಪಿಯ ತರಹ ಪಳಗಿಲ್ಲದ ಇವುಗಳಿಗೆ ಸೋಲು ಅನಿವಾರ್ಯವಾಯಿತು.

ಉತ್ತರಾಖಂಡ, ಗೋವಾ, ಪಂಜಾಬ್, ಮಣಿಪುರದಲ್ಲಿ ಜಾತ್ಯತೀತತೆ, ಸಾಮಾಜಿಕ ನ್ಯಾಯ, ಸಮಾಜವಾದಿ ನೆಲೆಯ ಮೇಲೆ ಚುನಾವಣೆ ನಡೆಸುವ ಅವಕಾಶವಿತ್ತು. ಏಕೆಂದರೆ ಇಲ್ಲಿಯವರೆಗಿನ ಚುನಾವಣೆಗಳಲ್ಲಿ ಇಲ್ಲಿ ಕೋಮು ಧ್ರುವೀಕರಣ ಹೆಚ್ಚಿನ ಪ್ರಮಾಣದಲ್ಲಿ ಕೆಲಸ ಮಾಡಿಲ್ಲ. ಆದರಿಲ್ಲಿ ಸಂಘಟನಾ ಜಾಲದ ಬಗ್ಗೆ ನಿಸ್ಸೀಮ ನಿರ್ಲಕ್ಷ್ಯ ತೋರುತ್ತ ಬಂದಿದ್ದರಿಂದ ಕಾಂಗ್ರೆಸ್ ಅನಾಯಾಸವಾಗಿ ಬಿಜೆಪಿಗೆ ಇವುಗಳನ್ನು ಬಿಟ್ಟುಕೊಡಬೇಕಾಯಿತು.

ಮಣಿಪುರ, ಗೋವಾದಲ್ಲಿ ಜಾತಿ, ಧರ್ಮದ ವಿಷಯಗಳು ಮುಖ್ಯವೇ ಅಲ್ಲ. ಅಲ್ಲದೆ ಅಲ್ಲಿ ಆಡಳಿತ ವಿರೋಧಿ ಅಲೆ ಇದ್ದರೂ ಬಿಜೆಪಿ ಗೆಲ್ಲುತ್ತದೆ. ಇದಕ್ಕೆ ಕಾರಣ ಅದು ಹೆಣೆದ ಚುನಾವಣಾ ಜಾಲ ಮತ್ತು ತರಬೇತುಗೊಂಡ ಕಾರ್ಯಕರ್ತರ ಪಡೆ!

ಬೂತ್ ಮಟ್ಟದ ಸಭೆ ನಡೆಸಿ 'ಪೇಜ್ ಪ್ರಮುಖ್' ಎಂಬ ಹೊಸ ವಿಧಾನದಲ್ಲಿ ಬಿಜೆಪಿಯು ಮತದಾರರನ್ನು ಮುಟ್ಟುತ್ತಿದ್ದಾಗ ಅದೇ ಸವಕಲು ರೋಡ್ ಷೋ, ಬಹಿರಂಗ ಸಭೆಗಳಿಗಷ್ಟೇ ಇತರ ಪಕ್ಷಗಳು ಸೀಮಿತವಾಗಿದ್ದವು. ಬಿಎಸ್‌ಪಿ 2007ರವರೆಗೆ ನಡೆಸುತ್ತಿದ್ದ ಚುನಾವಣಾ ತಂತ್ರಗಳನ್ನು ಇಡೀ ದೇಶವೇ ಬೆರಗುಗಣ್ಣಿನಿಂದ ನೋಡುವಂತಾಗಿತ್ತು. ಪತ್ರಿಕಾಗೋಷ್ಠಿ ನಡೆಸದೆ, ಮಾಧ್ಯಮಗಳಿಗೆ ಸಂದರ್ಶನಗಳನ್ನೂ ನೀಡದೆ ಉತ್ತರಪ್ರದೇಶದ ಪ್ರತೀ ಕಾಲೊನಿ, ಕೇರಿಯಲ್ಲಿ ಸಿದ್ಧಪಡಿಸಿದ ಕಾರ್ಯಕರ್ತರ ಮೂಲಕ ಚುನಾವಣೆ ಎದುರಿಸಿದ್ದ ಮಾಯಾವತಿ ಅವರು ಅಧಿಕಾರದಲ್ಲಿದ್ದಾಗ ಕಾರ್ಯಕರ್ತರನ್ನು ಮರೆತರು. ಪಕ್ಷದ ಸಂಘಟನೆ ಅಪ್‌ಡೇಟ್ ಆಗಲೇ ಇಲ್ಲ. ಆದರೆ ಬಿಜೆಪಿಯು ನವೀನ ಕಾರ್ಯತಂತ್ರಗಳ ಮೂಲಕ ದೇಶದಾದ್ಯಂತ ದಲಿತ ಸಮುದಾಯದ ಮತದಾರರನ್ನು ಸೆಳೆದುಕೊಂಡಿದೆ.

ದೆಹಲಿಯನ್ನು ಸಂಪರ್ಕಿಸುವ ಗಡಿಗಳಲ್ಲಿ ಪಂಜಾಬ್‌ನ ರೈತರು ಸುದೀರ್ಘ ಅವಧಿಯ ಪ್ರತಿಭಟನೆಗಿಳಿದಾಗ ಅವರ ನೆರವಿಗೆ ಬಂದದ್ದು ಇದೇ ಎಎಪಿ ನೇತೃತ್ವದ ದೆಹಲಿ ಸರ್ಕಾರ. ವಿದ್ಯುತ್, ನೀರು, ಆಹಾರ ಪೂರೈಕೆ, ಆರೋಗ್ಯ ತಪಾಸಣೆಯಂತಹ ಬಹುಮುಖ್ಯ ಸಂಗತಿಗಳಲ್ಲಿ ನೆರವಾದ ಎಎಪಿ ಕಾರ್ಯಕರ್ತರು, ಕ್ಷಣಮಾತ್ರದಲ್ಲಿ ಇದು ಪಂಜಾಬಿನ ಪ್ರತೀ ಮನೆಮನಗಳಿಗೆ ತಲುಪುವಂತೆ ನೋಡಿಕೊಂಡರು.

ಇಂದಿನ ಬದಲಾದ ಸನ್ನಿವೇಶಗಳನ್ನು ಗಮನಿಸಿದಾಗ ಸ್ಪಷ್ಟವಾಗಿ ಗೋಚರಿಸುವ ಅಂಶಗಳೆಂದರೆ, ಜನರ ಮನೆಮನ ಮುಟ್ಟುವುದಕ್ಕೆ ಸಿಗುತ್ತಿರುವ ಮನ್ನಣೆ ಕಿಕ್ಕಿರಿದ ಸಮಾವೇಶಗಳಿಗೆ ದೊರೆಯುವುದಿಲ್ಲ. ಸಂಘಟನೆಯ ಅಸ್ತ್ರಗಳು ಫಲಿತಾಂಶವನ್ನು ನಿರ್ಧರಿಸುತ್ತವೆ. ಸಂಘಟನೆಯ ಎದುರು ಧರ್ಮ, ಜಾತಿಯ ಅಸ್ತ್ರಗಳು ಪುಡಿಪುಡಿಯಾಗುವುದೂ ಉಂಟು. ಈ ಸತ್ಯವನ್ನು ಅರಿತಿರುವ ಎಎಪಿ ತನ್ನ ನೆಲೆಯನ್ನು ಮತ್ತಷ್ಟು ವಿಸ್ತರಿಸಿಕೊಳ್ಳುವ ಮುನ್ಸೂಚನೆ ನೀಡಿದೆ.

ಬಿಜೆಪಿಯು ಭಾವನಾತ್ಮಕ ವಿಷಯಗಳ ಜೊತೆ ಸಂಘಟನೆಯಲ್ಲೂ ಹೊಸ ವಿಧಾನಗಳನ್ನು ಅನುಸರಿಸುತ್ತಿರುವುದರಿಂದ ಯಶಸ್ಸಿನ ನಾಗಾಲೋಟದಲ್ಲಿದೆ. ಬಿಜೆಪಿಯೇತರ ಪಕ್ಷಗಳು ಆಡಳಿತ ವಿರೋಧಿ ಅಲೆಯನ್ನು ನಂಬಿಕೊಂಡು ರೋಡ್ ಷೋ, ಭಾರಿ ಜನಸ್ತೋಮವನ್ನು ಸೇರಿಸುವ ಹಳೆಕಾಲದ ಸೂತ್ರವನ್ನು ಪರಿಪಾಲಿಸುವುದರಲ್ಲಿ ಕಾಲ ನೂಕುತ್ತಿವೆ.

ವಾಚಕರ ವಾಣಿ

ಪ್ರತಿಪಕ್ಷಗಳೇ ಜಗಳವಾಡಿಕೊಂಡರೆ...

ವಿಧಾನಮಂಡಲ ಅಧಿವೇಶನದಲ್ಲಿ ಆಡಳಿತ ಮತ್ತು ವಿರೋಧ ಪಕ್ಷಗಳು ಪರಸ್ಪರ ವಾದ, ಪ್ರತಿವಾದಗಳೊಂದಿಗೆ ಕಿತ್ತಾಡಿಕೊಳ್ಳುವುದು ಸಾಮಾನ್ಯ ಸಂಗತಿ. ಆದರೆ ವಿಧಾನಸಭೆಯಲ್ಲಿ ಬುಧವಾರ ನಡೆದದ್ದೇ ಬೇರೆ. ಎರಡು ಪ್ರತಿಪಕ್ಷಗಳೇ ಕಿತ್ತಾಡಿಕೊಂಡಿದ್ದು ಅಚ್ಚರಿ ಮೂಡಿಸಿತು!

ಅಧಿವೇಶನದಲ್ಲಿ ಸರ್ಕಾರದ ನಡೆ, ರಾಜ್ಯದ ಸಮಸ್ಯೆಗಳು, ಅಭಿವೃದ್ಧಿ ಕಾರ್ಯದಂತಹ ವಿಷಯಗಳನ್ನು ಮುಂದಿಟ್ಟು ಪ್ರತಿಪಕ್ಷಗಳು ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಬೇಕು. ಜತೆಗೆ ಪರಿಹಾರಕ್ಕಾಗಿ ಒತ್ತಾಯಿಸಬೇಕು. ಇದನ್ನು ಬಿಟ್ಟು ವೈಯಕ್ತಿಕ ರಾಜಕೀಯ ದ್ವೇಷ ಇಟ್ಟುಕೊಂಡು, ಅದನ್ನು ತಂದು ಸದನದಲ್ಲಿ ಹೇಳಿಕೊಂಡು ಕಿತ್ತಾಡಿದರೆ ಹೇಗೆ?

ಬೇ.ನ.ಶ್ರೀನಿವಾಸಮೂರ್ತಿ, ತುಮಕೂರು

ಲೋಕೋತ್ಸವದಲ್ಲಿ ಮರೆಯದ ಜನನುಡಿ

ಜಾನಪದ ಲೋಕದಲ್ಲಿ ಇತ್ತೀಚೆಗೆ 'ಪ್ರವಾಸಿ ಜಾನಪದ ಲೋಕೋತ್ಸವ' ಕಾರ್ಯಕ್ರಮ ಹಮ್ಮಿಕೊಂಡಿದ್ದು ಸರಿಯೆ. ಹಾಡು ಹಸೆ, ಮೇಳ, ನೃತ್ಯ ನಮ್ಮ ಜಾನಪದ ಪರಂಪರೆಯನ್ನು ಸಮರ್ಥವಾಗಿ ಬಿಂಬಿಸಿದವು. ಭಾಗವಹಿಸಿದ ಕಲಾವಿದರಿಗಷ್ಟೇ ಭೋಜನದ ಏರ್ಪಾಡಾಗಿತ್ತು. ಪ್ರೇಕ್ಷಕರು, ಅದರಲ್ಲೂ ದೂರದ ಊರುಗಳಿಂದ ಬಂದವರು ಈ ವ್ಯವಸ್ಥೆಯಿಲ್ಲದೆ ಪಾಡುಪಟ್ಟರು. ಹೆಚ್ಚಿನ ಸಂಖ್ಯೆಯಲ್ಲಿಲ್ಲದ ಪ್ರೇಕ್ಷಕರಿಗೆ ಸರಳವಾಗಿಯಾದರೂ ಊಟ ವಿತರಿಸಬಹುದಿತ್ತು. 'ಬಾಯಾರಿ ಬಂದವರಿಗೆ ಒಂದು ಬಟ್ಟಲು ನೀರು, ಅಷ್ಟು ಅನ್ನ, ಎರಡು ಪ್ರೀತಿಯ ಮಾತು ಇತ್ತಲ್ಲಿ ಅಲ್ಲಿಯೇ ಕಲ್ಯಾಣ' ಜನನುಡಿ ನೆನಪಾಯಿತು.

ಬಿಂಡಿಗನವಿಲೆ ಭಗವಾನ್, ಬೆಂಗಳೂರು

ಎಎಪಿ ಕಾರ್ಯತಂತ್ರದಿಂದ ಪಾಠ ಕಲಿಯಲಿ

'ಬಿಜೆಪಿಯನ್ನು ಸೋಲಿಸುವುದು ಸಾಧ್ಯ' ಎಂದಿದ್ದಾರೆ ಅಖಿಲೇಶ್ ಯಾದವ್. ಮಮತಾ ಬ್ಯಾನರ್ಜಿ ಅವರು ಮತಯಂತ್ರಗಳ ಬಗೆಗೆ ಕ್ಯಾತೆ ತೆಗೆದಿದ್ದಾರೆ. ಮತ ವಿಭಜನೆಯಿಂದ ಬಿಜೆಪಿ ಗೆದ್ದಿದೆ ಎಂದು ಮಾಯಾವತಿ ಹೇಳಿದ್ದಾರೆ (ಪ್ರ.ವಾ., ಮಾರ್ಚ್ 12). ಈ ಮೂರೂ ಹೇಳಿಕೆಗಳಲ್ಲಿ ಸತ್ಯಾಂಶ ಇಲ್ಲದಿಲ್ಲ. ಆದರೆ ಪಂಜಾಬ್‌ನಲ್ಲಿ ಎಎಪಿ ಹೇಗೆ ಗೆಲುವು ಸಾಧಿಸಿತು ಎಂಬ ಕಡೆ ಈ ಜನನಾಯಕರು ಗಮನವನ್ನೇ ಹರಿಸಿಲ್ಲ. ಬಿಜೆಪಿಯ ಚಾಣಾಕ್ಷ ನಡೆಯನ್ನು ಕೂಡ ಇವರು ಅರ್ಥಮಾಡಿಕೊಳ್ಳುವಲ್ಲಿ ವಿಫಲರಾಗಿದ್ದಾರೆ. ಆದರೆ ಎಎಪಿ ಜನಸ್ಪಂದನ ಕಾರ್ಯಕ್ರಮಗಳನ್ನು ಮತದಾರರ ಮುಂದಿಟ್ಟು ಗೆಲುವು ಸಾಧಿಸಿರುವುದು ತುಂಬ ಸ್ಪಷ್ಟವಿದೆ. ಹೀಗಾಗಿ ಈ ಜನನಾಯಕರು ಎಎಪಿ ಕಾರ್ಯತಂತ್ರದಿಂದ ಪಾಠ ಕಲಿಯಬೇಕಿದೆ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಕ್ಯಾನ್ಸರ್ ಬಗೆಗೆ ಸಲ್ಲದ ಪೂರ್ವಗ್ರಹ

ಬಿಜೆಪಿ ಮುಖಂಡ ಸಿ.ಟಿ.ರವಿ ಅವರು ಕಾಂಗ್ರೆಸ್ ಪಕ್ಷವನ್ನು ಟೀಕಿಸುವ ಭರದಲ್ಲಿ ಕ್ಯಾನ್ಸರ್ ವಿಷಯ ಪ್ರಸ್ತಾಪಿಸಿದ್ದಾರೆ. 'ಕ್ಯಾನ್ಸರ್‌ಗೆ ಮದ್ದಿಲ್ಲ, ಕ್ಯಾನ್ಸರ್ ಬಂದರೆ ಉಳಿಗಾಲವಿಲ್ಲ' ಎಂಬರ್ಥದಲ್ಲಿ ಹೇಳಿಕೆ ನೀಡಿದ್ದಾರೆ. ಹಾಗಾದರೆ ಈ ರಾಜಕಾರಣಿಗಳು ದೇಶದ ತುಂಬೆಲ್ಲಾ ಕ್ಯಾನ್ಸರ್ ಚಿಕಿತ್ಸಾ ಆಸ್ಪತ್ರೆಗಳನ್ನು ತೆರೆಯುವುದೇಕೆ? ಕ್ಯಾನ್ಸರ್ ಗುಣಪಡಿಸಲಾಗದ ಕಾಯಿಲೆಯಲ್ಲ ಎಂದು ವಿಜ್ಞಾನ ಮತ್ತು ವೈದ್ಯರು ಸ್ಪಷ್ಟಪಡಿಸುತ್ತಿರುವಾಗ ರಾಜಕಾರಣಿಗಳು ಇಂತಹ ಹೇಳಿಕೆ ನೀಡುವ ಮೂಲಕ ಕ್ಯಾನ್ಸರ್‌ಪೀಡಿತರಲ್ಲಿ ಅಧೈರ್ಯ ಉಂಟುಮಾಡುತ್ತಿದ್ದಾರೆ. ಇಂತಹ ಹೇಳಿಕೆ ನೀಡುವ ಮುನ್ನ ಮುಖಂಡರು ಇನ್ನಾದರೂ ಯೋಚನೆ ಮಾಡಲಿ.

ಪ್ರಕಾಶ್ ಮಲ್ಕಿಒಡೆಯರ್, ಹೂವಿನಹಡಗಲಿ

ಹೊನಲು ಬೆಳಕಿನ ಪಂದ್ಯ ಅನಿವಾರ್ಯವೇ?

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾರತ ಮತ್ತು ಶ್ರೀಲಂಕಾ ಕ್ರಿಕೆಟ್ ತಂಡಗಳ ನಡುವೆ ಐದು ದಿನಗಳ ಹೊನಲು ಬೆಳಕಿನ ಟೆಸ್ಟ್ ಪಂದ್ಯ ನಡೆಯುತ್ತಿದೆ. ಜೊತೆಗೆ, ಭಾರತದ ನಾನಾ ಕ್ರೀಡಾಂಗಣಗಳಲ್ಲಿ ಒಂದು ತಿಂಗಳಿಗೂ ಹೆಚ್ಚು ಕಾಲ ಪ್ರತಿದಿನ ಐಪಿಎಲ್ ಕ್ರಿಕೆಟ್ ಟೂರ್ನಿ ಆಯೋಜನೆಗೊಂಡಿದ್ದು, ಅವುಗಳಲ್ಲಿ ಬಹುತೇಕ ಹೊನಲು ಬೆಳಕಿನ ಪಂದ್ಯಗಳೇ ಆಗಿವೆ.

ನೈಸರ್ಗಿಕವಾಗಿ ಸೂರ್ಯನ ಬೆಳಕು ಇರುವಾಗ ರಾತ್ರಿಯಲ್ಲಿ ವಿದ್ಯುತ್ ದೀಪಗಳನ್ನು ಬಳಸಿ ಆಟ ಆಡುವ ಔಚಿತ್ಯವಾದರೂ ಏನು? ವಿದ್ಯುತ್ ಕೂಡಾ ನೈಸರ್ಗಿಕ ಸಂಪತ್ತು ಎಂದೇ ಭಾವಿಸಬೇಕು. ಇದು ವಿದ್ಯುತ್ತನ್ನು ಅನಗತ್ಯವಾಗಿ ಪೋಲು ಮಾಡುವ ವಿಚಾರವೇ ಹೌದಲ್ಲವೇ? ಇಂದಿಗೂ ಎಷ್ಟೋ ಹಳ್ಳಿಗಳಲ್ಲಿ ಸರಿಯಾದ ಸಮಯಕ್ಕೆ ವಿದ್ಯುತ್ ಸಿಗದಿರುವುದರಿಂದ ಬೆಳೆಗಳಿಗೆ ನೀರು ಹರಿಸಲಾಗದೆ ರೈತ ಕಂಗಾಲಾಗಿದ್ದಾನೆ. ಆಹಾರದ ಉತ್ಪನ್ನ ಕುಂಠಿತವಾಗುತ್ತಿದೆ. ಇಲ್ಲಿ ಅನಗತ್ಯವಾಗಿ ಬಳಸುವ ವಿದ್ಯುತ್ ಹಳ್ಳಿಗಳೆಡೆಗೆ ಹರಿದರೆ ಆಹಾರದ ಅಭಾವ ಕಡಿಮೆ ಆಗುವುದರ ಜೊತೆಗೆ ರೈತನ ಮುಖದಲ್ಲೂ ಮಂದಹಾಸ ಮೂಡುತ್ತದೆ. ಆಟ ಅಥವಾ ಮನರಂಜನೆಗಾಗಿ ನೈಸರ್ಗಿಕ ಸಂಪತ್ತು ಪೋಲಾಗುವುದು ಎಷ್ಟು ಸರಿ? ಹಗಲಲ್ಲಿ ಆಟವಾಡಿದರೆ ಬೇಡ ಎನ್ನುವವರಾರು? ಇಂತಹ ಅನಗತ್ಯ ಪೋಲುಗಳಿಗೆ ಕಡಿವಾಣ ಹಾಕಬೇಕು.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಜವಾಬ್ದಾರಿ ಮರೆತ ಜನನಾಯಕರು

ಶಾಸಕರು ಹಾಗೂ ಸಚಿವರು ವಿಧಾನಸಭೆ ಅಧಿವೇಶನಗಳಿಗೆ ಗೈರುಹಾಜರಾಗುತ್ತಿರುವ ಬಗ್ಗೆ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಹಿಂದಿನ ಅವಧಿಯ ಕಾಂಗ್ರೆಸ್ ನೇತೃತ್ವದ ಸರ್ಕಾರದಲ್ಲಿ ವಿಧಾನಸಭಾಧ್ಯಕ್ಷರಾಗಿದ್ದ ಕಾಗೋಡು ತಿಮ್ಮಪ್ಪ ಅವರೂ ಕಲಾಪಕ್ಕೆ ಸಚಿವರು, ಶಾಸಕರ ಗೈರುಹಾಜರಿ ಕುರಿತು ಅಸಮಾಧಾನ ಹೊರಹಾಕಿ, ಶಾಸಕರಿಗೆ ಈ ಬಗ್ಗೆ ಕಾರ್ಯಾಗಾರ ಏರ್ಪಡಿಸಬೇಕು ಎಂದಿದ್ದರು. ಶಾಸಕರಿಗೆ ಒಂದು ಹಂತದಲ್ಲಿ ರಿಯಾಯಿತಿ ತೋರಿಸಬಹುದಾದರೂ, ಅವರಿಗಿಂತ ದೊಡ್ಡ ಜವಾಬ್ದಾರಿ ಇರುವ ಸಚಿವರು ಗೈರಾಗುವುದು ಸದನಕ್ಕೆ ತೋರುವ ಅಗೌರವವೇ ಸರಿ.

ಗಣಪತಿ ಶಿರಳಗಿ, ಸಾಗರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸುಪ್ರೀಂ 'ಮೀಸಲಾತಿ ಸಮೀಕ್ಷೆ' ರಾಜಕೀಯ ಸವಾಲುಗಳು

• ನಟರಾಜ್ ಹುಳಿಯಾರ್

ಮಹಾರಾಷ್ಟ್ರದ ಸ್ಥಳೀಯ ಸಂಸ್ಥೆಗಳ ಚುನಾವಣೆಯ ಬಗ್ಗೆ ಸುಪ್ರೀಂ ಕೋರ್ಟ್ ಕೊಟ್ಟಿರುವ ತೀರ್ಪು ತಮ್ಮ ಬುಡಕ್ಕೇ ಬರಬಹುದೆಂದು ಕರ್ನಾಟಕದ ರಾಜಕೀಯ ಪಕ್ಷಗಳು ನಿರೀಕ್ಷಿಸಿರಲಿಕ್ಕಿಲ್ಲ. 'ಸ್ಥಳೀಯ ಸಂಸ್ಥೆಗಳಲ್ಲಿ ರಾಜಕೀಯ ಪ್ರಾತಿನಿಧ್ಯ ಕುರಿತು ಮೂರು ಹಂತದ ಸಮೀಕ್ಷೆ ಮಾಡದ ಹೊರತು ಚುನಾವಣೆ ಮಾಡುವಂತಿಲ್ಲ ಹಾಗೂ ಸದ್ಯಕ್ಕೆ ಹಿಂದುಳಿದ ವರ್ಗಗಳ ಶೇ 27ರಷ್ಟು ಮೀಸಲಾತಿ ಕ್ಷೇತ್ರಗಳನ್ನು ಸಾಮಾನ್ಯ ಕ್ಷೇತ್ರಗಳಾಗಿ ಘೋಷಿಸಿ ಚುನಾವಣೆ ನಡೆಸಬಹುದು' ಎನ್ನುವ ತೀರ್ಪಿನ ನಾಳಿನ ಪರಿಣಾಮಗಳನ್ನು ನಮ್ಮ ರಾಜಕೀಯ ಪಕ್ಷಗಳು ಗಂಭೀರವಾಗಿ ಪರಿಗಣಿಸಿದಂತಿಲ್ಲ.

ಒಂದು ಅಂದಾಜಿನ ಪ್ರಕಾರ, ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಮತದಾರರ ಪ್ರಮಾಣ ಶೇ 50ಕ್ಕಿಂತ ಹೆಚ್ಚು. ಅಲ್ಪಸಂಖ್ಯಾತ ಶಾಸಕರೂ ಸೇರಿದಂತೆ ಹಿಂದುಳಿದ ವರ್ಗಗಳನ್ನು ಪ್ರತಿನಿಧಿಸುವ ಒಟ್ಟು 157 ಶಾಸಕ, ಶಾಸಕಿಯರಿದ್ದಾರೆ. ಈ ಎಲ್ಲ ಶಾಸಕರೂ ಪಕ್ಷಾತೀತವಾಗಿ ಹಿಂದುಳಿದ ವರ್ಗಗಳ ರಾಜಕೀಯ ಹಕ್ಕನ್ನು ರಕ್ಷಿಸಲು ಯುದ್ಧೋಪಾದಿಯಲ್ಲಿ ಸಮೀಕ್ಷೆ ಆರಂಭಿಸಬೇಕೆಂದು ದನಿಯೆತ್ತಬೇಕಾಗಿತ್ತು. ಇಂಥ ಸಮೀಕ್ಷೆಯ ಸಿದ್ಧತೆಗೆ ಇಲ್ಲಿನ ರಾಜಕೀಯ ಪಕ್ಷಗಳು ಯಾಕೆ ಹಿಂದೇಟು ಹಾಕುತ್ತಿವೆ? ಲಿಂಗಾಯತ ಪ್ರಾಬಲ್ಯದ ಬಿಜೆಪಿ; ಒಕ್ಕಲಿಗರ ಪ್ರಾಬಲ್ಯದ ಜೆಡಿಎಸ್; ಹಿಂದುಳಿದ ವರ್ಗಗಳ ಪ್ರಾಬಲ್ಯವಿರುವ ಕಾಂಗ್ರೆಸ್- ಈ ಮೂರು ಪಕ್ಷಗಳಿಗೂ ಹಿಂದುಳಿದ ವರ್ಗಗಳು ಮತ ಹಾಕುತ್ತಾ ಬಂದಿವೆ. ಆದರೆ ಕಾಂಗ್ರೆಸ್ಸಿನ ಕೆಲವು ನಾಯಕರನ್ನು ಬಿಟ್ಟರೆ ಎಲ್ಲ ಪಕ್ಷಗಳ ಹಿಂದುಳಿದ ವರ್ಗ ಹಾಗೂ ದಲಿತ ಶಾಸಕರು, ಈ ಮೀಸಲಾತಿಯ ಪರೋಕ್ಷ ಲಾಭ ಪಡೆದಿರುವ ಪ್ರಬಲ ಜಾತಿಗಳ ನಾಯಕರು ಈ ಬಗ್ಗೆ ಮಾತೇ ಆಡಿಲ್ಲ. ಇನ್ನು ಒಂದೇ ವರ್ಷದಲ್ಲಿ ಚುನಾವಣೆ ಎದುರಿಸಬೇಕಾದ ಎಲ್ಲ ಪಕ್ಷಗಳ ನಾಯಕರು ಹಿಂದುಳಿದ ವರ್ಗಗಳ ಮತದಾರರ ಎದುರು ಯಾವ ಮುಖ ಹೊತ್ತು ನಿಲ್ಲಬಲ್ಲರು? ಈ ಮೀಸಲಾತಿ ಮುಂದುವರಿಕೆಯ ಬಗ್ಗೆ ಯಾವ ಭರವಸೆ ಕೊಡಬಲ್ಲರು?

ಹಿಂದುಳಿದ ವರ್ಗಗಳ ವಿವಿಧ ಜಾತಿಗಳಿಗೆ ಸ್ಥಳೀಯ ಸಂಸ್ಥೆಗಳಲ್ಲಿ ತಕ್ಕ ಪ್ರಾತಿನಿಧ್ಯ ಕೊಟ್ಟರೆ ಮಾತ್ರ ತಮ್ಮ ಅಧಿಕಾರ ರಾಜಕಾರಣ ಸುರಕ್ಷಿತ ಎಂಬ ಸ್ವಾರ್ಥದಿಂದಾದರೂ ಎಲ್ಲ ಹಿಂದುಳಿದ ವರ್ಗಗಳ ಶಾಸಕರು ಈ ಬಗ್ಗೆ ದನಿಯೆತ್ತಲೇಬೇಕಾಗಿತ್ತು. ಸಾಮಾನ್ಯ ಕ್ಷೇತ್ರಗಳಲ್ಲಿ ಹಿಂದುಳಿದ ವರ್ಗಗಳಿಂದ ಬಂದ ಶಾಸಕರು ಹಾಗೂ ಪ್ರಬಲ ಜಾತಿಗಳ ಶಾಸಕರು ಕೂಡ ಶೇ 27ರ ಮೀಸಲಾತಿಯಡಿ ತಂತಮ್ಮ ಹಿಂಬಾಲಕ ಮುಖಂಡರನ್ನು ಸ್ಥಳೀಯ ಸಂಸ್ಥೆಗಳಲ್ಲಿ ಅಧ್ಯಕ್ಷ, ಸದಸ್ಯ ಸ್ಥಾನಗಳಲ್ಲಿ ಕೂರಿಸುತ್ತಲೇ ಬಂದಿದ್ದಾರೆ. ಅಂದರೆ, ಇವರೆಲ್ಲರೂ ಪರೋಕ್ಷವಾಗಿ ಹಿಂದುಳಿದ ವರ್ಗಗಳ ಮೀಸಲಾತಿಯ ಫಲಾನುಭವಿಗಳೇ. ಸ್ಥಳೀಯ ಸಂಸ್ಥೆಗಳಲ್ಲಿ ಗಳಿಸಿದ ಸಬಲೀಕರಣದಿಂದಾಗಿಯೇ ಅಷ್ಟಿಷ್ಟು ಅಧಿಕಾರ ಹಿಡಿದಿರುವ ಮಹಿಳಾ ರಾಜಕಾರಣಿಗಳು ಈ ಬಗ್ಗೆ ಮಾತಾಡಲೇಬೇಕಾಗಿತ್ತು. ಸುಪ್ರೀಂ ಕೋರ್ಟ್ ಆದೇಶದಂತೆ ಸಮೀಕ್ಷೆ ನಡೆಸಿದ ಬಳಿಕ ಅನ್ವಯವಾಗುವ ತರ್ಕವು ಸ್ಥಳೀಯ ಸಂಸ್ಥೆಗಳ ಮಟ್ಟದಿಂದ ವಿಧಾನಸಭೆ, ಪಾರ್ಲಿಮೆಂಟಿನವರೆಗೂ ಬಂದರೆ ಒಟ್ಟು ರಾಜಕೀಯದ ದಿಕ್ಕು ಏನಾಗುತ್ತದೆ? ಸಂವಿಧಾನದತ್ತವಾದ ಇನ್ನುಳಿದ ಮೀಸಲಾತಿಗಳು ಹೇಗೆ ರೂಪಾಂತರ ಗೊಳ್ಳುತ್ತವೆ? ಈ ಪ್ರಶ್ನೆಗಳು ನಮ್ಮ ನಾಯಕರನ್ನು ಕಾಡಿದಂತಿಲ್ಲ. ಕಾಡಬೇಕಿತ್ತು.

ಹಿಂದುಳಿದ ವರ್ಗಗಳ ಮೀಸಲಾತಿಯಡಿಯಲ್ಲೂ ಹೆಚ್ಚು ಅಧಿಕಾರ ಪಡೆದಿರುವ ಪ್ರಬಲ ಜಾತಿಗಳು ರಾಜಕೀಯ ಪ್ರಾತಿನಿಧ್ಯ ಕುರಿತ ಈ ಪ್ರಶ್ನೆಗಳ ಪರಿಣಾಮದ ಬಗ್ಗೆ ಆತಂಕಗೊಂಡಿರಬಹುದೆ? ರಾಜಕೀಯ ಪ್ರಾತಿನಿಧ್ಯ ಕುರಿತ ಈ ಪ್ರಶ್ನೆ ಮುಂದೊಮ್ಮೆ 'ನಿರ್ದಿಷ್ಟ ಜಾತಿ, ವರ್ಗಗಳಿಗೆ ಈವರೆಗೆ ಯಾಕೆ ಸ್ಥಳೀಯ ಸಂಸ್ಥೆಗಳಲ್ಲಿ ಪ್ರಾತಿನಿಧ್ಯ ಸಿಕ್ಕೇ ಇಲ್ಲ?' ಎಂಬ ಪ್ರಶ್ನೆಯವರೆಗೂ ಹೋಗಬಹುದು ಎಂಬ ಭಯ, ಸ್ಥಾಪಿತ ಹಿತಾಸಕ್ತಿಗಳನ್ನು ಕಾಡುತ್ತಿದೆಯೆ? ಮಹಿಳೆಯರನ್ನು ಒಂದು ವರ್ಗವನ್ನಾಗಿ ನೋಡಿದಾಗ, ಮಹಿಳೆಯರ ರಾಜಕೀಯ ಪ್ರಾತಿನಿಧ್ಯದ ಕೊರತೆಯ ಪ್ರಶ್ನೆಯೂ ಇಲ್ಲಿ ಏಳುವುದರಿಂದ ಮತ್ತಷ್ಟು ವಿಕೇಂದ್ರೀಕರಣದ ಅನಿವಾರ್ಯ ಎದುರಾಗಬಹುದೆಂಬ ಪ್ರಶ್ನೆ ಪುರುಷ ರಾಜಕಾರಣಿಗಳನ್ನು ಕಾಡುತ್ತಿರಬಹುದೆ?

ಈವರೆಗೆ ಚಾಪೆ, ರಂಗೋಲಿಗಳ ಕೆಳಗೆ ನುಸಿದು ಒಬಿಸಿ ಮೀಸಲಾತಿ ಸ್ಥಾನಗಳ ವರ್ಗೀಕರಣಗಳನ್ನು ತಂತಮ್ಮ ಕುಟುಂಬ, ಜಾತಿ, ಚೇಲಾಗಳ ಪರವಾಗಿ ತಿರುಚುತ್ತಾ ಬಂದಿರುವ ಎಲ್ಲಾ ಪಕ್ಷಗಳ ನಾಯಕರು ಸುಪ್ರೀಂ ಕೋರ್ಟ್ ತೀರ್ಪಿನಿಂದಾಗಿ ಹಿಂದುಳಿದ ವರ್ಗಗಳಿಗೆ ಆಗುವ ತೀವ್ರ ರಾಜಕೀಯ ಹಿನ್ನಡೆಯ ಪರಿಣಾಮದ ಬಗ್ಗೆ ಯೋಚಿಸಿದಂತಿಲ್ಲ. ಅದರಲ್ಲೂ ಉತ್ತರ ಪ್ರದೇಶ ಚುನಾವಣೆಯ ಫಲಿತಾಂಶಗಳ ಹಿನ್ನೆಲೆಯಲ್ಲಿ ಹಿಂದುಳಿದ ವರ್ಗಗಳು ಮತ್ತೆ ರಾಜಕೀಯ- ಸಾಮಾಜಿಕ ಚಲನೆಯ ಪ್ರಾಥಮಿಕ ಪಾಠಗಳಿಗೆ ಮರಳಲೇಬೇಕಾದ ಅನಿವಾರ್ಯ ಎದುರಾಗಿದೆ. ಸಂವಿಧಾನದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಎಂಬ ವರ್ಗೀಕರಣಗಳ ಜೊತೆಗೆ ಹಿಂದುಳಿದ ಜಾತಿಗಳನ್ನು ಒಗ್ಗೂಡಿಸಿ 'ಅದರ್ ಬ್ಯಾಕ್ ವರ್ಡ್ ಕ್ಲಾಸಸ್' (ಇತರ ಹಿಂದುಳಿದ ವರ್ಗಗಳು) ಎಂಬ ವಿಶಾಲ ವರ್ಗವೊಂದನ್ನು ಅಂಬೇಡ್ಕರ್ ಅವರು ರೂಪಿಸಿದ್ದೇಕೆ ಎಂಬುದನ್ನು ಸಂಕುಚಿತ ರಾಜಕೀಯ ಪ್ರಜ್ಞೆಯ ಹಿಂದುಳಿದ ಜಾತಿಗಳು ಮೊದಲು ಅರ್ಥ ಮಾಡಿಕೊಳ್ಳಬೇಕು. 1984ರಲ್ಲಿ ವಿಧಾನಸಭೆಯಲ್ಲಿ ಲಿಂಗಾಯತ ಹಾಗೂ ಒಕ್ಕಲಿಗ ಶಾಸಕರ ಸಂಖ್ಯೆ ಶೇಕಡ 50ರಷ್ಟು ಇದ್ದದ್ದನ್ನು ವಿಶ್ಲೇಷಿಸುತ್ತಾ ಖ್ಯಾತ ಚಿಂತಕ ಡಿ. ಆರ್. ನಾಗರಾಜ್, 'ಜಾತಿಯನ್ನು ಮುರಿದು ವರ್ಗವಾಗಿಸದಿದ್ದರೆ ಪ್ರತಿಷ್ಠಿತ ಜಾತಿಗಳ ಶ್ರೀಮಂತ ವರ್ಗದ ರಾಜಕಾರಣ ಹಿಮ್ಮೆಟ್ಟುವುದಿಲ್ಲ' ಎಂದಿದ್ದರು. ಆದರೆ ಹಿಂದುಳಿದ ಜಾತಿಗಳು ಸಮಾನ ಆಶಯಗಳುಳ್ಳ ವರ್ಗಗಳಾಗಿ ಸಂಘಟಿತಗೊಳ್ಳಲು ಹಿಂದುಳಿದ ಜಾತಿಗಳ ರಾಜಕೀಯ ನಾಯಕರು ಮಾಡಿರುವ ಪ್ರಯತ್ನಗಳು ತೀರಾ ಕಡಿಮೆ.

ಇಂಥ ವರ್ಗ ಸಿದ್ಧಾಂತವೇ ಇಲ್ಲದಿರುವುದರಿಂದ, 'ನನ್ನ ಒಂದು ಕಣ್ಣು ಹೋದರೆ, ನಿನ್ನ ಎರಡು ಕಣ್ಣೂ ಹೋಗಲಿ' ಎನ್ನುವ ಧೋರಣೆಯಿಂದಾಗಿ ಹಿಂದುಳಿದ ಜಾತಿಗಳು ರಾಜಕೀಯ ಅವಕಾಶಗಳನ್ನು ಸದಾ ಕಳೆದುಕೊಳ್ಳುತ್ತಿರುತ್ತವೆ. ಉದಾಹರಣೆಗೆ, ಮುಸ್ಲಿಮರು, ಕುರುಬರು, ನಾಯಕರು ಸಮಸಂಖ್ಯೆಯಲ್ಲಿರುವ ಕ್ಷೇತ್ರವೊಂದರಲ್ಲಿ ಮೂರು ಸಾವಿರದಷ್ಟು ಮತದಾರರಿರುವ ಜಾತಿಯ ನಾಯಕನೊಬ್ಬ ಸದಾ ಶಾಸಕನಾಗುತ್ತಲೇ ಇರುತ್ತಾನೆ. ಈತ ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳ ಚುನಾವಣೆಗಳಲ್ಲಿ ಹಿಂದುಳಿದ ಜಾತಿಗಳಿಂದ ತನಗೆ ಬೇಕಾದ ಎರಡನೇ, ಮೂರನೇ ಸಾಲಿನ ನಾಯಕರನ್ನೇ ರೋಸ್ಟರ್ ಪ್ರಕಾರ ನಿಲ್ಲಿಸಿ ಗೆಲ್ಲಿಸುತ್ತಾನೆ; ಅವರೆಲ್ಲ ವಿಧಾನಸಭಾ ಚುನಾವಣೆಯಲ್ಲಿ ತನ್ನನ್ನು ಗೆಲ್ಲಿಸುವಂತೆ ನೋಡಿಕೊಳ್ಳುತ್ತಾನೆ. ಈ ಮೂರೂ ಜಾತಿಗಳು ಒಂದು ವರ್ಗವಾಗಿ ಸಂಘಟಿತವಾಗಿ ತಮ್ಮೊಳಗೇ ಒಬ್ಬ ಶಾಸಕನನ್ನು ಆಯ್ಕೆ ಮಾಡಿಕೊಳ್ಳದಂತೆಯೂ ಯೋಜಿಸುತ್ತಾನೆ. ಒಂದು ವೇಳೆ, ಈ ಮೂರೂ ಹಿಂದುಳಿದ ಜಾತಿಗಳು ಒಗ್ಗೂಡಿದ್ದರೆ ಈ ಹೊತ್ತಿಗೆ ಐದು ವರ್ಷಕ್ಕೊಮ್ಮೆ ರೊಟೇಶನ್ ಪದ್ಧತಿಯಲ್ಲಾದರೂ ಮೂರೂ ಜಾತಿಗಳಿಂದ ಶಾಸಕನನ್ನೋ, ಶಾಸಕಿಯನ್ನೋ ಆರಿಸಿಕೊಳ್ಳಬಹುದಿತ್ತು! ಇಂಥ ಯೋಜನೆ-ಯೋಚನೆಗಳೇ ಇರದ ಹಿಂದುಳಿದ ಜಾತಿಗಳಲ್ಲಿ ಸೀಮಿತವಾದ ವರ್ಗ ಪ್ರಜ್ಞೆ ಕೂಡ ಮೂಡದಂತೆ ಜಾತೀಯ ಸಣ್ಣತನ ತಡೆಯುತ್ತಿರುತ್ತದೆ.

ಒಂದು ಕಾಲಕ್ಕೆ ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಇಬ್ಬರು ಅಧ್ಯಕ್ಷರನ್ನೇ ತಮ್ಮ ಪಕ್ಷಕ್ಕೆ ಕರೆದುಕೊಂಡು ಹೋಗಿ ಬೀಗಿದ್ದ ಬಿಜೆಪಿಗೆ ಆ ಅಧ್ಯಕ್ಷರುಗಳ ವರದಿಗಳನ್ನಾದರೂ ಓದಬೇಕಾದ ಅನಿವಾರ್ಯ ಈಗ ಎದುರಾಗಿದೆ. ಆದರೆ ಬಿಜೆಪಿ, ಜೆಡಿಎಸ್ ಪಕ್ಷಗಳಲ್ಲಿ ಹಿಂದುಳಿದ ವರ್ಗಗಳ ಏಳಿಗೆ ಕುರಿತ ಇಚ್ಛಾಶಕ್ತಿ, ಸಿದ್ಧತೆ ಈ ತೀರ್ಪಿನ ಸಂದರ್ಭದಲ್ಲಂತೂ ಕಾಣುತ್ತಿಲ್ಲ. ಇನ್ನು ಹಿಂದುಳಿದ ವರ್ಗಗಳ ತರುಣರಲ್ಲಿ ಜಾತೀಯ, ಮತಾಂಧ ಭಾವನೆ ಬಿತ್ತಿ ದಾರಿ ತಪ್ಪಿಸುವ ಒಡಕು ನಾಯಕರುಗಳಿಗಂತೂ ಸುಪ್ರೀಂ ಕೋರ್ಟ್ ಒಡ್ಡಿರುವ ಸವಾಲನ್ನು ಎದುರಿಸುವ ಅಗತ್ಯವೇ ಕಂಡಿಲ್ಲ. ಮಧ್ಯಪ್ರದೇಶ ಹಾಗೂ ಮಹಾರಾಷ್ಟ್ರ ಸರ್ಕಾರಗಳು ಸುಪ್ರೀಂ ಕೋರ್ಟು ಕೇಳಿರುವ ಸಮೀಕ್ಷೆ ಸಿದ್ಧವಾಗುವವರೆಗೆ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಮುಂದೂಡುವ ಮಸೂದೆಯನ್ನು ಅಂಗೀಕರಿಸಿವೆ. ಅಂಥ ರಾಜಕೀಯ ಇಚ್ಛಾಶಕ್ತಿಯೂ ಕರ್ನಾಟಕದಲ್ಲಿ ಕಾಣುತ್ತಿಲ್ಲ.

ಇನ್ನು ಈ ಬಗ್ಗೆ ಯೋಚಿಸಲೇಬೇಕಾದ ಎಲ್ಲ ರಾಜಕೀಯ ಪಕ್ಷಗಳ ಎರಡು-ಮೂರನೇ ಸಾಲಿನ ಹಿಂದುಳಿದ ವರ್ಗಗಳ ನಾಯಕ, ನಾಯಕಿಯರತ್ತ ನೋಡೋಣ: ರಾಜಕೀಯ ಪಕ್ಷಗಳ ಪೀಠಸ್ಥ ನಾಯಕರು ಸ್ಥಳೀಯ ಸಂಸ್ಥೆಗಳ ಹಿಂದುಳಿದ ವರ್ಗಗಳ ಮೀಸಲಾತಿಯನ್ನು ತಂತಮ್ಮ ಅಗತ್ಯಕ್ಕೆ ತಕ್ಕಂತೆ ಬಗ್ಗಿಸಿಕೊಂಡಿರುವುದು ಎಲ್ಲರಿಗೂ ಗೊತ್ತಿದೆ. ಆದರೂ ಈ ಮೀಸಲಾತಿಯ ಫಲವಾಗಿ ಹಂತಹಂತವಾಗಿ ಮೇಲೇರುವ ಅವಕಾಶವಂತೂ ಈ ಹೊಸ ನಾಯಕರಿಗೆ ತೆರೆದಿತ್ತು. ಸ್ಥಳೀಯ ಸಂಸ್ಥೆಗಳಲ್ಲಿ ಸದಸ್ಯ, ಅಧ್ಯಕ್ಷರಾದ ಈ ಹೊಸ ನಾಯಕರು ಮುಂದೆ ಶಾಸಕರೋ, ಮಂತ್ರಿಗಳೋ ಆಗುವ ಗುರಿ, ಅವಕಾಶಗಳನ್ನು ಯಾವ ಕಾರಣಕ್ಕೂ ಬಿಟ್ಟುಕೊಡಬಾರದು. ಆದ್ದರಿಂದಲೇ ರಾಜಕೀಯ ಮೀಸಲಾತಿಯ ಹಿನ್ನಡೆಯ ಪ್ರಶ್ನೆಯನ್ನು ಎಲ್ಲ ರಾಜಕೀಯ ಪಕ್ಷಗಳಲ್ಲಿರುವ ಹೊಸ ನಾಯಕರೇ ತುರ್ತಿನಿಂದ ಕೈಗೆತ್ತಿಕೊಳ್ಳಬೇಕು. ಇಂಥ ಧ್ರುವೀಕರಣಗಳ ಮೂಲಕ ಹೊಸ ರಾಜಕೀಯ ಪಕ್ಷಗಳನ್ನು ಕಟ್ಟುವ ಸಾಧ್ಯತೆಯನ್ನೂ ಯುವ ನಾಯಕ ನಾಯಕಿಯರು ಬಿಟ್ಟುಕೊಡಬಾರದು. ಸಾಮಾಜಿಕ ನ್ಯಾಯದ ರಾಜಕಾರಣದ ಸಾಧ್ಯತೆಯನ್ನೇ ಚಿವುಟಿ ಹಾಕಲು ಖಾಸಗಿ ಮಾಧ್ಯಮಗಳೂ ಸೇರಿದಂತೆ ಒಟ್ಟಾರೆ ಖಾಸಗಿ ವಲಯ ಹುನ್ನಾರ ನಡೆಸಿದೆ. ಈ ಹುನ್ನಾರ- ಸವಾಲುಗಳನ್ನು ಹಿಂದುಳಿದ ವರ್ಗಗಳ ರಾಜಕೀಯ ನಾಯಕರುಗಳು ಒಟ್ಟಾಗಿ, ಪಕ್ಷಾತೀತವಾಗಿ ಎದುರಿಸಬೇಕಾಗಿದೆ. ಯಾಕೆಂದರೆ, ಹಿಂದುಳಿದ ವರ್ಗಗಳ ರಾಜಕೀಯ ಸಬಲೀಕರಣದಲ್ಲಿ ಈ ವರ್ಗಗಳ ಆರ್ಥಿಕ, ಶೈಕ್ಷಣಿಕ ಏಳಿಗೆಯ ಪ್ರಶ್ನೆಯೂ ಬೆರೆತಿದೆ.

ಜಾತಿ, ಮತೀಯ ಸಂಘಟನೆಗಳಲ್ಲಿ ಮುಳುಗಿ ಮರಗಟ್ಟಿರುವ ಹಿಂದುಳಿದ ಜಾತಿಗಳಲ್ಲಿ ಹೊಸ ರಾಜಕೀಯ ಮಂಥನ ಹುಟ್ಟಲು ಇದು ಸಕಾಲ. ಪಂಚಾಯತ್ ರಾಜ್ ಸೃಷ್ಟಿಸಿದ ಚಲನೆಯ ಮೂಲಕವೂ ಕಳೆದ ದಶಕಗಳಲ್ಲಿ ಶಿಕ್ಷಣ, ಉದ್ಯೋಗ, ರಾಜಕಾರಣಗಳಲ್ಲಿ ಚಲನೆ ಪಡೆದ ಹಿಂದುಳಿದ ವರ್ಗಗಳ ವಿದ್ಯಾವಂತರು ಈ ಬಗ್ಗೆ ಜವಾಬ್ದಾರಿಯಿಂದ ಯೋಚಿಸದಿದ್ದರೆ ಕರ್ನಾಟಕದ ಹಿಂದುಳಿದ ಜಾತಿಗಳು ಶತಮಾನದಷ್ಟು ಹಿಂದಕ್ಕೆ ಹೋಗುತ್ತವೆ. ಅವು ತಮ್ಮ ಹಕ್ಕನ್ನು ಉಳಿಸಿಕೊಳ್ಳಲು ದಲಿತ ಸಂಘಟನೆಗಳ ನಾಯಕತ್ವ-ಅನುಭವಗಳಿಂದಲೂ ಪಾಠ ಕಲಿಯಬೇಕು. ಹಾಗೆಯೇ ಈ ರಾಜಕೀಯ ಮೀಸಲಾತಿಯ ಪ್ರಶ್ನೆ ತಮ್ಮ ಒಟ್ಟು ಸಬಲೀಕರಣದ ಬುಡಕ್ಕೆ ಎರಗಿದ ಕೊಡಲಿ ಎಂಬುದನ್ನು ಅರಿತು ಮಹಿಳೆಯರು, ಅಲ್ಪಸಂಖ್ಯಾತರು ಎಚ್ಚೆತ್ತುಕೊಳ್ಳಬೇಕಾಗಿದೆ. ಹಿಂದುಳಿದ ವರ್ಗಗಳ ಒಕ್ಕೂಟಗಳು ಹಾಗೂ ಜನಾಂದೋಲನಗಳು ಈ ನಿಟ್ಟಿನಲ್ಲಿ ಬೌದ್ಧಿಕ, ಸಂಘಟನಾತ್ಮಕ ಸಿದ್ಧತೆ ನಡೆಸುವುದು ಈ ಕಾಲದ ತುರ್ತಾಗಿದೆ.

'ರಾಜ್ಯದಲ್ಲಿ ನಡೆದ ಸಮೀಕ್ಷೆಯ ವರದಿಯನ್ನು ಸುಪ್ರೀಂ ಕೋರ್ಟ್ ಒಪ್ಪಿಕೊಳ್ಳಬಹುದು'

ಸುಪ್ರೀಂ ಕೋರ್ಟ್‌ನ ಇತ್ತೀಚಿನ ಆದೇಶದಿಂದಾಗಿ ಸ್ಥಳೀಯ ಸಂಸ್ಥೆಗಳಲ್ಲಿನ ಹಿಂದುಳಿದ ಜಾತಿಯ ರಾಜಕೀಯ ಮೀಸಲಾತಿಗೆ ಎದುರಾಗುವ ಅಡ್ಡಿಯನ್ನು ಹಿರಿಯ ವಕೀಲ ಕಾಂತರಾಜ್ ನೇತೃತ್ವದ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ನಡೆಸಿರುವ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆಯ ವರದಿಯಿಂದ ಪರಿಹರಿಸಿಕೊಳ್ಳಲು ಸಾಧ್ಯವಿದೆ.

ಮೂರು ಹಂತದ ಪರಿಶೀಲನೆ ನಡೆಸಿ ಹಿಂದುಳಿದ ಜಾತಿಗಳ ರಾಜಕೀಯ ಮೀಸಲಾತಿಯನ್ನು ರೂಪಿಸಬೇಕೆಂದು ಸುಪ್ರೀಂ ಕೋರ್ಟ್ ಹೇಳಿದೆ. ರಾಜ್ಯ ಹಿಂದುಳಿದ ವರ್ಗಗಳ ಆಯೋಗ ನಡೆಸಿದ ಸಮೀಕ್ಷೆಯ ವರದಿಯನ್ನು ಸುಪ್ರೀಂ ಕೋರ್ಟ್ ಒಪ್ಪಿಕೊಳ್ಳಬಹುದೆಂಬ ಭರವಸೆ ನನಗಿದೆ. ಆಯೋಗದ ಕಾರ್ಯವ್ಯಾಪ್ತಿಯಲ್ಲಿ ರಾಜಕೀಯ ಕ್ಷೇತ್ರ ಸೇರಿಲ್ಲದೆ ಇದ್ದರೂ ಅದು ರಾಜ್ಯದ ಎಲ್ಲ ಜಾತಿಯ ಜನರ ರಾಜಕೀಯ ಪ್ರಾತಿನಿಧ್ಯದ ಮಾಹಿತಿ ಕೂಡಾ ಸಂಗ್ರಹಿಸಿದೆ.

ರಾಜ್ಯ ಸರ್ಕಾರ ಈ ಸಮೀಕ್ಷೆಯನ್ನು ಒಪ್ಪಿಕೊಂಡು ಜಾರಿಗೆ ತರಬೇಕು. ಇದರಲ್ಲಿ ಎಲ್ಲ ಜಾತಿ ಜನರ ರಾಜಕೀಯ ಪ್ರಾತಿನಿಧ್ಯದ ನಿಖರವಾದ ಮಾಹಿತಿ ಇರುವುದರಿಂದ ಬೇರೆ ರಾಜ್ಯಗಳಂತೆ ಪ್ರತ್ಯೇಕ ಸಮೀಕ್ಷೆ ನಡೆಸುವ ಅಗತ್ಯ ಇರಲಾರದು.

ಸಿದ್ದರಾಮಯ್ಯ, ವಿಧಾನಸಭೆ ವಿರೋಧ ಪಕ್ಷದ ನಾಯಕ

'ಮೀಸಲಾತಿ ರಕ್ಷಣೆ ಸರ್ಕಾರದ ಹೊಣೆ'

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು ಮತ್ತು ಅಲ್ಪ-ಸಂಖ್ಯಾತರ ಮೀಸಲಾತಿಗೆ ಕುತ್ತು ಬಂದಾಗ ಅದಕ್ಕೆ ರಕ್ಷಣೆ ಒದಗಿಸಬೇಕಾದ ಹೊಣೆಗಾರಿಕೆ ಆಯಾ ರಾಜ್ಯ ಸರ್ಕಾರಗಳದ್ದು. ಹಿಂದುಳಿದ ವರ್ಗಗಳಿಗೆ (ಒಬಿಸಿ) ನೀಡಿರುವ ರಾಜಕೀಯ ಮೀಸಲಾತಿಗೆ ಕಂಟಕ ಎದುರಾಗಿದೆ. ಆಯಾ ಸಮುದಾಯಗಳ ರಾಜಕೀಯ ಹಿಂದುಳಿದಿರುವಿಕೆಯನ್ನು ಸಾಬೀತುಪಡಿಸಬಲ್ಲ ನಿಖರ ಅಂಕಿ–ಅಂಶಗಳನ್ನು ಒದಗಿಸಿ, ಮೂರು ಹಂತದ ಪರಿಶೀಲನೆ ಮೂಲಕ ಹಿಂದುಳಿದ ವರ್ಗಗಳು ಸ್ಥಳೀಯ ಸಂಸ್ಥೆಗಳಲ್ಲಿ ಹೊಂದಿರುವ ಮೀಸಲಾತಿಯನ್ನು ಖಾತರಿಪಡಿಸಬೇಕು.

ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಜನರು ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಮತ್ತು ರಾಜಕೀಯವಾಗಿ ಇನ್ನೂ ಶೋಚನೀಯ ಸ್ಥಿತಿಯಲ್ಲೇ ಇದ್ದಾರೆ. ಹಿಂದುಳಿದ ವರ್ಗಗಳ ಆಯೋಗವು ನಡೆಸಿರುವ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆ (ಜಾತಿ ಗಣತಿ) ವರದಿಯನ್ನು ಒಪ್ಪಿಕೊಂಡಿದ್ದರೆ ಹಿಂದುಳಿದ ವರ್ಗಗಳ ರಾಜಕೀಯ ಮೀಸಲಾತಿ ರಕ್ಷಣೆ ಕಷ್ಟವಾಗುತ್ತಿರಲಿಲ್ಲ. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಈ ಕೆಲಸವನ್ನು ಸುಲಭವಾಗಿ ಮಾಡಬಹುದಿತ್ತು. ಅವರು ಯಾವುದೋ ಒತ್ತಡಕ್ಕೆ ಮಣಿದು ಕೊನೆಯ ಹಂತದಲ್ಲಿ ಕೈ ಚೆಲ್ಲಿದರು. ಈಗಲಾದರೂ ರಾಜ್ಯ ಸರ್ಕಾರ ಆ ಕೆಲಸ ಮಾಡಬೇಕು.

ಬಂಡೆಪ್ಪ ಕಾಶೆಂಪುರ, ಜೆಡಿಎಸ್ ಶಾಸಕ

'ಮೀಸಲಿಗೆ ವಿರೋಧವಿಲ್ಲ, ಆಯೋಗ ರಚನೆಗೆ ಚಿಂತನೆ'

ನಗರ ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗದವರಿಗೆ ಮೀಸಲಾತಿ ನೀಡುವ ವಿಚಾರದಲ್ಲಿ ನಮ್ಮ ಪಕ್ಷ ಹಾಗೂ ಸರ್ಕಾರದ ಕಡೆಯಿಂದ ಯಾವುದೇ ವಿರೋಧ ಇಲ್ಲ.

ಹಿಂದುಳಿದ ವರ್ಗದವರಿಗೆ ರಾಜಕೀಯ ಮೀಸಲು ಸಂದರ್ಭದಲ್ಲಿ ಮೂರು ಹಂತದ ಪರಿಶೀಲನೆ ನಡೆಸುವಂತೆ 2010ರಲ್ಲಿ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದಾಗಲೇ ಪರಿಹಾರೋಪಾಯಗಳ ಬಗ್ಗೆ ಎಲ್ಲರೂ ಒಟ್ಟಾಗಿ ಚರ್ಚಿಸಬೇಕಿತ್ತು. ಈಗ ಹಳೆಯದನ್ನು ಕೆದಕುತ್ತಾ ಕುಳಿತುಕೊಳ್ಳುವ ಸಮಯವಲ್ಲ.

ಸುಪ್ರೀಂ ಕೋರ್ಟ್ ನೀಡಿದ ನಿರ್ದೇಶನದ ಕುರಿತು ಸರ್ಕಾರ ಅಧ್ಯಯನ ನಡೆಸಿದ್ದು, ಮೂರು ಹಂತಗಳ ಪರಿಶೀಲನೆ ಹೇಗಿರಬೇಕೆಂಬ ಬಗ್ಗೆ ಕಾನೂನು ತಜ್ಞರ ಅಭಿಪ್ರಾಯ ಸಂಗ್ರಹಿಸಲಾಗುತ್ತಿದೆ. ರಾಜಕೀಯ ಮೀಸಲಿಗೆ ಸಂಬಂಧಪಟ್ಟಂತೆ ಸ್ಪಷ್ಟ ದತ್ತಾಂಶ ಇಲ್ಲದಿರುವುದರಿಂದ ಪ್ರತ್ಯೇಕ ಆಯೋಗ ರಚನೆ ಅನಿವಾರ್ಯ. ಆಯೋಗದ ವರದಿ ಬರುವವರೆಗೆ ಹಳೆಯ ವ್ಯವಸ್ಥೆಯಲ್ಲಿ ಚುನಾವಣೆ ನಡೆಸುವುದಕ್ಕೆ ಅವಕಾಶ ನೀಡಿ ಎಂದು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುವ ಅವಕಾಶವೂ ಇದೆ.

ವಿ.ಸುನೀಲ್ ಕುಮಾರ್, ಇಂಧನ, ಕನ್ನಡ ಮತ್ತು ಸಂಸ್ಕೃತಿ ಸಚಿವ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 67

ರುದ್ರಾಕ್ಷಿ ಧಾರಣಾ ಮಹಿಮೆ

ವಿದ್ಯೇಶ್ವರಸಂಹಿತೆಯ ಕೊನೆ ಅಧ್ಯಾಯವಾದ ಇಪ್ಪತ್ತೈದನೇ ಅಧ್ಯಾಯದಲ್ಲಿ ರುದ್ರಾಕ್ಷಿಮಹಿಮೆ ಬಗ್ಗೆ ಸೂತಮುನಿಯು ವಿವರಿಸುತ್ತಾನೆ. ಪರಮಪವಿತ್ರವಾದ ರುದ್ರಾಕ್ಷವು ಶಿವನಿಗೆ ತುಂಬಾ ಪ್ರಿಯವಾದುದು. ಅದನ್ನು ದರ್ಶನಮಾಡಿದರೂ ಸ್ಪರ್ಶಿಸಿದರೂ ಧರಿಸಿ ಜಪಿಸಿದರೂ ಸಕಲ ಪಾಪಗಳೂ ನಾಶವಾಗುವುದು ಎಂದು ತಿಳಿಸುತ್ತಾನೆ. ಒಮ್ಮೆ ಶಿವಪರಮಾತ್ಮನು ಲೋಕಕ್ಷೇಮಕ್ಕಾಗಿ ರುದ್ರಾಕ್ಷಮಹಿಮೆಯ ವಿವರವನ್ನು ಪಾರ್ವತೀದೇವಿಗೆ ತಿಳಿಸಿದ್ದನ್ನ ಮುನಿಗಳಿಗೆ ಹೇಳುತ್ತಾನೆ.

ಆದಿಕಾಲದಲ್ಲಿ ಶಿವ ತನ್ನ ಚಂಚಲವಾದ ಮನಸ್ಸನ್ನು ನಿಯಮನ ಮಾಡಿ, ದೇವಮಾನ ರೀತಿಯಿಂದ ಸಾವಿರ ವರ್ಷ ತಪಸ್ಸನ್ನಾಚರಿಸಿದ. ನಂತರ ಶಿವಲೀಲಾರ್ಥವಾಗಿ ಸ್ವಲ್ಪ ಕಣ್ಣನ್ನು ತೆರೆದ. ಆಗ ಸುಂದರವಾದ ಅವನ ನೇತ್ರಪುಟಗಳಿಂದ ಜಲಬಿಂದುಗಳು ಬಿದ್ದವು. ಆ ಕಣ್ಣೀರಿನಿಂದ ರುದ್ರಾಕ್ಷಗಳೆಂಬ ಮರಗಳು ಜನಿಸಿದವು. ಹೀಗೆ ಭಕ್ತರನ್ನ ಅನುಗ್ರಹಿಸಲು ಶಿವ ತನ್ನ ಕಣ್ಣೀರ ಬಿಂದುವಿನಿಂದ ರುದ್ರಾಕ್ಷವೃಕ್ಷವನ್ನು ಸೃಷ್ಟಿಸಿ, ವಿಷ್ಣುಭಕ್ತರು ಸೇರಿದಂತೆ ಎಲ್ಲಾ ದೈವಭಕ್ತರಿಗೆ ನೀಡಿದ. ಪಾಪನಾಶಕವಾದ ರುದ್ರಾಕ್ಷವೃಕ್ಷವು ಜನರಿಗೆ ಸುಲಭವಾಗಿ ದೊರಕುವಂತೆ ಮಾಡಲು ಗೌಡದೇಶ, ಮಧುರೆ, ಅಯೋಧ್ಯೆ, ಲಂಕೆ, ಮಲಯದ್ವೀಪ, ಸಹ್ಯಾದ್ರಿ, ಕಾಶೀ, ಮುಂತಾದ ಸ್ಥಳಗಳಲ್ಲಿ ಬೆಳೆಯುವಂತೆ ಮಾಡಿದ.

ಶಿವ ರುದ್ರಾಕ್ಷವನ್ನು ಬಿಳಿ, ಕೆಂಪು, ಹಳದಿ, ಕಪ್ಪು ಬಣ್ಣದಂತೆ ನಾಲ್ಕು ವಿಧಗಳಾಗಿ ಸೃಷ್ಟಿಸಿದ. ಗುರುವರ್ಯರು ಬಿಳಿಬಣ್ಣದ ರುದ್ರಾಕ್ಷಿ, ರಾಜ್ಯ ಆಳುವವರು ಕೆಂಪುಬಣ್ಣದ ರುದ್ರಾಕ್ಷಿ, ವ್ಯಾಪಾರಿಗಳು ಹಳದಿಬಣ್ಣದ ರುದ್ರಾಕ್ಷಿ ಮತ್ತು ಶ್ರಮಿಕರು ಕಪ್ಪುಬಣ್ಣದ ರುದ್ರಾಕ್ಷಿಗಳನ್ನು ಧರಿಸಬೇಕೆಂದು ಸೂಚಿಸಿದ. ನೆಲ್ಲಿಕಾಯಿಯಷ್ಟು ಪ್ರಮಾಣದ ರುದ್ರಾಕ್ಷಿಯು ಉತ್ತಮವಾದುದು. ಬದರೀಫಲ ಪ್ರಮಾಣವಾಗಿರುವುದು ಮಧ್ಯಮವಾದುದು ಮತ್ತು ಕಡಲೆಯ ಪ್ರಮಾಣವಾದುದು ಅಧಮವಾಗಿರುತ್ತದೆ ಅಂತ ಶಿವ ತಿಳಿಸಿದ.

ಭೋಗ ಮತ್ತು ಮೋಕ್ಷಗಳನ್ನು ಅಪೇಕ್ಷಿಸುವ ಭಕ್ತರ ಹಿತಕ್ಕಾಗಿ ಇನ್ನೂ ಕೆಲವು ಬೇರೆ ಕ್ರಮಗಳನ್ನು ಶಿವಪರಮಾತ್ಮ ತಿಳಿಸಿದ. ಬದರೀಫಲ ಪ್ರಮಾಣದ ರುದ್ರಾಕ್ಷಿಯು ಇಹಲೋಕದ ಸುಖಸೌಭಾಗ್ಯವನ್ನು ಹೆಚ್ಚಿಸುವುದು. ನೆಲ್ಲಿಕಾಯಿ ಪ್ರಮಾಣದ ರುದ್ರಾಕ್ಷಿಯು ಸಕಲ ಅರಿಷ್ಟಗಳನ್ನೂ ನಾಶಮಾಡುವುದು. ಗುಲಗಂಜಿ ಅಥವಾ ಕಡಲೆಕಾಳು ಪ್ರಮಾಣದ ರುದ್ರಾಕ್ಷಿ ಸಕಲ ಇಷ್ಟಾರ್ಥಗಳನ್ನು ಉಂಟುಮಾಡುವುದು. ಎಷ್ಟೆಷ್ಟು ಚಿಕ್ಕದಾಗಿರುವುದೋ, ಅಷ್ಟಷ್ಟು ಹೆಚ್ಚು ಫಲಗಳನ್ನು ಒಂದಕ್ಕಿಂತ ಹತ್ತರಷ್ಟು ಹೆಚ್ಚಾಗಿ ಕೊಡುತ್ತದೆ. ಪಾಪನಾಶಕ್ಕಾಗಿ ಮಾತ್ರವಲ್ಲದೆ, ಸರ್ವಾರ್ಥ ಸಾಧನೆಗೂ ರುದ್ರಾಕ್ಷಿಯನ್ನು ಧರಿಸಲೇಬೇಕು. ರುದ್ರಾಕ್ಷಿಮಾಲೆಯಷ್ಟು ಫಲಪ್ರದವಾದ, ಶುಭವಾದ ಮತ್ತು ಪವಿತ್ರವಾದಂತಹ ಮಾಲೆ ಇನ್ನೊಂದಿಲ್ಲ ಎನ್ನುತ್ತಾನೆ ಶಿವ.

ಒಂದೇ ಆಕಾರದ, ಮನೋಹರವಾದ, ಗಟ್ಟಿಯಾದ, ದೊಡ್ಡದಾದ ಮತ್ತು ಮುಳ್ಳುಗಳಿರುವಂತಹ ರುದ್ರಾಕ್ಷಿಗಳು ಶುಭವಾದವು. ಇವು ಭೋಗ ಮತ್ತು ಮುಕ್ತಿಯನ್ನು ಉಂಟುಮಾಡುವಂಥವು. ಹುಳು ಕೊರೆದಿರುವಂತಹ, ಚೂರಾಗಿರುವ, ಭಿನ್ನವಾಗಿರುವ, ಮುಳ್ಳುಗಳಿಲ್ಲದ, ತರಚಾಗಿರುವ, ದುಂಡಗಿಲ್ಲದಿರುವ ರುದ್ರಾಕ್ಷಿಗಳನ್ನು ತ್ಯಜಿಸಬೇಕು. ಇವುಗಳನ್ನು ಪರಿಗ್ರಹಿಸಬಾರದು. ಮಾಲೆಯನ್ನು ಪೋಣಿಸಲು ಅಗತ್ಯವಾದ ರಂಧ್ರವು ತಾನಾಗಿಯೇ ಸೃಷ್ಟಿಯಾಗಿದ್ದರೆ, ಅಂತಹ ರುದ್ರಾಕ್ಷ ಉತ್ತಮವಾದುದು. ಮನುಷ್ಯ ಕೊರೆದ ರಂಧ್ರವುಳ್ಳ ರುದ್ರಾಕ್ಷಿ ಮಧ್ಯಮ.

ನೂರು ರುದ್ರಾಕ್ಷಿಗಳನ್ನು ಧರಿಸಿದವನು ರುದ್ರಸ್ವರೂಪವನ್ನು ಪಡೆಯುತ್ತಾನೆ. ಹನ್ನೊಂದು ಸಾವಿರ ರುದ್ರಾಕ್ಷಿಗಳನ್ನು ಧರಿಸಿದರೆ, ಸಿಗುವ ಫಲವನ್ನು ನೂರು ವರ್ಷಗಳಾದರೂ ಹೇಳಲು ಸಾಧ್ಯವಿಲ್ಲ. ಅಷ್ಟೊಂದು ಫಲ ಸಿದ್ಧಿಸುವುದು. ಐದು ಸಾವಿರದ ಐನೂರು ರುದ್ರಾಕ್ಷಗಳಿಂದ ಕಿರೀಟವನ್ನು ಭಕ್ತಿಯಿಂದ ನಿರ್ಮಿಸಬೇಕು. ಮುನ್ನೂರು ಅರವತ್ತು ರುದ್ರಾಕ್ಷಿಗಳಿಂದ ಒಂದೊಂದು ಎಳೆಯಂತೆ, ಮೂರು ಎಳೆಯುಳ್ಳ ಯಜ್ಞೋಪವೀತವನ್ನು ರುದ್ರಾಕ್ಷಿಗಳಿಂದ ಭಕ್ತಿಪೂರ್ವಕವಾಗಿ ನಿರ್ಮಿಸಬೇಕು.

ಶಿಖೆಯಲ್ಲಿ ಅಂದರೆ, ಮುಖದಲ್ಲಿ ಮೂರು ರುದ್ರಾಕ್ಷಗಳನ್ನು ಧರಿಸಬೇಕು. ಎರಡು ಕಿವಿಗಳಲ್ಲಿ ತಲಾ ಆರು ಧರಿಸಬೇಕು. ಕತ್ತಿನಲ್ಲಿ ನೂರೊಂದು ರುದ್ರಾಕ್ಷಗಳನ್ನು ಧರಿಸಬೇಕು. ಬಾಹುಗಳಲ್ಲಿ ಹನ್ನೊಂದು ರುದ್ರಾಕ್ಷಗಳನ್ನು ಧರಿಸಬೇಕು. ತೋಳುಗಳ ಮಧ್ಯಸಂಧಿಗಳಲ್ಲಿ, ಮಣಿಕಟ್ಟಿನಲ್ಲಿ, ಉಪವೀತದಲ್ಲೂ ಮೂರುಮೂರು ರುದ್ರಾಕ್ಷಗಳನ್ನು ಧರಿಸಬೇಕು. ಒಂದೇ ಆಕಾರವಾದ ಐದು ರುದ್ರಾಕ್ಷಗಳನ್ನು ಸೊಂಟದಲ್ಲಿ ಧರಿಸಬೇಕು. ಈ ರೀತಿ ರುದ್ರಾಕ್ಷಗಳನ್ನು ಯಾರು ಧರಿಸುವರೊ, ಅವರ ಸ್ವರೂಪವನ್ನು ಮಹೇಶ್ವರನಂತೆ ಕಂಡು ಎಲ್ಲರೂ ನಮಸ್ಕರಿಸಬೇಕು ಮತ್ತು ಸ್ತುತಿಸಬೇಕು.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಮಾರ್ಚ್ 14, 2022

ಶ್ರೀಪ್ಲವನಾಮ ಸಂವತ್ಸರ ಉತ್ತರಾಯಣ–ಶಿಶಿರ ಋತು ಕುಂಭ ಮಾಸದ 30 ನೇ ದಿನ ತಿಥಿ: (ಫಾಲ್ಗುಣ ಶುಕ್ಲ) ಏಕಾದಶಿ ಗಂ. 12-06 ನಕ್ಷತ್ರ: ಪುಷ್ಯ ಗಂ. 22-08 ಯೋಗ: ಅತಿಗಂಡ ಗಂ. 28-14, ಕರಣ: ವಿಷ್ಟಿ ಗಂ. 12-06.
ರಾಹುಕಾಲ : ಬೆಳಿಗ್ಗೆ 07:30 – 09:00 ಸೂರ್ಯೋದಯ : 06-42 ಸೂರ್ಯಾಸ್ತ : 06-37
ಮುಸ್ಲಿಂ ದಿನಾಂಕ : 10 ಶಬನ್ ದಿನ ವಿಶೇಷ : ಮೀನ ಸಂಕ್ರಮಣ, ಆಮಲಕಿ ಏಕಾದಶಿ, ಗೋವಿಂದ ದ್ವಾದಶಿ ಅದೃಷ್ಟ ಸಂಖ್ಯೆ: 5, 7

ಮೇಷ: ಕಷ್ಟಗಳನ್ನು ಎದುರಿಸುವ ಉತ್ತಮ ಎದೆಗಾರಿಕೆಯನ್ನು ಹೊಂದಿರುವಿರಿ. ದುಃಖಗಳ ತೀವ್ರತೆಯು ದಿನದಿಂದ ದಿನಕ್ಕೆ ಕಡಿಮೆಯಾಗುವುದು. ನಿಮ್ಮ ಚಟುವಟಿಕೆಯ ಕಾರ್ಯಕ್ಷೇತ್ರದಲ್ಲಿ ಸದಾವಕಾಶವನ್ನು ತಂದು ಕೊಡಲಿದೆ.

ವೃಷಭ: ಆಸ್ತಿಗೆ ಸಂಬಂಧಿಸಿದಂತೆ ದಾಯಾದಿಗಳ ತಂಟೆ ತಕರಾರುಗಳು ನಿಧಾನವಾಗಿ ದೂರವಾಗಲಿವೆ. ವೃತ್ತಿಯಲ್ಲಿ ಜವಾಬ್ದಾರಿ ಹೆಚ್ಚೆ ಅಭಿವೃದ್ಧಿಗೆ ಕಾರಣವಾಗುವುದು. ಪ್ರಯಾಣದಲ್ಲಿ ಹೆಚ್ಚಿನ ಕಾಳಜಿಯ ಅಗತ್ಯವಿದೆ.

ಮಿಥುನ: ಉದಾಸೀನತೆಯಿಂದ ನಿಮ್ಮ ಸರ್ವತೋಮುಖ ಅಭಿವೃದ್ಧಿ ಕುಂಠಿತವಾಗುವುದು. ಕೋರ್ಟು-ಕಚೇರಿ ಕಾರ್ಯಭಾಗದಲ್ಲಿ ನಿರೀಕ್ಷಿತ ಯಶಸ್ಸು ಪಡೆಯುವಲ್ಲಿ ತೊಡಕು. ಉದ್ಯೋಗದಲ್ಲಿ ದೃಢಚಿತ್ತದಿಂದ ಮುಂದುವರಿಯಿರಿ.

ಕರ್ಕಾಟಕ: ಸರಿ, ತಪ್ಪು ತೀರ್ಮಾನ ಹೇಳುವ ಜವಾಬ್ದಾರಿ ತೆಗೆದುಕೊಳ್ಳಬೇಡಿ. ಆರಂಭಿಸಿದ ಕೆಲಸ ಕಾರ್ಯಗಳು ವಿಳಂಬಗತಿಯಲ್ಲಿ ಸಾಗಿದರೂ ದಿನಾಂತ್ಯದಲ್ಲಿ ಪೂರ್ಣಗೊಳ್ಳಲಿವೆ. ಗೃಹಾಲಂಕಾರ ವಸ್ತುಗಳ ವ್ಯಾಪಾರದಿಂದ ಅಧಿಕ ಲಾಭ.

ಸಿಂಹ: ಉದ್ಯೋಗಕ್ಕೆ ಸಂಬಂಧಿಸಿದಂತೆ ಯಂತ್ರಗಳ ಹಾನಿ. ಆರೋಗ್ಯದಲ್ಲಿನ ವ್ಯತ್ಯಾಸಕ್ಕೆ ನಿದ್ರಾಭಂಗವೇ ಮೂಲ ಕಾರಣವಾಗುವುದು. ಲೇವಾದೇವಿ ವ್ಯವಹಾರದಲ್ಲಿ ನಷ್ಟ ಉಂಟಾಗಬಹುದು, ಆಸ್ತಿ ಕಳೆದುಕೊಳ್ಳಬಹುದು.

ಕನ್ಯಾ: ನೀವು ಅಪೇಕ್ಷಿಸಿದ ಸಹಕಾರವನ್ನು ಮೇಲಧಿಕಾರಿಗಳಿಂದ ಪಡೆಯುವಲ್ಲಿ ಯಶಸ್ವಿಯಾಗುವಿರಿ. ಅದರಿಂದಾಗಿ ನಿಮ್ಮ ಹಳೆಯ ಯೋಜನೆಗಳಿಗೆ ಮರು ಜೀವ ಬಂದಂತಾಗಲಿದೆ. ಹೋಟೆಲ್ ಉದ್ಯಮದವರಿಗೆ ಶುಭದಿನ.

ತುಲಾ: ಇತರರು ನಿಮ್ಮ ಸಮಯವನ್ನು ಯಾಚಿಸುತ್ತಿರುವುದರಿಂದ ಸ್ವಂತ ಕೆಲಸಗಳು ನಿಧಾನಗತಿಯಲ್ಲಿ ಸಾಗಲಿದೆ. ವಾದ-ವಿವಾದಗಳಿಂದ, ರಾಜೀ ಪಂಚಾಯ್ತಿಗಳಿಂದ ದೂರವಿರಿ. ಬುದ್ಧಿಶಕ್ತಿಯಿಂದ ಜನಮನ್ನಣೆ ಗಳಿಸಬಹುದು.

ವೃಶ್ಚಿಕ: ಹೊಸ ವಾಹನ ಖರೀದಿ ಅಗತ್ಯ. ನಿಮ್ಮ ಮಾನಸಿಕ ಶಕ್ತಿಗಳು ಬಲಯುತವಾಗಿ ಯೋಚನೆಗಳನ್ನು ಶೀಘ್ರವೇ ಕಾರ್ಯರೂಪಕ್ಕೆ ಇಳಿಸುತ್ತೀರಿ. ಮಗನ ವಿವಾಹದ ಸಿದ್ಧತೆಗಳು ಚುರುಕಾಗಿ ಮತ್ತು ಸಂಭ್ರಮದಿಂದ ಸಾಗಲಿದೆ.

ಧನು: ಈ ದಿನ ಯಾವುದೇ ಹೊಸ ವ್ಯಕ್ತಿಗಳಿಂದ ಪ್ರಚೋದನೆಗೆ ಒಳಗಾಗದಿರಿ. ಇಂದು ಶರೀರದಲ್ಲಿನ ನವಚೈತನ್ಯವು ಕಾರ್ಯಪ್ರವೃತ್ತಿ ಹೊಂದುವಂತೆ ಮಾಡುವುದು. ದೇಹಕ್ಕೆ ಆಯಾಸವಾದಲ್ಲಿ ಸ್ವತಃ ಆರೈಕೆ ಮಾಡಿಕೊಳ್ಳಿ.

ಮಕರ: ಆರ್ಥಿಕ ಸಮಸ್ಯೆ ಎದುರಾಗಿ ಸಂಬಂಧಿಕರ ಸಹಾಯ ಕೇಳುವುದು ಅನಿವಾರ್ಯವಾಗುವುದು. ವೃತ್ತಿ ಬದಲಾವಣೆಯ ಸಮಸ್ಯೆ ನಿವಾರಣೆಯಾಗುವುದು. ಭೂಮಿ ಖರೀದಿ ವಿಚಾರ ಮುಂದಕ್ಕೆ ಹಾಕುವ ಪರಿಸ್ಥಿತಿ ಕಂಡುಬಂದೀತು.

ಕುಂಭ: ಕಮಿಷನ್ ಏಜೆಂಟ್‌ಗಳಿಗೆ ಅಧಿಕ ಆದಾಯ ಉಂಟಾಗುವುದು. ಮನೆಯಲ್ಲಿ ಹಿತಕರ ವಾತಾವರಣ ಇರುತ್ತದೆ. ವಿದ್ಯಾರ್ಥಿಗಳು ಓದು ಮುಂದುವರೆಸುವುದನ್ನು ನಿರ್ಧರಿಸಿ. ನವಗ್ರಹ ಪೀಡಾ ಪರಿಹಾರ ಸ್ತೋತ್ರ ಪಠಿಸಿ.

ಮೀನ: ವೈಜ್ಞಾನಿಕ ಸಂಶೋಧನೆಯಲ್ಲಿ ತೊಡಗಿರುವವರಿಗೆ ಅನಿರೀಕ್ಷಿತ ರೀತಿಯಲ್ಲಿ ಫಲಿತಾಂಶ. ಇಷ್ಟು ದಿನದ ನಿಮ್ಮ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುವುದು. ಸಾಧ್ಯವಾದಷ್ಟು ಶಾಂತಿಯಿಂದ ಕೆಲಸವನ್ನು ಸಾಧಿಸಿ.

ಬೆರಗಿನ ಬೆಳಕು

ಗುರುರಾಜ ಕರಜಗಿ

ನೀಗಿದಷ್ಟು ಕಾರ್ಯ

ಅಷ್ಟದಿಗ್ಗಜವೆ ನೀನ್? ಆದಿಶೇಷನೆ ನೀನು? |
ಕಷ್ಟಭಾರವಿದೆಂದು ನಿಟ್ಟುಸಿರ ಬಿಡುವೆ! ||
ನಿಷ್ಠುರದ ನಿನ್ನ ಕನಿಕರ ಜಗಕೆ ಬೇಕಿಲ್ಲ |
ಎಷ್ಟಾದರಷ್ಟೆ ಸರಿ – ಮಂಕುತಿಮ್ಮ || 583 ||

ಪದ-ಅರ್ಥ: ಅಷ್ಟದಿಗ್ಗಜ = (ಎಂಟು ದಿಕ್ಕುಗಳಲ್ಲಿನ ಆನೆಗಳು ಭೂಮಿಯನ್ನು ಹೊತ್ತಿವೆ ಎಂಬ ನಂಬಿಕೆ), ಕಷ್ಟಭಾರವಿದೆಂದು = ಕಷ್ಟ + ಭಾರ + ಇದು + ಎಂದು, ಎಷ್ಟಾದರಷ್ಟೆ = ಎಷ್ಟು + ಆದರೆ + ಅಷ್ಟೆ.

ವಾಚ್ಯಾರ್ಥ: ನೀನು ಜಗತ್ತಿನ ಭಾರವನ್ನು ಹೊತ್ತ ಆನೆಯೇ? ಪ್ರಪಂಚವನ್ನೇ ಹೆಡೆಯ ಮೇಲೆ ಹೊತ್ತ ಆದಿಶೇಷನೆ? ಮಾಡುವ ಕಾರ್ಯ ಕಷ್ಟ, ಭಾರ ಎಂದು ನಿಟ್ಟುಸಿರು ಬಿಡುತ್ತಿದ್ದೀಯಾ. ನಿನ್ನ ಕನಿಕರದ ಅಪೇಕ್ಷೆಯ ಮಾತು ಜಗಕೆ ಬೇಕಿಲ್ಲ. ನಿನ್ನಿಂದ ಎಷ್ಟಾಗುತ್ತದೋ ಅಷ್ಟನ್ನು ಮಾಡು.

ವಿವರಣೆ: ಪ್ರಪಂಚದಲ್ಲಿರುವ ನಮಗೆಲ್ಲ ಒಂದು ಭ್ರಮೆ ಇದೆ. ಅದೆಂದರೆ ಎಲ್ಲವನ್ನೂ ನಾನೇ ಮಾಡುತ್ತೇನೆ. ನಾನಿಲ್ಲದಿದ್ದರೆ ಕೆಲಸ ನಡೆದೀತು ಹೇಗೆ? ಎಲ್ಲ ಜವಾಬ್ದಾರಿಯೂ ನನ್ನದೇ.

ಪರಮಪೂಜ್ಯ ಸಿದ್ದೇಶ್ವರ ಸ್ವಾಮಿಗಳ ಒಂದು ಪುಟ್ಟ ಕಥೆ ಮಾರ್ಮಿಕ. ಒಂದು ಗಾಳಿಪಟ ಆಕಾಶದಲ್ಲಿ ಹಾರುತ್ತಿತ್ತು. ಒಬ್ಬ ಕೇಳಿದ, 'ಈ ಗಾಳಿಪಟವನ್ನು ಯಾರು ಹಾರಿಸುತ್ತಿದ್ದಾರೆ?' ಬಾಲಕ ಹೇಳಿದ, 'ನಾನೇ ಹಾರಿಸುವುದು. ನಾನಿಲ್ಲದಿದ್ದರೆ ಅದು ಹೇಗೆ ಹಾರೀತು?' ಗಾಳಿ ಹೇಳಿತು, 'ಇಲ್ಲ ಪಟವನ್ನು ಹಾರಿಸುವುದು ನಾನೇ. ಅದನ್ನು ಇಚ್ಛೆ ಇದ್ದಂತೆ, ಇಚ್ಛೆ ಬಂದ ದಿಕ್ಕಿಗೆ ಹಾರಿಸುತ್ತೇನೆ'. ದಾರ ಹೇಳಿತು, 'ನಾನಿಲ್ಲದಿದ್ದರೆ ಪಟ ಮೇಲೆ ಏರೀತೇ? ಅದು ಹಾಗೆ ಆಕಾಶದಲ್ಲಿ ನಿಂತೀತೇ?'. ಗಾಳಿಪಟದ ಬಾಲ ಹೇಳಿತು, 'ನಾನು ಸರಿಯಾಗಿ ತೂಕವನ್ನು ಕಾಯ್ದುಕೊಳ್ಳದಿದ್ದರೆ ಪಟ ನೆಲಕ್ಕೆ ಅಪ್ಪಳಿಸೀತು. ನಾನೇ ಅದನ್ನು ಹಾರಿಸುವುದು'.

ಆಗ ಒಂದು ಆಕಾಶವಾಣಿ ಹೇಳಿತು, 'ಇವರೆಲ್ಲರೂ ಒಂದು ಭಾಗದ ಸತ್ಯವನ್ನು ಹೇಳುತ್ತಿದ್ದಾರೆ ಮತ್ತು ಎಲ್ಲರೂ ಸುಳ್ಳು ಹೇಳುತ್ತಿದ್ದಾರೆ. ಯಾಕೆಂದರೆ ಬಾಲಕ ಏನು ಪ್ರಯತ್ನ ಮಾಡಿದರೂ ಪಟವನ್ನು ಮೇಲಕ್ಕೆ ಹಾರಿಸಲಾರ. ಗಾಳಿಗೆ ತಾನಾಗಿಯೇ ಹಾರಿಸಲು ಬರುವುದಿಲ್ಲ. ಬರೀ ಬಾಲದಿಂದ ಪಟ ಹಾರಲಾರದು. ಕೇವಲ ದಾರದಿಂದ ಏನಾದೀತು? ಅದೇ ಹಾರಲಾರದು. ಆದರೆ ಎಲ್ಲರೂ ಸರಿಯಾಗಿ ಸೇರಿದರೆ ಮಾತ್ರ ಗಾಳಿಪಟವನ್ನು ಹಾರಿಸುವ ಶಕ್ತಿ ಬರುತ್ತದೆ. ಅದನ್ನು ಮರೆತು ಪ್ರತಿಯೊಬ್ಬರೂ ತಮ್ಮಿಂದ ಮಾತ್ರ ಅದು ಸಾಧ್ಯವಾಯಿತು ಎಂಬಂತೆ ಮಾತನಾಡುತ್ತಾರೆ'.

ಬೆಳಕಿನ ವಿಷಯದಲ್ಲಿ 'ನಾನೇ ಶ್ರೇಷ್ಠ' ಎನ್ನುವ ಮಾತುಗಳು ದೇವಲೋಕಕ್ಕೂ ಕೇಳಿಸಿದವು. ಇಂದ್ರ ಸಭೆ ಕರೆದು ಯಾರು ತಮ್ಮನ್ನು ಶ್ರೇಷ್ಠರೆಂದು ಭಾವಿಸಿದ್ದಾರೋ ಅವರನ್ನೆಲ್ಲ ಕರೆದ. ಸೂರ್ಯ ಬಂದ, ಚಂದ್ರ, ತಾರೆಗಳು ಬಂದವು. ಭೂಮಿಯಿಂದ ಮಿಂಚು ಹುಳವೂ ಬಂದಿತ್ತು. ಆದರೆ ಪುಟ್ಟ ಹಣತೆ ಮಾತ್ರ ಬಂದಿರಲಿಲ್ಲ. ಇಂದ್ರ ಅದನ್ನು ಕರೆಸಿದ. ನಂತರ ಸೂರ್ಯ ತನ್ನ ಹೆಗ್ಗಳಿಗೆ ಹೇಳಿಕೊಂಡ. ಚಂದ್ರ ಹೇಳಿದ, 'ರಾತ್ರಿ ಸೂರ್ಯ ಎಲ್ಲಿ? ಬೆಳಕು ನನ್ನದೇ'. ನಕ್ಷತ್ರಗಳೂ ವಾದ ಮಂಡಿಸಿದವು. ಮಿಂಚು ಹುಳ ಕೂಡ ತನ್ನ ಬೆಳಕಿನ ಬಗ್ಗೆ ಹೇಳಿಕೊಂಡಿತು. ಒತ್ತಾಯಿಸಿದ ಮೇಲೆ ಹಣತೆ ನಾಚಿಕೆಯಿಂದ ಹೇಳಿತು, 'ನಾನು ಶ್ರೇಷ್ಠನೂ ಅಲ್ಲ, ಕನಿಷ್ಠನೂ ಅಲ್ಲ. ನನ್ನ ಕೆಲಸ ಮಾಡುತ್ತೇನೆ. ನನ್ನ ಸ್ವಲ್ಪವೇ ಬೆಳಕನ್ನು ಜನರು ಬೇಡಿದಾಗ ನೀಡುತ್ತೇನೆ. ಅವರು ಬೇಡವೆಂದಾಗ ನಿಲ್ಲಿಸುತ್ತೇನೆ. ದಯವಿಟ್ಟು ನನ್ನನ್ನು ಶ್ರೇಷ್ಠರ ಸಾಲಿನಲ್ಲಿ ಸೇರಿಸಬೇಡಿ'. ಇಡೀ ಸಭೆ ಹಣತೆಯನ್ನೇ ಶ್ರೇಷ್ಠ ಎಂದು ತೀರ್ಮಾನಿಸಿತು. ಕಗ್ಗ ಹೇಳುತ್ತದೆ, ಪ್ರಪಂಚವನ್ನು ತಲೆಯ ಮೇಲೆ ಹೊತ್ತ ಅಷ್ಟದಿಗ್ಗಜಗಳ ಹಾಗೆ, ಆದಿಶೇಷನಂತೆ ಕಷ್ಟ, ಭಾರ ಎನ್ನಬೇಡ. ನಿನ್ನ ಕನಿಕರದ ಅಪೇಕ್ಷೆಯ ಮಾತು ಯಾರಿಗೂ ಬೇಕಿಲ್ಲ. ನಿನ್ನಿಂದ ಎಷ್ಟು ಕೆಲಸ ಸಾಧ್ಯವೋ ಅಷ್ಟನ್ನು ಮಾತ್ರ ಮಾಡು.

ಪದಬಂಧ 4897

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ನೀರವತೆ ಅಥವಾ ಮಾತಾಡದಿರುವಿಕೆ (2)
3.ಆತುರವು ಈ ತರ ಬಂದಿದೆಯಲ್ಲಾ! (3)
5.ಮಾದರಿಗೊಂದು ಪರ್ಯಾಯ ಪದ (3)
7.ಸೂರ್ಯನ ಇನ್ನೊಂದು ಹೆಸರು (4)
9.ಪ್ರತೀ ಕತೆಯಲ್ಲೂ ಬಂದಿರುವ ಚಿಹ್ನೆ! (3)
10.ಕಣದಲ್ಲಿರುವ ಇಂದ್ರಿಯ (3)
11.ಆನಂದಾನುಭವಕ್ಕೆ ಉಂಟಾಗಿರುವ ಅಡ್ಡಿ (4)
13.ಅಳಿವಿನ ವಿರುದ್ಧ ಪದ (3)
15.ತಪರಾಕು ಸಿಕ್ಕ ಮೇಲೆ ಈ ಹೊಗಳಿಕೆ! (3)
16.ಮಾಗಿದ ಕಾಯಿ (2)

ಮೇಲಿಂದ ಕೆಳಕ್ಕೆ

2.ತಿರುಗಿಸಿದರೂ ಇದು ಹೊಸತು (3)
3.ರತಿಪತಿಯಿಂದ ಮೂಡಿದ ಆಸೆ (3)
4.ಪಾವತಿ ಪತ್ರವಿದು (3)
6.ಗಣಪತಿಯ ವಾಹನ (3)
8.ಐಶ್ವರ್ಯ ಇಲ್ಲಿದೆ (3)
9.ಚಾರನಿದ್ದಾಗಲೇ ಹರಡುವಿಕೆ (3)
10.ಬಾಳೆ ಗಿಡವಿದು (3)
12.ಸರಸದ ಮಾತುಕತೆ (3)
13.ನಸುಕಿನಲ್ಲಿ ಶೇಖರಿಸಿಟ್ಟ ಮರಳು (3)
14.ಧಾನ್ಯವನ್ನು ಶೇಖರಿಸುವ ಕಣಜವಿಲ್ಲಿ ಉಲ್ಟಾ ಆಗಿದೆ (3)

1	2	■	3		4	■	■	■
■		■		■		■	■	■
■	5	6		■	7			8
■	■		■	■	■	■	■	
9			■	■	■	10		
	■	■	■	■	■		■	■
11			12	■	13		14	■
■	■	■		■		■		■
■	■	■	15			■	16	

4896ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಕರ್ನಾಟಕ
3.ಸಂಪನ್ನ 4.ಸಹವಾಸ
6.ಆಯವ್ಯಯ 7.ಮಡದಿ
8.ಕಲಾವಿದ 11.ನಡುಮನೆ
13.ತಡಿಕೆ 14.ಪರಿವಾರ

ಮೇಲಿಂದ ಕೆಳಕ್ಕೆ:
1.ಕನ್ನಡಕ 2.ಕಸ
3.ಸಂದೂಕ 5.ಸಮಯ
6.ಆದಿ 7.ಮದ
8.ಕದನ 9.ಗತ್ಯಂತರ
10.ಒನಕೆ 12.ನೆಪ

ಸುಡೊಕು 5283

				5		2		8
5		4	1		8		3	
	8			7			5	4
	6			3		1		2
2		5		1	7			
	3			8		5		6
		8			6		2	
3		2	7	4				
	5			2		4		1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5282 ಸುಡೊಕು

7	5	9	3	1	6	4	8	2
2	3	6	8	4	9	5	1	7
4	1	8	7	5	2	3	9	6
9	7	3	4	2	1	6	5	8
5	6	4	9	3	8	2	7	1
8	2	1	6	7	5	9	3	4
6	8	7	2	9	3	1	4	5
1	9	2	5	8	4	7	6	3
3	4	5	1	6	7	8	2	9

ಎಲ್ಐಸಿ ಐಪಿಒ: ಮೇ 12ರವರೆಗೆ ಅವಕಾಶ

ನವದೆಹಲಿ (ಪಿಟಿಐ): ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ (ಸೆಬಿ) ಈಗಾಗಲೇ ಸಲ್ಲಿಸಿರುವ ಕರಡು ದಾಖಲೆಪತ್ರಗಳ ಆಧಾರದ ಮೇಲೆ ಎಲ್ಐಸಿ ಐಪಿಒ ಪ್ರಕ್ರಿಯೆ ನಡೆಸಲು ಮೇ 12ರವರೆಗೆ ಅವಕಾಶ ಇದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಒಂದೊಮ್ಮೆ ಸರ್ಕಾರವು ಮೇ 12ರ ಒಳಗಾಗಿ ಐಪಿಒ ನಡೆಸಲು ವಿಫಲವಾದರೆ, ಡಿಸೆಂಬರ್ ತ್ರೈಮಾಸಿಕದ ಆರ್ಥಿಕ ಸಾಧನೆ ಮತ್ತು ನಿಗಮದ ಒಟ್ಟಾರೆ ಮೌಲ್ಯದ ವಿವರದೊಂದಿಗೆ ಸೆಬಿಗೆ ದಾಖಲೆಪತ್ರಗಳನ್ನು ಹೊಸದಾಗಿ ಸಲ್ಲಿಸಬೇಕಾಗುತ್ತದೆ ಎಂದು ಅವರು ಹೇಳಿದ್ದಾರೆ.

ಮಾರುಕಟ್ಟೆ ಪರಿಸ್ಥಿತಿಯನ್ನು ಗಮನಿಸಲಾಗುತ್ತಿದೆ. ಷೇರಿನ ಬೆಲೆ ಮತ್ತು ಎಷ್ಟು ಷೇರುಗಳು ಮಾರಾಟಕ್ಕೆ ಇರುತ್ತವೆ ಎನ್ನುವ ಮಾಹಿತಿಗಳನ್ನು ಒಳಗೊಂಡ ಅಂತಿಮ ದಾಖಲೆ ಪತ್ರಗಳನ್ನು ಶೀಘ್ರವೇ ಸೆಬಿಗೆ ಸಲ್ಲಿಸಲಾಗುವುದು ಎಂದು ತಿಳಿಸಿದ್ದಾರೆ.

ಕೇಂದ್ರ ಸರ್ಕಾರವು ಎಲ್ಐಸಿಯಲ್ಲಿ ಹೊಂದಿರುವ ಷೇರುಗಳಲ್ಲಿ ಶೇ 5ರಷ್ಟನ್ನು ಮಾರಾಟ ಮಾಡುವ ಮೂಲಕ ₹ 60 ಸಾವಿರ ಕೋಟಿ ಬಂಡವಾಳ ಸಂಗ್ರಹಿಸುವ ನಿರೀಕ್ಷೆ ಇಟ್ಟುಕೊಂಡಿದೆ.

ಪೇಟಿಎಂ ಸ್ಥಾಪಕ ಬಂಧನ, ಬಿಡುಗಡೆ

ನವದೆಹಲಿ (ಪಿಟಿಐ): ಪೇಟಿಎಂ ಸಂಸ್ಥಾಪಕ ಹಾಗೂ ಅದರ ಸಿಇಒ ವಿಜಯ್ ಶೇಖರ್ ಶರ್ಮ ಅವರನ್ನು ಹಿಂದಿನ ತಿಂಗಳು ರಸ್ತೆ ಅಪಘಾತವೊಂದಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಬಂಧಿಸಿ, ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿತ್ತು ಎಂದು ದೆಹಲಿ ಪೊಲೀಸರು ಭಾನುವಾರ ತಿಳಿಸಿದ್ದಾರೆ. ಶರ್ಮ ಅವರು ತಮ್ಮ ಕಾರನ್ನು ದಕ್ಷಿಣ ದೆಹಲಿ ವಿಭಾಗದ ಡಿಸಿಪಿಯವರ ಅಧಿಕೃತ ವಾಹನಕ್ಕೆ ಗುದ್ದಿದ ಆರೋಪ ಎದುರಿಸುತ್ತಿದ್ದಾರೆ.

ಈ ಘಟನೆಯು ಫೆಬ್ರುವರಿ 22 ರಂದು ನಡೆದಿದೆ. ಅದೇ ದಿನ ಶರ್ಮ ಅವರನ್ನು ಬಂಧಿಸಿ, ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ. ಬಂಧನದ ವಿಚಾರವಾಗಿ ಬಂದಿರುವ ವರದಿಗಳು ಅತಿರಂಜಿತವಾಗಿವೆ ಎಂದು ಪೇಟಿಎಂ ವಕ್ತಾರರು ಪ್ರತಿಕ್ರಿಯಿಸಿದ್ದಾರೆ.

ಕ್ರೆಡಿಟ್ ಸ್ಕೋರ್ ಸುಧಾರಣೆ ಹೇಗೆ?

ಬಂಡವಾಳ ಮಾರುಕಟ್ಟೆ
ಅವಿನಾಶ್ ಕೆ.ಟಿ.

ಕಡಿಮೆ ಬಡ್ಡಿ ದರಕ್ಕೆ, ಸುಲಭದಲ್ಲಿ ಸಾಲ ಸಿಗಬೇಕು ಎಂದು ಎಲ್ಲರೂ ಬಯಸುತ್ತಾರೆ. ಸುಲಭವಾಗಿ ಸಾಲ ಸಿಗಲು ಇರುವ ಮಾನದಂಡ ಕ್ರೆಡಿಟ್ ಸ್ಕೋರ್. ನಿಮ್ಮ ಹಣಕಾಸಿನ ವ್ಯವಹಾರದ ಶಿಸ್ತು ಅಥವಾ ಅಶಿಸ್ತಿಗೆ ಕ್ರೆಡಿಟ್ ಸ್ಕೋರ್ ಕನ್ನಡಿ ಇದ್ದಂತೆ.

ಬ್ಯಾಂಕುಗಳಿಂದ ಸಾಲ ಪಡೆಯಲು ಅರ್ಜಿ ಸಲ್ಲಿಸಿದ ಕೂಡಲೇ ಅಧಿಕಾರಿಗಳು ಕ್ರೆಡಿಟ್ ಸ್ಕೋರ್ ಕೇಳುತ್ತಾರೆ. ಕ್ರೆಡಿಟ್ ಸ್ಕೋರ್ ಉತ್ತಮವಾಗಿದ್ದರಷ್ಟೇ ಸಾಲ ಸಿಗುತ್ತದೆ. 300ರಿಂದ 900ರವರೆಗೆ ಕ್ರೆಡಿಟ್ ಸ್ಕೋರ್ ಅಂಕಗಳನ್ನು ನೀಡಲಾಗುತ್ತದೆ. 750ಕ್ಕಿಂತ ಹೆಚ್ಚು ಕ್ರೆಡಿಟ್ ಸ್ಕೋರ್ ಹೊಂದಿದ್ದರೆ ಸಾಲ ಸಿಗುವ ಸಾಧ್ಯತೆ ಹೆಚ್ಚಿರುತ್ತದೆ. ಕ್ರೆಡಿಟ್ ರೇಟಿಂಗ್ ಬ್ಯೂರೊಗಳಾದ ಕ್ರೆಡಿಟ್ ಇನ್ಫಾರ್ಮೇಷನ್ ಬ್ಯೂರೋ ಆಫ್ ಇಂಡಿಯಾ ಲಿ. (CIBIL), ಈಕ್ವಿಫ್ಯಾಕ್ಸ್, ಎಕ್ಸ್‌ಪೀರಿಯಾನ್ ಸಂಸ್ಥೆಗಳು ಬ್ಯಾಂಕುಗಳಿಂದ ಮಾಹಿತಿ ಪಡೆದು, ಸಾಲಗಾರರ ಕ್ರೆಡಿಟ್ ಸ್ಕೋರ್ ನೀಡುತ್ತವೆ. ಬನ್ನಿ, ಕ್ರೆಡಿಟ್ ಸ್ಕೋರ್ ಮೇಲೆ ಪರಿಣಾಮ ಬೀರುವ ಅಂಶಗಳು ಮತ್ತು ಕ್ರೆಡಿಟ್ ಸ್ಕೋರ್ ಸುಧಾರಣೆ ಬಗ್ಗೆ ಹೆಚ್ಚು ತಿಳಿದುಕೊಳ್ಳೋಣ.

ಕ್ರೆಡಿಟ್ ಸ್ಕೋರ್ ಮೇಲೆ ಪರಿಣಾಮ ಬೀರುವ ಅಂಶಗಳು:

1) ಹಲವು ಬ್ಯಾಂಕ್‌ಗಳಲ್ಲಿ ಸಾಲಕ್ಕೆ ಅರ್ಜಿ: ಸಾಲ ಬಯಸಿ ಸಲ್ಲಿಸಿದ್ದ ಅರ್ಜಿ ತಿರಸ್ಕಾರವಾಗುತ್ತದೆ ಎಂದು ಭಾವಿಸಿ. ಆಗ ನೀವು ಏಜೆಂಟ್ ಮೂಲಕ ಐದಾರು ಕಡೆ ಸಾಲಕ್ಕೆ ಅರ್ಜಿ ಹಾಕುತ್ತೀರಿ. ಎಲ್ಲ ಕಡೆ ಅರ್ಜಿ ತಿರಸ್ಕೃತವಾದಾಗ ಕ್ರೆಡಿಟ್ ಸ್ಕೋರ್ ತಗ್ಗುತ್ತದೆ. ಸಾಲಕ್ಕೆ ಒಂದು ಬ್ಯಾಂಕಿನಲ್ಲಿ ಅರ್ಜಿ ಸಲ್ಲಿಸಿದಾಗ ಅದು ತಿರಸ್ಕೃತಗೊಂಡರೆ ಅದರ ಹಿಂದಿರುವ ಕಾರಣವೇನು ಎಂಬುದನ್ನು ತಿಳಿದುಕೊಳ್ಳಿ. ಸರಿಯಾದ ಕಾರಣ ಅರಿತ ನಂತರವಷ್ಟೇ ಮತ್ತೊಂದು ಅರ್ಜಿ ಹಾಕುವ ಬಗ್ಗೆ ಚಿಂತನೆ ಮಾಡಿ. ಪದೇ ಪದೇ ಸಾಲಕ್ಕೆ ಅರ್ಜಿ ಹಾಕಿದರೆ ಕ್ರೆಡಿಟ್ ಸ್ಕೋರ್ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತದೆ.

2) ಸಾಲ ಮರುಪಾವತಿ ಇತಿಹಾಸ: ಸಮಯಕ್ಕೆ ಸರಿಯಾಗಿ ಸಾಲ ಮರುಪಾವತಿ ಮಾಡದಿದ್ದರೆ ಕ್ರೆಡಿಟ್ ಸ್ಕೋರ್ ಕಡಿಮೆ ಆಗುತ್ತದೆ. ಸಾಲ ಮರುಪಾವತಿ ಸರಿಯಾಗಿ ಮಾಡುತ್ತಿದ್ದೀರಾ ಎನ್ನುವುದನ್ನು ಸಾಲ ಮರುಪಾವತಿ ಇತಿಹಾಸ ಹೇಳುತ್ತದೆ. ಸಾಲ ಮರುಪಾವತಿ ಮಾಡದೆ, ಸಾಲ 'ಸೆಟಲ್ಮೆಂಟ್' ಮಾಡಿಕೊಂಡರೂ ಕ್ರೆಡಿಟ್ ಸ್ಕೋರ್ ಮೇಲೆ ನಕಾರಾತ್ಮಕ ಪರಿಣಾಮ ಉಂಟಾಗುತ್ತದೆ. ಬೇರೆಯವರ ಸಾಲಕ್ಕೆ ಖಾತರಿದಾರರಾಗಿ ಅವರು ಸಾಲ ಮರುಪಾವತಿ ಮಾಡಿದಿದ್ದರೆ ಅದೂ ಕೂಡ ನಿಮ್ಮ ಕ್ರೆಡಿಟ್ ಸ್ಕೋರ್ ಮೇಲೆ ಪರಿಣಾಮ ಬೀರುತ್ತದೆ. ಕ್ರೆಡಿಟ್ ರಿಪೋರ್ಟ್‌ನಲ್ಲಿ ತಪ್ಪು ಮಾಹಿತಿಯಿದ್ದು ಅದನ್ನು ಸರಿಪಡಿಸಿಕೊಳ್ಳದಿದ್ದರೂ ಕ್ರೆಡಿಟ್ ಸ್ಕೋರ್‌ಗೆ ತೊಂದರೆಯಾಗುತ್ತದೆ.

3) ಕ್ರೆಡಿಟ್ ಮಿಕ್ಸ್: ಸಾಲಗಳಲ್ಲಿ ಅಡಮಾನ ಸಹಿತ (ಸುರಕ್ಷಿತ) ಸಾಲಗಳು ಮತ್ತು ಅಡಮಾನ ರಹಿತ (ಸುರಕ್ಷಿತವಲ್ಲದ) ಸಾಲಗಳಿರುತ್ತವೆ. ಉದಾಹರಣೆಗೆ ಗೃಹ ಮತ್ತು ವಾಹನ ಸಾಲಗಳು ಅಡಮಾನ ಸಾಲಗಳ ವ್ಯಾಪ್ತಿಯಲ್ಲಿ ಬರುತ್ತವೆ. ಅದೇ ರೀತಿ, ವೈಯಕ್ತಿಕ ಸಾಲ ಮತ್ತು ಕ್ರೆಡಿಟ್ ಕಾರ್ಡ್ ಅಡಮಾನ ರಹಿತ ಸಾಲಗಳಾಗುತ್ತವೆ. ಈ ಎರಡು ಬಗೆಯ ಸಾಲಗಳ ನಡುವೆ ಸಮತೋಲ ಇರಬೇಕು. ಅಡಮಾನ ರಹಿತ ಸಾಲಗಳನ್ನು ಹೆಚ್ಚಿಗೆ ಪಡೆದರೆ ಕ್ರೆಡಿಟ್ ಸ್ಕೋರ್ ಮೇಲೆ ನಕಾರಾತ್ಮಕ ಪರಿಣಾಮವಾಗುತ್ತದೆ.

4) ಸಾಲ ಮಿತಿ ಬಳಕೆ ಅನುಪಾತ: ನಿಮ್ಮ ಬಳಿ ಕ್ರೆಡಿಟ್ ಕಾರ್ಡ್ ಇದ್ದು, ಅದು ₹ 5 ಲಕ್ಷ ಮಿತಿ ಹೊಂದಿದೆ ಎಂದು ಭಾವಿಸಿ. ನೀವು ಸುಮಾರು ₹ 2 ಲಕ್ಷ ತನಕ ಕ್ರೆಡಿಟ್ ಕಾರ್ಡ್ ಬಳಕೆ ಮಾಡಿದರೆ ಸಮಸ್ಯೆಯಿಲ್ಲ. ಆದರೆ ಅದಕ್ಕಿಂತ ಹೆಚ್ಚು ಹಣವನ್ನು ಕ್ರೆಡಿಟ್ ಕಾರ್ಡ್ ಮೂಲಕ ಬಳಕೆ ಮಾಡಿದರೆ ಸಮಸ್ಯೆಯಾಗುತ್ತದೆ. ಕ್ರೆಡಿಟ್ ಕಾರ್ಡ್ ಅತಿಯಾದ ಬಳಕೆಯಿಂದ ಸಾಲದ ಹೊರೆ ಹೆಚ್ಚುತ್ತದೆ. ಹೀಗಾದಾಗ ಕ್ರೆಡಿಟ್ ಸ್ಕೋರ್ ಮೇಲೆ ನಕಾರಾತ್ಮಕ ಪರಿಣಾಮ ಉಂಟಾಗುತ್ತದೆ.

ಕ್ರೆಡಿಟ್ ಸ್ಕೋರ್ ಹೆಚ್ಚಿಸಿಕೊಳ್ಳಲು ಸೂತ್ರಗಳು:

1) ಸಮಯಕ್ಕೆ ಸರಿಯಾಗಿ ಸಾಲ ಮರುಪಾವತಿಸಿ
2) ಅಗತ್ಯವಿರುವುದಕ್ಕೆ ಮಾತ್ರ ಕ್ರೆಡಿಟ್ ಕಾರ್ಡ್ ಬಳಸಿ
3) ಸಾಲ ಪಡೆಯುವಾಗ ಅಡಮಾನ ಸಹಿತ ಸಾಲ ಮತ್ತು ಅಡಮಾನ ರಹಿತ ಸಾಲಗಳ ಮಿಶ್ರಣವಿರಲಿ
4) ಹೆಚ್ಚುವರಿ ಸಾಲದ ಅಗತ್ಯವಿದ್ದಾಗ ಎಚ್ಚರಿಕೆಯಿಂದ ಅದಕ್ಕೆ ಅರ್ಜಿ ಸಲ್ಲಿಸಿ
5) ಸಾಲಕ್ಕೆ ಖಾತರಿದಾರರಾಗಿದ್ದರೆ ಸಾಲ ಪಡೆದವರು ಮರುಪಾವತಿ ಮಾಡುವಂತೆ ನೋಡಿಕೊಳ್ಳಿ
6) ಕ್ರೆಡಿಟ್ ಸ್ಕೋರ್ ವರದಿಯನ್ನು ಆಗಾಗ ಪರಿಶೀಲನೆ ಮಾಡುವುದನ್ನು ಮರೆಯಬೇಡಿ
7) ಕ್ರೆಡಿಟ್ ರಿಪೋರ್ಟ್‌ನಲ್ಲಿ ತಪ್ಪುಗಳಿದ್ದರೆ ದೂರು ನೀಡಿ ಸರಿಪಡಿಸಿಕೊಳ್ಳಿ

(ಲೇಖಕ: ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)

ಕೊಂಚ ಚೇತರಿಕೆ ಕಂಡ ಷೇರುಪೇಟೆ

ಸತತ ನಾಲ್ಕು ವಾರಗಳಿಂದ ಕುಸಿತದ ಹಾದಿಯಲ್ಲಿದ್ದ ಷೇರುಪೇಟೆ ಸೂಚ್ಯಂಕಗಳು ಕೊಂಚ ಚೇತರಿಕೆ ಕಂಡಿವೆ. ಮಾರ್ಚ್ 11ರಂದು ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕಗಳು ಸುಧಾರಿಸಿಕೊಂಡಿವೆ. ವಾರದ ಅವಧಿಯಲ್ಲಿ ಸೆನ್ಸೆಕ್ಸ್ ಶೇ 2.20ರಷ್ಟು ಹೆಚ್ಚಳ ಕಂಡಿದ್ದು , 55,550 ಅಂಶಗಳಲ್ಲಿ ವಹಿವಾಟು ಮುಗಿಸಿದೆ. 16,630 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ 50 ಸೂಚ್ಯಂಕ ಶೇ 2.37ರಷ್ಟು ಗಳಿಕೆ ಕಂಡಿದೆ.

ರಷ್ಯಾ–ಉಕ್ರೇನ್ ಯುದ್ಧ, ತೈಲ ಬೆಲೆ ಹೆಚ್ಚಳ, ಬೆಲೆ ಏರಿಕೆ, ಅಮೆರಿಕದ ಫೆಡರಲ್ ಬ್ಯಾಂಕ್‌ನಿಂದ ಬಡ್ಡಿ ದರ ಹೆಚ್ಚಳ ಸೇರಿದಂತೆ ಹಲವು ಬೆಳವಣಿಗೆಗಳು ಷೇರುಪೇಟೆ ಮೇಲೆ ಪರಿಣಾಮ ಬೀರಿದ್ದರೂ ಸೂಚ್ಯಂಕಗಳು ಸಮಾಧಾನಕರ ಬೆಳವಣಿಗೆ ಸಾಧಿಸಿವೆ.

ವಲಯವಾರು ಪ್ರಗತಿ ನೋಡಿದಾಗ ವಾರದ ಅವಧಿಯಲ್ಲಿ ಎಲ್ಲ ಪ್ರಮುಖ ಸೂಚ್ಯಂಕಗಳು ಸಕಾರಾತ್ಮಕವಾಗಿ ಕಂಡುಬಂದಿವೆ. ನಿಫ್ಟಿ ಫಾರ್ಮಾ ಸೂಚ್ಯಂಕ ಶೇ 6.3ರಷ್ಟು ಜಿಗಿದಿದೆ. ಬ್ಯಾಂಕ್ ಸೂಚ್ಯಂಕ ಶೇ 0.3ರಷ್ಟು ಹೆಚ್ಚಳವಾಗಿದೆ. ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 4ರಷ್ಟು ಚೇತರಿಸಿಕೊಂಡಿದೆ. ಆದರೆ ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 20,000 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಏರಿಕೆ–ಇಳಿಕೆ: ನಿಫ್ಟಿಯಲ್ಲಿ ಸುಮಾರು 38ಕ್ಕೂ ಹೆಚ್ಚು ಕಂಪನಿಗಳ ಷೇರುಗಳು ಗಳಿಕೆ ಕಂಡಿವೆ. ಸಿಪ್ಲಾ ಶೇ 12ರಷ್ಟು, ಇಂಡಿಯನ್ ಆಯಿಲ್ ಕಾರ್ಪೊರೇಷನ್ ಶೇ 10ರಷ್ಟು, ಸನ್ ಫಾರ್ಮಾ ಶೇ 9ರಷ್ಟು, ಏಷ್ಯನ್ ಪೇಂಟ್ಸ್ ಶೇ 7ರಷ್ಟು, ಟಾಟಾ ಕನ್ಸ್ಯೂಮರ್ ಶೇ 6.94ರಷ್ಟು, ಒಎನ್‌ಜಿಸಿ ಶೇ 6.5ರಷ್ಟು, ಏರ್‌ಟೆಲ್ ಶೇ 6.29ರಷ್ಟು, ಗ್ರಾಸಿಮ್ ಶೇ 6ರಷ್ಟು ಮತ್ತು ಜೆಎಸ್‌ಡಬ್ಲ್ಯು ಸ್ಟೀಲ್ ಶೇ 5.98ರಷ್ಟು ಹೆಚ್ಚಳ ಕಂಡಿವೆ. ಬ್ರಿಟಾನಿಯಾ ಶೇ 5ರಷ್ಟು, ಎಕ್ಸಿಸ್ ಬ್ಯಾಂಕ್ ಶೇ 3.5ರಷ್ಟು ಮತ್ತು ಐಷರ್ ಮೋಟರ್ಸ್ ಶೇ 2ರಷ್ಟು ಕುಸಿದಿವೆ.

ಮುನ್ನೋಟ: ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧ ಯಾವ ತಿರುವು ಪಡೆಯಲಿದೆ ಎನ್ನುವುದು ಮಾರುಕಟ್ಟೆ ಮೇಲೆ ಪರಿಣಾಮ ಬೀರಲಿದೆ. ಷೇರು ಸೂಚ್ಯಂಕಗಳು ಸದ್ಯ ಸಕಾರಾತ್ಮಕವಾಗಿ ಕಂಡುಬಂದಿದ್ದರೂ ಮತ್ತೊಂದು ಕುಸಿತ ಉಂಟಾಗದು ಎನ್ನಲು ಸಾಧ್ಯವಿಲ್ಲ. ಇದಲ್ಲದೆ ಜಾಗತಿಕ ಮಾರುಕಟ್ಟೆಗಳು ಯಾವ ರೀತಿ ವರ್ತಿಸಲಿವೆ ಎನ್ನುವುದು ಕೂಡ ಮುಖ್ಯವಾಗಲಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

50ನೇ ವರ್ಷದ ಸವಿನೆನಪು

ಹಾಡೋನಹಳ್ಳಿ ಶ್ರೀ ಎಂ. ವೆಂಕಟಪ್ಪನವರು ಹಾಗೂ ಶ್ರೀಮತಿ ಶಿವಶಂಕರಮ್ಮನವರು
ನಿಮ್ಮ ಪ್ರೀತಿಯ ಆಶೀರ್ವಾದವು ನಮಗೆ ಸದಾ ದಾರಿದೀಪವಾಗಿದೆ. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲೆಂದು ಪ್ರಾರ್ಥಿಸುವ ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಮರಿಮಕ್ಕಳು, ಎಚ್.ವಿ. ವೆಂಕಟೇಶ್, ಎಚ್.ವಿ. ಫಾರಂ. ಫೋನ್ : 9845043950

3ನೇ ವರ್ಷದ ಸವಿನೆನಪು

ಶ್ರೀಮತಿ ಜಯಲಕ್ಷ್ಮಮ್ಮ
ದಿ. ವೈ ನಂಜಪ್ಪ ರೆಡ್ಡಿ (ಪಾಳ್ಯದ ಕೃಷ್ಣಪ್ಪ) ನವರ ಧರ್ಮಪತ್ನಿ
ನಂ. 84, ಕೋರಮಂಗಲ, ಬೆಂಗಳೂರು–560095
ನೀವು ನಮ್ಮನ್ನು ಅಗಲಿ ಮೂರು ವರ್ಷ ಕಳೆದರೂ ನಿಮ್ಮ ಸವಿನೆನಪು ನಮ್ಮಲ್ಲಿ ಚಿರಸ್ಮರಣೀಯವಾಗಿ ಉಳಿದಿದೆ. ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ಕರುಣಿಸಲೆಂದು ಭಗವಂತನಲ್ಲಿ ಸದಾ ಪ್ರಾರ್ಥಿಸುವ
ಮಕ್ಕಳು, ಮೊಮ್ಮಕ್ಕಳು ಮತ್ತು ಕುಟುಂಬವರ್ಗದವರು.

NAME CHANGE ANNOUNCEMENT
Log on to :
dhclassifieds.com

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹390
12 ಮೊಟ್ಟೆಗೆ	₹54
ಮೈಸೂರು	
100 ಮೊಟ್ಟೆಗೆ	₹390

ಉಕ್ರೇನ್ ಬಿಕ್ಕಟ್ಟು: ಸಣ್ಣ ಹೂಡಿಕೆದಾರರಿಗೆ ಕಿವಿಮಾತು

ಚಿನ್ನ: ಅಲ್ಪಾವಧಿಗೆ ಅಸ್ಥಿರ, ದೀರ್ಘಾವಧಿಗೆ ಸೂಕ್ತ

• ವಿಶ್ವನಾಥ ಎಸ್.

ಬೆಂಗಳೂರು: ಚಿನ್ನದ ಮೇಲೆ ದೀರ್ಘಾವಧಿಗೆ ಹೂಡಿಕೆ ಮಾಡುತ್ತಿರುವವರು ರಷ್ಯಾ–ಉಕ್ರೇನ್ ಸಂಘರ್ಷದಿಂದ ಉಂಟಾಗಿರುವ ಪರಿಸ್ಥಿತಿಯ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳುವ ಅಗತ್ಯ ಇಲ್ಲ ಎಂದು ಮಾರುಕಟ್ಟೆ ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಜಾಗತಿಕ ಮಟ್ಟದ ರಾಜಕೀಯ ಬಿಕ್ಕಟ್ಟು, ಆರ್ಥಿಕ ಕುಸಿತ, ಯುದ್ಧದಂತಹ ಅನಿಶ್ಚಿತ ಸಂದರ್ಭಗಳಲ್ಲಿ 'ಸುರಕ್ಷಿತ ಹೂಡಿಕೆ' ಎಂದು ಪರಿಗಣಿತವಾಗಿರುವ ಚಿನ್ನದ ಮೇಲೆ ಹೂಡಿಕೆ ಹೆಚ್ಚಾಗುತ್ತದೆ. ಈಗ ಕೂಡ ಚಿನ್ನದ ಮೇಲೆ ಹೂಡಿಕೆಯು ಹೆಚ್ಚಾಗಿದೆ.

ಬೆಂಗಳೂರಿನಲ್ಲಿ ಫೆಬ್ರುವರಿ 1ರಿಂದ ಮಾರ್ಚ್ 12ರವರೆಗಿನ ಅವಧಿಯಲ್ಲಿ ಚಿನ್ನದ ದರವು 10 ಗ್ರಾಂಗೆ ₹4,480ರಷ್ಟು ಏರಿಕೆ ಕಂಡಿದೆ. ಫೆಬ್ರುವರಿ 1ರಂದು ಬೆಂಗಳೂರಿನಲ್ಲಿ 10 ಗ್ರಾಂ ಚಿನ್ನದ ದರ ₹49,580 ಆಗಿತ್ತು. ಈಗ ಅದು ₹54,060ಕ್ಕೆ ಏರಿದೆ. ಬೆಳ್ಳಿ ದರ ಕೆ.ಜಿಗೆ ₹8 ಸಾವಿರದಷ್ಟು ಹೆಚ್ಚಾಗಿದ್ದು, ₹63,500ರಿಂದ ₹71,500ಕ್ಕೆ ಏರಿಕೆ ಆಗಿದೆ.

'ಮದುವೆ ಸಮಾರಂಭ ಹತ್ತಿರದಲ್ಲಿಯೇ ಇದೆ ಎಂದಾದರೆ ತಕ್ಷಣಕ್ಕೆ ಚಿನ್ನ ಖರೀದಿಸುವ ಆಲೋಚನೆ ಮಾಡಬಹುದು. ಇಲ್ಲವಾದರೆ ಕನಿಷ್ಠ ಒಂದು ವಾರ ಕಾದು ನೋಡುವುದು ಸೂಕ್ತ. ಸದ್ಯದ ಸ್ಥಿತಿಯಲ್ಲಿ ಬೆಲೆಯು ಯಾವ ದಿಕ್ಕಿನಲ್ಲಿ ಸಾಗಲಿದೆ ಎಂಬುದನ್ನು ಖಚಿತವಾಗಿ ಹೇಳುವುದು ಕಷ್ಟ. ಕದನ ವಿರಾಮದ ಕುರಿತು ರಷ್ಯಾ–ಉಕ್ರೇನ್ ಮಧ್ಯೆ ಮಾತುಕತೆ ಆರಂಭ ಆಗಿರುವ ಕಾರಣ ಕೆಲವು ದಿನಗಳಿಂದ ಚಿನ್ನದ ದರ ತುಸು ಇಳಿಮುಖವಾಗಿದೆ. ಒಂದೊಮ್ಮೆ ಕದನ ವಿರಾಮ ಘೋಷಣೆ ಆದರೆ ಚಿನ್ನದ ದರವು ಇನ್ನಷ್ಟು ಇಳಿಕೆ ಆಗಲಿದೆ. ಇಲ್ಲವಾದರೆ ಒಂದು ಗ್ರಾಂಗೆ ಕನಿಷ್ಠ ₹300ರವರೆಗೂ ಏರಿಕೆ ಆಗಬಹುದು. ದೀರ್ಘಾವಧಿ ಹೂಡಿಕೆಗೆ ಚಿನ್ನವು ಸುರಕ್ಷಿತವೇ ಆಗಿದೆ' ಎಂದು ಬೆಂಗಳೂರು ಚಿನ್ನಾಭರಣ ವರ್ತಕರ ಸಂಘದ ಅಧ್ಯಕ್ಷ ವಿದ್ಯಾಸಾಗರ್ ಮಾಹಿತಿ ನೀಡಿದರು.

ವಿದ್ಯಾಸಾಗರ್

'ಜಾಗತಿಕ ಅಸ್ಥಿರತೆಯ ಸಂದರ್ಭಗಳಲ್ಲಿ ಈಕ್ವಿಟಿಯಲ್ಲಿನ ಹೂಡಿಕೆಯಿಂದ ಒಂದಿಷ್ಟು ನಷ್ಟ ಆಗುವ ಸಾಧ್ಯತೆ ಇರುತ್ತದೆ. ಆದರೆ, ಇಂತಹ ಅಸ್ಥಿರ ಸಂದರ್ಭಗಳಲ್ಲಿ ಚಿನ್ನದ ಮೇಲಿನ ಹೂಡಿಕೆಯಿಂದ ಗಳಿಕೆ ಹೆಚ್ಚಾಗುತ್ತದೆ. ಆದರೆ, ಇಂಥದ್ದೇ ಅವಧಿಯಲ್ಲಿ ಚಿನ್ನ ಖರೀದಿಸಿ ಎಂದು ಹೇಳುವುದು ಕಷ್ಟ. ಹೀಗಾಗಿ ದೀರ್ಘಾವಧಿಯ ಹೂಡಿಕೆಯಲ್ಲಿ ಶೇ 5ರಿಂದ ಶೇ 15ರಷ್ಟು ಚಿನ್ನಕ್ಕೆ ಮೀಸಲಿಡುವುದು ಹೆಚ್ಚು ಸೂಕ್ತ' ಎಂದು ಪ್ರೈಮ್ ಇನ್‌ವೆಸ್ಟರ್ಸ್ ಡಾಟ್ ಇನ್ ಸಂಸ್ಥೆಯ ಸಹಸ್ಥಾಪಕಿ ವಿದ್ಯಾ ಬಾಲಾ ತಿಳಿಸಿದರು.

'ರಿಟೇಲ್ ಬೇಡಿಕೆ ಹೆಚ್ಚುವ ನಿರೀಕ್ಷೆ'

ಸೋಮಸುಂದರಂ

'ಅಲ್ಪಾವಧಿಗೆ, ಹಣದುಬ್ಬರ ಮತ್ತು ಚಿನ್ನದ ದರದಲ್ಲಿ ಆಗುವ ಬದಲಾವಣೆಯು ಚಿನ್ನದ ಬೇಡಿಕೆಯ ಪ್ರಮಾಣವನ್ನು ನಿರ್ಧರಿಸುತ್ತದೆ. ದೀರ್ಘಾವಧಿಯಲ್ಲಿ, ಜನರ ಆದಾಯ ಮಟ್ಟವು ಬೇಡಿಕೆಯ ಮೇಲೆ ಪ್ರಭಾವ ಬೀರುತ್ತದೆ. ಹಣದುಬ್ಬರದಲ್ಲಿ ಶೇಕಡ 1ರಷ್ಟು ಹೆಚ್ಚಳ ಆದರೆ ಬೇಡಿಕೆಯು ಶೇ 2.6ರಷ್ಟು ಹೆಚ್ಚಾಗುತ್ತದೆ. ಚಿನ್ನದ ಬೆಲೆ ಶೇ 1ರಷ್ಟು ಇಳಿಕೆ ಕಂಡರೆ ಬೇಡಿಕೆಯು ಶೇ 1.2ರಷ್ಟು ಹೆಚ್ಚಳ ಆಗುತ್ತದೆ' ಎಂದು ವಿಶ್ವ ಚಿನ್ನ ಸಮಿತಿಯ (ಡಬ್ಲ್ಯುಜಿಸಿ) ಭಾರತದ ಪ್ರಾದೇಶಿಕ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಪಿ.ಆರ್. ಸೋಮಸುಂದರಂ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಹಬ್ಬದ ಋತು, ಅಕ್ಷಯ ತೃತೀಯಾ ಇನ್ನಷ್ಟೇ ಬರಲಿವೆ. ಆಗ ಚಿನ್ನದ ರಿಟೇಲ್ ಬೇಡಿಕೆಯು ಹೆಚ್ಚಾಗುವ ನಿರೀಕ್ಷೆ ಇದೆ. ಮಾರುಕಟ್ಟೆಯಲ್ಲಿನ ಅಸ್ಥಿರತೆ ಮತ್ತು ಹಣದುಬ್ಬರದ ಆತಂಕದಿಂದಾಗಿ ಜನ ಹೆಚ್ಚು ಚಿನ್ನ ಖರೀದಿಸುವ ಸಾಧ್ಯತೆಳು ಹೆಚ್ಚಿವೆ ಎಂದರು.

ಜಿಡಿಪಿ ಅಂದಾಜು ತಗ್ಗಿಸಿದ ಮಾರ್ಗನ್ ಸ್ಟ್ಯಾನ್ಲಿ

ನವದೆಹಲಿ (ಪಿಟಿಐ): ಕಚ್ಚಾ ತೈಲ ಬೆಲೆಯು ದುಬಾರಿ ಆಗಿರುವುದು ವಿಶ್ವದಾದ್ಯಂತ ಆರ್ಥಿಕ ಚೇತರಿಕೆಗೆ ಅಡ್ಡಿಯಾಗಿರುವ ನಡುವೆ, ಮಾರ್ಗನ್ ಸ್ಟ್ಯಾನ್ಲಿ ಸಂಸ್ಥೆಯು ಭಾರತದ 2022–23ನೇ ಸಾಲಿನ ಆರ್ಥಿಕ ಬೆಳವಣಿಗೆ ಅಂದಾಜು ದರವನ್ನು ಶೇಕಡ 7.9ಕ್ಕೆ ತಗ್ಗಿಸಿದೆ.

ಅಲ್ಲದೆ, ದೇಶದಲ್ಲಿ ಚಿಲ್ಲರೆ ಹಣದುಬ್ಬರ ದರವು ಶೇ 6ರಷ್ಟು ಇರಲಿದೆ, ದೇಶದ ಚಾಲ್ತಿ ಖಾತೆ ಕೊರತೆ ಪ್ರಮಾಣವು ಜಿಡಿಪಿಯ ಶೇ 3ರಷ್ಟು ಇರಲಿದೆ ಎಂದು ಅಂದಾಜು ಮಾಡಿದೆ.

ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿಯು ಜೂನ್‌ನಲ್ಲಿ ರೆಪೊ ದರವನ್ನು ಹೆಚ್ಚಳ ಮಾಡಬಹುದು ಎಂದು ಮಾರ್ಗನ್ ಸ್ಟ್ಯಾನ್ಲಿ ನಿರೀಕ್ಷೆ ಹೊಂದಿದೆ. ಏಪ್ರಿಲ್‌ನಲ್ಲಿ ಆರ್‌ಬಿಐ ರಿವರ್ಸ್ ರೆಪೊ ದರವನ್ನು ಹೆಚ್ಚಿಸಬಹುದು ಎಂದು ಅಂದಾಜಿಸಿದೆ.

ರಿಲಯನ್ಸ್ ಕ್ಯಾಪಿಟಲ್ ಖರೀದಿಗೆ ಅದಾನಿ, ಕೆಕೆಆರ್ ಆಸಕ್ತಿ

ನವದೆಹಲಿ (ಪಿಟಿಐ): ಸಾಲದ ಸುಳಿಗೆ ಸಿಲುಕಿರುವ ರಿಲಯನ್ಸ್ ಕ್ಯಾಪಿಟಲ್ ಲಿಮಿಟೆಡ್ ಅನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು ಅದಾನಿ ಫಿನ್‌ಸರ್ವ್, ಕೆಕೆಆರ್, ಪಿರಾಮಲ್ ಫೈನಾನ್ಸ್ ಸೇರಿದಂತೆ ಒಟ್ಟು 14 ಕಂಪನಿಗಳು ಆಸಕ್ತಿ ತೋರಿಸಿವೆ.

ಕಂಪನಿಯನ್ನು ಖರೀದಿಸಲು ಆಸಕ್ತಿ ತಿಳಿಸುವ ಬಗ್ಗೆ ಈ ಹಿಂದೆ ಮಾರ್ಚ್ 11ರ ಗಡುವು ನೀಡಲಾಗಿತ್ತು. ಬಳಿಕ ಅದನ್ನು ಮಾರ್ಚ್ 25ರವರೆಗೆ ವಿಸ್ತರಣೆ ಮಾಡಲಾಗಿದೆ. ಆಡಳಿತಾತ್ಮಕ ವೈಫಲ್ಯ ಮತ್ತು ಸಾಲ ಮರುಪಾವತಿಸದ ಕಾರಣಕ್ಕಾಗಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಕಳೆದ ವರ್ಷದ ನವೆಂಬರ್ 29ರಂದು ರಿಲಯನ್ಸ್ ಕ್ಯಾಪಿಟಲ್‌ನ ಆಡಳಿತ ಮಂಡಳಿಯನ್ನು ಅಮಾನತು ಮಾಡಿದೆ.

ಬಜೆಟ್ ಅಧಿವೇಶನ ಇಂದು ಪುನರಾರಂಭ

ನವದೆಹಲಿ (ಪಿಟಿಐ): ಸಂಸತ್ತಿನ ಬಜೆಟ್ ಅಧಿವೇಶನದ ಎರಡನೇ ಭಾಗವು ಸೋಮವಾರದಿಂದ ಆರಂಭವಾಗಲಿದ್ದು, ನಿರುದ್ಯೋಗ, ಇಪಿಎಫ್ ಬಡ್ಡಿದರ ಕಡಿತ, ಉಕ್ರೇನ್‌ನಿಂದ ಭಾರತೀಯರ ತೆರವು ಮೊದಲಾದ ವಿಷಯಗಳ ಕುರಿತು ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳಲು ಪ್ರತಿಪಕ್ಷಗಳು ಸಜ್ಜಾಗಿವೆ. ಬಜೆಟ್‌ಗೆ ಅನುಮೋದನೆ ಪಡೆದ ಬಳಿಕ ಏಪ್ರಿಲ್ 8ರಂದು ಅಧಿವೇಶನ ಮುಕ್ತಾಯವಾಗಲಿದೆ.

ಕೇಂದ್ರಾಡಳಿತ ಪ್ರದೇಶ ಜಮ್ಮು ಕಾಶ್ಮೀರದ ಬಜೆಟ್‌ಗೆ ಅನುಮೋದನೆ ಪಡೆಯಲು ಸರ್ಕಾರ ಉದ್ದೇಶಿಸಿದೆ. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಜಮ್ಮು ಕಾಶ್ಮೀರದ ಆಯವ್ಯಯವನ್ನು ಸೋಮವಾರ ಲೋಕಸಭೆಯಲ್ಲಿ ಮಂಡಿಸಲಿದ್ದಾರೆ. ಸಂವಿಧಾನ (ಪರಿಶಿಷ್ಟ ಪಂಗಡಗಳು) ಆದೇಶ (ತಿದ್ದುಪಡಿ) ಮಸೂದೆಯನ್ನು ಮಂಡಿಸಲು ಸರ್ಕಾರ ಉದ್ದೇಶಿಸಿದೆ.

ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ರಷ್ಯಾ–ಉಕ್ರೇನ್ ಯುದ್ಧದಲ್ಲಿ ಭಾರತ ತೆಗೆದುಕೊಂಡ ನಿಲುವಿನ ಬಗ್ಗೆ ಸದನಕ್ಕೆ ಮಾಹಿತಿ ನೀಡುವ ಸಾಧ್ಯತೆಯಿದೆ.

ಮಥುರಾ: ಮಸೀದಿ ತೆರವು ಕೋರಿ ಅರ್ಜಿ ಅಂಗೀಕಾರ

ಅಲಹಾಬಾದ್ (ಪಿಟಿಐ): 'ಮಥುರಾದಲ್ಲಿ ಕೃಷ್ಣನ ಜನ್ಮಸ್ಥಳದಲ್ಲಿ ನಿರ್ಮಿಸಲಾಗಿರುವ ಶಾಹಿ ಈದ್ಗಾ ಮಸೀದಿ ತೆರವುಗೊಳಿಸಬೇಕು' ಎಂದು ಕೋರಿ ಸಲ್ಲಿಸಲಾಗಿದ್ದ ಅರ್ಜಿಯನ್ನು ಅಲಹಾಬಾದ್ ಹೈಕೋರ್ಟ್ ವಿಚಾರಣೆಗೆ ಮಾನ್ಯ ಮಾಡಿದೆ.

ಅರ್ಜಿದಾರರು ವಕೀಲರ ಮೂಲಕ ಹಾಜರಾಗದೇ, ವ್ಯಕ್ತಿಗತವಾಗಿ ಹಾಜರಾಗಿದ್ದಾರೆ ಎಂಬ ಕಾರಣ ನೀಡಿ ಈ ಹಿಂದೆ ಮೂಲ ಅರ್ಜಿಯನ್ನು 2021ರ ಜನವರಿ 19ರಂದು ವಜಾ ಮಾಡಲಾಗಿತ್ತು. ಹಿಂದೆಯೇ, ಮರುಸ್ಥಾಪನೆ ಕೋರಿದ್ದ ಅರ್ಜಿ ಸಲ್ಲಿಸಲಾಗಿತ್ತು.

ಮುಖ್ಯ ನ್ಯಾಯಮೂರ್ತಿ ರಾಜೇಶ್ ಬಿಂದಾಲ್ ಮತ್ತು ನ್ಯಾಯಮೂರ್ತಿ ಪ್ರಕಾಶ್ ಪಾಡಿಯಾ ಅವರಿದ್ದ ವಿಭಾಗೀಯ ಪೀಠವು, 'ವಿಳಂಬವಿಲ್ಲದೇ ಮತ್ತೆ ಅರ್ಜಿ ಸಲ್ಲಿಸಿದ್ದರಿಂದ ವಿಚಾರಣೆಗೆ ಮಾನ್ಯ ಮಾಡಲಾಗಿದೆ' ಎಂದು ಫೆ.17ರಂದು ನೀಡಲಾದ ಆದೇಶದಲ್ಲಿ ತಿಳಿಸಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ್, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಡಿಪ್ಲೊಮಾದವರು 16,600- 62000/- (ಮನೆಯಲ್ಲಿಯೇಕೆಲಸ) ವಸತಿಯೂಟದೊಂದಿಗೆ 9035363706, 9035364696

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂನರ್ಸ್‌ಗಳು, ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. 10,000-15,000. 8951315839, 9880545002 .

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8139955155/ 8139988588

ಕಂಪನಿಗಳಿಗೆ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, TVS, ಬ್ರಿಟಾನಿಯಾಗಳಿಗೆ SSLC, PUC, Degree ಯವರು ITIನವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,100-56,000/- ವಸತಿಯೂಟದೊಂದಿಗೆ. 7899778278, 9611715755

Call Centre

URGENT OPENING Tele Caller Jobs@ Ramamurthy Nagar with (Good Salary + Incentive) Contact- 08068415961.

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000/- ವರೆಗೆ ಸಂಪಾದಿಸಿ.(ಕೊರಿಯರ್ ಯಿದೆ). 8884686861, 8884686860.

ಮನೆಯಿಂದಲೆ ಅಣಬೆ ಬೇಸಾಯ, ಕಡಿಮೆ ಜಾಗ ಹಾಗೂ ಕಡಿಮೆ ಖರ್ಚಿನಲ್ಲಿಯೇ ಮನೆಯಿಂದಲೇ ತಿಂಗಳಿಗೆ 20,000ಕ್ಕು ಹೆಚ್ಚು ಸಂಪಾದಿಸಿ. 8431781442/ 8095555516

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

WANTED Delivery Executive! Earn Upto 35000 / Month . Joining Bonus 5000/ - and 3000* Referral Bonus . Call Now : 080 - 46805961

ಬೆಂಗಳೂರಿನ ದೇವಸ್ಥಾನದಲ್ಲಿ ಕೆಲಸ ಮಾಡಲು ವೇದ ಮಂತ್ರಗಳನ್ನು ಅರಿತಿರುವ ಬ್ರಾಹ್ಮಣ ಸಹಾಯಕ ಅರ್ಚಕರು ಬೇಕಾಗಿದ್ದಾರೆ. ಸಂಪರ್ಕಿಸಿ: 7019132200, 080 -25300714

ಪ್ರವಾಸ

Travel

★17.04.2022 10ದಿನಗಳು★ ಆಗ್ರಾ, ಮಥುರಾ, ಅಲಹಾಬಾದ್, ಗಯಾ,ಕಾಶಿ,ಸೀತಾಮಡಿ, ವಿಂದ್ಯಾಚಲಂ ಪ್ರವಾಸ. ರೂ.13,500 ಒಬ್ಬರಿಗೆ. ಆರ್.ಗಾಂಧಿ ಟೂರ್ಸ್. 9945445809/ 9902433500

27.04.2022ರಿಂದ ರೈಲು/ಏಸಿ ಬಸ್ಸಿನಲ್ಲಿ 35/22ದಿನಗಳ 'ಚಾರೋಧಾಮ್'ಸಮೇತ ವೈಷ್ಣೋದೇವಿ, ಕೋಲ್ಕತ್ತಾ, ಪುರಿ,ಅಮೃತಸರ್,ಕಾಶಿ, ಗಯಾ,ಹರಿದ್ವಾರ್. 28.05.2022ರಿಂದ ವಿಮಾನ/ಬಸ್ಸಿನಲ್ಲಿ 13ದಿನಗಳ 'ಚಾರೋಧಾಮ್',ಮಸ್ಸೂರಿ, ಗುಪ್ತಕಾಶಿ,ನವದೆಹಲಿ, ಹರಿದ್ವಾರ್. ಜೂನ್/ಜುಲೈ ತಿಂಗಳಲ್ಲಿ ಅಮರನಾಥ್ ಸಮೇತ,ಕಾಶ್ಮೀರ್,ವೈಷ್ಣೋದೇವಿ, ಅಮೃತಸರ್, ಕುರುಕ್ಷೇತ್ರ,ಹರಿದ್ವಾರ್ 19ದಿನಗಳು. ವಿವರಗಳಿಗೆ: ಏಷ್ಯನ್ ಟ್ರಾವೆಲ್ ಲೈನ್ಸ್,#164, ಆರ್.ವಿ.ರಸ್ತೆ (ಮಿನರ್ವ ಬಸ್ ಸ್ಟಾಪ್ ಎದುರು)ಬೆಂಗಳೂರು4. ಫೋನ್:8105657052, 9480182865. 08026565085.

27.04.2022, 06.05.2022, 22.05.2022 ರಿಂದ 14/20/26 ದಿನಗಳ ಪೂರಿಜಗನ್ನಾಥ್, ಗಯಾ,ಕಾಶಿ,ಪ್ರಯಾಗ, ನೈಮಿಶಾರಣ್ಯ, ಅಯೋಧ್ಯ, ಬದರಿನಾಥ್, ಕೇದಾರನಾಥ್, ಗಂಗೋತ್ರಿ, ಯುಮುನೋತ್ರಿ, ದೆಹಲಿ,ಅಮೃತ್‌ಸರ್, ವೈಷ್ಣೋದೇವಿ/ ಹಾಗು ಜುಲೈ, ಅಗಸ್ಟ್ ಸೆಪ್ಟಂಬರ್ ತಿಂಗಳಲ್ಲಿ ಅಮರನಾಥ್‌ಯಾತ್ರೆ/ ಮುಕ್ತಿನಾಥ್, ಗ್ಯಾಂಗ್‌ಟಾಕ್, ಡಾರ್ಜಲಿಂಗ್ ಪ್ರವಾಸಗಳನ್ನು ಏರ್ಪಡಿಸಲಾಗುತ್ತದೆ 'ಶ್ರೀಸುಧಾ ಟ್ರಾವಲ್ಸ್' 080-22429289, 9448119290, 9019301300

ಚಾರ್‌ಧಾಮ್‌ಯಾತ್ರೆ. 08.05.2022, 24.05.2022 ರಿಂದ ವಿಮಾನದಲ್ಲಿ 15ದಿನಗಳು ಬದರಿನಾಥ್, ಕೇದಾರನಾಥ್, ಯಮುನೋತ್ರಿ, ಗಂಗೋತ್ರಿ,ದೆಹಲಿ. ಇತ್ಯಾದಿ. ಅಮರನಾಥ್‌ಯಾತ್ರೆ 22.06.2022 ರಿಂದ ವಿಮಾನ/A/C ಬಸ್ಸಿನಲ್ಲಿ 14/18ದಿನಗಳು. ಊಟ,ವಸತಿಯೊಂದಿಗೆ ಸಂಪರ್ಕಿಸಿ: ಜೈರಾಮ್ ಟೂರ್ಸ್ ವಿ.ವಿ.ಪುರಂ, ಬೆಂಗಳೂರು-4. 9342514289, 9686721196

ವ್ಯಾಪಾರ

Business to Business

Business

★ಮೇಣದಬತ್ತಿ ತಯಾರಿಸಲು★ ತರಬೇತಿ ನೀಡುತ್ತೇವೆ. ಹಾಗೂ ತಯಾರಿಸಿದ ಮೇಣದಬತ್ತಿ ಕೊಂಡುಕೊಳ್ಳುತ್ತೇವೆ. ತರಬೇತಿ, ಸದಸ್ಯತ್ವಕ್ಕಾಗಿ ಬೆಂಗಳೂರು: 9060476868/ 8792252077, ಶಿವಮೊಗ್ಗ:9008013895

ಭವಿಷ್ಯ

Astrology

★||ವಶೀಕರಣ ಸ್ಪೆಷಲಿಸ್ಟ್||★ ಇಷ್ಟಪಟ್ಟವರು ನಿಮ್ಮಂತೆ ಆಗಲು ನೋಡುವ ಮೂಲಕ, ಮಾತನಾಡುವ ಮೂಲಕ, ಹೆಸರಿನ ಮೂಲಕ ಸ್ತ್ರೀವಶೀಕರಣ 27ನಿಮಿಷಗಳಲ್ಲಿ ಶಾಶ್ವತ ಪರಿಹಾರ. 9900511008''

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

ಪಂಡಿತ್ ಕಾಳಿ ಪ್ರಸಾದ್ ಕೊಳ್ಳೇಗಾಲದ ಪ್ರಖ್ಯಾತ ಜ್ಯೋತಿಷ್ಯರು ಕೊಳ್ಳೇಗಾಲಕ್ಕೆ ಬಂದು ನೇರ ಭೇಟಿಗೆ ಸದಾ ಅವಕಾಶ ನಿಮ್ಮ ಸರ್ವ ಸಮಸ್ಯೆಗೆ ಪರಿಹಾರ ಮಾಟ ಮಂತ್ರ ಸ್ತ್ರೀ ಪುರುಷ ಗುಪ್ತ ಸಮಸ್ಯೆ ಶತ್ರು ಕಾಟ ವಿವಾಹ ವಿಳಂಬಕ್ಕೆ ಕಚಿತ ಪರಿಹಾರ ಸರ್ವ ವಶೀಕರಣ ಸ್ಪೆಷಲಿಸ್ಟ್. 7338244377

||ಯಲ್ಲಮ್ಮ ದೇವಿ ಜ್ಯೋತಿಷ್ಯ ಪೀಠಂ||ವಶೀಕರಣ ಸ್ಪೆಷಲಿಸ್ಟ್ ಕೊಳ್ಳೆಗಾಲದ ಪ್ರಖ್ಯಾತ ದೈವಾಂಶ ಮೋಡಿಮಾಂತ್ರಿಕರು ಇಷ್ಟಪಟ್ಟವರು ನಿಮ್ಮಂತಾಗಲು ನಿಮ್ಮ ಸಕಲಸಮಸ್ಯೆಗಳಿಗೆ ಪರಿಹಾರ.*ಅಸಾಧ್ಯವಾದದ್ದು ಇಲ್ಲಿ ಸಾಧ್ಯ*.9535883556

★ನಂ.1 ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್* ನಿಮ್ಮ ಯಾವುದೇ ಸಮಸ್ಯೆಗಳಿದ್ದರು ಶ್ರೀಕ್ಷೇತ್ರದಿಂದ ಪಂಡಿತ್.ದೇವೇಂದ್ರಭಟ್‌ಅವರಿಂದ ನೇರಪರಿಹಾರ ಒಮ್ಮೆ ಕರೆಮಾಡಿ ನಿಮ್ಮ ಜೀವನ ಬದಲಾಯಿಸಿಕೊಳ್ಳಿ. 9845333808

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA
CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	60	85	70	115

CD Per Sqcm	Single Col	Double Col	Multi Col
	430	450	475

SPECIAL OFFER					
PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
condition apply*
dhclassifieds@deccanherald.co.in www.dhclassifieds.com

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಎಸ್‌ಪಿಗೆ ಮಾಯಾ, ಒವೈಸಿ ತೊಡಕು

ಮತ ವಿಭಜಿಸಿದ ಬಿಎಸ್‌ಪಿ, ಎಐಎಂಐಎಂ; ಎಸ್‌ಪಿ ಅಭ್ಯರ್ಥಿಗಳಿಗೆ ಅಲ್ಪ ಮತಗಳ ಅಂತರದಿಂದ ಸೋಲು

ಪ್ರಜಾವಾಣಿ ವಾರ್ತೆ

ಲಖನೌ: ಮಾಯಾವತಿ ನೇತೃತ್ವದ ಬಿಎಸ್‌ಪಿಗೆ ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಒಂದು ಕ್ಷೇತ್ರದಲ್ಲಷ್ಟೇ ಗೆಲ್ಲಲು ಸಾಧ್ಯವಾಗಿದೆ. ಅಸಾದುದ್ದೀನ್ ಒವೈಸಿ ಅವರ ಎಐಎಂಐಎಂ ಪಕ್ಷವು ಖಾತೆ ತೆರೆಯಲು ವಿಫಲವಾಯಿತು. ಆದರೆ ಈ ಎರಡೂ ಪಕ್ಷಗಳು ಸಮಾಜವಾದಿ ಪಕ್ಷಕ್ಕೆ (ಎಸ್‌ಪಿ) ತೀವ್ರ ಪೆಟ್ಟು ನೀಡುವಲ್ಲಿ ಸಫಲವಾದವು.

100 ಕ್ಷೇತ್ರಗಳಲ್ಲಿ ಸ್ಪರ್ಧಿಸಿ ಶೇ 1ಕ್ಕಿಂತ ಕಡಿಮೆ ಮತಗಳನ್ನು ಪಡೆಯಲಷ್ಟೇ ಶಕ್ತವಾದ ಎಐಎಂಐಎಂ ಪಕ್ಷದ ಅಭ್ಯರ್ಥಿಗಳು 10ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಸಮಾಜವಾದಿ ಪಕ್ಷದ ಗೆಲುವಿಗೆ ಮುಳುವಾದರು. ಒಬ್ಬ ಅಭ್ಯರ್ಥಿಯನ್ನು ಹೊರತುಪಡಿಸಿ ಪಕ್ಷದ ಎಲ್ಲ ಅಭ್ಯರ್ಥಿಗಳು ಠೇವಣಿ ಕಳೆದುಕೊಂಡಿದ್ದಾರೆ.

ಒವೈಸಿ

ಬಿಜ್ನೋರ್, ನಕುಡ್, ಕುರ್ಸಿ, ಶಾಹ್‌ಗಂಜ್, ಸುಲ್ತಾನ್‌ಪುರ, ಔರಾಯಿ ಮತ್ತು ಮೊರಾದಾಬಾದ್‌ನಂತಹ ಮುಸ್ಲಿಂ ಪ್ರಾಬಲ್ಯದ ಕ್ಷೇತ್ರಗಳಲ್ಲಿ ಎಸ್‌ಪಿ ಅಭ್ಯರ್ಥಿಗಳು ಪರಾಭವಗೊಂಡಿದ್ದಾರೆ. 217ರಿಂದ 1,700 ಮತಗಳ ಅಂತರದಲ್ಲಿ ಎಸ್‌ಪಿ ಅಭ್ಯರ್ಥಿಗಳು ಸೋಲಿನ ಕಹಿ ಉಂಡಿದ್ದಾರೆ.

ಕುರ್ಸಿ ವಿಧಾನಸಭಾ ಕ್ಷೇತ್ರದಲ್ಲಿ ಎಐಎಂಐಎಂ ಅಭ್ಯರ್ಥಿಯು 8,000 ಮತಗಳನ್ನು ಪಡೆದಿದ್ದಾರೆ. ಆದರೆ ಇದೇ ಕ್ಷೇತ್ರದಿಂದ ಸ್ಪರ್ಧಿಸಿದ್ದ ಎಸ್‌ಪಿ ಅಭ್ಯರ್ಥಿಯು 217 ಮತಗಳ ಅಂತರದಿಂದ ಪರಾಭವಗೊಂಡಿದ್ದಾರೆ. ಇದೇ ರೀತಿ ಶಾಹ್‌ಗಂಜ್ ಕ್ಷೇತ್ರದಲ್ಲಿ ಒವೈಸಿ ಪಕ್ಷದ ಅಭ್ಯರ್ಥಿಯು ಎಂಟು ಸಾವಿರ ಮತಗಳನ್ನು ಪಡೆದಿದ್ದಾರೆ. ಈ ಕ್ಷೇತ್ರದಿಂದ ಸ್ಪರ್ಧಿಸಿದ್ದ ಎಸ್‌ಪಿ ಅಭ್ಯರ್ಥಿಯು 468 ಮತಗಳ ಕೊರತೆಯಿಂದ ತಮ್ಮ ಸೋಲೊಪ್ಪಿಕೊಂಡಿದ್ದಾರೆ.

ನಕುಡ್ ವಿಧಾನಸಭಾ ಕ್ಷೇತ್ರದಲ್ಲಿ ಎಸ್‌ಪಿ ಅಭ್ಯರ್ಥಿ ಧರಮ್ ಸಿಂಗ್ ಸೈನಿ ಅವರನ್ನು ಬಿಜೆಪಿ ಅಭ್ಯರ್ಥಿಯು ಕೇವಲ 315 ಮತಗಳಿಂದ ಸೋಲಿಸಿದ್ದಾರೆ. ಈ ಕ್ಷೇತ್ರದಿಂದ ಕಣಕ್ಕಿಳಿದಿದ್ದ ಎಐಎಂಐಎಂ ಪಕ್ಷದ ಅಭ್ಯರ್ಥಿ 3,000ಕ್ಕಿಂತ ಹೆಚ್ಚು ಮತಗಳನ್ನು ಪಡೆದಿದ್ದಾರೆ. ಹಾಗೆಯೇ ಸುಲ್ತಾನ್‌ಪುರ ಕ್ಷೇತ್ರದ ಎಸ್‌ಪಿ ಅಭ್ಯರ್ಥಿಯು ಸಾವಿರ ಮತಗಳಿಂದ ಸೋತಿದ್ದಾರೆ. ಇಲ್ಲಿ ಸ್ಪರ್ಧಿಸಿದ್ದ ಎಐಎಐಎಂ ಪಕ್ಷದ ಮುಸ್ಲಿಂ ಅಭ್ಯರ್ಥಿ 5,000ಕ್ಕಿಂತ ಹೆಚ್ಚು ಮತಗಳನ್ನು ಪಡೆದಿದ್ದಾರೆ.

ಮುಸ್ಲಿಂ ಪ್ರಾಬಲ್ಯದ ಫಿರೋಜಾಬಾದ್ ಕ್ಷೇತ್ರದಲ್ಲಿ ಬಿಎಸ್‌ಪಿ ಅಭ್ಯರ್ಥಿಯು 38,000 ಮತಗಳನ್ನು ಪಡೆದಿದ್ದರು. ಇಲ್ಲಿ ಬಿಜೆಪಿ ಅಭ್ಯರ್ಥಿಯು 33,000 ಮತಗಳ ಅಂತರದಿಂದ ಗೆದ್ದರು. ಕಾಂಗ್ರೆಸ್ ಐದು ಸಾವಿರ ಮತಗಳನ್ನು ಪಡೆಯಿತು. ಸಮಾಜವಾದಿ ಪಕ್ಷದ ಅಭ್ಯರ್ಥಿಯು ಎರಡನೇ ಸ್ಥಾನಕ್ಕೆ ತೃಪ್ತಿಪಡಬೇಕಾಯಿತು.

ಬಿಜೆಪಿ ಹಾದಿ ಸುಗಮ

ಮಾಯಾವತಿ

ಮಾಯಾವತಿ ಅವರ ಬಹುಜನ ಸಮಾಜ ಪಕ್ಷವು ರಾಜ್ಯದ 91 ವಿಧಾನಸಭಾ ಕ್ಷೇತ್ರಗಳಲ್ಲಿ ಮುಸ್ಲಿಂ ಅಭ್ಯರ್ಥಿಗಳನ್ನು ಕಣಕ್ಕಿಳಿಸಿತ್ತು. ಇವರಲ್ಲಿ ಬಹುತೇಕ ಅಭ್ಯರ್ಥಿಗಳು ಮುಸ್ಲಿಂ ಮತಗಳನ್ನು ವಿಭಜಿಸಿದ್ದರಿಂದ ಬಿಜೆಪಿ ಗೆಲುವಿನ ದಾರಿ ಸುಗಮವಾಯಿತು.

122 ಕ್ಷೇತ್ರಗಳಲ್ಲಿ ಎಸ್‌ಪಿ ಅಭ್ಯರ್ಥಿಗಳು ಪ್ರತಿನಿಧಿಸುವ ಸಮುದಾಯದ ಅಭ್ಯರ್ಥಿಗಳನ್ನೇ ಬಿಎಸ್‌ಪಿ ಸಹ ಕಣಕ್ಕಿಳಿಸಿದ್ದರಿಂದ ಬಿಜೆಪಿಯು 68 ಕ್ಷೇತ್ರಗಳನ್ನು ತನ್ನ ಬುಟ್ಟಿಗೆ ಹಾಕಿಕೊಳ್ಳುವಲ್ಲಿ ಯಶಸ್ವಿಯಾಯಿತು.

ಉತ್ತರ ಪ್ರದೇಶದಲ್ಲಿ ಮಹಿಳಾ ಪ್ರತಿನಿಧಿಗಳು ಹೆಚ್ಚಳ

ವಿಧಾನಸಭೆಯಲ್ಲಿ ಹಿರಿಯರ ಸಂಖ್ಯೆ ಏರಿಕೆ

ನವದೆಹಲಿ (ಪಿಟಿಐ): ಉತ್ತರ ಪ್ರದೇಶ, ಉತ್ತರಾಖಂಡ ಹಾಗೂ ಮಣಿಪುರ ವಿಧಾನಸಭಾ ಚುನಾವಣೆಯಲ್ಲಿ ಆಯ್ಕೆಯಾದವರಲ್ಲಿ 55 ವರ್ಷ ಹಾಗೂ ಅದಕ್ಕೂ ಮೇಲ್ಪಟ್ಟ ವಯಸ್ಸಿನ ಶಾಸಕರ ಸಂಖ್ಯೆ ಹೆಚ್ಚಳವಾಗಿದೆ. ಪಿಆರ್‌ಎಸ್ ವಿಶ್ಲೇಷಣೆ ಪ್ರಕಾರ, 55 ವರ್ಷಕ್ಕಿಂತ ಕಡಿಮೆ ವಯಸ್ಸಿನ ಶಾಸಕರ ಪ್ರಮಾಣ ಶೇ 64.7ರಿಂದ (2017) ಶೇ 59.5ಕ್ಕೆ ಇಳಿಕೆಯಾಗಿದೆ.

ಉತ್ತರಾಖಂಡ ವಿಧಾನಸಭೆಗೆ ಆಯ್ಕೆಯಾದ 55 ವರ್ಷದೊಳಗಿನ ಶಾಸಕರ ಪ್ರಮಾಣವು ಶೇ 61ರಿಂದ ಶೇ 51ಕ್ಕೆ ಇಳಿಕೆಯಾಗಿದೆ. ಮಣಿಪುರದಲ್ಲಿ ಈ ವಯೋಮಾನದ ಶಾಸಕರ ಪ್ರಮಾಣವು ಶೇ 71.7ರಿಂದ ಶೇ 55ಕ್ಕೆ ಕುಸಿದಿದೆ.

ಕಳೆದ ಅವಧಿಗೆ ಹೋಲಿಸಿದರೆ, ಈ ಬಾರಿ ಮೂರು ವಿಧಾನಸಭೆಗಳಿಗೆ ನೂತನವಾಗಿ ಆಯ್ಕೆಯಾದ ಮಹಿಳೆಯರ ಸಂಖ್ಯೆ ಹೆಚ್ಚಳವಾಗಿದೆ. ಉತ್ತರ ಪ್ರದೇಶದಲ್ಲಿ ಈ ಬಾರಿ 47 ಶಾಸಕಿಯರು ಗೆದ್ದು ಬಂದಿದ್ದಾರೆ. ಕಳೆದ ಬಾರಿ ಇವರ ಸಂಖ್ಯೆ 42 ಇತ್ತು. ಮಣಿಪುರದಲ್ಲಿಯೂ ಶಾಸಕಿಯರ ಸಂಖ್ಯೆ ದುಪ್ಪಟ್ಟಾಗಿದೆ. ಐದು ವರ್ಷಗಳ ಹಿಂದೆ ಇಬ್ಬರು ಶಾಸಕಿಯರು ವಿಧಾನಸಭೆಗೆ ಆರಿಸಿ ಬಂದಿದ್ದರು.

ಉತ್ತರ ಪ್ರದೇಶದಲ್ಲಿ ಪದವಿ ವಿದ್ಯಾರ್ಹತೆ ಹೊಂದಿರುವ ಶಾಸಕರ ಪ್ರಮಾಣವು ಶೇ 72.7ರಿಂದ ಶೇ 75.9ಕ್ಕೆ ಜಿಗಿದಿದೆ. ಆದರೆ, ಉತ್ತರಾಖಂಡದಲ್ಲಿ ಪದವಿ ವಿದ್ಯಾರ್ಹತೆಯ ಶಾಸಕರ ಪ್ರಮಾಣ ಶೇ 77ರಿಂದ ಶೇ 68ಕ್ಕೆ ಕುಸಿದಿದೆ. ಮಣಿಪುರದಲ್ಲಿ ಶೇ 76.6ರಷ್ಟು ಪದವೀಧರರು ಗೆದ್ದುಬಂದಿದ್ದಾರೆ. ಇವರ ಪ್ರಮಾಣ 2017ರ ಚುನಾವಣೆಯಲ್ಲಿ ಶೇ 68.4ರಷ್ಟಿತ್ತು.

ಗೋವಾದ ನೂತನ ಶಾಸಕರ ಪ್ರಮಾಣ ನಾಳೆ

ಪಣಜಿ (ಪಿಟಿಐ): ಹೊಸದಾಗಿ ಚುನಾಯಿತರಾಗಿರುವ ಗೋವಾ ಶಾಸಕರ ಪ್ರಮಾಣ ವಚನ ಸ್ವೀಕರ ಸಮಾರಂಭವನ್ನು ಮಂಗಳವಾರ (ಮಾರ್ಚ್ 15) ನಡೆಸುವುದಾಗಿ ರಾಜ್ಯಪಾಲ ಪಿ.ಎಸ್. ಶ್ರೀಧರನ್ ಪಿಳ್ಳೈ ಅವರು ತಿಳಿಸಿದ್ದಾರೆ. ಅದಕ್ಕಾಗಿ ಗೋವಾ ವಿಧಾನಸಭೆ ಅಧಿವೇಶನವನ್ನು ಅವರು ಕರೆದಿದ್ದಾರೆ.

ಶಾಸಕರಾಗಿ ಆಯ್ಕೆ ಆಗಿರುವ ಗಣೇಶ್ ಗಾಂವ್ಕರ್ ಅವರಿಗೆ ಹಂಗಾಮಿ ಸ್ಪೀಕರ್ ಆಗಿ ರಾಜ್ಯಪಾಲರು ಸೋಮವಾರ ಪ್ರಮಾಣ ವಚನ ಬೋಧಿಸಲಿದ್ದಾರೆ. ವಿಧಾನಸಭೆಯಲ್ಲಿ ಮಂಗಳವಾರ ನಡೆಯುವ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಗಣೇಶ್ ಅವರು ಇತರ ಶಾಸಕರಿಗೆ ಪ್ರಮಾಣ ವಚನ ಬೋಧಿಸಲಿದ್ದಾರೆ.

40 ಸ್ಥಾನಗಳಿಗೆ ನಡೆದಿದ್ದ ಗೋವಾ ವಿಧಾನಸಭೆ ಚುನಾವಣೆಯಲ್ಲಿ 20 ಸ್ಥಾನಗಳನ್ನು ಗೆದ್ದಿರುವ ಬಿಜೆಪಿಯು ಮೂವರು ಪಕ್ಷೇತರ ಶಾಸಕರ ಬೆಂಬಲ ಪಡೆದು ಸರ್ಕಾರ ರಚಿಸುವುದಾಗಿ ಹೇಳಿದೆ.

ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ದೆಹಲಿಯಲ್ಲಿ ಭಾನುವಾರ ಭೇಟಿ ಮಾಡಿದರು–ಪಿಟಿಐ ಚಿತ್ರ

ಮೋದಿ ಭೇಟಿಯಾದ ಯೋಗಿ

ನವದೆಹಲಿ (ಪಿಟಿಐ): ಉತ್ತರ ಪ್ರದೇಶದಲ್ಲಿ ಬಹುಮತದಿಂದ ಗೆದ್ದ ಬಳಿಕ ಮೊದಲ ಬಾರಿಗೆ ದೆಹಲಿಗೆ ಭೇಟಿ ನೀಡಿರುವ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಪ್ರಧಾನಿ ನರೇಂದ್ರ ಮೋದಿ, ಉಪರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು ಅವರನ್ನು ಭಾನುವಾರ ಭೇಟಿ ಮಾಡಿ ಮಾತುಕತೆ ನಡೆಸಿದರು.

ಯೋಗಿ ಆದಿತ್ಯನಾಥ ಅವರು ರಾಜ್ಯವನ್ನು ಮತ್ತೊಂದು ಎತ್ತರಕ್ಕೆ ಕೊಂಡೊಯ್ಯಲಿದ್ದಾರೆ ಎಂದು ಪ್ರಧಾನಿ ವಿಶ್ವಾಸ ವ್ಯಕ್ತಪಡಿಸಿದರು. 'ಉತ್ತರ ಪ್ರದೇಶದಲ್ಲಿ ಐತಿಹಾಸಿಕ ವಿಜಯ ಸಾಧಿಸಿದ ಯೋಗಿ ಅವರನ್ನು ಅಭಿನಂದಿಸಿದೆ. ಮುಂದಿನ ಐದು ವರ್ಷಗಳಲ್ಲಿ ರಾಜ್ಯದ ಜನರ ಆಶೋತ್ತರಗಳನ್ನು ಈಡೇರಿಸಲು ಅವರು ದಣಿವರಿಯದೇ ಕೆಲಸ ಮಾಡಲಿದ್ದಾರೆ' ಎಂದು ಮೋದಿ ಟ್ವೀಟ್ ಮಾಡಿದ್ದಾರೆ.

ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರ ಜೊತೆಗೂ ಯೋಗಿ ಮಾತುಕತೆ ನಡೆಸಿದರು.

ಎರಡು ದಿನಗಳ ದೆಹಲಿ ಭೇಟಿಯಲ್ಲಿರುವ ಯೋಗಿ ಅವರು, ಗೃಹಸಚಿವ ಅಮಿತ್ ಶಾ ಹಾಗೂ ಕೇಂದ್ರ ಸಚಿವ ರಾಜನಾಥ ಸಿಂಗ್ ಅವರನ್ನೂ ಭೇಟಿ ಮಾಡುವ ಕಾರ್ಯಕ್ರಮವಿದೆ. ರಾಜ್ಯದಲ್ಲಿ ಎರಡನೇ ಬಾರಿ ಅಧಿಕಾರ ವಹಿಸಿಕೊಳ್ಳಲು ಸಜ್ಜಾಗಿರುವ ಅವರು, ಸರ್ಕಾರ ರಚನೆ ಕುರಿತಂತೆ ಕೇಂದ್ರದ ನಾಯಕರ ಜೊತೆ ಚರ್ಚೆ ನಡೆಸಲಿದ್ದಾರೆ.

ಇದೇ ಶುಕ್ರವಾರ ಹೋಳಿ ಹಬ್ಬದ ದಿನ ಯೋಗಿ ಅವರು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುವ ಸಾಧ್ಯತೆಯಿದೆ.

ಕೇಜ್ರಿವಾಲ್, ಮಾನ್ ಅವರಿಂದ ಅಮೃತಸರದಲ್ಲಿ ರೋಡ್ ಶೋ

ಮತದಾರರಿಗೆ ಕೃತಜ್ಞತೆ ಸಲ್ಲಿಸಿದ ಎಎಪಿ

ಅಮೃತಸರ (ಪಿಟಿಐ): ಎಎಪಿ ರಾಷ್ಟ್ರೀಯ ಸಂಚಾಲಕ ಅರವಿಂದ ಕೇಜ್ರಿವಾಲ್ ಹಾಗೂ ಪಂಜಾಬ್‌ನ ನಿಯೋಜಿತ ಮುಖ್ಯಮಂತ್ರಿ ಭಗವಂತ ಮಾನ್ ಅವರು ಅಮೃತಸರದಲ್ಲಿ ಭಾನುವಾರ ರೋಡ್ ಶೋ ನಡೆಸಿ, ಪಕ್ಷದ ಗೆಲುವನ್ನು ಸಂಭ್ರಮಿಸಿದರು. ರಾಜ್ಯದಲ್ಲಿ ಮೊದಲ ಬಾರಿಗೆ ಪಕ್ಷವನ್ನು ಅಧಿಕಾರಕ್ಕೆ ತಂದ ಮತದಾರರಿಗೆ ಕೃತಜ್ಞತೆ ಸಲ್ಲಿಸಿದರು.

117 ಸದಸ್ಯಬಲದ ಪಂಜಾಬ್ ವಿಧಾನಸಭೆಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಎಎಪಿ 92 ಕಡೆಗಳಲ್ಲಿ ಗೆಲುವು ಸಾಧಿಸಿತ್ತು.

ಅಮೃತಸರದ ಕಚಹರಿ ಚೌಕದಿಂದ ರೋಡ್ ಶೋ ಆರಂಭವಾಯಿತು. ತೆರೆದ ವಾಹನದ ಮೇಲೆ ನಿಂತುಕೊಂಡಿದ್ದ ಕೇಜ್ರಿವಾಲ್ ಹಾಗೂ ಮಾನ್ ಅವರ ಮೇಲೆ ಎಎಪಿ ಬೆಂಬಲಿಗರು ಹೂಮಳೆ ಗರೆದರು. ಹೊಸದಾಗಿ ಚುನಾಯಿತರಾದ ಶಾಸಕರು ರೋಡ್ ಶೋನಲ್ಲಿ ಭಾಗಿಯಾಗಿದ್ದರು.

ರಾಜ್ಯದ ವಿವಿಧ ಭಾಗಗಳಿಂದ ಅಮೃತಸರಕ್ಕೆ ಬಂದಿದ್ದ ಪಕ್ಷದ ಕಾರ್ಯಕರ್ತರು ತ್ರಿವರ್ಣಧ್ವಜ ಹಾಗೂ ಪಕ್ಷದ ಧ್ವಜಗಳನ್ನು ಹಿಡಿದಿದ್ದರು. 'ಎಎಪಿ ಅಧಿಕಾರಕ್ಕೆ ಬಂದಿರುವುದರಿಂದ ಸಂತೋಷವಾಗಿದೆ. ಪಂಜಾಬ್ ಮತ್ತೆ ಸಮೃದ್ಧವಾಗಲಿದೆ' ಎಂದು ಫರೀದ್‌ಕೋಟ್‌ನ ಯುವಕ ವಿಶ್ವಾಸ ವ್ಯಕ್ತಪಡಿಸಿದರು.

'ಸಾಂಪ್ರದಾಯಿಕ ಪಕ್ಷಗಳನ್ನು ಕೈಬಿಟ್ಟಿರುವ ರಾಜ್ಯದ ಮತದಾರರು, ಪಂಜಾಬ್‌ಗೆ ಹೊಸ ದಿಕ್ಕು ತೋರುವ ಭರವಸೆಯಿಂದ ಎಎಪಿಯನ್ನು ಆಯ್ಕೆ ಮಾಡಿದ್ದಾರೆ' ಎಂದು ಅಮೃತಸರದ ಪಕ್ಷದ ಕಾರ್ಯಕರ್ತರೊಬ್ಬರು ಅಭಿಪ್ರಾಯಪಟ್ಟರು.

ರೋಡ್ ಶೋಗೂ ಮುನ್ನ ಅರವಿಂದ್ ಕೇಜ್ರಿವಾಲ್ ಹಾಗೂ ಭಗವಂತ ಮಾನ್ ಅವರು ಸ್ವರ್ಣಮಂದಿರಕ್ಕೆ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಿದರು. ಜಲಿಯನ್ ವಾಲಾಬಾಗ್ ಸ್ಮಾರಕಕ್ಕೆ ತೆರಳಿ ಹೂಗುಚ್ಛ ಅರ್ಪಿಸಿದರು.

ದುರ್ಗಿಯಾನಾ ಮಂದಿರ ಹಾಗೂ ಶ್ರೀರಾಮ ತೀರ್ಥ ಮಂದಿರಗಳಲ್ಲಿ ಪೂಜೆ ಸಲ್ಲಿಸಿದರು.

ಭಗವಂತ ಮಾನ್ ಅವರು ಮಾರ್ಚ್ 16ರಂದು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ.

ಅರವಿಂದ ಕೇಜ್ರಿವಾಲ್ ಹಾಗೂ ಭಗವಂತ ಮಾನ್ ಅವರು ಅಮೃತಸರದಲ್ಲಿ ಭಾನುವಾರ ರೋಡ್ ಶೋ ನಡೆಸಿದರು–ಪಿಟಿಐ ಚಿತ್ರ

'ಪಂಜಾಬ್‌ಗೆ ಪ್ರಾಮಾಣಿಕ ಮುಖ್ಯಮಂತ್ರಿ'

ಹಲವು ವರ್ಷಗಳ ಬಳಿಕ ಪಂಜಾಬ್‌ಗೆ ಒಬ್ಬ ಪ್ರಾಮಾಣಿಕ ಮುಖ್ಯಮಂತ್ರಿ ಸಿಕ್ಕಿದ್ದು, ಪಕ್ಷವು ರಾಜ್ಯದಲ್ಲಿ ಪ್ರಾಮಾಣಿಕ ಆಡಳಿತ ನೀಡಲಿದೆ ಎಂದು ಕೇಜ್ರಿವಾಲ್ ಹೇಳಿದ್ದಾರೆ.

'ರಾಜ್ಯದ ಬೊಕ್ಕಸದ ಒಂದೊಂದು ಪೈಸೆಯನ್ನೂ ರಾಜ್ಯದ ಜನರಿಗಾಗಿ ಖರ್ಚು ಮಾಡಲಾಗುವುದು. ಚುನಾವಣೆಯಲ್ಲಿ ನಾವು ನೀಡಿದ್ದ ಎಲ್ಲ ಭರವಸೆಗಳನ್ನು ಈಡೇರಿಸುತ್ತೇವೆ' ಎಂದು ಕೇಜ್ರಿವಾಲ್ ಭರವಸೆ ನೀಡಿದರು. ಮಾನ್ ಅವರಷ್ಟೇ ಅಲ್ಲ, ಪಂಜಾಬ್‌ನ ಪ್ರತಿಯೊಬ್ಬ ವ್ಯಕ್ತಿಯೂ ಮುಖ್ಯಮಂತ್ರಿಯೇ ಎಂದು ನುಡಿದರು.

ಪಕ್ಷದ ಯಾವುದೇ ನಾಯಕ ಅಥವಾ ಶಾಸಕ ಅಕ್ರಮದಲ್ಲಿ ತೊಡಗಿದ್ದರೆ, ಅಂತಹವರನ್ನು ಕಂಬಿ ಹಿಂದೆ ಕಳುಹಿಸಲಾಗುವುದು ಎಂದು ಹೇಳಿದರು.

ಅಮೃತಸರ ಪಾಲಿಕೆಯ 16 ಸದಸ್ಯರು ಎಎಪಿಗೆ

ಅಮೃತಸರ (ಪಿಟಿಐ): ಅಮೃತಸರ ನಗರ ಪಾಲಿಕೆಯ 16 ಸದಸ್ಯರು ಭಾನುವಾರ ಆಮ್ ಆದ್ಮಿ ಪಕ್ಷ (ಎಎಪಿ) ಸೇರಿದರು. ದೆಹಲಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಅವರ ಉಪಸ್ಥಿತಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಈ 16 ಮಂದಿ ಎಎಪಿಗೆ ಸೇರಿದರು.

ಎಎಪಿಗೆ ಸೇರ್ಪಡೆ ಆಗಿರುವ ಸದಸ್ಯರಲ್ಲಿ ಹೆಚ್ಚಿನವರು ಕಾಂಗ್ರೆಸ್‌ನವರು.

ಪಂಜಾಬ್ ಚುನಾವಣೆಗೂ ಕೆಲ ದಿನಗಳ ಹಿಂದೆ ಮೇಯರ್ ಕರಮ್‌ಜಿತ್ ಸಿಂಗ್ ರಿಂಟು ಅವರು ಕಾಂಗ್ರೆಸ್ ತೊರೆದು ಎಎಪಿ ಸೇರಿದ್ದರು. ನಗರ ಪಾಲಿಕೆಯ ಒಟ್ಟು ಸದಸ್ಯರ ಸಂಖ್ಯೆ 85. ಅವರಲ್ಲಿ 65 ಸದಸ್ಯರು ಕಾಂಗ್ರೆಸ್‌ನವರು.

ರಾಹುಲ್ ಭೇಟಿಗಾಗಿ ಪತ್ರ ಬರೆದ ಗುಜರಾತ್ ಕಾಂಗ್ರೆಸ್ ಶಾಸಕರು

ಅಹಮದಾಬಾದ್: ಪ್ರಧಾನಿ ನರೇಂದ್ರ ಮೋದಿ ಅವರು ಗುಜರಾತ್‌ಗೆ ಎರಡು ದಿನಗಳ ಭೇಟಿ ನೀಡಿ ಭಾರಿ ಬಲಪ್ರದರ್ಶನ ನಡೆಸಿರುವುದು ಕಾಂಗ್ರೆಸ್ ಪಕ್ಷದಲ್ಲಿಯೂ ಸಂಚಲನ ಮೂಡಿಸಿದೆ. ಗುಜರಾತ್ ಕಾಂಗ್ರೆಸ್‌ನ ಸುಮಾರು 20 ಶಾಸಕರು ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಲು ಸಮಯಾವಕಾಶ ಕೋರಿ ಪತ್ರ ಬರೆದಿದ್ದಾರೆ. ಮುಂಬರಲಿರುವ ಗುಜರಾತ್ ವಿಧಾನಸಭೆ ಚುನಾವಣೆಗೆ ತಯಾರಿ ಮಾಡಿಕೊಳ್ಳುವ ಕುರಿತು ಚರ್ಚೆ ನಡೆಸುವ ಸಲುವಾಗಿ ಅವರು ಈ ಪತ್ರ ಬರೆದಿದ್ದಾರೆ ಎನ್ನಲಾಗಿದೆ.

ಶಾಸಕರು ರಾಹುಲ್ ಅವರಿಗೆ ಪತ್ರ ಬರೆದಿದ್ದಾರೆ ಎಂಬುದನ್ನು ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಜಗದೀಶ್ ಠಾಕೊರ್ 'ಪ್ರಜಾವಾಣಿ'ಗೆ ಖಚಿತಪಡಿಸಿದ್ದಾರೆ.

ರಾಜ್ಯ ಕಾಂಗ್ರೆಸ್ ನಾಯಕತ್ವದ ಬಗ್ಗೆ ಅಸಮಾಧಾನ ಹೊಂದಿರುವ ಶಾಸಕರ ಬಣ ಈ ಪತ್ರ ಬರೆದಿದೆ. ನಾಯಕತ್ವದ ಬದಲಾವಣೆಗಾಗಿ ಈ ಬಣವು ಹಲವು ದಿನಗಳಿಂದ ಪ್ರಯತ್ನಿಸುತ್ತಿದೆ ಎನ್ನಲಾಗಿದೆ. 2017ರಿಂದ ಇಲ್ಲಿಯವರೆಗೆ ಗುಜರಾತ್‌ನಲ್ಲಿ ಕಾಂಗ್ರೆಸ್‌ನ ಸುಮಾರು 20 ಶಾಸಕರು ಬಿಜೆಪಿಗೆ ಸೇರ್ಪಡೆ ಆಗಿದ್ದಾರೆ.

ಉಪ ಚುನಾವಣೆ: ಶತ್ರುಘ್ನ ಸಿನ್ಹಾ, ಬಾಬುಲ್ ಸುಪ್ರಿಯೊ ಟಿಎಂಸಿ ಅಭ್ಯರ್ಥಿಗಳು

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಅಸನ್‌ಸೋಲ್ ಲೋಕಸಭಾ ಕ್ಷೇತ್ರಕ್ಕೆ ನಡೆಯುವ ಉಪಚುನಾವಣೆಗೆ ಹಿರಿಯ ನಟ, ಮಾಜಿ ಸಂಸದ ಶತ್ರುಘ್ನ ಸಿನ್ಹಾ ಅವರನ್ನು ತೃಣಮೂಲ ಕಾಂಗ್ರೆಸ್ ಪಕ್ಷವು ತನ್ನ ಅಭ್ಯರ್ಥಿಯಾಗಿ ಘೋಷಿಸಿದೆ.

ಅಲ್ಲದೆ, ಬಾಲಿಗಂಜ್ ವಿಧಾನಸಭೆ ಕ್ಷೇತ್ರಕ್ಕೆ ನಡೆಯಲಿರುವ ಉಪಚುನಾವಣೆಗೆ ಬಾಬುಲ್ ಸುಪ್ರಿಯೊ ಅವರು ಪಕ್ಷದ ಅಭ್ಯರ್ಥಿಯಾಗಿರುತ್ತಾರೆ ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಭಾನುವಾರ ಟ್ವೀಟ್ ಮಾಡಿದ್ದಾರೆ.

ಕೆಲವೆಡೆ ಶಾಲೆ, ಮಾಲ್‌ಗಳು ಬಂದ್

ಚೀನಾ: ಐಟಿ ನಗರ ಶೆನ್‌ಜೆನ್‌ನಲ್ಲಿ ಲಾಕ್‌ಡೌನ್

ಬೀಜಿಂಗ್ (ಪಿಟಿಐ): ಚೀನಾದಲ್ಲಿ ಕೋವಿಡ್–19 ಪ್ರಕರಣಗಳು ಹೆಚ್ಚುತ್ತಿದ್ದು, ಹಲವಾರು ನಗರಗಳಲ್ಲಿ ಮತ್ತೆ ಲಾಕ್‌ಡೌನ್ ಜಾರಿಗೊಳಿಸಲಾಗಿದೆ.

ತಂತ್ರಜ್ಞಾನ ಹಾಗೂ ಐಟಿ ಆಧಾರಿತ ಉದ್ಯಮಗಳ ಪ್ರಮುಖ ನಗರವಾಗಿರುವ ಶೆನ್‌ಜೆನ್‌ನಲ್ಲಿ ಲಾಕ್‌ಡೌನ್ ಘೋಷಿಸಲಾಗಿದೆ. ನಗರದ 1.70 ಕೋಟಿ ನಿವಾಸಿಗಳಿಗೆ ಮನೆಯಿಂದ ಹೊರ ಹೋಗದಂತೆ ಸೂಚಿಸಲಾಗಿದೆ.

ಮಾರ್ಚ್ 20ರ ವರೆಗೆ ನಗರದಲ್ಲಿ ಸಾರ್ವಜನಿಕ ಸಾರಿಗೆಯನ್ನು ರದ್ದುಗೊಳಿಸಲಾಗಿದೆ ಎಂದು ತಿಳಿಸಿರುವ ಅಧಿಕಾರಿಗಳು, ಮೂರು ಸುತ್ತುಗಳ ಸಾಮೂಹಿಕ ಕೋವಿಡ್ ಪರೀಕ್ಷೆ ಕಾರ್ಯಕ್ರಮಕ್ಕೆ ಶೀಘ್ರವೇ ಚಾಲನೆ ನೀಡಲಾಗುವುದು ಎಂದಿದ್ದಾರೆ.

ನೆರೆಯ ಹಾಂಗ್‌ಕಾಂಗ್‌ನಲ್ಲಿ ಕೊರೊನಾವೈರಸ್‌ನ ರೂಪಾಂತರಿ ಒಮೈಕ್ರಾನ್ ತಳಿ ಸೋಂಕಿನ ಪ್ರಕರಣಗಳು ಹೆಚ್ಚುತ್ತಿವೆ. ಶೆನ್‌ಜೆನ್ ನಗರದಲ್ಲಿ ಭಾನುವಾರ ಒಂದೇ ದಿನ ಹೊಸದಾಗಿ 66 ಪ್ರಕರಣಗಳು ವರದಿಯಾಗಿದ್ದರೆ, ಹಾಂಗ್‌ಕಾಂಗ್‌ನಲ್ಲಿ ವರದಿಯಾದ ಪ್ರಕರಣಗಳ ಸಂಖ್ಯೆ 32,430.

'ಕೊರೊನಾ ಸೋಂಕು ಪ್ರಸರಣವನ್ನು ತಡೆಗಟ್ಟಲು ಕೂಡಲೇ ಕಠಿಣ ಕ್ರಮಗಳನ್ನು ಕೈಗೊಳ್ಳದಿದ್ದರೆ ಭಾರಿ ಪ್ರಮಾಣದಲ್ಲಿ ಸಮುದಾಯ ಮಟ್ಟದ ಪ್ರಸರಣ ಕಂಡುಬರಲಿದೆ' ಎಂದು ಶೆನ್‌ಜೆನ್‌ನ ಆರೋಗ್ಯ ಅಧಿಕಾರಿ ಲಿನ್ ಹ್ಯಾಂಜೆಂಗ್ ಎಚ್ಚರಿಸಿದ್ದಾರೆ.

ಈಶಾನ್ಯ ಭಾಗದ 18 ಪ್ರಾಂತ್ಯಗಳಲ್ಲಿ ಒಮೈಕ್ರಾನ್ ಹಾಗೂ ಡೆಲ್ಟಾ ತಳಿ ಸೋಂಕಿನ ಪ್ರಕರಣಗಳು ಹೆಚ್ಚಿವೆ. ಶಾಂಘೈ ನಗರದ ಹೋಟೆಲ್‌ಗಳು, ಮಾಲ್ ಹಾಗೂ ಶಾಲೆಗಳನ್ನು ಮುಚ್ಚಲಾಗಿದೆ. ಮನೆಯಲ್ಲೇ ಇರುವಂತೆ ಜನರಿಗೆ ಸೂಚನೆ ನೀಡಲಾಗಿದೆ.

7 ಲಕ್ಷ ಜನಸಂಖ್ಯೆ ಇರುವ ಯಾಂಜಿ ನಗರದಲ್ಲಿ ಸಹ ಭಾನುವಾರ ಲಾಕ್‌ಡೌನ್ ಘೋಷಿಸಲಾಗಿತ್ತು.

ಜಿಲಿನ್ ನಗರದ ಮೇಯರ್ ಹಾಗೂ ಚಾಂಗ್‌ಚುನ್ ಆರೋಗ್ಯ ಇಲಾಖೆ ಮುಖ್ಯಸ್ಥರನ್ನು ಸೇವೆಯಿಂದ ವಜಾಗೊಳಿಸಲಾಗಿದೆ. ಕೊರೊನಾ ಸೋಂಕು ಪ್ರಸರಣ ತಡೆಯುವಂತೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಮೇಲೆ ಹೇರಲಾಗುತ್ತಿರುವ ಒತ್ತಡವನ್ನು ಈ ಕ್ರಮ ತೋರಿಸುತ್ತದೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಕೊರೊನಾ ವೈರಸ್‌ನ ರೂಪಾಂತರಿ ಒಮೈಕ್ರಾನ್ ತಳಿಯ ಗುಣಲಕ್ಷಣಗಳ ಬಗ್ಗೆ ನಮಗಿರುವ ಅರಿವು ಸಾಕಾಗದು. ಕೋವಿಡ್ ನಿರ್ಬಂಧಗಳು ಅಸಮರ್ಪಕವಾಗಿವೆ

ಝೂಂಗ್ ಯಾನ್, ಆರೋಗ್ಯ ಅಧಿಕಾರಿ

676 ದಿನಗಳಲ್ಲೇ ಕನಿಷ್ಠ ಕೋವಿಡ್ ಪ್ರಕರಣ

ನವದೆಹಲಿ (ಪಿಟಿಐ): ದೇಶದಲ್ಲಿ ಕೋವಿಡ್ ದೈನಂದಿನ ಪ್ರಕರಣಗಳ ಸಂಖ್ಯೆ ಇಳಿಕೆಯಾಗಿದ್ದು 3,116 ಹೊಸ ಪ್ರಕರಣಗಳು ವರದಿಯಾಗಿವೆ. ಇದು 676 ದಿನಗಳಲ್ಲೇ ಕನಿಷ್ಠ ದೃಢ ಪ್ರಮಾಣವಾಗಿದೆ.

ಸಕ್ರಿಯ ಪ್ರಕರಣಗಳ ಸಂಖ್ಯೆ 38,069ಕ್ಕೆ ಇಳಿಕೆಯಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಭಾನುವಾರ ತಿಳಿಸಿದೆ. 47 ಮಂದಿ ಮೃತಪಟ್ಟಿದ್ದು, ಒಟ್ಟು ಸಾವಿನ ಸಂಖ್ಯೆ 5,15,850 ಕ್ಕೆ ತಲುಪಿದೆ. ರಾಷ್ಟ್ರೀಯ ಕೋವಿಡ್ ಚೇತರಿಕೆ ಪ್ರಮಾಣ ಶೇ 98.71 ರಷ್ಟಾಗಿದೆ.

ಇರಾಕ್: ಅಮೆರಿಕದ ದೂತಾವಾಸ ಕಚೇರಿ ಮೇಲೆ ಕ್ಷಿಪಣಿ ದಾಳಿ

ಬಾಗ್ದಾದ್/ಅರ್ಬಿಲ್ (ಎಪಿ/ಎಎಫ್‌ಪಿ): ಇರಾಕ್‌ನ ಅರ್ಬಿಲ್ ನಗರದಲ್ಲಿರುವ ಅಮೆರಿಕದ ದೂತಾವಾಸ ಕಚೇರಿ ಸಂಕೀರ್ಣದ ಬಳಿ 12 ಕ್ಷಿಪಣಿಗಳು ಅಪ್ಪಳಿಸಿವೆ. ಅದೃಷ್ಟವಶಾತ್ ಯಾವುದೇ ಸಾವು–ನೋವು ಸಂಭವಿಸಿಲ್ಲ. ಈ ಕ್ಷಿಪಣಿಗಳನ್ನು ಇರಾನ್ ಉಡಾಯಿಸಿದೆ ಎಂದು ಅಮೆರಿಕ ಮತ್ತು ಇರಾಕ್‌ನ ಭದ್ರತಾ ಅಧಿಕಾರಿಗಳು ಹೇಳಿದ್ದಾರೆ.

ಸಿರಿಯಾದ ಡಮಾಸ್ಕಸ್ ಬಳಿ ಇಸ್ರೇಲ್ ನಡೆಸಿದ ದಾಳಿಯಲ್ಲಿ ಇರಾನಿನ ಭದ್ರತಾ ಪಡೆಯ ಇಬ್ಬರು ಸತ್ತಿದ್ದರು. ಅದಕ್ಕೆ ಪ್ರತೀಕಾರವಾಗಿ ಈ ದಾಳಿ ನಡೆದಿದೆ ಎನ್ನಲಾಗುತ್ತಿದೆ ಎಂದು ಇರಾಕ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅರ್ಬಿಲ್ ನಗರದಲ್ಲಿರುವ ಅಮೆರಿಕದ ಪಡೆಗಳ ಮೇಲೆ ಆಗಾಗ ರಾಕೆಟ್ ಮತ್ತು ಡ್ರೋಣ್ ದಾಳಿ ನಡೆಯುತ್ತಿದ್ದು, ಈ ದಾಳಿಯನ್ನು ಇರಾನಿನ ಬೆಂಬಲಿತ ಉಗ್ರ ಸಂಘಟನೆಗಳು ನಡೆಸುತ್ತಿವೆ ಎಂದು ಅಮೆರಿಕ ಆರೋಪಿಸಿದೆ.

ಸೇಡು ತೀರಿಸಿಕೊಂಡ ಸವಿತಾ ಪಡೆ

ಎಫ್‌ಐಎಚ್ ಪ್ರೊ ಹಾಕಿ ಲೀಗ್: ಜರ್ಮನಿ ಎದುರು ಭಾರತ ಜಯಭೇರಿ

ಭುವನೇಶ್ವರ (ಪಿಟಿಐ): ಮೊದಲ ಲೆಗ್‌ನಲ್ಲಿ ಸೋಲಿಗೆ ಶರಣಾಗಿದ್ದ ಭಾರತ ತಂಡ ಎಫ್‌ಐಎಚ್ ಪ್ರೊ ಲೀಗ್ ಮಹಿಳೆಯರ ಹಾಕಿ ಟೂರ್ನಿಯ ಎರಡನೇ ಲೆಗ್‌ನ ಪಂದ್ಯದಲ್ಲಿ ಜರ್ಮನಿ ವಿರುದ್ಧ ಸೇಡು ತೀರಿಸಿಕೊಂಡಿತು.

ಕಳಿಂಗ ಕ್ರೀಡಾಂಗಣದಲ್ಲಿ ಭಾನುವಾರ ಸಂಜೆ ನಡೆದ ಪಂದ್ಯದ ಶೂಟೌಟ್‌ನಲ್ಲಿ ಭಾರತ 3–0ಯಿಂದ ಜಯ ಗಳಿಸಿತು. ನಿಗದಿತ ಅವಧಿಯಲ್ಲಿ ಎರಡೂ ತಂಡಗಳು ತಲಾ ಒಂದೊಂದು ಗೋಲು ಗಳಿಸಿದ್ದವು. ಶನಿವಾರ ನಡೆದ ಮೊದಲ ಲೆಗ್ ಪಂದ್ಯವೂ ಇದೇ ರೀತಿ ಮುಕ್ತಾಯ ಕಂಡಿತ್ತು. ಜರ್ಮನಿ 2–1ರಲ್ಲಿ ಗೆದ್ದಿತ್ತು.

ಭಾನುವಾರದ ಶೂಟೌಟ್‌ನಲ್ಲಿ ಭಾರತದ ಆಟಗಾರ್ತಿಯರು ಮೊದಲ ಮೂರೂ ಅವಕಾಶಗಳಲ್ಲಿ ಯಶಸ್ಸು ಸಾಧಿಸಿದರು. ಜರ್ಮನಿಯ ಯಾರಿಗೂ ಗುರಿ ಮುಟ್ಟಲು ಆಗಲಿಲ್ಲ. ಭಾರತದ ಪರ ಸಂಗೀತಾ ಕುಮಾರಿ, ಸಲೀಮಾ ಟೆಟೆ ಮತ್ತು ಸೋನಿಕಾ ಗೋಲು ಗಳಿಸಿದರು. ಜರ್ಮನಿ ಪರವಾಗಿ ಲಿಲಿ ಸ್ಟೆಫೆಲ್ಸ್‌ಮಾ, ಲೀನಾ ಫ್ರೆಂಚ್ಸ್ ಮತ್ತು ಸಾರಾ ಸ್ಟ್ರಾಸ್ ಅವರ ಪ್ರಯತ್ನಗಳನ್ನು ನಾಯಕಿ ಮತ್ತು ಗೋಲ್‌ಕೀಪರ್ ಸವಿತಾ ಪೂನಿಯಾ ವಿಫಲಗೊಳಿಸಿದರು.

ವಿಶ್ವ ಕ್ರಮಾಂಕದಲ್ಲಿ ಐದನೇ ಸ್ಥಾನದಲ್ಲಿರುವ ಜರ್ಮನಿ ಪಂದ್ಯದ ಆರಂಭದಲ್ಲಿ ಆಕ್ರಮಣಕ್ಕೆ ಮುಂದಾಯಿತು. ಇದರ ಫಲವಾಗಿ 29ನೇ ನಿಮಿಷದಲ್ಲಿ ಅದಕ್ಕೆ ಪೆನಾಲ್ಟಿ ಅವಕಾಶ ಲಭಿಸಿತು. ಫೆಲಿಸಿಯಾ ವೀಡರ್‌ಮ್ಯಾನ್ ಗೋಲು ಗಳಿಸಿದರು. 40ನೇ ನಿಮಿಷದಲ್ಲಿ ಮೋಹಕ ಫೀಲ್ಡ್ ಗೋಲ್ ಮೂಲಕ ಭಾರತಕ್ಕೆ ನಿಶಾ ಸಮಬಲ ಗಳಿಸಿಕೊಟ್ಟರು.

ವಿಶ್ವ ಕ್ರಮಾಂಕದಲ್ಲಿ ಒಂಬತ್ತನೇ ಸ್ಥಾನದಲ್ಲಿರುವ ಭಾರತ ಈ ಗೆಲುವಿನೊಂದಿಗೆ ಎರಡು ಪಾಯಿಂಟ್ ಗಳಿಸಿತು. ಜರ್ಮನಿಗೆ ಒಂದು ಪಾಯಿಂಟ್ ಲಭಿಸಿತು. ಏಪ್ರಿಲ್ ಎರಡು ಮತ್ತು ಮೂರರಂದು ಭಾರತ ಮಹಿಳೆಯರು ಇಂಗ್ಲೆಂಡ್ ವಿರುದ್ಧ ಸೆಣಸುವರು. ಇದೇ ಅಂಗಣದಲ್ಲಿ ಪಂದ್ಯಗಳು ನಡೆಯಲಿವೆ.

ಭಾರತದ ಲಾಲ್‌ರೆಮ್ಸಿಯಾಮಿ (ಬಲ)– ಟ್ವಿಟರ್ ಚಿತ್ರ

ಕೊಕ್ಕೊ: ಸೆಮಿಫೈನಲ್‌ಗೆ ಮಂಗಳೂರು, ದಾವಣಗೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಗಳೂರು, ಕುವೆಂಪು ಮತ್ತು ದಾವಣಗೆರೆ ವಿವಿ ತಂಡಗಳು ಅಂತರ ವಿಶ್ವವಿದ್ಯಾಲಯ ಕೊಕ್ಕೊ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿದವು.

ಕ್ರೈಸ್ಟ್ ಕಾಲೇಜು ಹಾಗೂ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಜಂಟಿ ಆಶ್ರಯದಲ್ಲಿ ನಡೆಯುತ್ತಿರುವ ಟೂರ್ನಿಯ ಭಾನುವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಮಂಗಳೂರು ವಿಶ್ವವಿದ್ಯಾಲಯ ತಂಡ ರಾಣಿ ಚನ್ನಮ್ಮ ವಿವಿಯನ್ನು ಮೂರು ಪಾಯಿಂಟ್‌ಗಳಿಂದ ಮಣಿಸಿತು.

ದಾವಣಗೆರೆ ವಿಶ್ವವಿದ್ಯಾಲಯವು ಭಾರತೀಯಾರ್ ವಿಶ್ವವಿದ್ಯಾಲಯವನ್ನು ಎಂಟು ಪಾಯಿಂಟ್‌ಗಳಿಂದ ಸೋಲಿಸಿತು. ಕೇರಳದ ಕ್ಯಾಲಿಕಟ್ ವಿವಿ 10 ಪಾಯಿಂಟ್‌ಗಳಿಂದ ಶಾತವಾಹನ ವಿವಿಯನ್ನು, ಕುವೆಂಪು ವಿವಿ 4 ಪಾಯಿಂಟ್‌ಗಳಿಂದ ಕೇರಳದ ಕೋಟಯಂನ ಮಹಾತ್ಮ ಗಾಂಧಿ ವಿವಿಯನ್ನು ಸೋಲಿಸಿತು.

ಶನಿವಾರ ರಾತ್ರಿ ನಡೆದ ಪ್ರೀ ಕ್ವಾರ್ಟರ್ ಫೈನಲ್ ಪಂದ್ಯಗಳಲ್ಲಿ ರಾಣಿ ಚನ್ನಮ್ಮ ವಿವಿ ಒಂದು ಪಾಯಿಂಟ್‌ನಿಂದ ಮದ್ರಾಸ್ ವಿವಿಯನ್ನು, ಭಾರತೀಯಾರ್ ವಿವಿ ಒಂದು ಪಾಯಿಂಟ್‌ನಿಂದ ಆಂಧ್ರ ವಿವಿಯನ್ನು, ಶಾತವಾಹನ ವಿವಿ 2 ಪಾಯಿಂಟ್‌ಗಳಿಂದ ಬೆಂಗಳೂರು ಉತ್ತರ ವಿವಿಯನ್ನು, ಮಹಾತ್ಮ ಗಾಂಧಿ ವಿವಿ ಮೂರು ಪಾಯಿಂಟ್‌ಗಳಿಂದ ಅಣ್ಣಾ ವಿವಿಯನ್ನು ಸೋಲಿಸಿತು.

ವಿಶ್ವಕಪ್ ಕ್ರಿಕೆಟ್: ಆಸ್ಟ್ರೇಲಿಯಾಗೆ ಭರ್ಜರಿ ಗೆಲುವು

ಎಲಿಸ್, ಆ್ಯಶ್ಲಿ ಆಲ್‌ರೌಂಡ್ ಆಟ

ವೆಲಿಂಗ್ಟನ್ (ಪಿಟಿಐ): ಎಲಿಸ್ ಪೆರಿ, ತಹಿಲಾ ಮೆಗ್ರಾ ಮತ್ತು ಆ್ಯಶ್ಲಿ ಗಾರ್ಡನರ್ ಆಲ್‌ರೌಂಡ್ ಆಟದ ಮೂಲಕ ಮಿಂಚಿದರು. ಇದರಿಂದಾಗಿ ಆಸ್ಟ್ರೇಲಿಯಾ ತಂಡ ಮಹಿಳೆಯರ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಭರ್ಜರಿ ಗೆಲುವು ಸಾಧಿಸಿತು.

ನ್ಯೂಜಿಲೆಂಡ್ ವಿರುದ್ಧ ಭಾನುವಾರ ನಡೆದ ಹಣಾಹಣಿಯಲ್ಲಿ 141 ರನ್‌ಗಳ ಜಯ ಗಳಿಸಿದ ತಂಡ ಪಾಯಿಂಟ್ ಪಟ್ಟಿಯಲ್ಲಿ ಭಾರತವನ್ನು ಹಿಂದಿಕ್ಕಿ ಅಗ್ರ ಸ್ಥಾನಕ್ಕೇರಿತು. ಇದು ತಂಡದ ಸತತ ಮೂರನೇ ಜಯವಾಗಿದೆ.

ಎಲಿಸ್ ಮತ್ತು ತಹಿಲಾ ಕ್ರಮವಾಗಿ 68 ಮತ್ತು 57 ರನ್ ಗಳಿಸಿ ಮಿಂಚಿದರು. ಗಾರ್ಡನರ್ 18 ಎಸೆತಗಳಲ್ಲಿ ಎಂಟು ಬೌಂಡರಿಗಳೊಂದಿಗೆ 48 ರನ್ ಸಿಡಿಸಿದರು. ಹೀಗಾಗಿ ತಂಡ 269 ರನ್ ಗಳಿಸಿತು. ಗುರಿ ಬೆನ್ನತ್ತಿದ ನ್ಯೂಜಿಲೆಂಡ್ 30.2 ಓವರ್‌ಗಳಲ್ಲಿ 128 ರನ್‌ಗಳಿಗೆ ಪತನ ಕಂಡಿತು. ಡಾರ್ಸಿ ಬ್ರೌನ್, ಗಾರ್ಡನರ್ ಮತ್ತು ಪೆರಿ ಬೌಲಿಂಗ್‌ಗೆ ನ್ಯೂಜಿಲೆಂಡ್ ಬ್ಯಾಟರ್‌ಗಳು ನಿರುತ್ತರರಾದರು.

ಆಸ್ಟ್ರೇಲಿಯಾ ಬೌಲರ್‌ಗಳು ಆರಂಭದಿಂದಲೇ ನ್ಯೂಜಿಲೆಂಡ್ ತಂಡವನ್ನು ಕಾಡಿದರು. ಹೀಗಾಗಿ ಬ್ಯಾಟರ್‌ಗಳಿಗೆ ಯಾವ ಹಂತದಲ್ಲೂ ಪ್ರತಿರೋಧ ಒಡ್ಡಲು ಆಗಲಿಲ್ಲ. ಆ್ಯಮಿ ಸಟೆರ್ಥ್‌ವೇಟ್ ಮಾತ್ರ 44 ರನ್ ಗಳಿಸಿ ಸ್ವಲ್ಪ ಪ್ರತಿರೋಧ ಒಡ್ಡಿದರು.

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ 50 ಓವರ್‌ಗಳಲ್ಲಿ 8ಕ್ಕೆ 269 (ರಾಚೆಲ್ 30, ಎಲಿಸ್ 68, ತಹಿಲಾ 57, ಗಾರ್ಡನರ್ ಔಟಾಗದೆ 58; ಲೀ ತಹುಹು 53ಕ್ಕೆ 3) ನ್ಯೂಜಿಲೆಂಡ್: 30.2 ಓವರ್‌ಗಳಲ್ಲಿ 128 (ಸಟೆರ್ಥ್‌ವೇಟ್ 44, ಲೀ 23; ಎಲಿಸ್ 18ಕ್ಕೆ 1, ಗಾರ್ಡನರ್ 15ಕ್ಕೆ 2).

ಆ್ಯಶ್ಲಿ ಗಾರ್ಡನರ್ –ಎಎಫ್‌ಪಿ ಚಿತ್ರ

ರಾಜ್ಯ ಈಜು ಸಂಸ್ಥೆಯಿಂದ ಸರ್ಟಿಫಿಕೇಷನ್ ಕೋರ್ಸ್

ಬೆಂಗಳೂರು: ಕರ್ನಾಟಕ ರಾಜ್ಯ ಈಜು ಸಂಸ್ಥೆಯು ಲೈಫ್ ಗಾರ್ಡ್ ಮತ್ತು ಲೆವೆಲ್–1 ಸರ್ಟಿಫಿಕೇಷನ್ ಕೋರ್ಸ್ ಇದೇ 16ರಿಂದ 19ರ ವರೆಗೆ ಆಯೋಜಿಸಲಿದೆ.

ಡಾಲ್ಫಿನ್ ಅಕ್ವಾಟಿಕ್ಸ್‌ನ ಕೆನ್ಸಿಂಗ್ಟನ್ ಈಜುಕೊಳದಲ್ಲಿ 16ರಂದು ಪ್ರಾಯೋಗಿಕ ತರಬೇತಿ ನಡೆಯಲಿದೆ. 17ರಿಂದ 19ರ ವರೆಗೆ ಥಿಯರಿ, ಸಿಪಿಆರ್ ಮತ್ತು ಪ್ರಥಮ ಚಿಕಿತ್ಸೆ ತರಬೇತಿ ಬಸವನಗುಡಿ ಅಕ್ವಾಟಿಕ್ಸ್‌ನ ಕಾರ್ಪೊರೇಷನ್ ಈಜುಕೊಳದಲ್ಲಿ ಬೆಳಿಗ್ಗೆ 9ರಿಂದ ಸಂಜೆ 4ರ ವರೆಗೆ ನಡೆಯಲಿದೆ.

ಆಸಕ್ತರು ರೋಹಿತ್ ಬಾಬು (98444 62077) ಅವರನ್ನು ಸಂಪರ್ಕಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಹೈದರಾಬಾದ್ ರೇಸ್

ಟ್ರಂಪ್ ಸ್ಟಾರ್ ಗೆಲ್ಲುವ ನಿರೀಕ್ಷೆ

ಸೋಮವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆ ತೆಲಂಗಾಣ ರೇಸ್ ಹಾರ್ಸ್ ಓನರ್ಸ್ ಅಸೋಸಿಯೇಷನ್ ಕಪ್ ಅನ್ನು ಎರಡು ಡಿವಿಷನ್‌ಗಳಾಗಿ ವಿಂಗಡಿಸಿದ್ದು, ಮೊದಲನೇ ಡಿವಿಷನ್‌ನಲ್ಲಿ ಟ್ರಂಪ್ ಸ್ಟಾರ್ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 1.10ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಮಲಿಬೂ 5, ಮಿಸ್ಟೀರಿಯಸ್ ಏಂಜೆಲ್ 6, ಸ್ಟಾರ್ ಮೆಡಲ್
2ನೇ ರೇಸ್: ಗಾರ್ಜಿಯಾ ಪೀಚ್ 2, ಬೈ ದಿ ಬೇ 1, ಟಾಪ್ ಡೈಮಂಡ್ 3
3ನೇ ರೇಸ್: ಸ್ಪೀಕಿಂಗ್ ಆಫ್ ಲವ್ 10, ಫ್ಲೆರೋಮಾ 9, ವಾಯ್ಸ್ ಆಫ್ ಡ್ರೀಮ್ 11
4ನೇ ರೇಸ್: ಕಿಂಗ್‌ಸ್ಟನ್ 2, ಅಮ್ಯೆರ 1, ಟುಮಾರೊ ಡ್ರೀಮ್ಸ್ (9)
5ನೇ ರೇಸ್: ವಿನ್ನಿಂಗ್ ಸ್ಟ್ರೀಕ್ 7, ಸಿಲ್ವರ್ ಬೆಲ್ಸ್ 6, ಇಸ್ತ್ರಾ 1
6ನೇ ರೇಸ್: ಟ್ರಂಪ್ ಸ್ಟಾರ್ 2, ಕೀಸ್ಟೋನ್ 5, ಅನ್‌ಸಂಗ್ ಹೀರೊ 4
7ನೇ ರೇಸ್: ಫಾರೆವರ್ ಬಾಂಡ್ 10, ರಾಯಲ್ ಪಾಲ್ 4, ಕರ್ಸ್ಯುಮಿನ್ 2
8ನೇ ರೇಸ್: ಎನ್.ಆರ್.ಐ ರೂಬಿ 2, ಗ್ರೇ ಹಾಕ್ 1, ಚಾಲೆಂಜರ್ 6

ಉತ್ತಮ ಬೆಟ್: ಕಿಂಗ್‌ಸ್ಟನ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಲಕ್ಷ್ಯ ಸೇನ್ –ಪಿಟಿಐ ಚಿತ್ರ

ಬ್ಯಾಡ್ಮಿಂಟನ್: ಲಕ್ಷ್ಯ ರನ್ನರ್ ಅಪ್

ಮುಲ್ಹಮ್ ಆ್ಯನ್ ಡರ್ ರುಹ್ರ್, ಜರ್ಮನಿ (ಪಿಟಿಐ): ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದಿದ್ದ ವಿಕ್ಟರ್ ಅಕ್ಸೆಲ್ಸನ್ ಅವರನ್ನು ಮಣಿಸಿ ಗಮನ ಸೆಳೆದಿದ್ದ ಭಾರತದ ಲಕ್ಷ್ಯ ಸೇನ್ ಅವರು ಜರ್ಮನ್ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಫೈನಲ್‌ನಲ್ಲಿ ಮುಗ್ಗರಿಸಿದರು.

ಭಾನುವಾರ ರಾತ್ರಿ ನಡೆದ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಥಾಯ್ಲೆಂಡ್‌ನ ಕುಂಡ್ಲಾವುತ್ ವಿಟಿಡ್ಸರ್ನ್ ಎದುರು ಲಕ್ಷ್ಯ ಸೇನ್ 18–21, 15–21ರಲ್ಲಿ ಸೋತರು.

ಶನಿವಾರ ರಾತ್ರಿ ನಡೆದಿದ್ದ ಸೆಮಿಫೈನಲ್‌ನಲ್ಲಿ ಲಕ್ಷ್ಯ 21-13, 12-21, 22-20ರಲ್ಲಿ ಅಕ್ಸೆಲ್ಸನ್ ಎದುರು ಗೆದ್ದಿದ್ದರು. ಆದರೆ ಫೈನಲ್‌ನಲ್ಲಿ ಥಾಯ್ಲೆಂಡ್ ಆಟಗಾರನ ಎದುರು ದಿಟ್ಟ ಆಟವಾಡಲು ಅವರಿ ಸಾಧ್ಯವಾಗಲಿಲ್ಲ. ಮೊದಲ ಗೇಮ್‌ನಲ್ಲಿ ಲಕ್ಷ್ಯ ಸೇನ್ ಸ್ವಲ್ಪ ಪ್ರತಿರೋಧ ತೋರಿದರು. ಎರಡನೇ ಗೇಮ್‌ನಲ್ಲಿ ಎದುರಾಳಿ ಇನ್ನಷ್ಟು ಆಕ್ರಮಣಕಾರಿಯಾಗಿ ಆಡಿ ಪಂದ್ಯ ಗೆದ್ದುಕೊಂಡರು.

ಟೆಸ್ಟ್: ಶ್ರೀಲಂಕಾ ಮುಂದಿದೆ ಕಠಿಣ ಸವಾಲು; ಭಾರತದ ಗೆಲುವಿಗೆ ಬೇಕು 9 ವಿಕೆಟ್‌ಗಳು

ಶ್ರೇಯಸ್, ರಿಷಭ್ ಮಿಂಚಿನಾಟ

ಶ್ರೇಯಸ್ ಅಯ್ಯರ್– ಎಎಫ್‌ಪಿ ಚಿತ್ರ

• ಗಿರೀಶ ದೊಡ್ಡಮನಿ

ಬೆಂಗಳೂರು: ಮತ್ತೆ ಮಿಂಚಿದ ರಿಷಭ್ ಪಂತ್ ಮತ್ತು ಶ್ರೇಯಸ್ ಅಯ್ಯರ್ ತಮ್ಮ ಅಬ್ಬರದ ಅರ್ಧಶತಕಗಳಿಂದ ಶ್ರೀಲಂಕಾ ತಂಡದ ಗಾಯದ ಮೇಲೆ ಬರೆ ಎಳೆದರು.

ಇಲ್ಲಿ ಶ್ರೀಲಂಕಾ ಎದುರು ನಡೆಯುತ್ತಿರುವ ಪಿಂಕ್ ಬಾಲ್ ಟೆಸ್ಟ್‌ನಲ್ಲಿ ಭಾರತ ತಂಡವು ಮೊದಲ ಇನಿಂಗ್ಸ್‌ನಲ್ಲಿ ಭಾನುವಾರ ಮಧ್ಯಾಹ್ನವೇ 143 ರನ್‌ಗಳ ಮುನ್ನಡೆ ಗಳಿಸಿತು. ಎರಡನೇ ಇನಿಂಗ್ಸ್‌ನಲ್ಲಿ ರಿಷಭ್ ಪಂತ್ ಮತ್ತು ಶ್ರೇಯಸ್ ಮಿಂಚಿನ ಅರ್ಧಶತಕಗಳ ಬಲದಿಂದ 68.5 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 303 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು. ಇದರೊಂದಿಗೆ ಲಂಕಾ ತಂಡದ ಗೆಲುವಿಗಾಗಿ 447 ರನ್‌ಗಳ ಗುರಿಯೊಡ್ಡಿತು. ಈ ಕಠಿಣ ಸವಾಲು ಬೆನ್ನತ್ತಿದ ಶ್ರೀಲಂಕಾ ತಂಡವು 7 ಓವರ್‌ಗಳಲ್ಲಿ 1 ವಿಕೆಟ್‌ಗೆ 28 ರನ್ ಗಳಿಸಿತು.

ಪಂದ್ಯದಲ್ಲಿ ಇನ್ನೂ ಎರಡು ದಿನ ಬಾಕಿಯಿದೆ. ಲಂಕಾ ತಂಡಕ್ಕೆ ಈ ಗುರಿಯನ್ನು ಸಾಧಿಸುವ ಅವಕಾಶವೂ ಇದೆ. ಆದರೆ ಭಾರತದ ಉತ್ತಮ ಬೌಲಿಂಗ್ ಪಡೆಯನ್ನು ಎದುರಿಸಿ ನಿಲ್ಲುವ ಸವಾಲು ಪ್ರವಾಸಿ ಬ್ಯಾಟಿಂಗ್ ಪಡೆಯ ಮುಂದಿದೆ.

ಮೊದಲ ಇನಿಂಗ್ಸ್‌ನಲ್ಲಿ ಐದು ವಿಕೆಟ್ ಗೊಂಚಲು ಗಳಿಸಿ ಮಿಂಚಿರುವ ಬೂಮ್ರಾ ಎರಡನೇ ಇನಿಂಗ್ಸ್‌ನಲ್ಲಿಯೂ ಒಂದು ವಿಕೆಟ್ ಗಳಿಸಿದ್ದಾರೆ. ಅವರು ಮತ್ತು ಸ್ಪಿನ್ನರ್ ಅಶ್ವಿನ್ ಎಸೆತಗಳನ್ನು ಎದುರಿಸಲು ಬ್ಯಾಟರ್‌ಗಳು ಪರದಾಡುತ್ತಿರುವುದು ಸ್ಪಷ್ಟವಾಗಿ ಕಾಣುತ್ತಿದೆ.

ಮೊದಲ ದಿನವಾದ ಶನಿವಾರ ಸ್ಪಿನ್ ಬೌಲರ್‌ಗಳ ಸ್ವರ್ಗದಂತೆ ವರ್ತಿಸಿದ್ದ ಪಿಚ್‌ನಲ್ಲಿ ಎರಡನೇ ದಿನದಾಟದಲ್ಲಿ ಭಾರತದ ಬ್ಯಾಟರ್‌ಗಳೂ ಧೈರ್ಯದಿಂದ ಆಡಿದರು. ಲಂಕಾದ ಸ್ಪಿನ್ನರ್ ಪ್ರವೀಣ ಜಯವಿಕ್ರಮ ಕೂಡ ಚೆನ್ನಾಗಿ ಬೌಲಿಂಗ್ ಮಾಡಿದರು. ಕಾಲಿನ ಸ್ನಾಯುಸೆಳೆತದ ನೋವಿನಲ್ಲಿಯೂ ನಾಲ್ಕು ವಿಕೆಟ್ ಗಳಿಸಿದರು. ಆದರೆ, ಭಾರತವು ದೊಡ್ಡ ಮೊತ್ತ ಕಲೆಹಾಕುವುದನ್ನು ತಡೆಯಲು ಅವರಿಗೆ ಸಾಧ್ಯವಾಗಲಿಲ್ಲ.

ಆದರೆ ಭಾರತದ ಎರಡನೇ ಇನಿಂಗ್ಸ್‌ನಲ್ಲಿಯೂ ಅಗ್ರ ಕ್ರಮಾಂಕದ ಬ್ಯಾಟರ್‌ಗಳು ದೊಡ್ಡ ಇನಿಂಗ್ಸ್‌ಗಳನ್ನು ಆಡುವಲ್ಲಿ ಮತ್ತೆ ವಿಫಲರಾದರು. ಮಯಂಕ್ ಅಗರವಾಲ್, ವಿರಾಟ್ ಕೊಹ್ಲಿ ನಿರೀಕ್ಷೆ ಹುಸಿಗೊಳಿಸಿದರು. ಅವರನ್ನು ಹುರಿದುಂಬಿಸಿದ್ದ ಪ್ರೇಕ್ಷಕರನ್ನು ನಿರಾಶೆಗೊಳಿಸಿದರು. ನಾಯಕ ರೋಹಿತ್ ಶರ್ಮಾ ಮತ್ತು ಹನುಮವಿಹಾರಿ ಇನಿಂಗ್ಸ್ ಕಟ್ಟಲು ತುಸು ಪ್ರಯತ್ನಿಸಿದರು.

ಆದರೆ, ಕ್ರಿಕೆಟ್ ಅಭಿಮಾನಿಗಳಿಗೆ ರಜಾದಿನದ ಮಜಾ ನೀಡಿದವರು ರಿಷಭ್ ಪಂತ್ ಮತ್ತು ಶ್ರೇಯಸ್ ಅಯ್ಯರ್ ಮಾತ್ರ. ಕೇವಲ 28 ಎಸೆತಗಳಲ್ಲಿ ಅರ್ಧಶತಕ ಚಚ್ಚಿದ ರಿಷಭ್ ಕ್ರೀಸ್‌ನಲ್ಲಿ ಇರುವವರೆಗೂ ಪ್ರೇಕ್ಷಕರ ಗ್ಯಾಲರಿಯಲ್ಲಿ ಸಂಭ್ರಮ ಮುಗಿಲುಮುಟ್ಟಿತ್ತು. ಅವರ ನಿರ್ಭಯ ಆಟ ರಂಗೇರಿತು. ಭಾರತದ ನೆಲದಲ್ಲಿ ವೇಗದ ಅರ್ಧಶತಕ ಗಳಿಸಿದ ಆಟಗಾರನಾಗಿ ಹೊರಹೊಮ್ಮಿದರು.

ಅವರು ಔಟಾದ ನಂತರ ಶ್ರೇಯಸ್ ಮತ್ತೊಮ್ಮೆ ತಮ್ಮ ಬ್ಯಾಟಿಂಗ್ ಪ್ರತಿಭೆ ಮೆರೆದರು. ಮೊದಲ ಇನಿಂಗ್ಸ್‌ನಲ್ಲಿ 92 ರನ್‌ಗಳನ್ನು ಗಳಿಸಿದ್ದ ಶ್ರೇಯಸ್ ಎರಡನೇ ಇನಿಂಗ್ಸ್‌ನಲ್ಲಿಯೂ ಅರ್ಧಶತಕ ಬಾರಿಸಿದರು. ಪಿಂಕ್ ಬಾಲ್ ಟೆಸ್ಟ್‌ನ ಎರಡು ಇನಿಂಗ್ಸ್‌ಗಳಲ್ಲಿ ಅರ್ಧಶತಕ ಗಳಿಸಿದ ಸಾಧಕರ ಪಟ್ಟಿಯಲ್ಲಿ ಸ್ಥಾನ ಪಡೆದರು.

27 ನಿಮಿಷಗಳ ಆಟ: ಮೊದಲ ದಿನದಾಟದ ಅಂತ್ಯಕ್ಕೆ ಲಂಕಾ ತಂಡವು 6 ವಿಕೆಟ್‌ಗಳಿಗೆ 86 ರನ್ ಗಳಿಸಿತ್ತು. ಆದರೆ ಭಾನುವಾರ ಮಧ್ಯಾಹ್ನದ ಬಿಸಿಲಿನಲ್ಲಿ ಶ್ರೀಲಂಕೆಯ ಉಳಿದ ಬ್ಯಾಟರ್‌ಗಳು ಹೆಚ್ಚು ಪ್ರತಿರೋಧ ತೋರಲಿಲ್ಲ. ಕೇವಲ 27 ನಿಮಿಷಗಳಲ್ಲಿ ಇನಿಂಗ್ಸ್‌ಗೆ ತೆರೆಬಿತ್ತು. ಈ ದಿನ ಪತನವಾದ ನಾಲ್ಕು ವಿಕೆಟ್‌ಗಳಲ್ಲಿ ಬೂಮ್ರಾ ಮತ್ತು ಅಶ್ವಿನ್ ತಲಾ ಎರಡು ಹಂಚಿಕೊಂಡರು. ಕೇವಲ 5.5 ಓವರ್‌ಗಳಲ್ಲಿ 23 ಓವರ್‌ಗಳನ್ನು ಸೇರಿಸುವಲ್ಲಿ ಮಾತ್ರ ಲಂಕಾದ ಬ್ಯಾಟರ್‌ಗಳು ಯಶಸ್ವಿಯಾದರು. ಇದರಿಂದಾಗಿ ಮೊದಲ ಇನಿಂಗ್ಸ್‌ನಲ್ಲಿ ಲಂಕಾ ತಂಡವು 35.5 ಓವರ್‌ಗಳಲ್ಲಿ 109 ರನ್ ಗಳಿಸಿತು.

ಮೈದಾನಕ್ಕೆ ನುಗ್ಗಿದ ಅಭಿಮಾನಿಗಳು!

ಭಾನುವಾರ ದಿನದಾಟದ ಕೊನೆಯಲ್ಲಿ ಮೈದಾನಕ್ಕೆ ನುಗ್ಗಿದ ನಾಲ್ವರು ಅಭಿಮಾನಿಗಳು ವಿರಾಟ್ ಕೊಹ್ಲಿಯೊಂದಿಗೆ ಸೆಲ್ಫಿ ತೆಗೆದುಕೊಳ್ಳಲು ಪ್ರಯತ್ನಿಸಿದರು.

ಶ್ರೀಲಂಕಾ ತಂಡದ ಎರಡನೇ ಇನಿಂಗ್ಸ್‌ನ ಆರನೇ ಓವರ್‌ನಲ್ಲಿ ಈ ಘಟನೆ ನಡೆಯಿತು. ಲಂಕಾದ ಬ್ಯಾಟರ್ ಮೆಂಡಿಸ್ ಮಣಿಕಟ್ಟಿಗೆ ಚೆಂಡು ಬಡಿದು ನೋವನುಭವಿಸಿದರು. ಅವರಿಗೆ ಪ್ರಥಮ ಚಿಕಿತ್ಸೆ ನೀಡಲು ಫಿಸಿಯೊ ಪಿಚ್ ಬಳಿ ಬಂದಾಗ ಕೆಲ ನಿಮಿಷಗಳು ಅಟ ಸ್ಥಗಿತವಾಗಿತ್ತು. ಈ ಸಂದರ್ಭದಲ್ಲಿ ಭಾರತದ ಆಟಗಾರರು ಗುಂಪುಗೂಡಿ ಮಾತನಾಡುತ್ತಿದ್ದರು. ಆಗ ದಿಢೀರನೇ ಅಭಿಮಾನಿಯೊಬ್ಬ ಗ್ಯಾಲರಿ ದಾಟಿ ನುಗ್ಗಿದ. ಅವನೊಂದಿಗೆ ಮತ್ತೊಬ್ಬ ಮತ್ತು ಇನ್ನೊಂದು ಬದಿಯಿಂದ ಇಬ್ಬರು ನುಗ್ಗಿದರು. ಅವರಲ್ಲಿ ಒಬ್ಬ ಕೊಹ್ಲಿ ಜೊತೆಗೆ ಸೆಲ್ಫಿ ಕ್ಲಿಕ್ಕಿಸಿಕೊಂಡ. ಎಚ್ಚೆತ್ತ ಪೊಲೀಸರೂ ಮೈದಾನದೊಳಕ್ಕೆ ಧಾವಿಸಿದರು. ತಪ್ಪಿಸಿಕೊಳ್ಳಲು ಯತ್ನಿಸಿದ ಅಭಿಮಾನಿಗಳನ್ನು ಕಷ್ಟಪಟ್ಟು ವಶಕ್ಕೆ ಪಡೆದ ಪೊಲೀಸರು ಹೊರಗೆ ಕರೆದೊಯ್ದರು. ನಂತರ ಆಟ ಮುಂದುವರಿಯಿತು.

ಉಭಯ ತಂಡಗಳ ಆಟಗಾರರು, ಸಿಬ್ಬಂದಿ ಮತ್ತು ಅಧಿಕಾರಿಗಳು ಬಯೋಬಬಲ್ ವ್ಯವಸ್ಥೆಯಲ್ಲಿದ್ದಾರೆ. ಆದ್ದರಿಂದ ಅವರೊಂದಿಗೆ ಹೊರಗಿನ ಜನರ ಸಂಪರ್ಕವನ್ನು ತಡೆಯಲಾಗಿದೆ. ಆದರೆ, ಇದೀಗ ಪ್ರೇಕ್ಷಕರ ಗ್ಯಾಲರಿಯಲ್ಲಿದ್ದವರು ಮೈದಾನದೊಳಗೆ ನುಗ್ಗಿದ್ದರಿಂದ ಬಯೋಬಬಲ್ ಭಂಗವಾದಂತಾಗಿದೆ. ಇದು ಭದ್ರತಾ ವೈಫಲ್ಯವೂ ಆಗಿದೆ ಎಂದು ಟ್ವಿಟರ್‌ನಲ್ಲಿ ಟೀಕೆಗಳು ವ್ಯಕ್ತವಾಗಿವೆ.

ಜಸ್‌ಪ್ರೀತ್ ಬೂಮ್ರಾ– ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್ ಭಾರತ 252 (59.1 ಓವರ್) ಶ್ರೀಲಂಕಾ 109 (35.5 ಓವರ್) (ಶನಿವಾರ 30 ಓವರ್‌ಗಳಲ್ಲಿ 6ಕ್ಕೆ 86) ಡಿಕ್ವೆಲಾ ಸಿ ಪಂತ್ ಬಿ ಬೂಮ್ರಾ 21(38ಎ, 4X3), ಎಂಬುಲ್ದೆನಿಯಾ ಸಿ ಪಂತ್ ಬಿ ಬೂಮ್ರಾ 1 (16ಎ), ಲಕ್ಮಲ್ ಬಿ ಅಶ್ವಿನ್ 5 (9ಎ, 4X1), ಜಯವಿಕ್ರಮ ಔಟಾಗದೆ 1(1ಎ), ಫರ್ನಾಂಡೊ ಸ್ಟಂಪ್ಡ್ ಪಂತ್ ಬಿ ಅಶ್ವಿನ್ 8 (8ಎ, 4X1)
ಇತರೆ 1 (ಬೈ 1)
ವಿಕೆಟ್ ಪತನ: 7–95 (ಎಂಬುಲ್ದೆನಿಯಾ; 32.2), 8–100 (ಲಕ್ಮಲ್; 33.6), 9–100 (ಡಿಕ್ವೆಲಾ; 34.2), 10–109 (ಫರ್ನಾಂಡೊ; 35.5)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 10–4–24–5, ಅಶ್ವಿನ್ 8.5–1–30–2, ಮೊಹಮ್ಮದ್ ಶಮಿ 6–1–18–2, ರವೀಂದ್ರ ಜಡೇಜ 6–1–15–0, ಅಕ್ಷರ್ ಪಟೇಲ್ 5–1–21–1

ಭಾರತ ಎರಡನೇ ಇನಿಂಗ್ಸ್ 9ಕ್ಕೆ 303 ಡಿಕ್ಲೇರ್ (68.5 ಓವರ್)
ಮಯಂಕ್ ಸಿ ಡಿಸಿಲ್ವಾ ಬಿ ಎಂಬುಲ್ದೆನಿಯಾ 22 (34ಎ, 4X5), ರೋಹಿತ್ ಸಿ ಮ್ಯಾಥ್ಯೂಸ್ ಬಿ ಡಿಸಿಲ್ವಾ46 (79ಎ, 4X4), ಹನುಮವಿಹಾರಿ ಬಿ ಜಯವಿಕ್ರಮ 35 (79ಎ, 4X4), ವಿರಾಟ್ ಎಲ್‌ಬಿಡಬ್ಲ್ಯು ಬಿ ಜಯವಿಕ್ರಮ 13 (16ಎ, 4X1), ರಿಷಭ್ ಸಿ ಮತ್ತು ಬಿ ಜಯವಿಕ್ರಮ 50(31ಎ, 4X7, 6X2), ಶ್ರೇಯಸ್ ಎಲ್‌ಬಿಡಬ್ಲ್ಯು ಬಿ ಎಂಬುಲ್ದೆನಿಯಾ 67 (87ಎ, 4X9), ಜಡೇಜ ಬಿ ಫರ್ನಾಂಡೊ 22 (45ಎ, 4X3), ಅಶ್ವಿನ್ ಸಿ ಡಿಕ್ವೆಲಾ ಬಿ ಜಯವಿಕ್ರಮ 13 (25ಎ, 4X1), ಅಕ್ಷರ್ ಬಿ ಎಂಬುಲ್ದೆನಿಯಾ 9(10ಎ, 4X1), ಶಮಿ ಔಟಾಗದೆ 16 (8ಎ, 4X2, 6X1)
ಇತರೆ (ಬೈ 8, ಲೆಗ್ 1, ನೋಬಾಲ್ 1) 10
ವಿಕೆಟ್ ಪತನ: 1–42 (ಮಯಂಕ್; 10.2), 2–98 (ರೋಹಿತ್; 30.2), 3–116 (ಹನುಮವಿಹಾರಿ; 33.1), 4–139 (ವಿರಾಟ್ ಕೊಹ್ಲಿ; 35.4), 5–184 (ರಿಷಭ್ ಪಂತ್; 41.6), 6–247 (ರವೀಂದ್ರ ಜಡೇಜ; 58.5), 7–278 (ಅಶ್ವಿನ್; 65.4), 8–278 (ಶ್ರೇಯಸ್ ಅಯ್ಯರ್; 66.1), 9–303 (ಅಕ್ಷರ್ ಪಟೇಲ್ ; 68.5)
ಬೌಲಿಂಗ್: ಸುರಂಗಾ ಲಕ್ಮಲ್ 10–2–34–0, ಲಸಿತ್ ಎಂಬುಲ್ದೆನಿಯಾ 20.5–1–87–3, ವಿಶ್ವಾ ಫರ್ನಾಂಡೊ 10–2–48–1, ಧನಂಜಯ್ ಡಿಸಿಲ್ವಾ 9–0–47–1, ಪ್ರವೀಣ ಜಯವಿಕ್ರಮ 19–2–78–4

ಶ್ರೀಲಂಕಾ ಎರಡನೇ ಇನಿಂಗ್ಸ್ 1ಕ್ಕೆ 28 (7 ಓವರ್)
ಲಹಿರು ಎಲ್‌ಬಿಡಬ್ಲ್ಯು ಬೂಮ್ರಾ 0 (3 ಎ), ದಿಮುತ್ ಕರುಣಾರತ್ನೆ ಬ್ಯಾಟಿಂಗ್ 10 (13 ಎ, 4x2), ಕುಶಾಲ್ ಮೆಂಡಿಸ್ ಬ್ಯಾಟಿಂಗ್ 16 (26 ಎ, 4x3)
ಇತರೆ (ಲೆಗ್‌ಬೈ 2) 2
ವಿಕೆಟ್ ಪತನ: 1-0 (ಲಾಹಿರು ತಿರಿಮನ್ನೆ, 0.3)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 3–1–9–1, ಮೊಹಮ್ಮದ್ ಶಮಿ 3–0–13–0, ರವಿಚಂದ್ರನ್ ಅಶ್ವಿನ್ 1–0–4–0

ಭಾರತದ ನೆಲದಲ್ಲಿ ವೇಗದ ಅರ್ಧಶತಕಗಳು

ಎಸೆತಗಳು	ಆಟಗಾರ	ದೇಶ	ಎದುರಾಳಿ	ವರ್ಷ
26	ಶಾಹೀದ್ ಆಫ್ರಿದಿ	ಪಾಕಿಸ್ತಾನ	ಭಾರತ	2005
28	ಇಯಾನ್ ಬಾಥಂ	ಇಂಗ್ಲೆಂಡ್	ಭಾರತ	1981
28	ರಿಷಭ್ ಪಂತ್	ಭಾರತ	ಶ್ರೀಲಂಕಾ	2022

ಪಿಂಕ್ ಬಾಲ್ ಟೆಸ್ಟ್ ಉಭಯ ಇನಿಂಗ್ಸ್ ಅರ್ಧಶತಕ

ರನ್	ಆಟಗಾರ	ದೇಶ	ಎದುರಾಳಿ	ಸ್ಥಳ	ವರ್ಷ
87 ಮತ್ತು 116	ಡರೆನ್ ಬ್ರಾವೊ	ವೆಸ್ಟ್ ಇಂಡೀಸ್	ಪಾಕಿಸ್ತಾನ	ದುಬೈ	2016
130 ಮತ್ತು 63	ಸ್ಟೀವನ್ ಸ್ಮಿತ್	ಆಸ್ಟ್ರೇಲಿಯಾ	ಪಾಕಿಸ್ತಾನ	ಬ್ರಿಸ್ಬೇನ್	2016
143 ಮತ್ತು 50	ಮಾರ್ನಸ್ ಲಾಬುಷೇನ್	ಆಸ್ಟ್ರೇಲಿಯಾ	ನ್ಯೂಜಿಲೆಂಡ್	ಪರ್ತ್	2019
103 ಮತ್ತು 51	ಮಾರ್ನಸ್ ಲಾಬುಷೇನ್	ಆಸ್ಟ್ರೇಲಿಯಾ	ಇಂಗ್ಲೆಂಡ್	ಅಡಿಲೇಡ್	2021
92 ಮತ್ತು 67	ಶ್ರೇಯಸ್ ಅಯ್ಯರ್	ಭಾರತ	ಶ್ರೀಲಂಕಾ	ಬೆಂಗಳೂರು	2022

ವಿಶೇಷ ಅಂಚೆ ಕವರ್, ಸ್ಮರಣಸಂಚಿಕೆ ಬಿಡುಗಡೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಿಂಕ್ ಬಾಲ್ ಟೆಸ್ಟ್ ಪಂದ್ಯದ ಸವಿನೆನಪಿಗಾಗಿ ಅಂಚೆ ಕವರ್ ಮತ್ತು ಕಾಫಿ ಟೇಬಲ್ ಬುಕ್ ಅನ್ನು ಭಾನುವಾರ ಬಿಡುಗಡೆ ಮಾಡಲಾಯಿತು.

ಪಂದ್ಯದ ಊಟದ ವಿರಾಮದ ವೇಳೆ ಕಾರ್ಯಕ್ರಮ ನಡೆಯಿತು. ಮಾಜಿ ಅಂತರರಾಷ್ಟ್ರೀಯ ಅಥ್ಲೀಟ್‌ಗಳಾದ ಅಶ್ವಿನಿ ನಾಚಪ್ಪ, ರೀತ್ ಅಬ್ರಹಾಂ, ಹಾಕಿ ಆಟಗಾರರಾದ ಅರ್ಜುನ್ ಹಾಲಪ್ಪ, ಧನಂಜಯ್ ಪಿಳ್ಳೆ, ಆಶಿಶ್ ಬಲ್ಲಾಳ್, ಜೂಡ್ ಫೆಲಿಕ್ಸ್, ಬ್ಯಾಸ್ಕೆಟ್‌ಬಾಲ್ ಕೋಚ್ ಜಯವಂತಿ ಬುಕ್ ಬಿಡುಗಡೆ ಮಾಡಿದರು. ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಅಧ್ಯಕ್ಷ ರೋಜರ್ ಬಿನ್ನಿ, ಕಾರ್ಯದರ್ಶಿ ಸಂತೋಷ್ ಮೆನನ್, ಖಜಾಂಚಿ ವಿನಯ್ ಮೃತ್ಯುಂಜಯ, ಜೆ. ಅಭಿರಾಮ್, ಶಾವೀರ್ ತಾರಾಪುರ್, ಪುಸ್ತಕದ ಸಂಪಾದಕ ವಿಜಯ್ ಮೃತ್ಯುಂಜಯ ಹಾಜರಿದ್ದರು. ವೀಕ್ಷಕ ವಿವರಣೆಕಾರ ಚಾರು ಶರ್ಮಾ ಕಾರ್ಯಕ್ರಮ ನಿರ್ವಹಿಸಿದರು.

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಸ್ಮರಣ ಸಂಚಿಕೆ ಮತ್ತು ಅಂಚೆ ಕವರ್ ಬಿಡುಗಡೆ ಕಾರ್ಯಕ್ರಮದಲ್ಲಿ ಅಂತರರಾಷ್ಟ್ರೀಯ ಕ್ರೀಡಾಸಾಧಕರನ್ನು ಅಭಿನಂದಿಸಲಾಯಿತು. ಕುಳಿತವರು: ಜೂಡ್ ಫೆಲಿಕ್ಸ್, ಅರ್ಜುನ್ ಹಾಲಪ್ಪ, ಜಯವಂತಿ, ರೀತ್ ಅಬ್ರಹಾಂ, ಅಶ್ವಿನಿ ನಾಚಪ್ಪ,ಧನರಾಜ್ ಪಿಳ್ಳೆ, ಆಶಿಶ್ ಬಲ್ಲಾಳ್; ನಿಂತವರು: ವಿನಯ್ ಮೃತ್ಯುಂಜಯ, ಸಂತೋಷ್ ಮೆನನ್; ರೋಜರ್ ಬಿನ್ನಿ, ಜೆ. ಅಭಿರಾಮ್; ಶಾವೀರ್ ತಾರಾಪುರ್

ಬೂಮ್ರಾಗೆ ತವರಲ್ಲಿ ಮೊದಲ 5ರ ಗೊಂಚಲು

ಮೊದಲ ಇನಿಂಗ್ಸ್‌ನಲ್ಲಿ ಐದು ವಿಕೆಟ್‌ಗಳ ಗೊಂಚಲು ಗಳಿಸಿದ ವೇಗಿ ಜಸ್‌ಪ್ರೀತ್ ಬೂಮ್ರಾ ಎರಡು ದಾಖಲೆ ಬರೆದರು.

ಭಾರತದ ನೆಲದಲ್ಲಿ ಅವರು ಇದೇ ಮೊದಲ ಸಲ ಐದು ವಿಕೆಟ್ ಪಡೆದ ಸಾಧನೆ ಮಾಡಿದರು. ಇನ್ನೊಂದು ಕಪಿಲ್ ದೇವ್ ಅವರ ದಾಖಲೆ ಸಮಗಟ್ಟಿದರು. 29ನೇ ಪಂದ್ಯ ಆಡುತ್ತಿರುವ ಬೂಮ್ರಾ 8ನೇ ಬಾರಿ ಐದು ವಿಕೆಟ್ ಸಾಧನೆ ಮಾಡಿದರು. ಇದರೊಂದಿಗೆ ಕಪಿಲ್ ಸಾಧನೆಯನ್ನು ಮೀರಿದರು.

ಅವರು ಇಲ್ಲಿಯವರೆಗೂ ಭಾರತದಲ್ಲಿ ಆಡಿದ ಟೆಸ್ಟ್‌ಗಳಲ್ಲಿ ಐದರ ಸಾಧನೆ ಮಾಡಿರಲಿಲ್ಲ. ವೆಸ್ಟ್ ಇಂಡೀಸ್, ಇಂಗ್ಲೆಂಡ್ ಮತ್ತು ದಕ್ಷಿಣ ಆಫ್ರಿಕಾದಲ್ಲಿ ತಲಾ ಎರಡು ಬಾರಿ ಈ ಸಾಧನೆ ಮಾಡಿದ್ದರು. ಆಸ್ಟ್ರೇಲಿಯಾ ಮತ್ತು ಭಾರತದಲ್ಲಿ ಒಂದು ಬಾರಿ ಈ ಸಾಧನೆಯಾಗಿದೆ.

ಬಾಕ್ಸಿಂಗ್: ಭಾರತಕ್ಕೆ 6 ಚಿನ್ನ

ನವದೆಹಲಿ (ಪಿಟಿಐ): ಭಾರತದ ಆರು ಮಂದಿ ಬಾಕ್ಸರ್‌ಗಳು ಜೋರ್ಡಾನ್‌ನ ಅಮ್ಮಾನ್‌ನಲ್ಲಿ ನಡೆಯುತ್ತಿರುವ ಏಷ್ಯನ್ ಯೂತ್ ಮತ್ತು ಜೂನಿಯರ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನ ವಿವಿಧ ವಿಭಾಗಗಳಲ್ಲಿ ಭಾನುವಾರ ಚಿನ್ನದ ಪದಕ ಗೆದ್ದುಕೊಂಡರು.

ಹಿಸ್ಸಾರ್‌ನ ವಿನಿ ಮಹಿಳೆಯರ 50 ಕೆಜಿ ಫ್ಲೈವೇಟ್ ವಿಭಾಗದ ಫೈನಲ್‌ನಲ್ಲಿ ಕಜಕಸ್ತಾನದ ಕರಿನಾ ತೊಕುಬೆ ವಿರುದ್ಧ ಜಯ ಗಳಿಸಿದರು.

52 ಕೆಜಿ ವಿಭಾಗದಲ್ಲಿ ಯಕ್ಷಿಕ ಕೆಚ್ಚೆದೆಯ ಆಟದ ಮೂಲಕ ಉಜ್ಬೆಕಿಸ್ತಾನದ ರಖೀಮಾ ಬೆಕ್ನಿಯಜೋವ ಎದುರು ಜಯ ಗಳಿಸಿದರು.

57 ಕೆಜಿ ವಿಭಾಗದಲ್ಲಿ ವಿಧಿ ಗೆಲುವು ಸಾಧಿಸಿದರು. 60 ಕೆಜಿ ವಿಭಾಗದಲ್ಲಿ ನಿಕಿತಾ ಚಾಂದ್, 63 ಕೆಜಿ ವಿಭಾಗದ ಚಿನ್ನ ಸೃಷ್ಟಿ ಸಾಠೆ 75 ಕೆಜಿ ವಿಭಾಗದಲ್ಲಿ ರುದ್ರಿಕಾ ಚಿನ್ನ ಗೆದ್ದರು.

ಇಂಗ್ಲಿಷ್ ಪ್ರೀಮಿಯರ್ ಲೀಗ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಭಾನುವಾರ ಮ್ಯಾಂಚೆಸ್ಟರ್ ಯುನೈಟೆಡ್ ತಂಡದ ಕ್ರಿಸ್ಟಿಯಾನೊ ರೊನಾಲ್ಡೊ ಗೋಲು ಗಳಿಸಿ ಸಂಭ್ರಮಿಸಿದರು. ಅವರ ಹ್ಯಾಟ್ರಿಕ್ ನೆರವಿನಿಂದ ಮ್ಯಾಂಚೆಸ್ಟರ್ ಯುನೈಟೆಡ್; ಟೊಟ್ಟೆನ್‌ಹ್ಯಾಮ್ ಹಾಟ್‌ಸ್ಪರ್ ಎದುರಿನ ಈ ಪಂದ್ಯದಲ್ಲಿ 3–2ರಿಂದ ಗೆದ್ದಿತು. ರೊನಾಲ್ಡೊ ವೃತ್ತಿಜೀವನದ ಒಟ್ಟು ಗೋಲುಗಳ ಸಂಖ್ಯೆ 807ಕ್ಕೇರಿತು– ಪಿಟಿಐ ಚಿತ್ರ

ಟೆನಿಸ್: ಸೂರಜ್, ರಿಷಿ ರೆಡ್ಡಿ ಮುನ್ನಡೆ

ಬೆಂಗಳೂರು: ಕರ್ನಾಟಕದ ಸೂರಜ್ ಪ್ರಬೋಧ್, ರಿಷಿ ರೆಡ್ಡಿ ಮಮತ್ತು ಆದಿಲ್ ಕಲ್ಯಾಣ್‌ಪುರಿ ಅವರು ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ (ಕೆಎಸ್‌ಎಲ್‌ಟಿಎ) ಆತಿಥ್ಯದಲ್ಲಿ ನಡೆಯುತ್ತಿರುವ ಐಟಿಎಫ್ ಓಪನ್ ಟೆನಿಸ್ ಟೂರ್ನಿಯ ಅರ್ಹತಾ ಸುತ್ತುಗಳಲ್ಲಿ ಮುನ್ನಡೆದರು.

ಕೆಎಸ್‌ಎಲ್‌ಟಿಎ ಅಂಗಣದಲ್ಲಿ ಭಾನುವಾರ ಆರಂಭವಾದ ಟೂರ್ನಿಯ ಮೊದಲ ಸುತ್ತಿನ ಅರ್ಹತಾ ಪಂದ್ಯಗಳಲ್ಲಿ ಸೂರಜ್ 6-4, 6-2ರಿಂದ ಶ್ರೀಲಂಕಾದ ಚಾತುರ್ಯ ನೀಲವೀರ ಅವರ ಸವಾಲು ಮೀರಿದರೆ, ಆದಿಲ್ ಅವರಿಗೆ 6-1, 6-2ರಿಂದ ಥಾಯ್ಲೆಂಡ್‌ನ ವೊರೊವಿನ್ ಕುಂಥೊನ್‌ಕಿಟ್ಟಿಕುಲ್ ವಿರುದ್ಧ ಜಯ ಒಲಿಯಿತು. ಮತ್ತೊಂದು ಹಣಾಹಣಿಯಲ್ಲಿ ರಿಷಿ 6-3, 7-5ರಿಂದ ಈಜಿಪ್ಟ್‌ನ ಅಕ್ರಂ ಎಲ್ ಸಲಾರಿ ಅವರನ್ನು ಪರಾಭವಗೊಳಿಸಿದರು.

ಮೊದಲ ಸುತ್ತನ ಮತ್ತೊಂದು ಸೆಣಸಾಟದಲ್ಲಿ ರಾಷ್ಟ್ರೀಯ ಚಾಂಪಿಯನ್ ಕರಣ್ ಸಿಂಗ್ 6-1, 6-0ರಿಂದ ಮತ್ತೊಬ್ಬ ಶ್ರೀಲಂಕಾ ಆಟಗಾರ ಥೆಹಾನ್ ಸಂಜಯ ವಿರುದ್ಧ ಗೆದ್ದರು.

ಸೂರಜ್ ಪ್ರಬೋಧ್ ಆಟದ ಪರಿ

ಅರ್ಹತಾ ಸುತ್ತಿನಲ್ಲಿ ಅಗ್ರಶ್ರೇಯಾಂಕ ಪಡೆದಿರುವ ಭಾರತದ ದೇವ್ ಜಾವಿಯಾ ಅವರು 7-5, 6-2ರಿಂದ ಭಾರತದವರೇ ಆದ ಅರ್ನಾವ್ ಪತಂಗೆ ಅವರನ್ನು ಸೋಲಿಸಿ ಮುನ್ನಡೆದರು.

ಮೊದಲ ಸುತ್ತಿನ ಅರ್ಹತಾ ಪಂದ್ಯಗಳ ಇನ್ನುಳಿದ ಫಲಿತಾಂಶಗಳು: ತುಷಾರ್ ಮದನ್‌ಗೆ 7-6, 2-6ರಿಂದ ಲಕ್ಷಿತ್ ಸೂದ್ ಎದುರು ಜಯ, ಭರತ್ ನಿಶೋಕ್ ಕುಮಾರನ್‌ಗೆ 3-6, 6-1, 13-11ರಿಂದ ಫರ್ದೀನ್ ಕಮರ್ ಎದುರು, ಜಪಾನ್‌ನ ದೈಸುಕೆ ಸುಮಿಜಾ ಅವರಿಗೆ 6-1, 6-1ರಿಂದ ಭಾರತದ ಚಂದ್ರಿಲ್ ಸೂದ್ ವಿರುದ್ಧ, ರಂಜೀತ್ ವಿರಾಲಿ ಅವರಿಗೆ 6-0, 6-2ರಿಂದ ಕವನ್ ಸೋಮುಕುಮಾರ್ ಎದುರು ಜಯ ಒಲಿಯಿತು. ಇಶಾಕ್ ಇಕ್ಬಾಲ್ 6-4, 6-3ರಿಂದ ಶಹಬಾಜ್ ಖಾನ್ ಎದುರು, ಪಾರಸ್ ದಹಿಯಾ 6-2, 6-4ರಿಂದ ವಿನಾಯಕ್ ಶರ್ಮಾ ಕಜಾ ವಿರುದ್ಧ, ಲೋಹಿತಾಕ್ಷ ಬದ್ರಿನಾಥ್ 6-4, 6-2ರಿಂದ ರೋನಿನ್ ಲೋಟ್ಲಿಕರ್ ಎದುರು ಗೆದ್ದು ಮುಂದಿನ ಎರಡನೇ ಸುತ್ತಿಗೆ ಅರ್ಹತೆ ಪಡೆದರು.

ಇಂಡಿಯನ್ ವೆಲ್ಸ್ ಟೆನಿಸ್ ಟೂರ್ನಿ: ಒಸಾಕಾ ಕಣ್ಣೀರು

ಸೋಲಿನಿಂದ ಪಾರಾದ ನಡಾಲ್

ಇಂಡಿಯನ್ ವೆಲ್ಸ್, ಅಮೆರಿಕ (ಎಎಫ್‌ಪಿ): ಜಿದ್ದಾಜಿದ್ದಿನ ಪೈಪೋಟಿಯಲ್ಲಿ ಸ್ಪೇನ್‌ನ ರಫೆಲ್ ನಡಾಲ್ ಅವರು ಅಮೆರಿಕದ ಸೆಬಾಸ್ಟಿಯನ್ ಕೊರ್ಡಾ ಎದುರು ಗೆದ್ದು, ಇಂಡಿಯನ್ ವೆಲ್ಸ್ ಟೆನಿಸ್ ಟೂರ್ನಿಯ ಮೂರನೇ ಸುತ್ತು ತಲುಪಿದರು. ಆದರೆ ಜಪಾನ್‌ನ ನವೊಮಿ ಒಸಾಕಾ ರಷ್ಯಾದ ವೆರೊನಿಕಾ ಕುದರ್ಮೆತೊವಾ ವಿರುದ್ಧ ಸೋತು ಅಶ್ರುಧಾರೆಯೊಂದಿಗೆ ಹೊರನಡೆದರು.

ಎರಡನೇ ಸುತ್ತಿನ ಪಂದ್ಯದಲ್ಲಿ ನಡಾಲ್ 6-2, 1-6, 7-6 (7/3)ರಿಂದ ಸೆಬಾಸ್ಟಿಯನ್ ಅವರನ್ನು ಮಣಿಸಿದರು. ಮೊದಲ ಸೆಟ್‌ಅನ್ನು ಸುಲಭವಾಗಿ ಗೆದ್ದ ವಿಶ್ವ ಕ್ರಮಾಂಕದಲ್ಲಿ ನಾಲ್ಕನೇ ಸ್ಥಾನದಲ್ಲಿರುವ ನಡಾಲ್ ಅವರಿಗೆ 21 ವರ್ಷದ ಕೊರ್ಡಾ ಎರಡನೇ ಸುತ್ತಿನಲ್ಲಿ ತಿರುಗೇಟು ನೀಡಿ ತಮ್ಮದಾಗಿಸಿಕೊಂಡರು.

ನಿರ್ಣಾಯಕ ಮತ್ತು ಮೂರನೇ ಸುತ್ತಿನಲ್ಲೂ ವಿಶ್ವ ರ‍್ಯಾಂಕಿಂಗ್‌ನಲ್ಲಿ 38ನೇ ಸ್ಥಾನದಲ್ಲಿರುವ ಸೆಬಾಸ್ಟಿಯನ್ ನಡಾಲ್ ಅವರಿಗೆ ಭಾರಿ ಸವಾಲೊಡ್ಡಿದರು. ಟೈಬ್ರೇಕ್‌ವರೆಗೆ ಸಾಗಿದ ಈ ಸೆಟ್‌ನಲ್ಲಿ ಸ್ಪೇನ್ ಆಟಗಾರ ತಮ್ಮ ಅನುಭವವನ್ನು ಸಾಣೆ ಹಿಡಿದರು. ಎರಡು ಬ್ರೇಕ್ ಪಾಯಿಂಟ್ಸ್ ಕಳೆದುಕೊಂಡರೂ ಸೆಟ್ ಮತ್ತು ಪಂದ್ಯವನ್ನು ತಮ್ಮದಾಗಿಸಿಕೊಳ್ಳುವಲ್ಲಿ ಯಶಸ್ವಿಯಾದರು.

ರಫೆಲ್ ನಡಾಲ್ ಆಟದ ವೈಖರಿ– ಎಎಫ್‌ಪಿ ಚಿತ್ರ

ಒಸಾಕಗೆ ನಿರಾಸೆ: ಮಹಿಳಾ ಸಿಂಗಲ್ಸ್ ವಿಭಾಗದ ಎರಡನೇ ಸುತ್ತಿನ ಪಂದ್ಯದಲ್ಲಿ ಒಸಾಕ 0-6, 4-6ರಿಂದ ವೆರೊನಿಕಾ ವಿರುದ್ಧ ನಿರಾಸೆ ಅನುಭವಿಸಿದರು. ಪಂದ್ಯದ ವೇಳೆ ಪ್ರೇಕ್ಷಕರೊಬ್ಬರಿಂದ ನಿಂದನೆಗೆ ಒಳಗಾದ ಅವರು ಕಣ್ಣೀರು ಸುರಿಸಿದರು.

ಇದೇ ಟೂರ್ನಿಯ 2001ರ ಆವೃತ್ತಿಯಲ್ಲಿ ಅಮೆರಿಕದ ವೀನಸ್ ಹಾಗೂ ಸೆರೆನಾ ವಿಲಿಯಮ್ಸ್ ಕೂಡ ಇದೇ ರೀತಿಯ ಅಪಹಾಸ್ಯಕ್ಕೆ ಈಡಾಗಿದ್ದರು.

ಅಮೆರಿಕ ಓಪನ್ ಚಾಂಪಿಯನ್ ರಷ್ಯಾದ ಡೇನಿಯಲ್ ಮೆಡ್ವೆಡೆವ್ ಅವರು ಮೊದಲ ಸುತ್ತಿನ ಹಣಾಹಣಿಯಲ್ಲಿ ಸುಲಭವಾಗಿ ಗೆದ್ದರು. 6-3, 6-2ರಿಂದ ಜೆಕ್ ಗಣರಾಜ್ಯದ ಥಾಮಸ್ ಮಚಾಕ್ ಅವರನ್ನು ಪರಾಭವಗೊಳಿಸಿದರು.

ಜಿಮ್ನಾಸ್ಟಿಕ್ಸ್: ವಿಶ್ವಕಪ್‌ಗೆ ಪ್ರತಿಷ್ಠಾ

ಅಗರ್ತಲಾ (ಪಿಟಿಐ): ಯುವ ಜಿಮ್ನಾಸ್ಟ್ ಪ್ರತಿಷ್ಠಾ ಸಮಂತಾ ಅವರು ಈಜಿಪ್ಟ್ ಮತ್ತು ಅಜರ್‌ಬೈಜಾನ್‌ನಲ್ಲಿ ನಡೆಯಲಿರುವ ವಿಶ್ವಕಪ್ ಟೂರ್ನಿಗೆ ಭಾರತ ತಂಡದಲ್ಲಿ ಸ್ಥಾನ ಗಳಿಸಿದ್ದಾರೆ.

ವಿಶ್ವಕಪ್ ಟೂರ್ನಿಯು ಇದೇ 17ರಿಂದ 20ರವರೆಗೆ ನಿಗದಿಯಾಗಿದೆ.

50 ದೇಶಗಳ ಜಿಮ್ನಾಸ್ಟ್‌ಗಳು ವಿಶ್ವಕಪ್‌ನಲ್ಲಿ ಭಾಗವಹಿಸುವ ನಿರೀಕ್ಷೆಯಿದೆ.